# ವಿಜಯನಗರ ಅಧ್ಯಯನ

## ಸಂಪುಟ 5

### ಹಂಪಿ ಉತ್ಸವ 1999ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಪ್ರೊ. ಎಂ.ವಿ. ಕೃಷ್ಣಪ್ಪ

ಚನ್ನಬಸಪ್ಪ ಎಸ್. ಪಾಟೀಲ



2000

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

# ವಿಜಯನಗರ ಅಧ್ಯಯನ

ಸಂಪುಟ 5

ಹಂಪಿ ಉತ್ಸವ 1999ರಲ್ಲಿ ಮಂಡಿಸಿದ ಪ್ರಬಂಧಗಳು

ಕರ್ನಾಟಕ ಸರ್ಕಾರ

# ವಿಜಯನಗರ ಅಧ್ಯಯನ

## ಸಂಪುಟ 5

## ಹಂಪಿ ಉತ್ಸವ 1999ರಲ್ಲಿ ಮಂಡಿಸಿದ ಪ್ರಬಂಧಗಳು


ಸಂಪಾದಕರು

ಪ್ರೊ. ಎಂ.ವಿ. ಕೃಷ್ಣಪ್ಪ

ಡಾ. ಚನ್ನಬಸಪ್ಪ ಎಸ್. ಪಾಟೀಲ



2000

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಪ್ರಥಮ ಮುದ್ರಣ: 500 ಪ್ರತಿಗಳು

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು



ಬೆಲೆ: ರೂ. **185/-**

ಡಿ.ಟಿ.ಪಿ: ಅಕ್ಷರ ಜೋಡಣೆ: ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಮ್ಸ್, 116/1, 6ನೇ ಅಡ್ಡರಸ್ತೆ, ಗೋಕುಲಂ ಮೊದಲನೇ ಹಂತ, ಮೈಸೂರು. ☎ 411325
ಮುದ್ರಣ: ಅಕ್ಷರ ಮುದ್ರಿಕ, ಲಕ್ಷ್ಮೀವಿಲಾಸ ರಸ್ತೆ, ಮೈಸೂರು - 24. ☎ 441189

**ರಾಣಿ ಸತೀಶ್**
ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು

ದೂರವಾಣಿ : ಕಛೇರಿ : ೨೨೫೩೬೫೧
ನಿವಾಸ : ೫೨೫೮೭೭೨
ವಿಧಾನ ಸೌಧ, ಬೆಂಗಳೂರು - ೫೬೦ ೦೦೧

ದಿನಾಂಕ : 20-10-2000

# ಮೊದಲ ಮಾತು

ವಿಜಯನಗರದ ವೈಭವದ ಕಾಲದಲ್ಲಿ ಅಲ್ಲಿಗೆ ಭೇಟಿ ನೀಡಿದ ಪರ್ಶಿಯ ದೇಶದ ಅಬ್ದುಲ್ ರಜಾಕ್ ಅಂತಹ ಪಟ್ಟಣವನ್ನು ಹಿಂದೆಂದೂ ಕಂಡಿಲ್ಲ, ಕೇಳಿಲ್ಲ ಎಂದು ವರ್ಣಿಸಿದ್ದಾರೆ. ಅಗಲವಾದ ಬಜಾರುಗಳಲ್ಲಿ ಮುತ್ತು, ಮಾಣಿಕ್ಯ, ಪಚ್ಚೆ, ಮತ್ತು ವಜ್ರಗಳನ್ನು ವ್ಯಾಪಾರಿಗಳು ಮಾರಾಟ ಮಾಡುತ್ತಿದ್ದರೆಂದು ಬಣ್ಣಿಸಿದ್ದಾರೆ. ಗತಕಾಲದ ಸವಿನೆನಪನ್ನು ಮತ್ತೆ ಸಾಮಾಜಿಕವಾಗಿ ಪ್ರತಿಬಿಂಬಿಸುವ ಜವಬ್ದಾರಿ ಕರ್ನಾಟಕ ಸರ್ಕಾರದ್ದು. ಇಂತಹ ಇತಿಹಾಸ ಪ್ರಸಿದ್ಧವಾದ ವಿಜಯನಗರ ಹಾಳು ಹಂಪಿಯಾಗಿ ಗುರುತಿಸಲ್ಪಟ್ಟಿದೆ. ಇಲ್ಲಿನ ಗತ ವೈಭವದ ನೆನಪನ್ನು ಸ್ವಲ್ಪ ಮಟ್ಟಿಗಾದರೂ ಮಾಡುವ ದೃಷ್ಟಿಯಿಂದ 1987ರಿಂದ"ಹಂಪಿ ಉತ್ಸವ" ವನ್ನು ಕರ್ನಾಟಕ ಸರ್ಕಾರ ಮಾಡಿಕೊಂಡು ಬರುತ್ತಿದೆ. ಈ ಉತ್ಸವದಲ್ಲಿ ವಿಜಯನಗರದ ಇತಿಹಾಸ ಹಾಗೂ ಸಂಸ್ಕೃತಿಯ ಬಗ್ಗೆ ಪ್ರಾಚ್ಯವಸ್ತು ಸಂಗ್ರಹಾಲಯ ಇಲಾಖೆ ಪ್ರತಿವರ್ಷ ವಿಚಾರ ಸಂಕಿರಣವನ್ನು ನಡೆಸಿಕೊಂಡು ಬರುತ್ತಿದೆ. ಅನಂತರ ಈ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂದಗಳನ್ನು ಗ್ರಂಥ ರೂಪದಲ್ಲಿ ಹೊರತರಲಾಗುತ್ತಿದೆ. ಈ ವರ್ಷ ಇಲಾಖೆಯವರು " ವಿಜಯನಗರ ಅಧ್ಯಯನ ಸಂಪುಟ -5" ಗ್ರಂಥವನ್ನು ಹೊರ ತರುತ್ತಿದ್ದು, ಇದರಲ್ಲಿ ಅನೇಕ ಉತ್ತಮ ಪ್ರಬಂಧಗಳು ಸೇರ್ಪಡೆಯಾಗಿವೆ. ಇಲಾಖೆ ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಿ ತನ್ಮೂಲಕ ವಿದ್ವಾಂಸರಿಗೆ ಹಾಗೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಿ ಎಂದು ಆಶಿಸುತ್ತೇನೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯು ಹಂಪಿಯಲ್ಲಿ ಅನೇಕ ಸ್ಮಾರಕಗಳನ್ನು ಸಂರಕ್ಷಿಸುವ ಕಾರ್ಯ ಕೈಗೊಂಡಿದೆ. ಈ ಕಾರ್ಯ ಯಶಸ್ವಿಯಾಗಿ ಹಂಪಿ ಮತ್ತೊಮ್ಮೆ ದೇಶ ವಿದೇಶಗಳ ಪ್ರವಾಸಿಗರನ್ನು ಹೆಚ್ಚು ಸಂಖ್ಯೆಯಲ್ಲಿ ತನ್ನತ್ತ ಸೆಳೆಯಲಿ ಎಂದು ಹಾರೈಸುತ್ತೇನೆ.

**ರಾಣಿ ಸತೀಶ್**
ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು

# ಪ್ರಸ್ತಾವನೆ

ಹದಿನಾಲ್ಕನೆಯ ಶತಮಾನದಿಂದ ಹದಿನಾರನೆಯ ಶತಮಾನದವರೆಗೆ ವಿಜಯನಗರ ಪಟ್ಟಣವನ್ನು ರಾಜಧಾನಿಯನ್ನಾಗಿಸಿಕೊಂಡು ದಕ್ಷಿಣ ಭಾರತಾದ್ಯಂತ ಆಳಿದ ಸಂಗಮ, ಸಾಳುವ, ತುಳುವ ಮತ್ತು ಅರವೀಡು ವಂಶಗಳ ಅರಸರು ಭಾರತೀಯ ಸಂಸ್ಕೃತಿಗೆ ಗಣನೀಯವಾದ ಕೊಡುಗೆಯನ್ನು ನೀಡಿದ್ದಾರೆ. ವೈಭವಯುತವಾಗಿ ಮೆರೆದ ವಿಜಯನಗರ ಪಟ್ಟಣವು ಪತನಾನಂತರ ಹಾಳು ಹಂಪೆಯಾಗಿ ಉಳಿಯಿತು. ಸುಮಾರು ನಲವತ್ತು ಚದರ ಕಿಲೋ ಮೀಟರ್‌ಗಳಷ್ಟು ವಿಶಾಲವಾದ ಪ್ರದೇಶವನ್ನು ಆವರಿಸಿರುವ ಹಂಪೆಯ ಅವಶೇಷಗಳು ಜಾಗತಿಕ ಪರಂಪರೆಯ ಪಟ್ಟಿಯಲ್ಲಿ ಸ್ಥಾನವನ್ನು ಪಡೆದಿವೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಈ ಪಟ್ಟಣದ ಗತವೈಭವವು ಪುನಃ ಗೋಚರಿಸುವಂತೆ ಮಾಡಲು ಕರ್ನಾಟಕ ಸರ್ಕಾರವು ಹಂಪಿ ಪುನರುತ್ಥಾನ ಯೋಜನೆಯನ್ನು ಹಮ್ಮಿಕೊಂಡು ವ್ಯಾಪಕವಾದ ಸಂಶೋಧನೆ, ಉತ್ಖನನ ಮತ್ತು ಸ್ಮಾರಕಗಳ ಸಂರಕ್ಷಣೆಯನ್ನು ನಡೆಸಿ ಹೊರಬಂದ ಫಲಿತಾಂಶವನ್ನು ಸಂಶೋಧನಾ ಗ್ರಂಥಗಳಲ್ಲಿ ಪ್ರತಿಸುತ್ತಿದೆ.

ವಿಜಯನಗರದಲ್ಲಿ ಆಚರಿಸಲಾಗುತ್ತಿದ್ದ ನವರಾತ್ರಿ ಅಥವಾ ದಸರಾ ಮಹೋತ್ಸವವು ದೇಶ ವಿದೇಶದ ಪ್ರವಾಸಿಗರನ್ನು ಆಕರ್ಷಿಸುತ್ತಿತ್ತು. ಇಂತಹ ಉತ್ಸವಗಳು ಮರುಕಣಿಸುವಂತೆ ಮಾಡಲು ಕರ್ನಾಟಕ ಸರ್ಕಾರವು ಪ್ರತಿವರ್ಷ ನವೆಂಬರ್ 3ರಿಂದ 5ರವರೆಗೆ ಹಂಪಿ ಉತ್ಸವವನ್ನು ಆಚರಿಸುತ್ತಿದೆ. ಈ ಉತ್ಸವದ ಸಂದರ್ಭದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸುತ್ತಿದೆ. ಕಳೆದ ವರ್ಷ ಅಂದರೆ 1999ರಲ್ಲಿ ಏರ್ಪಡಿಸಿದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧಗಳನ್ನು "ವಿಜಯನಗರ ಅಧ್ಯಯನ ಸಂಪುಟ 5"ರಲ್ಲಿ ಪ್ರಕಟಿಸಲಾಗಿದೆ. ಈ ಸಂಪುಟವು ವಿದ್ವಾಂಸರಿಗೆ ಮತ್ತು ಸಾರ್ವಜನಿಕರಿಗೆ ಉಪಯುಕ್ತ ಮಾಹಿತಿ ನೀಡುವುದರಲ್ಲಿ ಸಂದೇಹವಿಲ್ಲ.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಜ್ಯ ಸಚಿವೆಯರಾದ ಶ್ರೀಮತಿ ರಾಣಿ ಸತೀಶ್ ಅವರು ವಿಚಾರ ಸಂಕಿರಣ ನಡೆಸಲು ಪ್ರೋತ್ಸಾಹ ನೀಡಿರುವುದಲ್ಲದೆ ಈ ಸಂಪುಟಕ್ಕೆ ಮುನ್ನುಡಿಯನ್ನು ಬರೆದು ಗ್ರಂಥದ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಅವರಿಗೆ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಅ.ರಾ. ಚಂದ್ರಹಾಸಗುಪ್ತ ಅವರು ವಿವಿಧ ಉತ್ಸವಗಳ ಸಂದರ್ಭದಲ್ಲಿ ವಿಚಾರ ಸಂಕಿರಣ ಮತ್ತು ಪ್ರದರ್ಶನವನ್ನು ಏರ್ಪಡಿಸಲು ಹಾಗೂ ನಮ್ಮ ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ನಿರ್ವಹಿಸಲು ಪ್ರೋತ್ಸಾಹ ಮತ್ತು ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಇವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ವಿಚಾರ ಸಂಕಿರಣವನ್ನು ಏರ್ಪಡಿಸಲು ನನ್ನ ಸಹೋದ್ಯೋಗಿಗಳಾದ ಡಾ. ಸಿ.ಎಸ್. ಪಾಟೀಲ, ಉಪ ನಿರ್ದೇಶಕ, ಶ್ರೀ ಹೆಚ್.ಟಿ. ತಳವಾರ್, ಉಪ ನಿರ್ದೇಶಕ, ಶ್ರೀ ಟಿ.ಎಸ್. ಗಂಗಾಧರ, ಸಹಾಯಕ ನಿರ್ದೇಶಕ, ಶ್ರೀ ಟಿ.ಯಂ. ಮಂಜುನಾಥಯ್ಯ, ಪುರಾತತ್ವ ಸಹಾಯಕ ಮುಂತಾದವರು ಅಗತ್ಯ ನೆರವು ನೀಡಿದ್ದಾರೆ. ಡಾ. ಸಿ.ಎಸ್. ಪಾಟೀಲರು ಈ ಸಂಪುಟದ ಮುದ್ರಣ ಕಾರ್ಯದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಪ್ರೊ. ಎಂ.ವಿ. ಕೃಷ್ಣಪ್ಪ
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ

ಮೈಸೂರು
24-10-2000

# ಪ್ರಬಂಧ ಮಂಡಿಸಿದವರು

1. ಶ್ರೀ ಆರ್.ಎಚ್. ಕುಲಕರ್ಣಿ
ಹಿರಿಯ ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಮೈಸೂರು ವಿಶ್ವವಿದ್ಯಾಲಯ
ಮೈಸೂರು-570 006

2. ಶ್ರೀ ಬಾಲಸುಬ್ರಹ್ಮಣ್ಯ
ಪ್ರವಾಚಕ, ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

3. ಶ್ರೀ ಹೆಚ್.ಟಿ. ತಳವಾರ್
ಉಪ ನಿರ್ದೇಶಕ, ಗುಲ್ಬರ್ಗಾ ವಿಭಾಗ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ
ಕಮಲಾಪುರ-583 221
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

4. ಶ್ರೀ ಸಿ.ಟಿ.ಎಂ. ಕೊಟ್ರಯ್ಯ
340, ಎಂ ಬ್ಲಾಕ್, ಕುವೆಂಪುನಗರ
ಮೈಸೂರು-570 023

5. ಶ್ರೀ ಟಿ.ಎಂ. ಮಂಜುನಾಥಯ್ಯ
ಪುರಾತತ್ವ ಸಹಾಯಕ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ
ಕಮಲಾಪುರ-583 221, ಬಳ್ಳಾರಿ ಜಿಲ್ಲೆ

6. ಶ್ರೀ ಶರಣಬಸಪ್ಪ ಕೋಲ್ಕಾರ
ಸಂಶೋಧನಾ ವಿದ್ಯಾರ್ಥಿ, ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

7. ಡಾ. ಚನ್ನಬಸಪ್ಪ ಎಸ್. ಪಾಟೀಲ
ಉಪ ನಿರ್ದೇಶಕ
ಬೆಂಗಳೂರು ಮತ್ತು ಮೈಸೂರು ವಿಭಾಗಗಳು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ
ವೆಂಕಟಪ್ಪ ಕಲಾಶಾಲೆ, ಕಸ್ತೂರ್‌ಬಾ ರಸ್ತೆ
ಬೆಂಗಳೂರು-560 001

8. ಶ್ರೀಮತಿ ವಿನೋದಾ ಪಾಟೀಲ
161, ಹತ್ತನೇ ತಿರುವು,
ಮೊದಲನೇ ಮುಖ್ಯರಸ್ತೆ
ಅರವಿಂದ ನಗರ
ಮೈಸೂರು-570 023

9. ಡಾ. ರು.ಮ. ಷಡಕ್ಷರಯ್ಯ
ಪ್ರಾಧ್ಯಾಪಕರು
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-580 003

10. ಶ್ರೀ ಗೋವಿಂದ
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

11. ಡಾ. ಶ್ರೀನಿವಾಸ ವಿ. ಪಾಡಿಗಾರ
ಪ್ರವಾಚಕ
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-580 003

12. ಶ್ರೀ ಜಯದೇವಪ್ಪ ಜೈನಕೇರಿ
ನಂ. 87, ಶಾಂತಲಾ
ಕುವೆಂಪು ರಸ್ತೆ, ಜಿಲ್ಲಾ ಪಂಚಾಯತ್ ಎದುರು
ಶಿವಮೊಗ್ಗ-577 201

13. ಶ್ರೀ ಕೆಳದಿ ಗುಂಡಾಜೋಯಿಸ್
ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ
ಕೆಳದಿ-577 401
ಸಾಗರ ತಾಲೂಕ, ಶಿವಮೊಗ್ಗ ಜಿಲ್ಲೆ

14. ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಅಧ್ಯಾಪಕ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

15. ಡಾ. ಆರ್. ಗೋಪಾಲ್
ಉಪ ನಿರ್ದೇಶಕ, ಬೆಳಗಾವಿ ವಿಭಾಗ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ
ಬಸವೇಶ್ವರ ನಗರ, ಹುಬ್ಬಳ್ಳಿ
ಧಾರವಾಡ ಜಿಲ್ಲೆ

16. ಡಾ. ಎನ್. ಹವಳಯ್ಯ
ಹಿರಿಯ ಅಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಮೈಸೂರು ವಿಶ್ವವಿದ್ಯಾಲಯ
ಮಾನಸ ಗಂಗೋತ್ರಿ, ಮೈಸೂರು-570 006

17. ಶ್ರೀ ಎಸ್.ವೈ. ಸೋಮಶೇಖರ್
ಯೋಜನಾ ಸಹಾಯಕ, ವಸ್ತು ಸಂಗ್ರಹಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

18. ಶ್ರೀ ಜಗದೀಶ
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಮತ್ತು ಪ್ರಾಕ್ತನ ಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ, ಶಿವಮೊಗ್ಗ

19. ಶ್ರೀ ಎಚ್.ಈ. ಬಸವರಾಜಪ್ಪ
ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

20. ಡಾ. ಮೃತ್ಯುಂಜಯ ರುಮಾಲೆ
ವಿಜಯನಗರ ಕಾಲೇಜ್
ಹೊಸಪೇಟೆ-583 201
ಬಳ್ಳಾರಿ ಜಿಲ್ಲೆ

21. ಡಾ. ದೇವರಕೊಂಡಾರೆಡ್ಡಿ
ಪ್ರವಾಚಕ, ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

22. ಡಾ. ಕೆ. ರವೀಂದ್ರನಾಥ
ಅಧ್ಯಾಪಕ, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

23. ಡಾ. ಎಫ್.ಟಿ. ಹಳ್ಳಿಕೇರಿ
ಪ್ರವಾಚಕ, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ-583 276
ಬಳ್ಳಾರಿ ಜಿಲ್ಲೆ

24. ಡಾ. ಕೆಳದಿ ವೆಂಕಟೇಶ ಜೋಯಿಸ್
ಕ್ಯೂರೇಟರ್
ಕೆಳದಿ ವಸ್ತುಸಂಗ್ರಹಾಲಯ ಮತ್ತು
ಇತಿಹಾಸ ಸಂಶೋಧನಾಲಯ
ಕೆಳದಿ-577 401, ಸಾಗರ ತಾಲೂಕ
ಶಿವಮೊಗ್ಗ ಜಿಲ್ಲೆ

# ಪರಿವಿಡಿ

# ಸಂಕ್ಷೇಪಗಳು

| | | |
|---|---|---|
| ARIE | : | Annual Report on Indian Epigraphy |
| ARSIE | : | Annual Report on South Indian Epigraphy |
| ASI | : | Archaeological Survey of India |
| DAM | : | Directorate of Archaeology and Museums |
| EC | : | Epigraphia Carnatica |
| KI | : | Karnatak Inscriptions |
| LISDI | : | List of Inscriptions and Sketch of the Dynasties of Southern India |
| MAR | : | Annual Report of the Mysore Archaeological Department |
| QJMS | : | Quarterly Journal of the Mythic Society |
| SII | : | South Indian Inscriptions |
| VI | : | Vijayanagara Inscriptions |

# 1. ವಿಜಯನಗರ ಕಾಲದಲ್ಲಿ ಗಾರೆ ಕಲೆ – ಒಂದು ಅವಲೋಕನ[1]

– ಆರ್.ಎಚ್. ಕುಲಕರ್ಣಿ

**ಪ್ರಸ್ತಾವನೆ:**

ದಕ್ಷಿಣ ಭಾರತದ ಕಲಾ ಇತಿಹಾಸದಲ್ಲಿ ವಿಜಯನಗರ ಕಾಲದ ಕಲೆಗೆ ಒಂದು ವಿಶಿಷ್ಟ ಸ್ಥಾನವಿದೆ. ಆ ಕಾಲದಲ್ಲಿನ ಅಗಾಧವಾದ ಕಲಾಚಟುವಟಿಗೆಗಳು ವಿಜಯನಗರ ಕಲೆಯ ವಿವಿಧ ಹಂತಗಳನ್ನು ಪ್ರಸ್ತುತಪಡಿಸುತ್ತವೆ. ಚಾಲುಕ್ಯ, ಹೊಯ್ಸಳ ಕಲಾಶೈಲಿಯ ಮತ್ತು ವಾಸ್ತುಶೈಲಿಯ ಹಿನ್ನೆಲೆಯಿಂದ ಪ್ರಾರಂಭವಾದ ಚಟುವಟಿಕೆಗಳು ಸಮಕಾಲೀನ ಇಸ್ಲಾಮಿಕ್ ಕಲಾಶೈಲಿಯನ್ನು ಅವಶ್ಯವಿದ್ದಲ್ಲಿ ಉಪಯೋಗಿಸಿಕೊಂಡು ವಿಜಯನಗರದ್ದೇ ಎನ್ನುವಂತಹ ಒಂದು ವಿಶಿಷ್ಟವಾದ ಶೈಲಿಯನ್ನು ಅಭಿವೃದ್ಧಿಪಡಿಸಿದವು.

ವಿಜಯನಗರ ಕಾಲದಲ್ಲಿ ರಾಜ್ಯವ್ಯಾಪ್ತಿಯಿರುವಷ್ಟು ಉದ್ದಗಲಕ್ಕೂ ಕಲಾ ಚಟುವಟಿಕೆಗಳು ನಡೆದೇ ಇದ್ದವು. ವಿಜಯನಗರವನ್ನು ಆಳಿದ ವಿಭಿನ್ನ ರಾಜಮನೆತನಗಳು ದೇವಾಲಯಗಳ, ಶಿಲ್ಪಗಳ, ಅರಮನೆಗಳ, ಕೋಟೆ ಕೊತ್ತಲಗಳ ಮತ್ತು ಕೆರೆ ಬಾವಿಗಳ ನಿರ್ಮಾಣಕ್ಕೆ ಪೋಷಕವಾಗಿದ್ದುದು ದಾಖಲೆಗಳಿಂದ ತಿಳಿದುಬರುತ್ತದೆ. ಆ ಕಾಲದ ಕಲಾವಿದ ಕಟ್ಟಡಗಳ ನಿರ್ಮಾಣದ ತೀವ್ರತೆ ಮತ್ತು ಇರುವ ಕಾಲಾವಕಾಶದಲ್ಲಿ ಅವುಗಳನ್ನು ಸಂಪೂರ್ಣಗೊಳಿಸುವುದಕ್ಕಾಗಿ ಹೊಸ ಹೊಸ ಮಾಧ್ಯಮಗಳನ್ನು ರೂಢಿಸಿಕೊಳ್ಳಬೇಕಾಯಿತು. ಇದಕ್ಕಾಗಿ ಶಿಖರ–ಗೋಪುರಗಳ ನಿರ್ಮಾಣಗಳಲ್ಲಿ ಹೊಸ ಮಾಧ್ಯಮವನ್ನು ಪ್ರಯೋಗಿಸಲಾಯಿತು. ವಿಜಯನಗರದ ದೇವಾಲಯಗಳ ಮುಖ್ಯ ಆಕರ್ಷಣೆಗಳಾದ ಮಹಾದ್ವಾರದ ಮೇಲಿನ ಆಕಾಶದೆತ್ತರಕ್ಕೆ ಚಾಚಿಕೊಂಡಿರುವ ಗೋಪುರ, ದೇವಸ್ಥಾನದ ಕಲ್ಯಾಣಮಂಟಪಗಳು ಮತ್ತು ಮುಖಮಂಟಪಗಳು ಮೇಲಿನ ಪ್ರಸ್ತರಗಳ ಸಾಲು ಹೀಗೆ ದೇವಾಲಯದ ಆಲಂಕರಣಕ್ಕೆ ಕಲ್ಲಿನಲ್ಲಿ ಕೆತ್ತಲು ಬೇಕಾಗುವ ಕಾಲಾವಕಾಶವನ್ನು ಗಮನಿಸಿದರೆ ಪ್ರಾಯಶಃ ಯೋಚಿಸಲು ಸಾಧ್ಯವಾಗದಷ್ಟು ಸಮಯಬೇಕಾಗುತ್ತದೆ. ಅದಕ್ಕೆಂದೇ ವಿಜಯನಗರದ ಕಾಲದಲ್ಲಿ ಕಲಾವಿದ ಅಂದು ಪ್ರಚಲಿತದಲ್ಲಿದ್ದ ಹೊಸ ಮಾಧ್ಯಮವನ್ನು ತನ್ನದಾಗಿಸಿಕೊಂಡಿರಬೇಕು. ಈ ಹೊಸ ಮಾಧ್ಯಮವೇ ಪ್ರಸ್ತುತ ಚರ್ಚೆಯಲ್ಲಿರುವ ಗಾರೆ. ಗಾರೆ ಕಲಾಮಾಧ್ಯಮವಾಗಿ ವಿಜಯನಗರ ಕಾಲದಲ್ಲಿ ಒಮ್ಮಿಂದೊಮ್ಮೆಲೆ ಉಪಯೋಗವಾಗಿಲ್ಲ. ಶಿಲೆ, ಕಾಷ್ಠಗಳಿಗಿರುವಂತೆ ಇದಕ್ಕೂ ದೀರ್ಘವಾದ ಇತಿಹಾಸವಿದೆ. ಅದೇನೇ ಇರಲಿ ವಿಜಯನಗರ ಕಾಲದಲ್ಲಿ ಗಾರೆ ಶಿಲೆಯಷ್ಟೇ ಪ್ರಮುಖವಾದ ಮಾಧ್ಯಮವಾಯಿತು. ಯಾವುದೇ ದೇವಾಲಯದ ನಿರ್ಮಾಣವಿರಲಿ, ಮಂಟಪ, ಪುಷ್ಕರಿಣೆಗಳಾಗಲೀ ಅಥವಾ ಇನ್ನಾವುದೋ ಖಾಸಗಿ ಕಟ್ಟಡದ ನಿರ್ಮಾಣವಿರಲಿ ಇಟ್ಟಿಗೆ ಮತ್ತು ಗಾರೆ ಅಲ್ಲಿ ಉಪಯೋಗವಾಗಿರಲೇ ಬೇಕು.

ಗಾರೆಯೊಂದಿಗೆ ಇಟ್ಟಿಗೆ ಕೂಡ ವಿಜಯನಗರ ಕಾಲದ ದೇವಾಲಯಗಳ ಅಲಂಕರಣಗಳಲ್ಲಿ ಅಷ್ಟೇ ಮುಖ್ಯವಾದ ವಸ್ತುವಾಗಿದೆ. ಗೋಪುರ, ಶಿಖರ ಮತ್ತು ಕಿರು ವಿಮಾನಗಳ ನಿರ್ಮಾಣದಲ್ಲಿ ಮತ್ತು ಆಕೃತಿಗಳ ವಿಭಿನ್ನ ವಿನ್ಯಾಸಗಳ ಹಾಗೂ ಯಾವುದೇ ಸೂಕ್ಷ್ಮವಾದ ಅಲಂಕಾರಿಕ ವಸ್ತುಗಳ ರಚನೆಯಲ್ಲಿ ಗಾರೆ ಮತ್ತು ಇಟ್ಟಿಗೆಗೆ ಸಮನಾಗಿ ಉಪಯೋಗವಾಗಿವೆ.

**ಗಾರೆಯ ಕಲಾ ಹಿನ್ನೆಲೆ:**

ಗಾರೆಯು ಕಲಾ ಮಾಧ್ಯಮವಾಗಿ ಬೆಳೆದುದನ್ನು ಸ್ಥೂಲವಾಗಿ ಗಮನಿಸಿದರೆ ಅದರ ಕಲಾ ಇತಿಹಾಸ ನಮ್ಮನ್ನು ಪ್ರಾಚೀನ ಕಾಲದತ್ತ ಕೊಂಡೊಯ್ಯುತ್ತದೆ. ಗಾರೆಯನ್ನು ಪ್ರಾಚೀನ ನಾಗರೀಕತೆಗಳಲ್ಲಿ ಉಪಯೋಗಿಸಿರುವುದನ್ನು ಈಜಿಪ್ತ, ಸುಮೇರಿಯನ್ ಮತ್ತು ಸಿಂಧೂ ನದಿ ಕೊಳ್ಳದ ಹರಪ್ಪ, ಮೆಹೆಂಜೋದಾರೋಗಳ ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು. ಈಜಿಪ್ತಿನ ಪಿರಮಿಡ್ಡುಗಳಲ್ಲಿನ ಒಳ ಕೋಣೆಗಳಲ್ಲಿ ಕಂಡು ಬರುವ ಭಿತ್ತಿಚಿತ್ರಗಳ ಹಿನ್ನೆಲೆಯಾಗಿ ಗಾರೆ ಉಪಯೋಗವಾಗಿದೆ. ಸುಮೇರಿಯನ್ ಸಂಸ್ಕೃತಿಯಲ್ಲಿನ ಜಿಗುರಾಟ್‌ಗಳ ನಿರ್ಮಾಣದಲ್ಲಿ ಮತ್ತು ಬಿಡಿ ಆಕೃತಿಗಳ ನಿರ್ಮಾಣದಲ್ಲಿ ಗಾರೆ ಉಪಯೋಗವಾಗಿದೆ. ಗ್ರೀಕೋ–ರೋಮನ್ ನಾಗರೀಕತೆಗಳಲ್ಲಿ ಕಟ್ಟಡಗಳ ನಿರ್ಮಾಣದಲ್ಲಿ ಮತ್ತು ಕಲಾತ್ಮಕವಾದ ಶಿಲ್ಪಾಕೃತಿಗಳ ರಚನೆಗಾಗಿ ಗಾರೆ ಮಾಧ್ಯಮವಾಗಿದೆ. ಗಾರೆಗೆ ಸ್ವತಂತ್ರವಾದ ಕಲಾಮಾಧ್ಯಮದ ಸ್ಥಾನ ದೊರೆತಿದ್ದು ಗ್ರೀಕೋ–ರೋಮನ್ ಕಾಲದಲ್ಲಿಯೇ ಅನ್ನಬಹುದು.

ಇತ್ತ ಭಾರತದಲ್ಲಿ ಕುಷಾಣರ ಕಾಲದಲ್ಲಿ ಗಾಂಧಾರ ಶೈಲಿಯಲ್ಲಿ ರಚಿಸಲ್ಪಟ್ಟ ಹಲವಾರು ಬಿಡಿ ಆಕೃತಿಗಳು ಮತ್ತು ಕಥಾನಕ ಆಕೃತಿಗಳು ಕಂಡು ಬರುತ್ತವೆ. ಇವು ಮುಖ್ಯವಾಗಿ ಬೌದ್ಧ ಧರ್ಮಕ್ಕೆ ಸೇರಿವೆ.[2] ಶಾತವಾಹನರ ಕಾಲದ ಲಯಣಗಳಲ್ಲಿ ಹಾಗೂ ಗುಪ್ತ, ವಾಕಾಟಕ ರಾಜ ಮನೆತನದವರು ನಿರ್ಮಿಸಿರುವ ಬೌದ್ಧ ಚೈತ್ಯ ವಿಹಾರಗಳಲ್ಲಿನ ಭಿತ್ತಿ ಚಿತ್ರಗಳ ಹಿನ್ನೆಲೆಯ ಲೇಪನವಾಗಿ ಗಾರೆಯನ್ನು ಉಪಯೋಗಿಸಿದೆ. ಅಲ್ಲದೆ ಐಹೊಳೆಯಲ್ಲಿನ ಚಾಲುಕ್ಯ ಪೂರ್ವ ಕಾಲದ ಇಟ್ಟಿಗೆಯ ಕಟ್ಟಡವನ್ನು ಗಾರೆಯನ್ನು ಉಪಯೋಗಿಸಿಯೇ ಕಟ್ಟಿದೆ. ನಂತರದ ಕಾಲದಲ್ಲಿ ಗಾರೆಯ

ಉಪಯೋಗವಾಗಿದ್ದರೂ ಅದು ಸ್ವಲ್ಪ ವಿರಳವೆಂದೇ ಹೇಳಬೇಕು. ಏಕೆಂದರೆ, ದೇಶದ ಉದ್ದಗಲಕ್ಕೂ ಅಂದು ಪ್ರಭಾವಕಾರಿಯಾಗಿ ಪ್ರಚಲಿತದಲ್ಲಿದ್ದ ಭವ್ಯವಾದ ಲಯಣಗಳ ಕೆತ್ತನೆ, ದೇಗುಲಗಳ ನಿರ್ಮಾಣ, ಶಿಲ್ಪಗಳ ಕೆತ್ತನೆ ಎಲ್ಲವೂ ಶಿಲೆಯನ್ನು ಆಧರಿಸಿದವುಗಳೇ. ಹೀಗಾಗಿ ಅಂದು ಶಿಲೆ ಪ್ರಮುಖ ಮಾಧ್ಯಮವಾಯಿತು. ಆದರೆ, ಗಾರೆಗೆ ವಿಶೇಷವಾದ ಸ್ಥಾನಮಾನ ಮತ್ತೊಮ್ಮೆ ದೊರೆತದ್ದು 13-14ನೇ ಶತಮಾನದಲ್ಲಿ ಅನ್ನಬಹುದು.

ಗಾರೆಯ ಉಪಯೋಗ ಪ್ರಾಯಶಃ ಅದರ ತಾಂತ್ರಿಕ ಸರಳತೆಯನ್ನು ಅವಲಂಬಿಸಿದೆ. ಅದಕ್ಕಾಗಿಯೇ ಪರ್ಷಿಯಾದಲ್ಲಿ ಇಸ್ಲಾಮಿಕ್ ದೊರೆಗಳು ಭವ್ಯವಾದ ಮಸೀದಿಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದು. ಪಾಯಶಃ ಅದೇ ಪರಂಪರೆ ಭಾರತದಲ್ಲಿ ಇಸ್ಲಾಮಿಕ್ ಧರ್ಮದ ಅರಸರು ರಾಜ್ಯಭಾರ ಪ್ರಾರಂಭಿಸಿದ ಮೇಲೆ ಮುಂದುವರೆದುಕೊಂಡು ಬಂದಿತೆಂದು ಹೇಳಬಹುದು. ಮಹಾದ್ವಾರಗಳ ಅಲಂಕರಣ, ಮಸೀದಿಗಳ ಒಳಮಾಳಿಗೆಗಳ, ಗೋಡೆಗಳ ಅಲಂಕರಣ, ಹೀಗೆ ಪ್ರಾರಂಭವಾದ ಗಾರೆಯ ಉಪಯೋಗ ಕಾಲ ಕ್ರಮೇಣ ವಿಜಯನಗರ ಕಾಲದಲ್ಲಿ 'ಶಿಲೆಗೆ' ಪರ್ಯಾಯವಾಗಿ ಇಟ್ಟಿಗೆಯೊಂದಿಗೆ ಪ್ರಮುಖ ಮಾಧ್ಯಮವಾಯಿತು.

**ಗಾರೆಯ ತಾಂತ್ರಿಕ ಬೆಳವಣಿಗೆ:**

ಗಾರೆಯನ್ನು ಅಷ್ಟು ಅಗಾಧ ರೀತಿಯಲ್ಲಿ ಬಳಸಲು ಮುಖ್ಯ ಕಾರಣ ಅದರ ಸರಳ ತಾಂತ್ರಿಕತೆ. ನವೀನ ಯುಗದ ಸಿಮೆಂಟಿನಷ್ಟೇ ಗಟ್ಟಿಯಾದ ಈ ಮಾಧ್ಯಮ ಬಳಸಲು ಸುಲಭವೂ ಆಗಿದೆ. ಸಿಮೆಂಟ್ ನೀರಿನೊಂದಿಗೆ ಬೆರೆತೊಡನೆ ಕೆಲವೇ ಗಂಟೆಗಳಲ್ಲಿ ಗಟ್ಟಿಯಾಗಿ ಬಿಡುತ್ತದೆ. ಆದರೆ ಗಾರೆಯನ್ನು ತಯಾರಿಸಿ ಕೆಲವು ದಿನಗಳವರೆಗೆ ಹಾಗೆ ಇಡಬಹುದು. ಗಾರೆಯ ಈ ಅನುಕೂಲಕರ ಮಿಶ್ರಣ ಅಂದಿನ ವಿಜಯನಗರದ ಕಲಾವಿದರಿಗೆ ಅತ್ಯಂತ ಆಕರ್ಷಕವಾದ ಮಾಧ್ಯಮವಾಗಿ ಕಂಡಿರಬೇಕು.

ಗಾರೆಯನ್ನು ಮುಖ್ಯವಾಗಿ ಸುಣ್ಣ, ಮರಳು, ನೀರು ಮತ್ತು ಕೆಲವು ಅಂಟು ದ್ರಾವಣಗಳನ್ನು ಸೇರಿಸಿ ತಯಾರಿಸುತ್ತಾರೆ. ಉಪಯೋಗವನ್ನು ಅವಲಂಬಿಸಿ ಮತ್ತು ರಚಿಸಬೇಕಾದ ಆಕೃತಿಯ ಸೂಕ್ಷ್ಮತೆ, ಅಲಂಕರಣವನ್ನು ಗಮನದಲ್ಲಿರಿಸಿ ಗಾರೆಯ ಸರಿಯಾದ ಗುಣಮಟ್ಟದ ತಯಾರಿಕೆ ನಡೆಯುತ್ತದೆ. ಆಕೃತಿಗಳು ಗಾರೆಯ ಗುಣಮಟ್ಟವನ್ನು ಅವಲಂಬಿಸಿವೆ ಎಂಬುದನ್ನು ಹಲವಾರು ಉದಾಹರಣೆಗಳಿಂದ ರುಜುವಾತುಪಡಿಸಬಹುದು. ಗಾರೆಯಲ್ಲಿ ಸುಣ್ಣದ ಗುಣಮಟ್ಟ ಅತೀ ಮುಖ್ಯ. ಸೋಸಿ ತೆಗೆದ ಕಪ್ಪೆಚಿಪ್ಪಿನ ಸುಣ್ಣ, ಕಲ್ಲು ಸುಣ್ಣ ಅಥವಾ ಸುಣ್ಣಬುರಳಿ ಇವು ಮುಖ್ಯ ವಸ್ತುಗಳು. ಇದರೊಂದಿಗೆ ಉತ್ತಮ ಮರಳು, ಲೋಳೆಸರ, ಬಿಲ್ವಪತ್ರೆ ಕಾಯಿ, ಬೆಲ್ಲ ಅಥವಾ ಕೆಲವು ಸಲ ಮೊಟ್ಟೆಯೂ ಕೂಡಾ ಅಂಟು ದ್ರಾವಣದ ರೂಪದಲ್ಲಿ ಉಪಯೋಗವಾಗುತ್ತದೆ. ಎಲ್ಲವನ್ನು ಹದಕ್ಕೆ ತಕ್ಕಂತೆ ಹಾಕಿ ಚೆನ್ನಾಗಿ ರುಬ್ಬಬೇಕು. ರುಬ್ಬಿದ ನಂತರ ಬೆಣ್ಣೆಯ ಹಾಗೆ ಹದಕ್ಕೆ ಬಂದಾಗ ಮಾತ್ರ ಯಾವುದೇ ಆಕೃತಿಯ ರಚನೆ ಇರಲಿ ಅತ್ಯಂತ ನೈಜವಾಗಿ ಮೂಡುತ್ತದೆ. ಅಲ್ಲದೆ, ಉಪಯೋಗಕ್ಕೂ ಸಹಕಾರಿಯಾಗುತ್ತದೆ. ಪ್ರಾಚೀನ ಕಾಲದಲ್ಲಿಯೇ ವಿವಿಧ ವರ್ಗದ ಗುಣಮಟ್ಟದ ಗಾರೆ ಗ್ರೀಕ್ ಮತ್ತು ಇಟಲಿ ದೇಶಗಳ ಕಲೆಯಲ್ಲಿ ಉಪಯೋಗ ವಾಗಿರುವುದು ಕಂಡುಬರುತ್ತದೆ. ಅಂತಹದೇ ಪ್ರಯತ್ನ ವಿಜಯನಗರ ಕಾಲದ ವಿವಿಧ ರಚನೆಗಳಲ್ಲಿ ಆಗಿರುವುದನ್ನು ಹಲವಾರು ಉದಾಹರಣೆಗಳಿಂದ ಗಮನಿಸಬಹುದು.

ವಿಜಯನಗರ ಕಾಲದಲ್ಲಿ ಗಾರೆಯು ಕಲೆಯ ಒಂದು ಸಂಪೂರ್ಣವಾದ ಕಲಾಮಾಧ್ಯಮವಾಗಿ ಬೆಳೆದಿತ್ತು ಎನ್ನುವುದನ್ನು ನಾವು ಇಂದಿಗೂ ಉಳಿದಿರುವ ಆ ಕಾಲದ ದೇವಾಲಯಗಳಿಂದ ಮತ್ತು ವಿವಿಧ ಕಟ್ಟಡಗಳಿಂದ ತಿಳಿಯಬಹುದು. ವಿಜಯನಗರದ ರಾಜಧಾನಿ ಹಂಪೆಯಲ್ಲಿನ ಎಲ್ಲಾ ದೇವಾಲಯಗಳಲ್ಲಿ ಒಂದಲ್ಲ ಒಂದು ವಿಧದಲ್ಲಿ ಗಾರೆಯ ಉಪಯೋಗವಿದೆ. ವಿಜಯನಗರದ ರಾಜ್ಯವ್ಯಾಪ್ತಿಯುದ್ದಕ್ಕೂ ಹರಡಿಕೊಂಡಿರುವ ಮಂಟಪಗಳಿರಲಿ ಅಥವಾ ಯಾವುದೇ ಸಾರ್ವಜನಿಕ ಕಟ್ಟಡಗಳಿರಲಿ ಗಾರೆ ಮಾಧ್ಯಮವಾಗಿ ಉಪಯೋಗವಾಗಿದೆ. ಅಂದರೆ ಗಾರೆಯ ತಯಾರಿಕೆ, ಅದನ್ನು ಉಪಯೋಗಿಸಲು ಸಿದ್ಧವಾಗಿರುತ್ತಿದ್ದ ಕಲಾವಿದರು, ಗಾರೆ ಕೆಲಸದವರು ಎಲ್ಲವನ್ನು ಲೆಕ್ಕ ಹಾಕಿದರೆ ಯೋಚನೆಗೂ ಮೀರಿದ ಬೆಳವಣಿಗೆ ಕಾಣುತ್ತದೆ. ಶಿಲೆಯನ್ನು ಬದಿಗೆ ತಳ್ಳಿ ತನ್ನನ್ನು ಮುಖ್ಯ ಮಾಧ್ಯಮವನ್ನಾಗಿ ಸ್ಥಾಪಿಸಿಕೊಳ್ಳುವಲ್ಲಿ ಗಾರೆ ಯಶಸ್ವಿಯಾಗಿದೆ ಅಥವಾ ಶಿಲೆಗೆ ಸಮಾನಾಂತರವಾದ ಸ್ಥಾನವನ್ನು ಅದು ಪಡೆದಿದೆ ಎನ್ನಬಹುದು. ದೇವಸ್ಥಾನದ ಮುಖ್ಯ ಆಕರ್ಷಣೆಗಳಾದ ಶಿಖರ, ಗೋಪುರ, ವಿಮಾನಗಳ ಗೂಡಿನ ಸಾಲು ಹಾಗೂ ಇನ್ನಿತರ ಅಲಂಕರಣಗಳಲ್ಲಿ ಆಕೃತಿಗಳು ಮುಖ್ಯವಾಗಿ ಕಂಡು ಬರುತ್ತವೆ. ಸಾಮಾನ್ಯವಾಗಿ ಆಯಾ ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಪಂಥೀಯ ಆಕೃತಿಗಳು ಕಾಣಿಸಿಕೊಂಡಿವೆ. ವೈಷ್ಣವ–ಶೈವ ಪಂಥಕ್ಕೆ ಸೇರಿದ ಆಕೃತಿಗಳೂ ಒಟ್ಟೊಟ್ಟಿಗೆ ಕಾಣಿಸಿರುವ ಉದಾಹರಣೆಗಳು ಇಲ್ಲದಿಲ್ಲ.

ವಿಜಯನಗರದ ಪ್ರಪ್ರಥಮ ರಾಜಮನೆತನದ ಅರಸರ ಕಾಲದಲ್ಲಿ ನಿರ್ಮಿಸಿದ ದೇವಾಲಯಗಳಲ್ಲಿ ಗಾರೆ ಕೆಲಸ ಇದ್ದಿರಬಹುದಾದ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.[3] ನಂತರದ ಕಾಲದಲ್ಲೂ ಹಲವಾರು ಹೊಸ ಜೋಡಣೆಗಳೂ ಆಗಿರುವ ಸಾಧ್ಯತೆ ಇದೆ. ಗಾರೆಯು ಇದ್ದಕ್ಕಿದ್ದಂತೆ ಅಷ್ಟು ವೇಗವಾಗಿ ಮತ್ತು ಶಿಲೆಗೆ ಪರ್ಯಾಯವಾಗಿ ಉಪಯೋಗಗೊಳ್ಳಲು ಕಾರಣಗಳು ಹಲವಾರು ಇರಬಹುದು. ಸಮರೋಪಾದಿಯಲ್ಲಿ ನಿರ್ಮಾಣಗೊಂಡ ವಿಶಾಲ ದೇವಾಲಯಗಳು ಮೂಲತಃ ಮಾಳಿಗೆಯವರೆಗೂ ಗಟ್ಟಿಯಾದ ಕಣಶಿಲೆಯಲ್ಲಿ(ಗ್ರ್ಯಾನೈಟ್)ಯೇ ನಿರ್ಮಾಣವಾದವು. ಕಂಬಗಳ ಅಲಂಕರಣ, ಹೊರ ಭಿತ್ತಿಗಳ ಅಲಂಕರಣ – ಹೀಗೆ ವಿವಿಧ ಅಕೃತಿಗಳನ್ನು ಕೆತ್ತುವ ಕೆಲಸಕ್ಕೆ ಸಾಮಾನ್ಯವಾಗಿ ಹೆಚ್ಚು ಸಮಯ ಬೇಕಾಗುತ್ತಿತ್ತು. ಬಹುಶಃ ತಾಂತ್ರಿಕವಾಗಿ ಇದನ್ನೇ ಮೇಲ್ಕಟ್ಟಡಕ್ಕೆ ಮುಂದುವರಿಸಿದರೆ ಉದ್ದೇಶಿತ ಸಮಯದಲ್ಲಿ ನಿರ್ಮಾಣಕಾರ್ಯ

ಸಂಪೂರ್ಣಗೊಳ್ಳದೆ ಇರುವ ಸಂಭವ ಹೆಚ್ಚು. ಹೀಗಾಗಿ ಮೂಲ ನಕ್ಷೆಯಲ್ಲಿರುವ ಆಕೃತಿಗಳನ್ನು ಈ ಹೊಸ ಇಟ್ಟಿಗೆ, ಗಾರೆಯನ್ನು ಮೂಲ ವಸ್ತುವನ್ನಾಗಿ ಮಾಡಿಕೊಂಡು ನಿರ್ಮಿಸಿದರು ಎಂದೆನಿಸುತ್ತದೆ. ದೇವಸ್ಥಾನಕ್ಕಾಗಿಯೇ ವಿವಿಧ ಆಕಾರದ ಇಟ್ಟಿಗೆಯ ತಯಾರಿಕಾ ಕೇಂದ್ರಗಳು ಕಾರ್ಖಾನೆ ಮಾದರಿಯಲ್ಲಿ ಪ್ರಾರಂಭವಾಗಿದ್ದಿರಬಹುದು; ಇದರ ಜೊತೆಯಲ್ಲಿಯೇ ಗಾರೆಯೂ ಕೂಡ ಸಾಕಷ್ಟು ಪ್ರಮಾಣದಲ್ಲಿ ತಯಾರಾಗುತ್ತಿತ್ತು. ಇಂದಿಗೂ ಕೂಡ ವಿಜಯನಗರ(ಹಂಪೆ)ದಲ್ಲಿ ಅಲ್ಲಲ್ಲಿ ಗಾರೆ ಅರೆಯುವ ಕಲ್ಲುಗಳನ್ನು ನೋಡಬಹುದು.

ವಿಜಯನಗರದ ಕಲಾವಿದ ಇಟ್ಟಿಗೆ ಮತ್ತು ಗಾರೆಯನ್ನು ಉಪಯೋಗಿಸಿ ಕಲಾತ್ಮಕವಾದ, ಸುಂದರವಾದ ಆಕೃತಿಗಳನ್ನು ನಿರ್ಮಿಸುವಲ್ಲಿ ಸಿದ್ಧಹಸ್ತನಾಗಿದ್ದ. ಸಾಮಾನ್ಯವಾಗಿ ಆಕೃತಿಗಳು ಶಿಲ್ಪಗಳಂತೆ ಬಿಡಿ ಆಕೃತಿಗಳಲ್ಲ, ಹಿನ್ನೆಲೆ ಗೋಡೆಗೆ ಅಂಟಿಕೊಂಡಂತೆ ಇವೆ. ಇದೆ ತಾಂತ್ರಿಕತೆಯನ್ನು ಶಿಲಾ ಆಕೃತಿಗಳನ್ನು ಭಿತ್ತಿಗಳ ಮೇಲೆ ಕೆತ್ತುವಾಗ ಅನುಸರಿಸಲಾಗುತ್ತಿದೆ. ವಿಜಯನಗರದುದ್ದಕ್ಕೂ ಇರುವ ಶಿಲಾ ಆಕೃತಿಗಳು ಕೆಳ ಉಬ್ಬು (low reliefs) ಶಿಲ್ಪಗಳಾಗಿವೆ. ಹೆಚ್ಚು ಹೊರಚಾಚಿರುವ ಉಬ್ಬು ಶಿಲ್ಪಗಳಿಲ್ಲವೆಂದಲ್ಲ, ಅದರೆ ಸಾಮಾನ್ಯವಾಗಿ ಕೆಳ ಉಬ್ಬು ಶಿಲ್ಪಗಳ ಸಂಖ್ಯೆಯೇ ಹೆಚ್ಚು. ಇವುಗಳಿಗೆ ಸಮಾನಾಂತರವಾಗಿ ಗಾರೆ ಆಕೃತಿಗಳೂ ದುಂಡು ಶಿಲ್ಪಗಳಂತೆಯೇ ಹೆಚ್ಚು ಉಬ್ಬು ಆಕೃತಿಗಳಾಗಿ ಬೆಳೆದವು. ಗಾರೆ ಆಕೃತಿಗಳನ್ನು ನೋಡಿದಾಗ, ಹಿನ್ನೆಲೆಯಿಂದ ಸಂಪೂರ್ಣವಾಗಿ ಹೊರಬರುವಂತೆ, ಭಾಸವಾಗದೇ ಇರದು. ಕಲಾವಿದನಿಗೆ ಇಲ್ಲಿ ಸ್ಥಳಾವಕಾಶದ ಸಂಪೂರ್ಣ ಜ್ಞಾನವಿದೆ. ಆದ್ದರಿಂದ ಇರುವ ಅವಕಾಶಕ್ಕೆ ಅನುಗುಣವಾಗಿ ಆಕೃತಿಗಳನ್ನು ನಿರ್ದೇಶಿಸಿದ್ದಾನೆ. ಭಿತ್ತಿ ಚಿತ್ರಗಳಲ್ಲಿ ಮತ್ತು ಭಿತ್ತಿ ಆಕೃತಿಗಳಲ್ಲಿ ಕಂಡು ಬರುವ ಆಕೃತಿಗಳ ಸಂಯೋಜನೆ ಇಲ್ಲಿಯೂ ಕಂಡು ಬರುತ್ತದೆ. ಮುಖ್ಯ ಆಕೃತಿ ಎಲ್ಲ ಆಕೃತಿಗಳಿಗಿಂತ ಎತ್ತರವಾಗಿದ್ದು ಮಧ್ಯದಲ್ಲಿರುತ್ತದೆ. ಉಳಿದವುಗಳು ಎರಡು ಪಕ್ಕಗಳಲ್ಲಿ ಸಮಾನಾಂತರವಾಗಿ ರಚಿಸಲ್ಪಡುತ್ತವೆ. ಇದನ್ನೇ ನಾವು ಕಲಾ ಇತಿಹಾಸದಲ್ಲಿ ಸಮಾನಾಂತರವಾದ ಸಂಯೋಜನೆ ಎನ್ನುವುದು.

ಹಂಪೆಯಲ್ಲಿ, ಕನಕಗಿರಿಯಲ್ಲಿ, ಇತ್ತ ಹಳೆ ಮೈಸೂರು ಭಾಗದಲ್ಲಿ ನಿರ್ಮಾಣವಾದ ಬಹುತೇಕ ಎಲ್ಲ ದೇವಾಲಯಗಳಲ್ಲೂ ಹೆಚ್ಚು ಕಡಿಮೆ ಒಂದೇ ತೆರನಾದ ಗಾರೆ ಕೆಲಸವಿದೆ. ಹಂಪೆಯಲ್ಲಿಯ ದೇವಾಲಯಗಳಲ್ಲಿ ಕೆಲವನ್ನು ಗಾರೆ ಕಲೆಯ ದೃಷ್ಟಿಯಿಂದ ಅಭ್ಯಾಸ ಮಾಡಿದಾಗ ಹಲವಾರು ಹೊಸ ವಿಷಯಗಳು ಹೊರಬರುತ್ತವೆ. ಮೊದಲನೆಯದಾಗಿ ಅವುಗಳ ರಚನಾ ವಿಧಾನದಲ್ಲಿ ಸಾಧಿಸಿದ ಪ್ರಗತಿ ಹಾಗೂ ರಚನೆಯಲ್ಲಿ ಕಂಡುಕೊಂಡ ತಾಂತ್ರಿಕ ಪರಿಣತಿ. ಉದಾಹರಣೆಗಾಗಿ ವಿಜಯವಿಠಲ ದೇವಾಲಯ, ವಿರೂಪಾಕ್ಷ ದೇವಾಲಯ, ಕೃಷ್ಣ, ಹಜಾರರಾಮ ದೇವಾಲಯಗಳು ಹಾಗೂ ಅಚ್ಯುತಾಪುರದಲ್ಲಿಯ ಕಿರು ದೇವಾಲಯಗಳು ಗಾರೆ ಕಲೆಗೆ ಉತ್ತಮ ಉದಾಹರಣೆಗಳಾದರೆ, ಇತ್ತ ರಾಜ–ರಾಣಿಯರ ಖಾಸಗಿ ಕಟ್ಟಡಗಳಾದ ಕಮಲ್‌ಮಹಲ್ (ರಾಣಿ ಮಹಲ್) ಮತ್ತು ರಾಣಿಯರ ಸ್ನಾನಗೃಹಗಳು ಉತ್ತಮ ಗುಣಮಟ್ಟದ ಮತ್ತು ಅತ್ಯಂತ ಆಕರ್ಷಕವಾದ ಗಾರೆ ಕಲೆಯನ್ನು ಹೊಂದಿವೆ. ಹಂಪೆಯ ಭೌಗೋಳಿಕ ವ್ಯಾಪ್ತಿಯಲ್ಲಿರುವ ಕನಕಗಿರಿಯಲ್ಲಿನ ಎಲ್ಲಾ ದೇವಾಲಯಗಳೂ ಗಾರೆ ಕಲೆಯ ಉತ್ತಮ ಉದಾಹರಣೆಗಳಾಗಿವೆ.

ಗಾರೆ ಆಕೃತಿಗಳ ಬೆಳವಣಿಗೆಯನ್ನು ಈಗಿನ ಆಂಧ್ರಪ್ರದೇಶದ ಹಲವಾರು ಸ್ಥಳಗಳಲ್ಲಿಯೂ ನೋಡಬಹುದು. ತಿರುಪತಿ ಹತ್ತಿರವಿರುವ ಕಾಳಹಸ್ತಿಯಲ್ಲಿ ಕೃಷ್ಣದೇವರಾಯ ನಿರ್ಮಿಸಿದ ರಾಯಗೋಪುರ, ಹಿಂದುಪುರದ ಹತ್ತಿರವಿರುವ ಲೇಪಾಕ್ಷಿಯಲ್ಲಿ ವೀರಣ್ಣ, ವಿರುಪಣ್ಣ ನಿರ್ಮಿಸಿದ ವೀರಭದ್ರೇಶ್ವರ ದೇವಸ್ಥಾನ, ತಾಡಪತ್ರಿ ಹಾಗೂ ಕಡಪಾ ಜಿಲ್ಲೆಯ ಪುಷ್ಪಗಿರಿಯಲ್ಲಿನ ಸಂತಾನ ಮಲ್ಲೇಶ್ವರ ದೇವಾಲಯದಲ್ಲಿನ ಅಪರೂಪದ ಕಥಾನಕ ಆಕೃತಿಗಳು ಹೀಗೆ ಅಗಾಧವಾದ ರೀತಿಯಲ್ಲಿ ಗಾರೆ ಆಕೃತಿಗಳು ಬೆಳವಣಿಗೆ ಹೊಂದಿ ಉತ್ಕೃಷ್ಟ ಪರಂಪರೆಗೆ ನಾಂದಿ ಹಾಡಿದವು.

**ಗಾರೆ ಆಕೃತಿಗಳ ಚರ್ಚೆ:**

ಪ್ರಸ್ತುತ ಚರ್ಚೆಯಲ್ಲಿ ಮೊಟ್ಟ ಮೊದಲು ಹಂಪೆಯಲ್ಲಿನ ದೇವಾಲಯಗಳನ್ನು ಮತ್ತು ಖಾಸಗಿ ಕಟ್ಟಡಗಳನ್ನು ನೋಡಬಹುದು.

ಸಾಮಾನ್ಯವಾಗಿ, ಈ ಮೊದಲೇ ವಿವರಿಸಿದಂತೆ, ದೇವಾಲಯದ ಕಿರೀಟಪ್ರಾಯವಾದ ಗೋಪುರ, ಶಿಖರ ಹಾಗೂ ದೇವಾಲಯದ ಸುತ್ತಲೂ ಇರುವ ಪೌಳಿಮಂಟಪ, ರಂಗಮಂಟಪ ಮತ್ತು ಕಲ್ಯಾಣಮಂಟಪಗಳ ಮೇಲಣ ಸ್ತರಗಳಲ್ಲಿ ಗಾರೆ ಆಕೃತಿಗಳು ಕಂಡು ಬರುತ್ತವೆ. ಗೋಪುರ–ಶಿಖರಗಳಲ್ಲಿ ಬಿಡಿಯಾಗಿ ವಿಭಿನ್ನ ಸ್ತರಗಳಲ್ಲಿ ಹಾಗೂ ಕಿರುದ್ವಾರಗಳ ಎರಡು ಬದಿಗಳಲ್ಲಿ ದ್ವಾರಪಾಲಕರಾಗಿ ಮತ್ತು ಮೂಲೆಗಳಲ್ಲಿ ಕಿರು ವಿಮಾನಗಳಲ್ಲಿ ಹೊರಚಾಚಿರುವ ನಾಸಿಕಗಳಲ್ಲಿ ಅಲಂಕಾರಿಕ ವಿಗ್ರಹಗಳಂತೆ ಆಕೃತಿಗಳು ಕಂಡು ಬರುತ್ತವೆ. ಮಂಟಪಗಳ ಮೇಲಿರುವ ಗೂಡುಗಳಲ್ಲಿ ಮತ್ತು ಕಿರು ವಿಮಾನಗಳಲ್ಲಿ ಹಲವಾರು ದೇವಾನುದೇವತೆಗಳ ಆಕೃತಿಗಳ ರಚನೆಗಳು ಇವೆ. ಅಲ್ಲದೆ ಅತ್ಯಂತ ನಾಜೂಕಾದ ಸುರುಳಿಯಂತಹ ಬಳ್ಳಿಗಳ ವಿನ್ಯಾಸ, ಮಕರ, ವ್ಯಾಳ ಮುಖಗಳು, ಪಕ್ಷಿಗಳ ಸಾಲುಗಳ ವಿನ್ಯಾಸ ಹೀಗೆ ಹಲವಾರು ಹೊಸ ನಮೂನೆಗಳು ಗಾರೆಯಲ್ಲಿ ಮತ್ತು ಇಟ್ಟಿಗೆಯಲ್ಲಿ ಅರಳತೊಡಗಿದವು.

ವಿರೂಪಾಕ್ಷ ದೇವಾಲಯದಲ್ಲಿನ ಪಕ್ಕದ ಮಂಟಪದ ಮೇಲೆ ಇರುವ ಆಕೃತಿಗಳು ಒಂದೇ ತೆರನಾದ ಶೈಲಿಯನ್ನು ಹೊಂದಿವೆ. ಪ್ರಾಯಶಃ ಈ ಎಲ್ಲಾ ಆಕೃತಿಗಳೂ ಒಂದೇ ಗುಂಪಿನ ಕಲಾವಿದರ ಕೆತ್ತನೆಯಾಗಿರಬೇಕು. ಉಮಾಮಹೇಶಮೂರ್ತಿ ಮತ್ತು ಲಕ್ಷ್ಮೀನರಸಿಂಹ (ಚಿತ್ರ 1), ವೃಷಭವಾಹನ ಶಿವ ಮತ್ತು ಪಾರ್ವತಿ (ಚಿತ್ರ 2) ಎಲ್ಲವೂ ಆಸನ ಕೃತಿಗಳೇ. ಉಮಾಮಹೇಶಮೂರ್ತಿ ಮತ್ತು ಲಕ್ಷ್ಮೀನರಸಿಂಹ ಆಕೃತಿಗಳಲ್ಲಿ ಅತ್ಯಂತ ಸಾಮ್ಯತೆ ಇದೆ. ಎರಡೂ ಆಕೃತಿಗಳಲ್ಲಿ ಸ್ತ್ರೀ ಅಂದರೆ ಪಾರ್ವತಿ ಮತ್ತು ಲಕ್ಷ್ಮೀ ಕ್ರಮವಾಗಿ ತಮ್ಮ ಪುರುಷರ ಎಡ ತೊಡೆಯ ಮೇಲೆ

ಕುಳಿತಿದ್ದಾರೆ. ಆಕೃತಿಗಳಲ್ಲಿ ಶಿವ ಮತ್ತು ನರಸಿಂಹ ಪೀಠಗಳ ಮೇಲೆ ಮಹಾರಾಜ ಲೀಲಾಸನದಲ್ಲಿ ಕುಳಿತಿದ್ದಾರೆ. ಚತುರ್ಭುಜರಾಗಿರುವ ಈ ಆಕೃತಿಗಳಲ್ಲಿ ದೈಹಿಕ ನೈಜತೆ ಸ್ಪಷ್ಟವಾಗಿ ಕಾಣುತ್ತದೆ. ಸರ್ವ ಅಲಂಕಾರ ಭೂಷಣವಾದ ಆಕೃತಿಗಳಲ್ಲಿ ಸ್ವಾಭಾವಿಕ ನಾಜೂಕುತನ ಎದ್ದು ಕಾಣುತ್ತದೆ.

ಆಕೃತಿಗಳ ಮುಖ್ಯ ಭಾಗವನ್ನು ಮತ್ತು ಪೀಠಗಳನ್ನು ಚಿಕ್ಕ ಚಿಕ್ಕ ಇಟ್ಟಿಗೆಗಳಲ್ಲಿ ಆಕೃತಿಯ ಆಕಾರಕ್ಕೆ ತಕ್ಕಂತೆ ಕಟ್ಟಿಕೊಂಡು ನಂತರ ಕೈ, ಕಾಲು, ಮುಖ ಹಾಗೂ ವಿವಿಧ ಭಾಗಗಳನ್ನು ಗಾರೆಯಿಂದ ನಿಧಾನವಾಗಿ ಹಂತ ಹಂತವಾಗಿ ರಚಿಸಲಾಗುತ್ತದೆ. ಕೆಲವೊಮ್ಮೆ ಹೊರಚಾಚಿರುವ ಭಾಗಗಳನ್ನು/ಭಾಗವನ್ನು ಹಿಡಿಯಲು ಒಳಗಿನಿಂದ ಬಿದಿರು ಅಥವಾ ಕಬ್ಬಿಣದ ತಂತಿಗಳನ್ನು ಬಳಸಿದ್ದಾರೆ. ಇದನ್ನೇ ಆರ್ಮೇಚರ್ ಎನ್ನುವುದು. ಗಾರೆ ಅಥವಾ ಸಿಮೆಂಟಿನ ಆಕೃತಿಗಳನ್ನು ಇಡಿಯಾಗಿ ಅದೇ ಮಾಧ್ಯಮದಿಂದ ಮಾಡಿದರೆ ಸಂಪೂರ್ಣವಾಗಿ ಆರ್ಮೇಚರ್ ಬಳಸಬೇಕಾಗುತ್ತದೆ. ಅಂದರೆ ಆಕೃತಿಗಳ ಭದ್ರತೆ ಮತ್ತು ಬಳಕೆಗೆ ಅದು ಅವಶ್ಯಕವಾಗಿದೆ.  ವಿಜಯನಗರದ ಹಲವಾರು ಆಕೃತಿಗಳಲ್ಲಿ ಈ ತಾಂತ್ರಿಕತೆಗಳನ್ನು ಉಪಯೋಗಿಸಿರುವುದನ್ನು ನಾವು ಪ್ರಸ್ತುತವಾಗಿ ಗಮನಿಸಬಹುದು.

ವೃಷಭವಾಹನ ಶಿವ–ಪಾರ್ವತಿ ಆಕೃತಿಯಲ್ಲಿ (ಚಿತ್ರ 2) ಶಿವ–ಪಾರ್ವತಿ ವೃಷಭದ ಮೇಲೆ ಎರಡೂ ಕಾಲುಗಳನ್ನು ಸವಾರಿ ಮಾಡುವ ಹಾಗೆ ಹರಡಿ ಕುಳಿತಿದ್ದಾರೆ. ಸರ್ವಾಲಂಕರಣ ಭೂಷಿತವಾದ ನಂದಿ ಮತ್ತು ಶಿವ–ಪಾರ್ವತಿಯರು ಅತ್ಯಂತ ಸ್ವಾಭಾವಿಕವಾಗಿ ಮೂಡಿ ಬಂದಿದ್ದಾರೆ. ಎರಡೂ ಪಕ್ಕಗಳಲ್ಲಿ ಗಣಗಳು ಭಕ್ತಿಯಿಂದ ಕೈಮುಗಿದು ನಿಂತಿದ್ದಾರೆ. ಇಲ್ಲಿ ನಾವು ನಂದಿಯನ್ನು ವಿಶೇಷವಾಗಿ ಗಮನಿಸಬೇಕು. ಗೂಡಿನ ಅಳತೆಗೆ ಮತ್ತು ನಂದಿಯ ದೇಹದ ಅಡ್ಡಲಾಗಿ ಚಾಚಿಕೊಂಡಿರುವ ಅಳತೆಯನ್ನು ಗಮನಿಸಿದರೆ ಸ್ಥಳದ ಅವಕಾಶದ ಹೊಂದಾಣಿಕೆಯನ್ನು ಗಮನಿಸಬಹುದು. ನಂದಿ ಹಿಂಭಾಗದಲ್ಲಿ ಕೊಂಚ ಮಣಿದಂತೆ ಹಿಂಗಾಲುಗಳನ್ನು ಮಡಚಿದೆ.  ಮೇಲೆ ಕುಳಿತ ಪಾರ್ವತಿ–ಪರಮೇಶ್ವರರು ಅತ್ಯಂತ ಆರಾಮವಾಗಿ ಹಾಗೂ ಆಕರ್ಷಕವಾಗಿ ಕಾಣುತ್ತಾರೆ. ಇದೇ ದೇವಾಲಯದಲ್ಲಿನ ವೃಷಭವಾಹನ ಶಿವ ಹಾಗೂ ಬ್ರಹ್ಮ (ಚಿತ್ರ 3) ಮತ್ತು ನರ್ತನ ಭಂಗಿಯಲ್ಲಿರುವ ಗಣಪತಿ (ಚಿತ್ರ 4) ಗಾರೆ ಕಲೆಗೆ ಉತ್ತಮ ಉದಾಹರಣೆಗಳಾಗಿವೆ.  ಶೈಲಿಯಲ್ಲಿ ಹಾಗೂ ರಚನೆಯಲ್ಲಿ ಒಂದೇ ಗುಂಪಿಗೆ ಸೇರುವ ಈ ಆಕೃತಿಗಳು ಶೈಲಿಯಲ್ಲಿ ಪ್ರೌಢಿಮೆಯನ್ನು ಬಿಂಬಿಸುತ್ತವೆ. ಪುರುಷಾಕೃತಿಗಳಲ್ಲಿ ಸಾಮಾನ್ಯವಾಗಿ ಕುಸುರಿನಿಂದ ಕೂಡಿದ ಕಂಠಹಾರಗಳು, ಮಾಲೆಗಳು, ಸ್ಕಂದಾಲಂಕಣಗಳು ಹಾಗೂ ಕಿರೀಟಗಳು ಆಕರ್ಷಕವಾಗಿ ಮೂಡಿ ಬಂದಿವೆ. ಉಡುಗೆ ತೊಡುಗೆ ಕೂಡಾ ನೈಜತೆಯನ್ನು ಹೊಂದಿವೆ. ಇನ್ನು ಪ್ರತಿಮಾ ಲಕ್ಷಣಕ್ಕನುಗುಣವಾಗಿ ಆಯಾ ಆಕೃತಿಗಳು ತಮ್ಮ ಆಯುಧಗಳನ್ನು ಹಿಡಿದಿವೆ. ನರ್ತನ ಗಣಪತಿ (ಚಿತ್ರ 4)ಯು ಬಹುಶಃ ನರ್ತನ ಆಕೃತಿಗಳ ಮಧ್ಯೆ ಇದೆ ಎನಿಸುತ್ತದೆ. ಎರಡೂ ಬದಿಯಲ್ಲಿರುವ ನರ್ತಿಸುತ್ತಿರುವ ಸ್ತ್ರೀ ಆಕೃತಿಗಳು ಇದಕ್ಕೆ ಸಾಕ್ಷಿಯಾಗಿವೆ.

ವಿರೂಪಾಕ್ಷ ದೇವಾಲಯದ ಆಕೃತಿಗಳಲ್ಲಿ ಗ್ರಾನೈಟ್ ಶಿಲೆಯಲ್ಲಿ ಸಾಧ್ಯವಾಗದ ನೈಜತೆ ಮೂಡಿ ಬಂದಿದೆ. ಅಲ್ಲದೆ ಸಂಯೋಜನೆಯಲ್ಲಿ ಪ್ರೌಢಿಮೆ ಎದ್ದು ಕಾಣುತ್ತದೆ.

ಹಜಾರ ರಾಮಚಂದ್ರ ದೇವಸ್ಥಾನದಲ್ಲಿನ ಆಕೃತಿಗಳು ಸಭೆಯ ಚಿತ್ರಗಳಂತೆ[4] ಹೆಚ್ಚಿನ ಸಂಖ್ಯೆಯ ಆಕೃತಿಗಳನ್ನು ಹೊಂದಿವೆ. ಮಧ್ಯದಲ್ಲಿ ಮುಖ್ಯ ಆಕೃತಿ ಮತ್ತು ಇಕ್ಕೆಲಗಳಲ್ಲಿ ಕೈಮುಗಿದು ವಿಭಿನ್ನ ಉಡುಗೆತೊಡುಗೆಗಳೊಂದಿಗೆ ನಿಂತಿರುವ ಆಕೃತಿಗಳು ಗಮನ ಸೆಳೆಯುತ್ತವೆ. ಚಿತ್ರ 5ರಲ್ಲಿ ನಿಂತಿರುವ ವಿಷ್ಣು–ಲಕ್ಷ್ಮಿಯ ಆಕೃತಿಗಳು ಮತ್ತು ಚಿತ್ರ 6ರಲ್ಲಿ ಕುಳಿತ ಭಂಗಿಯಲ್ಲಿರುವ ವೈಕುಂಠ ವಿಷ್ಣು (ಲಕ್ಷ್ಮೀನಾರಾಯಣ) ವಿರೂಪಾಕ್ಷ ದೇವಾಲಯದ ಆಕೃತಿಗಳಂತೆಯೇ ಇವೆ. ಆದರೆ ಕೊಂಚ ನೀಳವಾದ (ಉದ್ದವೆನಿಸುವ) ದೇಹ ಸೌಂದರ್ಯವನ್ನು ಹೊಂದಿವೆ. ಇಲ್ಲಿ ಆಕೃತಿಗಳು ಧರಿಸಿರುವ ಕಿರೀಟಗಳಲ್ಲಿ ವಿರೂಪಾಕ್ಷ ದೇವಾಲಯದವುಗಳಿಗಿಂತ ವಿಭಿನ್ನತೆಯನ್ನು ಗಮನಿಸಬಹುದು. ಶಿಲ್ಪಗಳಲ್ಲಿರುವ ಸರಳವಾದ ಹೆಚ್ಚು ಅಲಂಕಾರಿಕವಲ್ಲದ ಶೈಲಿ ಇಲ್ಲಿ ಮೂಡಿ ಬಂದಿದೆ. ಸಂಯೋಜನೆಯಲ್ಲಿ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿ ಆಕೃತಿಗಳನ್ನು ಜೋಡಿಸಲಾಗಿದೆ.

ಹೆಚ್ಚು ಜೀರ್ಣಾವಸ್ಥೆಯಲ್ಲಿರುವ ಕೃಷ್ಣ ದೇವಾಲಯದಲ್ಲಿ ಗಾರೆ ಆಕೃತಿಗಳು ಬಹುಶಃ ಮೂಲದಲ್ಲಿ ಅತ್ಯಂತ ಆಕರ್ಷಕವಾದ ಹಾಗೂ ಅಷ್ಟೇ ಉತ್ಕೃಷ್ಟವಾದ ಪ್ರೌಢ ಶೈಲಿಯನ್ನು ಹೊಂದಿದಂತೆ ತೋರುತ್ತವೆ.

ಶ್ರೀದೇವಿ–ಭೂದೇವಿಯರೊಂದಿಗೆ ವಿಷ್ಣುವನ್ನು ಆಕೃತಿಯೊಂದರಲ್ಲಿ ತೋರಿಸಲಾಗಿದೆ (ಚಿತ್ರ 7).  ಸಮಭಂಗಿಯಲ್ಲಿ ನಿಂತಿರುವ ವಿಷ್ಣುವಿನ ಎರಡೂ ಬದಿಗಳಲ್ಲಿ ದೇವಿಯರು ಲಾಲಿತ್ಯಪೂರ್ಣವಾದ ಭಂಗಿಯಲ್ಲಿ ನಿಂತಿದ್ದಾರೆ. ವಿಷ್ಣುವಿನ ಎಡಭಾಗದಲ್ಲಿ ಸ್ತ್ರೀಯರ ಸಾಲು ಆಕೃತಿಗಳಿದ್ದರೆ, ಬಲಗಡೆ ಪುರುಷರ ಸಾಲು ಆಕೃತಿಗಳಿವೆ. ಕೈಮುಗಿದ ಹಾಗೂ ವಿಭಿನ್ನ ಭಾವ–ಭಂಗಿಗಳನ್ನು ಈ ಆಕೃತಿಗಳಲ್ಲಿ ಗಮನಿಸಬಹುದು. ಆಕೃತಿಗಳಲ್ಲಿನ ನೈಜತೆ ಮತ್ತು ಸ್ವಾಭಾವಿಕ ಸಹಜತೆ ಎಲ್ಲವನ್ನು ಜೀವಂತವಾಗಿಸುತ್ತವೆ. ಆರೋಗ್ಯಭರಿತ ದೇಹಸೌಂದರ್ಯ, ದೇಹದ ಕರಾರುವಕ್ಕಾದ ಉಬ್ಬುತಗ್ಗುಗಳು ಆಕೃತಿಗಳ ಸಹಜತೆಯನ್ನು ಹೆಚ್ಚಿಸುತ್ತವೆ.  ಹಜಾರ ರಾಮಚಂದ್ರ ದೇವಾಲಯದಲ್ಲಿನ ಗಾರೆ ಆಕೃತಿಗಳಲ್ಲಿ ಸ್ವಲ್ಪ ಜಡತ್ವವನ್ನು ನೋಡಬಹುದು. ಆದರೆ ಇಲ್ಲಿ ಕಾವ್ಯಮಯವಾದ ಶೈಲಿಯ ಪಕ್ವತೆ ಇದೆ.  ಕೃಷ್ಣ ದೇವಾಲಯದಲ್ಲಿರುವ ರತಿ ಮನ್ಮಥರ (ಚಿತ್ರ 8) ಆಕೃತಿಗಳನ್ನು ಗಮನಿಸಿದಾಗ ಮೇಲೆ ವಿವರಿಸಿದ ಭಾವನೆ ಬಾರದೆ ಇರದು. ಇದೇ ದೇವಾಲಯದ ಆವರಣದಲ್ಲಿಯ ಕಿರು ದೇವಾಲಯದ ಶಿಖರದ ಮೇಲಿನ ವಿಷ್ಣು



ವಿರೂಪಾಕ್ಷ ದೇವಾಲಯ, ಉಮಾಮಹೇಶ್ವರಮೂರ್ತಿ ಮತ್ತು ಲಕ್ಷ್ಮೀನರಸಿಂಹ



ವಿರೂಪಾಕ್ಷ ದೇವಾಲಯ, ವೃಷಭವಾಹನ ಶಿವ–ಪಾರ್ವತಿ




ವಿರೂಪಾಕ್ಷ ದೇವಾಲಯ, ಶಿವ ಮತ್ತು ಬ್ರಹ್ಮ



ವಿರೂಪಾಕ್ಷ ದೇವಾಲಯ, ನರ್ತನ ಗಣಪತಿ



ಹಜಾರ ರಾಮಚಂದ್ರ ದೇವಾಲಯ, ಲಕ್ಷ್ಮೀ-ವಿಷ್ಣು ಮತ್ತು ಪರಿವಾರ



ಹಜಾರ ರಾಮಚಂದ್ರ ದೇವಾಲಯ, ವೈಕುಂಠ ವಿಷ್ಣು

(ಚಿತ್ರ 9) ಮತ್ತು ದಕ್ಷಿಣದ ಭಗ್ನಗೊಂಡಿರುವ ಮಹಾಗೋಪುರದ ವಿವಿಧ ಹಂತಗಳನ್ನು (ಚಿತ್ರ 10, 11) ಗಮನಿಸಬಹುದು. ಚಿತ್ರ 9ರಲ್ಲಿ ವಿಷ್ಣು ಮತ್ತು ಚಿತ್ರ 10ರಲ್ಲಿ ದೇವಿ ಹಾಗೂ ಚಿತ್ರ 11ರಲ್ಲಿಯ ಕುಳಿತ ವಿಷ್ಣು ಮತ್ತು ದ್ವಾರಪಾಲರು ಶೈಲಿಯಲ್ಲಿ ಒಂದೇ ತರಹವಾಗಿವೆ. ಕೊಂಚ ಕುಳ್ಳು ಎನಿಸುವ ದೇಹದ ರಚನೆಯನ್ನುಳಿದರೆ, ಉಳಿದ ಎಲ್ಲ ಅಂಶಗಳು ಕೃಷ್ಣ ದೇವಾಲಯದ ಮುಖ್ಯ ಗಾರೆ ಆಕೃತಿಗಳಿಗೆ ಸರಿಸಮವಾಗಿವೆ.

ಕೃಷ್ಣ ದೇವಾಲಯದ ಮುಖ್ಯದ್ವಾರದ ಮೇಲಿನ ಗೋಪುರ ಹೆಚ್ಚು ಕಡಿಮೆ ಇಂದು ಭಗ್ನಾವಸ್ಥೆಯಲ್ಲಿದೆ. ಅಳಿದುಳಿದ ಕೆಲವು ಆಕೃತಿಗಳನ್ನು ಗಮನಿಸಿದರೆ ಅತ್ಯಂತ ಪ್ರೌಢವಾದ ಶೈಲಿಯನ್ನು ಹೊಂದಿದ ಆಕೃತಿಗಳೆಂದು ಅನ್ನಿಸದೆ ಇರದು. ಶಿಖರದ ಹೊರಕ್ಕೆ ಹರಡಿರುವ ಶಾಲದ ಮುಖ, ಅದರ ಪಕಳೆಗಳ ಹಾಗೆ ಕಾಣುವ ವಿನ್ಯಾಸ (ಚಿತ್ರ 10) ಮತ್ತು ಮೇಲೆ ವಿಶಾಲವಾಗಿ ಚಾಚಿರುವ ವ್ಯಾಳಮುಖ ಇವೆಲ್ಲವೂ ಗಾರೆಯಿಂದಲೇ ರಚಿಸಲ್ಪಟ್ಟಿವೆ. ಶಾಲಮುಖದ ಮೇಲಣ ಮಕರಗಳು, ಅವುಗಳಿಂದ ಹೊರಬರುವ ಮಾನವ ಆಕೃತಿಗಳ ಸಾಲು ಕಮಾನನ್ನು ಹೊಂದಿಕೊಂಡ ವಿಧ ತುಂಬ ಆಕರ್ಷಕವಾಗಿವೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ಕಲಾವಿದ ಯಾವ ಹಿಡಿತಕ್ಕೂ ಒಳಗಾಗದೇ ತನ್ನಲ್ಲಿ ಅಡಗಿರುವ ಕಲೆಯನ್ನು ಅಭಿವ್ಯಕ್ತಗೊಳಿಸಿರುವ ರೀತಿ ನಿಜಕ್ಕೂ ಶ್ಲಾಘನೀಯವಾಗಿದೆ.

ಇನ್ನು ಸುಪ್ರಸಿದ್ಧ ವಿಠಲ ದೇವಸ್ಥಾನದ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಬಹುತೇಕವಾಗಿ ಈ ದೇವಾಲಯದ ಗಾರೆಯಾಕೃತಿಗಳು ಭಗ್ನಾವಸ್ಥೆಯಲ್ಲಿವೆ. ಒಂದು ಹಂತದಲ್ಲಿ ಇಲ್ಲಿನ ಶಿಖರ, ಗೋಪುರಗಳ ಮೇಲಣ ಉಪ್ಪರಿಗೆಗಳಲ್ಲಿ ಗಾರೆಯಾಕೃತಿಗಳು ರಾರಾಜಿಸಿದ್ದಿರಬಹುದು. ವಿಜಯವಿಠಲ ದೇವಾಲಯವನ್ನು ವಾಸ್ತುಕೃತಿ, ಶಿಲ್ಪಗಳ ವಿಭಿನ್ನತೆ, ಶೈಲಿಯ ದೃಷ್ಟಿಯಿಂದ ಮುಖ್ಯವಾದ ಕೃತಿಯೆಂದು ಪರಿಗಣಿಸಲಾಗುತ್ತದೆ. ಹಾಗೆಯೇ ಇದಕ್ಕೆ ಪೂರಕವಾಗಿ ಶಿಖರದ ಮೇಲೆ ಉಳಿದ ಕೆಲವೇ ಆಕೃತಿಗಳು ಇವೆ.

ವಿಠಲ ದೇವಾಲಯದ ಗಾರೆಯಾಕೃತಿಗಳ ಎರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ತೆಗೆದುಕೊಂಡಿದೆ. ಗರ್ಭಗೃಹದ ಶಿಖರದ ಮೇಲಿನ ಶುಕನಾಸದ ಸ್ಥಳದಲ್ಲಿರುವ ವಿಷ್ಣುವಿನ ಮೂರ್ತಿ (ಚಿತ್ರ 12) ಮತ್ತು ಅದೇ ಶಿಖರದ ದಕ್ಷಣ ಭಾಗದಲ್ಲಿನ ಗೋವರ್ಧನ ಕೃಷ್ಣ (ಚಿತ್ರ 13). ವಿಷ್ಣುವಿನ ಆಕೃತಿ ಶೈಲಿಯಲ್ಲಿ ಸಾಕಷ್ಟು ಪ್ರೌಢಿಮೆಯನ್ನು ಹೊಂದಿದೆ. ಆದರೆ ಹೆಚ್ಚು ಆಕರ್ಷಕವಾಗಿರುವುದು ಗೋವರ್ಧನ ಕೃಷ್ಣ ಕೃತಿಯಾಗಿದೆ (ಚಿತ್ರ 13). ಆಕೃತಿಯಲ್ಲಿ ಕೃಷ್ಣ ಬಲಗೈಯನ್ನು ಮೇಲಕ್ಕೆತ್ತಿ ಗೋವರ್ಧನಗಿರಿಯನ್ನು ಎತ್ತಿ ಹಿಡಿದಿದ್ದಾನೆ. ಎಡಗೈ ಕಟ್ಯಾವಲಂಬಿತ ಸ್ಥಿತಿಯಲ್ಲಿದೆ. ಎರಡೂ ಬದಿಯಲ್ಲಿ ಗೋವುಗಳನ್ನು ತೋರಿಸಲಾಗಿದೆ. ದಷ್ಟಪುಷ್ಟವಾದ ಕೊಂಚ ಕುಳ್ಳು ಎನಿಸುವ ಶರೀರ ಕೃಷ್ಣನನ್ನು ಬಾಲಕನೆಂಬ ಭಾವನೆ ತರಿಸುತ್ತದೆ. ಇಂತಹದೇ ಶಿಲ್ಪ ಪ್ರಪ್ರಥಮವಾಗಿ ಬಾದಾಮಿ ಚಾಲುಕ್ಯರ ಕಾಲದಲ್ಲಿ ಬಾದಾಮಿಯ ಉತ್ತರ ಗುಡ್ಡದ ಮೇಲಣ ಶಿವಾಲಯ (ವೈಷ್ಣವ ದೇವಾಲಯ)ದ ದಕ್ಷಿಣ ಹೊರಗೋಡೆಯ ಮೇಲಿರುವುದನ್ನು ನೆನಪಿಸಿಕೊಳ್ಳಬಹುದು. ಒಂದಂತೂ ನಿಜ – ವಿಜಯನಗರದ ಕಲಾವಿದರಿಗೆ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳರ ಕಲೆಯ ಅಗಾಧವಾದ ಹಿನ್ನೆಲೆ ಇತ್ತು. ಚಾಲುಕ್ಯರ ಕಲೆಯ ಹಲವಾರು ಅಂಶಗಳೂ ಸ್ಫೂರ್ತಿದಾಯಕವಾಗಿ ಉಳಿದು, ಬೆಳೆದುಕೊಂಡು ಬಂದಿವೆ. ಪ್ರಸ್ತುತ ವಿಠಲ ದೇವಾಲಯದ ಗೋವರ್ಧನಧಾರಿ ಕೃಷ್ಣ ಮತ್ತು ಬಾದಾಮಿಯ ಮೇಲಣ ಶಿವಾಲಯದ ಶಿಲ್ಪಗಳನ್ನು ಪಕ್ಕಪಕ್ಕದಲ್ಲಿರಿಸಿ ತುಲನೆ ಮಾಡಿದಾಗ ಶೈಲಿಯ ಪ್ರಭಾವ ಮತ್ತು ಶಿಲ್ಪದ ವಸ್ತುವಿನ ಪ್ರಭಾವ ಎಷ್ಟು ಗಾಢವಾಗಿದೆ ಎಂದು ಊಹಿಸಬಹುದು. ಕಲೆಯ ಅಂಶಗಳು ಹಾಗೂ ಕಲಾತ್ಮಕ ಗುಣಗಳ ಶೈಲಿ ನಿರಂತರವಾಗಿ ಪರೋಕ್ಷವಾಗಿ ಮುಂದುವರೆಯುತ್ತಲೆ ಇರುತ್ತವೆ. ಇದಕ್ಕೆ ಮುಖ್ಯ ಕಾರಣ ಕಲಾವಿದನೆ ಆಗಿದ್ದಾನೆ.

ಹಂಪೆಯ ಪರಿಸರದ ಮತ್ತೊಂದು ಮುಖ್ಯ ಆಕರ್ಷಣೆಯಾದ ಅಂದು ರಾಜರಾಣಿಯರ ಖಾಸಗಿ ಕಟ್ಟಡವಾಗಿದ್ದ ರಾಣಿಮಹಲ್ ಅಥವಾ ಕಮಲ್‌ಮಹಲ್ ಮತ್ತು ರಾಣಿಯರ ಸ್ನಾನ ಗೃಹಗಳು. ಇಸ್ಲಾಮಿಕ್ ವಾಸ್ತುಶೈಲಿಯ ಸೊಗಡಿನೊಂದಿಗೆ ಮತ್ತು ಭಾರತೀಯ ಶೈಲಿಯ ಮಿಶ್ರಣದೊಂದಿದೆ ನಿರ್ಮಾಣಗೊಂಡ ಈ ಎರಡೂ ಕಟ್ಟಡಗಳೂ ಗಾರೆ ಕಲೆಯ ಉತ್ತಮ ಉದಾಹರಣೆಗಳಾಗಿವೆ.

ಕಮಲ್‌ಮಹಲ್‌ನ ಕಮಾನಿನ ಸುತ್ತಲೂ ಐದು ಸಾಲಿನಲ್ಲಿ ವಿವಿಧ ವಿನ್ಯಾಸವಾಗಿ (ಚಿತ್ರ 14) ರೂಪಗೊಂಡ ಕೆಳ ಉಬ್ಬು ಚಿತ್ರಣ ಕ್ಲಿಷ್ಟಕರವಾದ, ಅಷ್ಟೇ ಸೂಕ್ಷ್ಮವಾದ ವಿನ್ಯಾಸಗಳಿಂದ ಕೂಡಿದೆ. ತೀರ ಮೇಲಿನ ಸ್ತರದಲ್ಲಿನ ವ್ಯಾಳಮುಖದಿಂದ ಈ ವಿನ್ಯಾಸ ಉಗಮವಾಗುತ್ತದೆ. ವಿವಿಧ ಬಳ್ಳಿಗಳು, ಪಕ್ಷಿಗಳು, ಹಾಗೂ ವೃತ್ತಾಕಾರದ ವಿಭಿನ್ನ ಸುಳಿಯ ಚಿತ್ರಣ ಕಂಡುಬರುತ್ತದೆ (ಚಿತ್ರ 15). ಕಮಲ್‌ಮಹಲ್‌ನ ಮೇಲ್ಮಹಡಿಯು ಕಮಾನಿನ ವಿನ್ಯಾಸವನ್ನು ತೋರಿಸುತ್ತದೆ. ಬಳ್ಳಿಗಳು, ಎಲೆಗಳು, ಹಾಗೂ ಒಂದಕ್ಕೊಂದು ಹೊಂದಿದಂತೆ ಇರುವ ಪಕ್ಷಿಗಳು ಕಮಾನಿನ ಸೌಂದರ್ಯವನ್ನು ಹೆಚ್ಚಿಸಿವೆ. ಕಮಲ್‌ಮಹಲ್‌ನ ಇನ್ನೊಂದು ಕಮಾನಿನಲ್ಲಿ ರೂಪುಗೊಂಡ ಹಕ್ಕಿಗಳ ಸಾಲು ಆಕರ್ಷಣೀಯವಾಗಿದೆ (ಚಿತ್ರ 16). ಈ ಹಕ್ಕಿಗಳನ್ನು ಮೊದಲೇ ಅಚ್ಚಿನಲ್ಲಿ ತಯಾರಿಸಿಕೊಂಡು ನಂತರ ಗೋಡೆಗೆ ಒಂದಕ್ಕೊಂದು ಹೊಂದಿಕೊಳ್ಳುವಂತೆ ಕೂಡಿಸಿದೆ.[5] ಕಮಾನು ಭಾವಗೀತಾತ್ಮಕವಾದ ವೃತ್ತಾಕಾರದೊಂದಿಗೆ ಹೊಂದಿಕೊಂಡಿದೆ. ವಿಜಯನಗರ ಪೂರ್ವಕಾಲದ ದೇವಾಲಯಗಳ ಭುವನೇಶ್ವರಿಯನ್ನು ಜ್ಞಾಪಕಕ್ಕೆ ತರುವ ರಾಣಿಯರ ಸ್ನಾನಗೃಹದ ಒಂದು ಒಳಮಾಳಿಗೆಯಲ್ಲಿನ ಗಾರೆ ಕೆಲಸ (ಚಿತ್ರ 17) ಬಹುಶಃ ಕಲಾವಿದನೋರ್ವನ ಜಾಣ್ಮೆಯನ್ನು ಪ್ರದರ್ಶಿಸುತ್ತದೆ.



ಕೃಷ್ಣ ದೇವಾಲಯ, ಶ್ರೀದೇವಿ–ಭೂದೇವಿಯರೊಂದಿಗೆ ವಿಷ್ಣು




ಕೃಷ್ಣ ದೇವಾಲಯ, ರತಿ–ಮನ್ಮಥ



ಕೃಷ್ಣ ದೇವಾಲಯ, ಕಿರು ದೇವಾಲಯದ ಶಿಖರದ ಮೇಲಿನ ವಿಷ್ಣು





ಕೃಷ್ಣ ದೇವಾಲಯ, ದಕ್ಷಿಣ ದಿಕ್ಕಿನ ಗೋಪುರ ಮತ್ತು ಆಕೃತಿಗಳು



ವಿಠಲ ದೇವಾಲಯ, ಶಿಖರದ ಮೇಲಿನ ಗಾರೆ ಶಿಲ್ಪಗಳು



ವಿಠಲ ದೇವಾಯ, ಗೋವರ್ಧನಧಾರಿ ಕೃಷ್ಣ

ಹಂಪೆಯಲ್ಲಿನ ಎಲ್ಲ ಮುಖ್ಯ ದೇವಾಲಯಗಳು ಮತ್ತು ಖಾಸಗಿ ಕಟ್ಟಡಗಳು ಪ್ರಾಯಶಃ ರಾಜರ ಅಥವಾ ಅವರ ಮಂತ್ರಿಗಳ ಸ್ವಂತ ನಿರ್ದೇಶನದಲ್ಲಿ ಆದವುಗಳಾಗಿವೆ. ಹಂಪೆಯಲ್ಲಿ ವಾಸ್ತವಿಕವಾದ ಶಿಲ್ಪ ಮತ್ತು ಗಾರೆಕಲಾವಿದ ಹಾಗೂ ವಿನ್ಯಾಸಗಾರ ಶ್ರಮ ತೆಗೆದುಕೊಂಡು ಕೆಲಸ ಮಾಡಿದಷ್ಟು ಪ್ರಾಯಶಃ ಬೇರೆಲ್ಲೂ ಮಾಡಿರಲಿಕ್ಕಿಲ್ಲವೇನೋ ಎಂಬ ಭಾವನೆ ಬರುತ್ತದೆ. ಆದರೆ ಹಲವಾರು ಹೊರಗಿನ ಉದಾಹರಣೆಗಳಿಂದ ಅಲ್ಲೂ ಕೂಡ ಆಯಾ ಸ್ಥಳೀಯ ನಾಯಕರ ಮಾಂಡಲೀಕರ ಆಶ್ರಯ ಮತ್ತು ಸ್ವಂತ ಪೋಷಣೆಯಲ್ಲಿ ನಿರ್ಮಾಣವಾದ ದೇವಾಲಯಗಳು ಮತ್ತು ಅಲ್ಲಿನ ಕಲೆ ಪ್ರಾಯಶಃ ಹಂಪೆಯಷ್ಟೇ ಪ್ರಗತಿಯನ್ನು, ಪ್ರೌಢಿಮೆಯ ಶೈಲಿಯನ್ನೂ ತೋರಿಸುತ್ತವೆ.

ಗಂಗಾವತಿ ತಾಲ್ಲೂಕಿನ ಕನಕಗಿರಿಯಲ್ಲಿಯ ಹಲವಾರು ದೇವಾಲಯಗಳಲ್ಲಿ ಪ್ರಾಯಶಃ ಗಾರೆ ಕಲೆಯ ಅತ್ಯುತ್ತಮ ಉದಾಹರಣೆಗಳು ಇವೆ. ಕನಕಗಿರಿಯ ಪ್ರಮುಖ ದೇವಾಲಯ ಕನಕಾಚಲಪತಿ ಅಥವಾ ನರಸಿಂಹ ದೇವಸ್ಥಾನದ ಕಲ್ಯಾಣ ಮಂಟಪ, ಗೋಪುರ, ಶಿಖರ ಹಾಗೂ ಪ್ರಾಕಾರದ ಒಳಗಿನ ಮಂಟಪದ ಸಾಲಿನ ಮೇಲೆ ಹಲವಾರು ಉತ್ತಮ ಉದಾಹರಣೆಗಳಿವೆ. ವಿಜಯನಗರದ ಮಾಂಡಲೀಕ ಮನೆತನವಿದ್ದ ಕನಕಗಿರಿಯಲ್ಲಿ ಕೂಡ ಗಾರೆ ಕಲಾವಿದ ಆಶ್ರಯ ಪಡೆದು ಕೆಲಸ ಮಾಡಿದ್ದಾನೆ. ಲಕ್ಷ್ಮೀನರಸಿಂಹ (ಚಿತ್ರ 18), ಲಕ್ಷ್ಮೀನಾರಾಣ (ಚಿತ್ರ 19), ಕೃಷ್ಣ (ಚಿತ್ರ 20) ಹೀಗೆ ವಿಭಿನ್ನ ದೇವಾನುದೇವತೆಗಳನ್ನು ಚಿತ್ರಿಸುವ ಆಕೃತಿಗಳಿವೆ. ಈ ದೇವಾಲಯದಲ್ಲಿ ಕಲ್ಯಾಣ ಮಂಟಪದ ಒಳ ಭಿತ್ತಿಯಲ್ಲಿ ವಿಭಿನ್ನ ದೃಶ್ಯಗಳನ್ನು ತೋರಿಸುವ ಗಾರೆಯ ಕೃತಿಗಳಿವೆ. ವಿಶೇಷವೇನೆಂದರೆ ಎಲ್ಲಾ ಆಕೃತಿಗಳೂ ಬಣ್ಣದಿಂದ ಕೂಡಿವೆ. ಮೂಲದಲ್ಲೇ ಮಾಡಿದ ಬಣ್ಣಕ್ಕೆ ನಂತರದಲ್ಲಿ ವಾರ್ನಿಷ್ ಲೇಪನ ಮಾಡಿರುವ ಸಾಧ್ಯತೆ ಇದೆ. ವೈಕುಂಠ ವಿಷ್ಣು, ಶಿವಪಾರ್ವತಿಯರ ಕಲ್ಯಾಣ, ಶ್ರೀಕೃಷ್ಣ ಮತ್ತು ರಾಮರ ಕಲ್ಯಾಣದ ಭಿನ್ನ ಚಿತ್ರಣಗಳು, ಗೋಪಿಕೆಯರ ಮಧ್ಯೆ ಕೃಷ್ಣ, ರಾಮ ಲಕ್ಷ್ಮಣ ಹಾಗೂ ಇನ್ನಿತರ ಆಕೃತಿಗಳು ಇವೆ. ಶೈಲಿಯಲ್ಲಿ ಮುಖ್ಯ ಆಕೃತಿಗಳೊಂದಿಗೆ ಸಾಮ್ಯತೆ ಅಷ್ಟಾಗಿ ಕಂಡುಬರುವುದಿಲ್ಲ. ಇಲ್ಲೂ ಕೂಡಾ ಇಟ್ಟಿಗೆ–ಗಾರೆ ಆಕೃತಿಗಳ ನಿರ್ಮಾಣದಲ್ಲಿ ಮೂಲ ವಸ್ತುಗಳಾಗಿವೆ. ಬಹುಶಃ ಹೆಚ್ಚು ಅಳತೆಬದ್ಧವಾದ ಮತ್ತು ಅಷ್ಟೇ ಸಮರ್ಪಕವಾದ ಸಹಜವೆನಿಸುವ ಆಕೃತಿಗಳು ಇಲ್ಲಿ ಕಾಣಬರುತ್ತವೆ. ಲಕ್ಷ್ಮೀನರಸಿಂಹ (ಚಿತ್ರ 18) ಆಕೃತಿಯಲ್ಲಿ ಪೀಠದ ಮೇಲೆ ಕುಳಿತಿರುವ ನರಸಿಂಹನ ತೊಡೆಯ ಮೇಲೆ ಲಕ್ಷ್ಮಿಯನ್ನು ಕೂಡಿಸಲಾಗಿದೆ. ಇಲ್ಲಿ ಕಲಾವಿದನು ಹೊರಕ್ಕೆ ಚಾಚಿರುವ ಕೈಗಳನ್ನು ಗಟ್ಟಿಯಾಗಿ ಕೂಡಿಸಲು ತಂತಿಯನ್ನು ಆರ್ಮೇಚರ್ ರೂಪದಲ್ಲಿ ಬಳಸಿರುವುದನ್ನು ಗಮನಿಸಬಹುದು. ಇದೇ ಆಕೃತಿಯ ಗೂಡಿನ ಮೇಲಿನ ಕಮಾನಿನಲ್ಲಿ ಹಕ್ಕಿಗಳ ಸಾಲು, ವ್ಯಾಳಮುಖಗಳು ಕೂಡ ಇವೆ. ಲಕ್ಷ್ಮೀನಾರಾಯಣ (ಚಿತ್ರ 19) ಆಕೃತಿ ಒಂದು ಕ್ಷಣ ಹಂಪೆಯ ಕೃಷ್ಣ ದೇವಾಲಯದ ಮತ್ತು ವಿರೂಪಾಕ್ಷ ದೇವಾಲಯದ ಆಸನ ಆಕೃತಿಗಳನ್ನು ಜ್ಞಾಪಕಕ್ಕೆ ತರುತ್ತದೆ. ಆದರೆ ಇಲ್ಲಿ ಸಂಯೋಜನೆಯಲ್ಲಿ ಮುಖ್ಯ ಆಕೃತಿಯ ಇಕ್ಕೆಲಗಳಲ್ಲಿ ಹೆಚ್ಚು ನಿಬಿಡವಾದ ಆಕೃತಿಗಳಿಲ್ಲ. ಸಹಾಯಕರ ಹಾಗೆ ಎರಡೆರಡು ಆಕೃತಿಗಳು ಕೈ ಮುಗಿದು ಮುಖ್ಯ ಆಕೃತಿಯ ಬದಿಗೆ ನಿಂತಿದ್ದಾರೆ. ಲಕ್ಷ್ಮೀನಾರಾಯಣ ಆಕೃತಿಯಲ್ಲಿ ವಿಶೇಷವಾಗಿ ಲಕ್ಷ್ಮಿ ಕುಳಿತ ವಿಧವನ್ನು (ಮುಖದ ಭಾಗ ಹಾಳಗಿದೆ) ಗಮನಿಸಬೇಕು. ಎಡಗಾಲನ್ನು ಮಡಿಸಿ, ಬಲಗಾಲನ್ನು ನೀಳವಾಗಿ ಕೆಳಕ್ಕೆ ಹರಡಿ ಲಕ್ಷ್ಮಿ ಕುಳಿತಿದ್ದಾಳೆ. ಯಾವ ಗ್ರಂಥಗಳಲ್ಲೂ ಕಾಣದ ಈ ತರಹದ ಹೊಂದಾಣಿಕೆ ಕೇವಲ ಕಲಾವಿದನ ಕಲ್ಪನೆಗೆ ಮಾತ್ರ ಸಾಧ್ಯ. ಇಂತಹದೇ ಇನ್ನೊಂದು ಕೃತಿ ಕೃಷ್ಣ (ಚಿತ್ರ 20) ಕೈಯಲ್ಲಿ ಶಂಖವನ್ನು ಕಟ್ಯಾವಲಂಬಿತದಲ್ಲಿ ಹಿಡಿದಿರುವುದು. ಬಲ ಮುಂಗೈ ಹಾಳಾಗಿದೆ. ಪ್ರಾಯಶಃ ಕೊಳಲೋ ಅಥವಾ ಬೆಣ್ಣೆ ಮುದ್ದೆಯೋ (ಸಾಲಿಗ್ರಾಮ ?) ಇರಬೇಕು. ಇಲ್ಲಿ ಕೃಷ್ಣ ಬಾಲಕೃಷ್ಣನಾಗಿದ್ದಾನೆ. ದುಂಡು ದುಂಡಾದ ಎಳೆ ದೇಹ, ಅಗಲವಾದ ಮುಖ, ಬಾಚಿ ಮೇಲೆ ಕಟ್ಟಿರುವ ಕೇಶ, ಮೊಳಕಾಲ ಮೇಲೆ ಅರ್ಧ ವೃತ್ತಾಕಾರವಾಗಿ ಹರಡಿರುವ ವೈಜಯಂತಿ ಮಾಲೆ, ಮುಂಗೈ ಕಟ್ಟು, ತೋಳ್ಬಂದಿಗಳು ಹಾಗೂ ಕಂಠಹಾರ ಕೃಷ್ಣನಲ್ಲಿ ಎದ್ದುಕಾಣುವ ಅಂಶಗಳು. ಇಲ್ಲಿ ಕೃಷ್ಣ ಶಂಖವನ್ನು ಹಿಡಿದಿರುವ ರೀತಿ ಬನವಾಸಿ ಕದಂಬರ ಕಾಲದ ವಿಷ್ಣು, ಪರಿಹರ್ ಹಾಗೂ ಬಾದಾಮಿ ಚಾಲುಕ್ಯರ ಲಯಣ ದೇವಾಲಯಗಳಲ್ಲಿನ ವಿಷ್ಣು, ಹರಿಹರ ಶಿಲ್ಪಗಳಲ್ಲಿ ಕಾಣಬರುವ ಆಯುಧ ಹಿಡಿವ ರೀತಿ ಇಲ್ಲಿ ಮೂಡಿಬಂದಿದೆ. ಕಲಾವಿದ ಇಲ್ಲಿ ಶಂಖವನ್ನು ಕಟ್ಯಾವಲಂಬಿತದಲ್ಲಿ ಚಿತ್ರಿಸಿರುವ ವಿಧ ಪ್ರಾಚೀನ ಅಂಶಗಳ ಮರು ಉಪಯೋಗ ಅಥವಾ ಮುಂದುವರೆಯುವಿಕೆಯನ್ನು ತೋರಿಸುತ್ತದೆ.

ಕನಕಗಿರಿಯಲ್ಲೇ ಇರುವ ಈಶ್ವರ ದೇವಾಲಯದ ಮೇಲಿರುವ ಆಸನ ಭಂಗಿಯಲ್ಲಿನ ಶಿವ ಪಾರ್ವತಿ ಹಾಗೂ ಗಣೇಶ್ವರ (ಚಿತ್ರ 21) ಆಕೃತಿಗಳೂ ಕನಕಾಚಲ ದೇವಾಲಯದ ಶೈಲಿಗೆ ಅನುಗುಣವಾಗಿವೆ. ಪ್ರಾಯಶಃ ಈ ಆಕೃತಿಗಳೂ ಕೂಡ ನುರಿತ ಕಲಾವಿದನ ಕೃತಿಗಳಾಗಿವೆ. ಈಶ್ವರನ ತೊಡೆಯ ಮೇಲೆ ಕುಳಿತ ಪಾರ್ವತಿ (ಪೂರ್ತಿ ಹಾಳಾಗಿದೆ) ತನ್ನ ಕಾಲುಗಳನ್ನು ಕಮಲದ ಮೇಲೆ ಇರಿಸಿದ್ದಾಳೆ. ಹಾಗೆಯೇ ಪೀಠದ ಮೇಲೆ ಕುಳಿತ ಶಿವನ ಕೆಳಗೆ ಕಮಲದ ಆಸನವಿದೆ. ಎಡಗೈಯಲ್ಲಿ ತಂಬೂರದರನಾದ ತಂಬೂರ ಹಾಗೂ ಬಲಬದಿಯಲ್ಲಿ ಗಣನ ಆಕೃತಿ ಇದೆ. ವೃಷಭದ ಅವಶೇಷವನ್ನು ಮಾತ್ರ ಕೆಳಗಡೆ ಗಮನಿಬಹುದು.

**ಉಪಸಂಹಾರ:**

ಇಡಿಯಾಗಿ ಗಾರೆಯ ಕಲೆಯನ್ನು ವಿಜಯನಗರದ ರಾಜ್ಯ ವ್ಯಾಪ್ತಿಯಾಗಿ ನೋಡಿದಾಗ ಅದೊಂದು ಪರಿಪೂರ್ಣವಾದ ಮಾಧ್ಯಮವಾಗಿ ಬೆಳೆಯಿತು ಎಂದು ಹೇಳಬಹುದು. ಕೇವಲ ಕಟ್ಟಡದ ನಿರ್ಮಾಣದ ವಸ್ತುವಾಗಿರದೆ ಕಲಾ ಮಾಧ್ಯಮವಾಗಿ ವಿಕಾಸಗೊಂಡಿತು. ಕಲಾವಿದರು ಮೂಲತಃ ಗಾರೆಯಲ್ಲೇ ಪರಿಣಿತಿ ಪಡೆದವರೇ ಎಂಬಲ್ಲಿ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಶಿಲೆಯನ್ನು ಕೆತ್ತಿ ಶಿಲ್ಪಗಳನ್ನು ರಚಿಸುವಲ್ಲಿ




ರಾಣಿ ಮಹಲ್, ಕಮಾನು ವಿನ್ಯಾಸ



ರಾಣಿ ಮಹಲ್, ಮೇಲ್ಮಹಡಿಯ ಕಮಾನು ವಿನ್ಯಾಸ



ರಾಣಿ ಮಹಲ್, ಹೊರ ಕಮಾನಿನಲ್ಲಿಯ ಹಕ್ಕಿಗಳ ಸಾಲು



ರಾಣಿ ಸ್ನಾನಗೃಹ, ಒಳಮಾಳಿಗೆಯ ವಿನ್ಯಾಸ



ಕನಕಾಚಲ ದೇವಾಲಯ, ಕನಕಗಿರಿ, ಲಕ್ಷ್ಮೀನರಸಿಂಹ



ಕನಕಾಚಲ ದೇವಾಲಯ, ಕನಕಗಿರಿ, ಲಕ್ಷ್ಮೀನಾರಾಯಣ



ಕನಕಾಚಲ ದೇವಾಲಯ, ಕನಕಗಿರಿ, ಬಾಲಕೃಷ್ಣ (ವಿಷ್ಣು ?)



ಈಶ್ವರ ದೇವಾಲಯ, ಕನಕಗಿರಿ, ಶಿವ ಮತ್ತು ಗಣಪತಿ

ಪರಿಣತಿ ಪಡೆದದ್ದು ಹಿಂದಿನಿಂದಲೂ ಬೆಳೆದು ಬಂದ ಸಂಪ್ರದಾಯ. ಒಮ್ಮಿಂದೊಮ್ಮೆಲೆ ಅಷ್ಟು ಭವ್ಯವಾಗಿ ಮತ್ತು ಅಗಾಧವಾದ ರೀತಿಯಲ್ಲಿ ದೇವಾಲಯ ನಿರ್ಮಾಣ ಮತ್ತು ಗಾರೆ ಆಕೃತಿಗಳ ನಿರ್ಮಾಣಕ್ಕೆ ಕೈಜೋಡಿಸಿದ ಕಲಾವಿದರು ಯಾರು ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಈ ಮೊದಲು ಶಿಲೆಯಲ್ಲಿ ಕೆಲಸ ಮಾಡಿದ ಕಲಾವಿದರೇ ಗಾರೆ ಕೆಲಸದಲ್ಲಿ ಪರಿಣತಿ ಪಡೆದಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅಷ್ಟು ಸಂಖ್ಯೆಯಲ್ಲಿ ಒಟ್ಟಿಗೆ ಗಾರೆ ಕಲಾವಿದರು ಇದಕ್ಕೂ ಮೊದಲೇ ಪರಿಣತಿ ಪಡೆದಿದ್ದರೆ? ಪ್ರಾಯಶಃ ಹಾಗೆ ಆಗಿರಲು ಸಾಧ್ಯವಿರಲಿಕ್ಕಿಲ್ಲ. ಏಕೆಂದರೆ, ಗಾರೆ ಕಲಾ ಮಾಧ್ಯಮವಾಗಿ ಪ್ರಾರಂಭದಿಂದಲೂ ಇತ್ಯಾದರೂ ವಿಜಯನಗರ ಕಾಲದಲ್ಲಿ ರೂಪಗೊಂಡಷ್ಟು ದೇವಾಲಯದ ಅಲಂಕರಣ ಆಕೃತಿಗಳು ಬಹುಶಃ ಬೇರಾವ ಕಾಲದಲ್ಲೂ ಆಗಲಿಲ್ಲ. ಇದಕ್ಕೂ ಮೊದಲು ತಮಿಳು ನಾಡು – ಕೇರಳ ಪ್ರದೇಶದ ಪಾಂಡ್ಯರ ಕಾಲದಲ್ಲಿ ದೇವಾಲಯಗಳಲ್ಲಿ ಅಲಂಕರಣಕ್ಕೆ ಗಾರೆ ಬಳಸುವ ಪರಂಪರೆ ಪ್ರಾರಂಭವಾಗಿತ್ತು. ಅದು ವಿಜಯನಗರದಷ್ಟು ಭವ್ಯತೆಯನ್ನು ಮತ್ತು ವಿಸ್ತಾರವನ್ನು ಹೊಂದಿರಲಿಲ್ಲ. ವಿಜಯನಗರ ಕಾಲದಲ್ಲಿ ಮಾತ್ರ ಹೆಚ್ಚಿನ ಕಲಾ ಚಟುವಟಿಕೆಗಳು ತಮಿಳು–ಮಲೆಯಾಳ ಪ್ರದೇಶಗಳಲ್ಲಿ ಕಾಣಬರುತ್ತವೆ. ಅದರಲ್ಲೂ ಗಾರೆ ಕಲೆ ತಮಿಳು ಪ್ರದೇಶದಲ್ಲಿ ವಿಜಯನಗರೋತ್ತರ ಕಾಲದಲ್ಲೂ ಚಲಾವಣೆಯಲ್ಲಿತ್ತು. ಪ್ರಾಯಶಃ ಅದೇ ನಿದರ್ಶನಗಳಿಂದ ಈಗಲೂ ಮಧುರೈ–ತಂಜಾವೂರು ಭಾಗಗಳ ಪರಿಣತ ಸಿಮೆಂಟ್ ಕಲಾವಿದರು ನವೀನ ಗೋಪುರ, ಶಿಖರಗಳ ನಿರ್ಮಾಣದಲ್ಲಿ ಸಿದ್ಧಹಸ್ತರಾಗಿರುವುದು. ಕಲಾವಿದರು ಮೂಲತಃ ಶಿಲೆಯಲ್ಲಿ ಕೆಲಸ ಮಾಡುತ್ತಿದ್ದಿರಬಹುದು. ಗಾರೆಯ ಉಪಯೋಗ ಪ್ರಾರಂಭವಾದ ಮೇಲೆ ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡು ಗುಂಪು–ಗುಂಪುಗಳಲ್ಲಿ ಪರಿಣತರಾಗಿದ್ದಿರಬೇಕು. ಶಿಲ್ಪವನ್ನು ಕೆತ್ತುವ ಕೈ ಈಗ ತೇಪೆಗಳಿಂದ ಗಾರೆಯನ್ನು ಮಾಡುವಂತಾಯಿತು. ಅಜಂತಾದಲ್ಲಿ ಶಿಲ್ಪಿಗಳೆ ಚಿತ್ರಕಾರರಾಗಿದ್ದ ಉದಾಹರಣೆಗಳಿಲ್ಲವೆ ಹಾಗೆ. ಆಕೃತಿಗಳ ವಿಷಯದ ಹೊರವುಗಳನ್ನು ಅರಿತ ಕಲಾವಿದ ಅದಕ್ಕೆ ತಕ್ಕಂತೆ ಆಕೃತಿಗಳನ್ನು ರೂಪಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಈ ಗಾರೆಯಾಕೃತಿಗಳ ಶೈಲಿಗಳಲ್ಲಿ ವಿಭಿನ್ನತೆ ಎದ್ದು ಕಾಣುತ್ತದೆ. ಬಹುಶಃ ಒಂದೇ ಸಮಯದಲ್ಲಿ ಬೇರೆ ಬೇರೆ ಕಲಾವಿದರ ಗುಂಪುಗಳು (ಕಲಾವಿದರ ಗಣ) ಒಂದೇ ಸ್ಥಳದಲ್ಲಿ ಆದರೆ ಬೇರೆ ಬೇರೆ ದೇವಾಲಯಗಳಲ್ಲಿ ಕೆಲಸ ಮಾಡುತ್ತಿದ್ದರಬೇಕು. ಬಹುಶಃ ಅದಕ್ಕಾಗಿಯೇ ವಿರೂಪಾಕ್ಷ ದೇವಾಲಯ ಮತ್ತು ಹಜಾರರಾಮ ದೇವಾಲಯಗಳ ಆಕೃತಿಗಳಲ್ಲಿನ ಶೈಲಿಯ ಭಿನ್ನತೆ ಸ್ಪಷ್ಟವಾಗಿರುವುದು. ಅದೇ ರೀತಿ ಕನಕಗಿರಿಯಲ್ಲಿನ ಆಕೃತಿಗಳು ಬಹುಶಃ ಶೈಲಿಯ ಪಕ್ವತೆಯನ್ನು ಬಿಂಬಿಸುತ್ತವೆ. ಹೀಗೆ ಶೈಲಿಗಳಲ್ಲಿನ ವಿಭಿನ್ನತೆ ಸ್ಥಳದಿಂದ ಸ್ಥಳಕ್ಕೆ ಕಾಣುತ್ತಲೆ ಇರುತ್ತದೆ.

ಗಾರೆಯಾಕೃತಿಗಳು ದೇವಾಲಯಗಳ ನಿರ್ಮಾಣದ ಮತ್ತು ದೇವಾಲಯದ ನೀಲನಕ್ಷೆಯ ಮೂಲ ವಿನ್ಯಾಸದಲ್ಲಿ ಇದ್ದವುಗಳೇ ಆಗಿವೆ. ಅವಶ್ಯವಿದ್ದ ಸಣ್ಣಪುಟ್ಟ ಹೊಂದಾಣಿಕೆಗಳನ್ನು ಕಲಾವಿದ ಮಾಡಿರಬಹುದು. ಪ್ರಾಯಶಃ ಇದು ಪೂರ್ವ ನಿಯೋಜಿತವಾದದ್ದು. ಒಂದು ಕಿರು ವಿಮಾನ–ಗೂಡನ್ನು ನಿರ್ಮಿಸಲು ಪ್ರಾರಂಭಿಸಿದೊಡನೆ ಅದರಲ್ಲಿ ಯಾವ ಆಕೃತಿ ಬರಬೇಕು ಅಥವಾ ಕೆಲವೊಮ್ಮೆ ಆಕೃತಿಗಳ ಪ್ರಾಮುಖ್ಯತೆ ಮತ್ತು ಅಳತೆಗಳಿಗೆ ತಕ್ಕಂತೆಯೂ ವಿಮಾನ–ಗೂಡುಗಳ ನಿರ್ಮಾಣವಾಗಿರಬೇಕು. ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನದಿಂದ ಗಾರೆಯಾಕೃತಿಗಳು ದೇವಾಲಯದ ಮೂಲ ಕಲ್ಪನೆಯಲ್ಲಿ ಇದ್ದವು ಎಂದು ತಿಳಿದುಬರುತ್ತದೆ.

ಪ್ರಸ್ತುತ ಅಧ್ಯಯನವು ಗಾರೆ ಕಲೆಯನ್ನು ಕುರಿತು ಮಾಡಿದ ಒಂದು ಅವಲೋಕನವಷ್ಟೆ. ಇನ್ನೂ ಹೆಚ್ಚಿನ ಅಧ್ಯಯನ ಇದನ್ನು ಕುರಿತಂತೆ ಹೊಸ ಹೊಸ ವಿಷಯಗಳನ್ನು ಮುಂಬರುವ ದಿನಗಳಲ್ಲಿ ಹೊರಗೆಡುವುದರಲ್ಲಿ ಯಾವ ಸಂಶಯವೂ ಇಲ್ಲ.

## ಟಿಪ್ಪಣಿಗಳು

1. ವಿಜಯನಗರ ಕಾಲದಲ್ಲಿನ ಗಾರೆ ಕಲೆಯನ್ನು ಕುರಿತಂತೆ ಬಹುಶಃ ಹೆಚ್ಚಿನ ಅಧ್ಯಯನಗಳು ಬಿಡಿಯಾಗಿ ಆಗಲಿ ಅಥವಾ ವಿಜಯನಗರ ಕಾಲದ ಶಿಲ್ಪಗಳ ಅಧ್ಯಯನದ ಜೊತೆಗಾಗಲಿ ಆಗಿಲ್ಲವೆಂದೇ ಹೇಳಬೇಕು. ಇದುವರೆಗೂ ವಿಜಯನಗರ ಕಲೆ, ವಾಸ್ತುಕಲೆಗಳನ್ನು ವಿಭಿನ್ನ ನೆಲೆಗಳಿಂದ, ವಿಭಿನ್ನ ದೃಷ್ಟಿಕೋನದಿಂದ ಅಧ್ಯಯನ ಮಾಡಿದ ವಿದ್ವಾಂಸರ ಸಾಲೇ ಇದೆ. ನಾನು ಗಮನಿಸಿದ ಎಲ್ಲ ಮುಖ್ಯ ಪುಸ್ತಕಗಳಲ್ಲಿ – "ಭಾಗಶಃ ಹಾಳಾಗಿರುವ ಈ ಕಲೆ ಅಂದು ಅಲಂಕಾರಪ್ರಾಯವಾಗಿತ್ತು, ಅಥವಾ ಚನ್ನಾಗಿ ಇದ್ದಿರಬಹುದು" ಎಂಬ ಎರಡು–ಮೂರು ಸಾಲಿನ ಟಿಪ್ಪಣಿಗಳನ್ನು ಬಿಟ್ಟರೆ ಬೇರೇನನ್ನೂ ಹೇಳಿಲ್ಲ. ಅನಿಲಾ ವರ್ಗೀಸ್, ದೆಲ್ಲಾಪಿಕೋಲಾ, ವಸುಂಧರಾ ಫಿಲಿಯೋಜಾ, ಜಿ.ಸಿ. ಹಾರ್ಲೆ ಇತ್ಯಾದಿ ಮುಖ್ಯವಾಗಿ ಶಿಲ್ಪಗಳನ್ನು ಕುರಿತು ಇದುವರೆಗೂ ಬರೆದ ಲೇಖಕರಾಗಿದ್ದಾರೆ. ಪ್ರಸ್ತುತ ಲೇಖನ ನಾನು ಕೈಗೊಂಡ ಕ್ಷೇತ್ರಕಾರ್ಯ ಮತ್ತು ಅಧ್ಯಯನದ ಫಲವಾಗಿದೆ. ಇದು ಕೇವಲ ವಿಷಯ ಪ್ರವೇಶವಷ್ಟೇ ಹೌದು ಮತ್ತು ಕಿರು ಅವಲೋಕನವೂ ಹೌದು. ಇನ್ನೂ ಹೆಚ್ಚಿನ ಅಧ್ಯಯನಕ್ಕೆ ದಾರಿ ಇದ್ದೇ ಇದೆ.

2. ಬೌದ್ಧ ಧರ್ಮಕ್ಕೆ ಸೇರಿದ ಹಲವಾರು ಗಾರೆಯಾಕೃತಿಗಳು ಅಫ್ಘಾನ್ ಪ್ರದೇಶದಲ್ಲಿ ದೊರೆತಿವೆ. ನೋಡಿ; V.A. Smith: *A History of Fine Art in India and Ceylon*, Oxford, 1911. Chapter IV, *The Hellenistic Sculpture of Gandhara*, Photographs, pp. 96 ff.

3. ವಿಜಯನಗರದ ಪ್ರಾರಂಭದ ಕಾಲದಲ್ಲಿ ನಿರ್ಮಿಸಿರುವ ದೇವಾಲಯದಲ್ಲಿ ಗಾರೆ ಇತ್ತೇ ಇಲ್ಲವೇ ಎಂಬುದು ಇನ್ನು ಅಸ್ಪಷ್ಟವಾಗಿದೆ. ಆದರೆ ನಂತರದ ಕಾಲದಲ್ಲಿ ಉಪಯೋಗಿಸಿದ ಮಾಹಿತಿ ಇದೆ.

4. ಸಭಾ ಚಿತ್ರ ವಿಜಯನಗರೋತ್ತರ ಕಾಲದಲ್ಲಿ ಭಿತ್ತಿ ಚಿತ್ರಗಳಲ್ಲಿ ಪ್ರಮುಖ ಪಂಗಡವಾಗಿ ಬೆಳೆಯಿತು. ಮುಖ್ಯ ಆಕೃತಿ ಮಧ್ಯದಲ್ಲಿದ್ದು ಇಕ್ಕೆಲಗಳಲ್ಲಿ ಗಣ–ಪರಿವಾರದ ಆಕೃತಿಗಳು ನಿಂತಿರುವುದು ಅಥವಾ ಕುಳಿತಿರುವುದು.

5. ಗಾರೆಯಲ್ಲಿ ಸೂಕ್ಷ್ಮವಾದ ಅಥವಾ ನೀರ ಗಾರೆಯಿಂದ ಮಾಡಬಹುದಾದ ಯಾವುದೇ ಆಕೃತಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕಾದಾಗ ಅಚ್ಚನ್ನು ಉಪಯೋಗಿಸಬಹುದಾಗಿದೆ, ಅಚ್ಚಿನಿಂದ ತೆಗೆದ ಆಕೃತಿಗಳನ್ನು ಹಸಿಯಾದ ಹಿನ್ನೆಲೆಗೆ ಜೋಡಿಸಿ ನಂತರ ಉಳಿದ ಕೆಲಸವನ್ನು ಮಾಡಬಹುದಾಗಿದೆ.

6. ಚಿತ್ರಗಳಿಗೆ ನೋಡಿ ಕುಲಕರ್ಣಿ ಆರ್.ಎಚ್., 1997, "ಬನವಾಸಿ ಕದಂಬರ ಕಾಲದ ಶಿಲ್ಪಕಲೆ", *ಕದಂಬ ಅಧ್ಯಯನ,* ಪುಟ 18-34, ಚಿತ್ರ 2, 3, 6, 16, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

# 2. ವಿಜಯನಗರದ ಹನುಮಂತನ ಶಿಲ್ಪಗಳು

– ಬಾಲಸುಬ್ರಮಣ್ಯ

ವಿಜಯನಗರದ ಪರಿಸರದಲ್ಲಿ ಹನುಮಂತನ ಶಿಲ್ಪಗಳನ್ನು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಬಹುದು. ವಿಜಯನಗರ–ಹಂಪಿ ಪ್ರಾಚೀನ ಕಾಲದಿಂದಲೂ ರಾಮಾಯಣಕ್ಕೆ ಸಂಬಂಧಿಸಿದ ಹಲವಾರು ಸ್ಥಳಗಳ ಹೆಸರುಗಳನ್ನು ಹೊಂದಿದೆ. ಆಸ್ತಿಕ ಜನರಿಗೆ ಇದು ಹನುಮಂತನು ಹುಟ್ಟಿದ ಸ್ಥಳ. ವಾಲಿ–ಸುಗ್ರೀವರು ಇದ್ದುದು ಹಂಪಿಯ ಸನಿಹದ ಪರ್ವತಗಳಲ್ಲಿ. ರಾಮ ಕಿಷ್ಕಿಂಧೆಗೆ ಬಂದಾಗ, ಹನುಮಂತ ಭೇಟಿಯಾದದ್ದು ಹಂಪಿಯಲ್ಲೇ ನಡಿಯಿತೆಂದು ಹೇಳಲಾಗಿದೆ. ಸುಗ್ರೀವ ರಾಜ್ಯವಾಳುತ್ತಿದ್ದಾಗ ಹನುಮಂತ ಆತನ ಮಂತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದ. ರಾಮಾಯಣಕ್ಕೆ ಸಂಬಂಧಿಸಿದ ಅಂಜನಾದ್ರಿ, ಋಷ್ಯಮೂಕ ಪರ್ವತ, ಮಾಲ್ಯವಂತ ಪರ್ವತ, ಮಾತಂಗ ಪರ್ವತ, ವಾಲಿಕಾಷ್ಟ, ಸುಗ್ರೀವನ ಗುಹೆ, ಮಧುವನ ಇತ್ಯಾದಿಗಳನ್ನು ಇಲ್ಲಿ ಗುರುತಿಸಲಾಗಿದೆ.

ವಿಜಯನಗರ ಪಟ್ಟಣವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ನಿರ್ಮಿಸಿದ ಕೋಟೆಯ ಹೆಬ್ಬಾಗಿಲುಗಳ ಬಳಿಯಲ್ಲಿ ಹನುಮಂತನ ವಿಗ್ರಹಗಳನ್ನು ನೋಡಬಹುದು. ಇಲ್ಲಿ ಹನುಮಂತ ದೃಢಕಾಯದ ರಕ್ಷಣೆಯ ಅಭಿವ್ಯಕ್ತಿಯಾಗಿದ್ದಾನೆ. ಕನ್ನಡದಲ್ಲಿ ಪ್ರಚಲಿತವಿರುವ ಗಾದೆಯಂತೆ "ಊರು ಸುಟ್ಟರೂ ಹನುಮಂತ ಹೊರಗೆ" ಎನ್ನುವುದನ್ನು ಇಲ್ಲಿ ನೆನೆಯಬಹುದು. ಹೆಬ್ಬಾಗಿಲ ಬಳಿಯಲ್ಲಿ ಹೆಚ್ಚಾಗಿ ಈ ಶಿಲ್ಪಗಳು ಇರುವುದರಿಂದ ಯಾವುದೇ ಹಾನಿ ಊರಿನಲ್ಲಿ ಆದರೂ ಹನುಮಂತನಿಗೆ ಯಾವ ತೊಂದರೆಯಾಗುವುದಿಲ್ಲ.

ಹನುಮಂತ ಶಿಲ್ಪಗಳ ಮೂಲವನ್ನು ಹುಡಕ ಹೊರಟರೆ ವಿಜಯನಗರ ಪೂರ್ವದ ಶಿಲ್ಪಗಳು ಸಿಗುವುದು ವಿರಳ. ಹನುಮಂತನಿಗಾಗಿಯೆ ಕಟ್ಟಿದ ಗುಡಿಗಳು ಇಲ್ಲವೆನ್ನಬಹುದು. ಹನುಮಂತನ ಶಿಲ್ಪಗಳು ವಿಜಯನಗರ ಕಾಲದಿಂದ ಹೇರಳವಾಗಿ ದೊರೆಯುತ್ತವೆ. ಈ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವುದು ಸೋಜಿಗವೆನಿಸಿದರೂ ತಮ್ಮದೇ ಆದಂತಹ ವಿವರಣೆಯನ್ನು ಹೊಂದಿವೆ.

ವಿಜಯನಗರದ ಕಾಲದಲ್ಲಿ ಈ ಶಿಲ್ಪಗಳು ಜನಪರ ದೈವವಾಗಿ ಎಲ್ಲರನ್ನೂ ಆಕರ್ಷಿಸಿವೆ. ವಿಜಯನಗರ ಪಟ್ಟಣದಲ್ಲಿ ಅಲ್ಲಲ್ಲಿ ಈ ಶಿಲ್ಪಗಳು ಇರುವುದು, ಆ ಕಾಲದಲ್ಲಿ ಇವಕ್ಕೆ ದೊರಕಿದ ಜನಮನ್ನಣೆಗೆ ಸಾಕ್ಷಿಯಾಗಿದೆ. ಹನುಮಂತನ ಗುಡಿಗಳು ಇಷ್ಟು ಜನಪ್ರಿಯವಾಗಿದ್ದರೂ, ಶಿವ, ವಿಷ್ಣುವಿನ ಗುಡಿಗಳಂತೆ ಹೆಚ್ಚಿನ ವಿಶೇಷತೆ, ಭವ್ಯತೆ ಇಲ್ಲದಿರುವುದನ್ನು ಕಾಣಬಹುದು. ವಿಜಯನಗರದ ಶೈವ, ವೈಷ್ಣವ ದೇವಾಲಯಗಳು ಆಗಮ ವಾಸ್ತು ವಿನ್ಯಾಸದ ರಚನೆಯನ್ನು ಹೊಂದಿದ್ದರೆ, ಇಲ್ಲಿಯ ಹನುಮಂತನ ಗುಡಿಗಳು ಯಾವುದೇ ವಾಸ್ತು ವಿಶೇಷತೆಯನ್ನು ಹೊಂದದೆ, ತೀರ ಸರಳ ಸ್ವರೂಪವನ್ನು ಹೊಂದಿವೆ. ಹನುಮಂತ ಜನಪರ ದೈವವಾಗಿದ್ದರಿಂದ ಸಾಮಾನ್ಯರೂ ಸಹ ಇಂತಹ ಗುಡಿಗಳನ್ನು ತಮ್ಮ ಇತಿಮಿತಿಯಲ್ಲಿ ನಿರ್ಮಿಸಿರಬಹುದಾಗಿದೆ. ಈ ಗುಡಿಗಳು ಚಿಕ್ಕವಾಗಿದ್ದು ಗರ್ಭಗುಡಿ ಹಾಗೂ ಮುಂದಿನ ಮಂಟಪವನ್ನು ಹೊಂದಿರುತ್ತವೆ. ಎಲ್ಲಾ ಸ್ಥಳಗಳಲ್ಲಿ ಕಾಣಸಿಗುವ ಈ ಗುಡಿಗಳಲ್ಲಿ ಯಾವುದೇ ಅಲಂಕರಣೆಯಿರುವುದಿಲ್ಲ. ವಿಜಯನಗರದ ನಂತರದ ಕಾಲದಲ್ಲಿಯೂ ಮತ್ತು ಇಂದಿಗೂ ಹನುಮಂತನ ಗುಡಿಗಳು ವಿಪುಲವಾಗಿ ದೊರಕುತ್ತವೆ. ಈ ಗುಡಿಗಳು ಶಿಷ್ಟ ಮತ್ತು ಸಾಮಾನ್ಯ ಜನರಿಂದ ಯಾವುದೇ ಭೇದಭಾವವಿಲ್ಲದೆ ಪೂಜಿಸಲ್ಪಡುತ್ತವೆ.

ಹನುಮಂತನ ಆರಾಧಕರು ಎಲ್ಲಾ ಪಂಗಡಗಳಲ್ಲಿ ಇದ್ದಾರೆ. ಶೈವ, ವೈಷ್ಣವ, ಶಾಕ್ತರೆಲ್ಲರೂ ಈ ದೇವರನ್ನು ಪೂಜಿಸುತ್ತಾರೆ. ತಮಿಳು ರಾಮಾಯಣದಲ್ಲಿ ಹನುಮಂತನನ್ನು ವಾಯು ಮತ್ತು ರುದ್ರರ ಅಂಶವೆಂದು ತಿಳಿದರೆ, ವಾಲ್ಮೀಕಿ ರಾಮಾಯಣದಲ್ಲಿ ಈತನನ್ನು ವಾಯುವಿನ ಒಂದಂಶವೆಂದು ತಿಳಿಯಲಾಗಿದೆ. ಹಿಂದೂ ಧಾರ್ಮಿಕ ಪದ್ಧತಿಯಲ್ಲಿ ದೇವಾನುದೇವತೆಗಳ ರಕ್ಷಕನೆಂದು ಮತ್ತು ವಿಷ್ಣು ರೂಪವಾದ ರಾಮನ ಬಂಟನೆಂದೂ ಚಿತ್ರಿಸಲಾಗಿದೆ. ಕುಸ್ತಿ ಪಟುಗಳ ದೇವನಾಗಿ, ಗ್ರಾಮದ ಸರಹದ್ದಿನ ದೈವವಾಗಿ, ಬೇಟೆಗಾರರ ಹಾಗೂ ಸೈನಿಕರ ಶೌರ್ಯದ ಸಂಕೇತವಾಗಿ ಆರಾಧನೆಗೆ ಒಳಗಾಗಿದ್ದಾನೆ.

ಶಿಷ್ಟ ಸಂಪ್ರದಾಯದ ಗುಡಿಯೊಂದನ್ನು ತುಂಗಭದ್ರಾ ನದಿಯ ದಂಡೆಯಲ್ಲಿ ಕಾಣಬಹುದು. ಹನುಮನನ್ನು ರಾಮಾಯಣದ ಹನುಮಂತನಾಗಿ, ಮಹಾಭಾರತದ ಭೀಮ, ನಂತರದ ಕಾಲದಲ್ಲಿ ಮಧ್ವಾಚಾರ್ಯನಾಗಿ ಕಾಣಲಾಗಿದೆ. ವ್ಯಾಸರಾಯರ ಹನುಮನ ಪ್ರತಿಷ್ಠಾಪನೆಗಳು ಪ್ರಖ್ಯಾತವಾದವು. ವಿಜಯನಗರ ಕಾಲದಲ್ಲಿ ಇವರು ರಾಜ್ಯಮಾನ್ಯತೆಯನ್ನು ಪಡೆದಿದ್ದರು. ವ್ಯಾಸರಾಯರು 732 ಹನುಮಂತನ ವಿಗ್ರಹಗಳನ್ನು ಸ್ಥಾಪಿಸಿರುವುದಾಗಿ ತಿಳಿದಿದೆ. ಇವರು ಪ್ರತಿಷ್ಠಾಪಿಸಿದ ಒಂದು ವಿಗ್ರಹ ಯಂತ್ರೋದ್ಧಾರಕ ಹನುಮ ಎಂದು ಪ್ರತೀತಿ.

ವಿಜಯನಗರ ಪಟ್ಟಣದಲ್ಲಿ ಹನುಮನ ಗುಡಿಗಳು ವಿರೂಪಾಕ್ಷ ದೇವಾಲಯ, ಕೃಷ್ಣ ದೇವಾಲಯ, ಅರಮನೆ ಪ್ರದೇಶ, ಹೆಬ್ಬಾಗಿಲ ಬಳಿ ಹೆಚ್ಚಾಗಿ ಕಾಣುತ್ತವೆ. ಹನುಮನ ಗುಡಿಗಳು ಸಾಮಾನ್ಯವಾಗಿ ಗರ್ಭಗುಡಿಯನ್ನು ಮಾತ್ರ ಹೊಂದಿದ್ದರೆ ಕೆಲವು ಗರ್ಭಗುಡಿಯ ಮುಂದೆ ಸಣ್ಣ

ಮಂಟಪವನ್ನು ಹೊಂದಿವೆ. ಇನ್ನೂ ಕೆಲವು ಗುಡಿಗಳು ಗರ್ಭಗುಡಿ, ಅಂತರಾಳ ಮತ್ತು ಮಂಟಪವನ್ನು ಹೊಂದಿವೆ. ವಿಜಯನಗರ ಕಾಲದ ಇತರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಈಗ ಪೂಜಾಕಾರ್ಯ ನಡೆಯುತ್ತಿಲ್ಲ. ಆದರೆ ಹನುಮನ ಗುಡಿಗಳಲ್ಲಿ ಇಂದಿಗೂ ಪೂಜಾ ಕಾರ್ಯಗಳು ನಡೆಯುತ್ತಿವೆ. ಕೆಲವು ಹನುಮನ ಶಿಲ್ಪಗಳನ್ನು ಮೂಲ ಸ್ಥಳದಿಂದ ತೆಗೆದು ಶಿವ, ವಿಷ್ಣುವಿನ ಗುಡಿಗಳಲ್ಲಿಟ್ಟಿರುವುದನ್ನು ಕಾಣಬಹುದು.

ಹನುಮನ ಗುಡಿಯ ಬಗ್ಗೆ ಹೊರದೇಶದ ಪ್ರವಾಸಿಗರಾದ ನ್ಯೂನಿಜ್[1] ಒಳ್ಳೆಯ ವಿವರಣೆಯನ್ನು ನೀಡಿದ್ದಾನೆ. ಈ ವಿವರಣೆಯಿಂದ 16ನೇ ಶತಮಾನದಲ್ಲಿ ಪ್ರಚಲಿತದಲ್ಲಿದ್ದ ಈ ಶಿಲ್ಪದ ಪ್ರಾಮುಖ್ಯತೆಯ ಸ್ಪಷ್ಟ ವಿವರಣೆಯು ದೊರಕುತ್ತದೆ. "ಪಗೋಡಗಳಲ್ಲಿ ಮಂಗನ ಶಿಲ್ಪಗಳಿವೆ" ಎಂದಿದ್ದಾನೆ. ಅಂದರೆ ಆಗಿನ ಕಾಲದಲ್ಲಿ ಹೆಚ್ಚು ಪ್ರಚಲಿತವಿದ್ದ ಈ ಶಿಲ್ಪಗಳ ಪ್ರಾಮುಖ್ಯತೆಯ ಬಗ್ಗೆ ಅರಿವಾಗುತ್ತದೆ. ಇಂದಿಗೂ ಈ ಶಿಲ್ಪಗಳು ಪೂಜೆಗೊಳ್ಳುತ್ತಿರುವುದರಿಂದ ಹನುಮಂತನ ಬಗೆಗೆ ಜನರಲ್ಲಿ ಇರುವ ನಂಬಿಕೆಯ ಬಗೆಗೆ ಅರಿವಾಗುತ್ತದೆ.

ವಿಜಯನಗರದ ಉತ್ತರಕ್ಕೆ ಆನೆಗೊಂದಿಯ ಸರಹದ್ದಿನಲ್ಲಿ ಅಂಜನಾದ್ರಿ ಪರ್ವತವಿದೆ ಇದನ್ನು ಹನುಮಂತನು ಹುಟ್ಟಿದ ಸ್ಥಳವೆಂದು ನಂಬಲಾಗಿದೆ. ಇದಕ್ಕೆ ಸಂಬಂಧಿಸಿದ ಹಲವು ಶಾಸನಗಳು ನಮಗೆ ದೊರಕುತ್ತವೆ. ಆನೆಗೊಂದಿಯಲ್ಲಿ ಸುಮಾರು ಎಂಟು ಗುಡಿಗಳನ್ನು ನಾವು ಕಾಣಬಹುದು.[2] ಕಳಸಾಪುರ ಒಮ್ಮೆ ವಿಜಯನಗರದ ಒಂದು ಭಾಗವಾಗಿತ್ತು. ಇಲ್ಲಿ ವಿಜಯನಗರ ಕಾಲದ ಬೃಹತ್ ಹನುಮನ ಮೂರ್ತಿ ಇದೆ. ಈ ಹನುಮಂತನ ಮೂರ್ತಿಯು ಇಂದೂ ಪೂಜೆಗೊಳ್ಳುತ್ತಿದೆ. ಕಳಸಾಪುರದ ಹನುಮಂತನನ್ನು ಮಧುವನದ ಅಂಜನೇಯನೆಂದು ಇತ್ತೀಚೆಗೆ ಕರೆಯಲಾಗುತ್ತಿದೆ. ಈ ದೇವಾಲಯದಲ್ಲಿ ಕೆಲವು ವರ್ಷಗಳ ಹಿಂದೆ ಮಾರ್ಪಾಡು ಮಾಡಿರುವುದು ಕಾಣಬರುತ್ತದೆ. ಕ್ರಿ.ಶ. 1434ರಲ್ಲಿ ಎರಡನೇ ದೇವರಾಯನು ಈ ದೇವಾಲಯಕ್ಕೆ ಪೂಜಾ ಕಾರ್ಯಕ್ಕಾಗಿ ದಾನ ಕೊಟ್ಟ ಬಗ್ಗೆ ಉಲ್ಲೇಖವಿದೆ.[3] ಇದೇ ರೀತಿ ಜಂಬುನಾಥ ಗುಡ್ಡದ ಹಾದಿಯಲ್ಲಿರುವ ಹೆಬ್ಬಾಗಿಲ ಬಳಿ ಹನುಮಂತ ದೇವರಿಗೆ ನೈವೇದ್ಯಕ್ಕೆ ಪ್ರತಿದಿನ ನಾಲ್ಕು ಪಡಿ ಅಕ್ಕಿಯನ್ನು ಅನಂತಶಯನನಿಗೆ ಕೊಡುವ ಅಕ್ಕಿಯಿಂದ ನೀಡಬೇಕೆಂದು ವಿಜಯನಗರದ ದೊರೆ ಸದಾಶಿವನ ಶಾಸನವಿದೆ.[4] ಕ್ರಿ.ಶ. 1446–1465ರಲ್ಲಿ ಚಾಮರದ 'ಸಿರಂಗು' ದೊರೆ ಮಲ್ಲಿಕಾರ್ಜುನನ ಕಾಲದಲ್ಲಿ ಕೋಟೆಯ ಬಳಿ ಆಂಜನೇಯನ ಗುಡಿಯನ್ನು ಕಟ್ಟಿಸಿದ ಬಗ್ಗೆ ಉಲ್ಲೇಖವಿದೆ.[5]


ವಿಜಯನಗರ ಪಟ್ಟಣದಲ್ಲಿ ಮುಖ್ಯವಾದ ಹನುಮನ ವಿಗ್ರಹಗಳು ಈ ಕೆಳಕಂಡ ಪ್ರದೇಶದಲ್ಲಿವೆ. ಹಜಾರರಾಮ ಗುಡಿಯ ಮುಂಭಾಗ, ಕಮಲಾಪುರದಿಂದ ಹಂಪಿಯ ರಸ್ತೆಯಲ್ಲಿ ಅಕ್ಕತಂಗಿ ಗುಂಡಿನ ಮೊದಲು ಮತ್ತು ನಂತರ, ಮಾಧವನ ಗುಡಿ, ಅಹಮದ್ ಖಾನ್ ದರ್ಮಶಾಲೆಯ ಬಳಿ, ಗಾಣಗಿತ್ತಿ ದೇವಾಲಯದ ಬಳಿ, ಪೆನುಗೊಂಡ ದ್ವಾರದ ಬಳಿ, ವಿರೂಪಾಕ್ಷ ದೇವಾಲಯದಲ್ಲಿ, ತಿರುವೆಂಗಳನಾಥ ದೇವಾಲಯ, ಮಾಲ್ಯವಂತ ದೇವಾಲಯ, ರಘುನಾಥ ದೇವಾಲಯ, ಅರೆಶಂಕರ ಬಾಗಿಲ ಬಳಿ, ಯಂತ್ರೋದ್ಧಾರಕ ಹನುಮ – ಚಕ್ರತೀರ್ಥದ ಬಳಿ. ಇವುಗಳು ಇಂದಿಗೂ ಮುಖ್ಯವಾಗಿವೆ.

ಯಂತ್ರೋದ್ಧಾರಕ ಹನುಮನನ್ನು ಈಗಾಗಲೇ ತಿಳಿಸಿರುವಂತೆ ವ್ಯಾಸರಾಯರು ಪ್ರತಿಷ್ಠಾಪಿಸಿದ್ದಾರೆಂದು ಪ್ರತೀತಿ. ಇಲ್ಲಿ ಹನುಮ ಧ್ಯಾನಮಗ್ನನಾಗಿ, ಜಪಮಾಲೆ ಹಿಡಿದು, ಪದ್ಮಾಸನದಲ್ಲಿ ಕುಳಿತಿದ್ದಾನೆ. ಸುತ್ತಲೂ ಯಂತ್ರವಿದೆ. ಈ ಯಂತ್ರದ ಸುತ್ತಲೂ ಚಕ್ರಾಕಾರವಿದ್ದು, ಹೊರಭಾಗದಲ್ಲಿ 12 ಕಪಿಗಳು ಒಂದರ ಹಿಂದೆ ಒಂದು ಹೋಗುವಂತೆ ಚಿತ್ರಿಸಲಾಗಿದೆ. ಯಂತ್ರದ ಮೂಲೆಗಳಲ್ಲಿ ಬಿಜಾಕ್ಷರಿ ಮಂತ್ರವಿದೆ. ವ್ಯಾಸರಿಂದ ಪ್ರತಿಷ್ಠಾಪನೆಗೊಂಡ ಈ ಶಿಲ್ಪ ವಿಶಿಷ್ಟವಾಗಿದೆ.[6]

ಇಲ್ಲಿಯ ದೇವಾಲಯಗಳ ಕೆಲವು ಭಾಗಗಳಲ್ಲಿ, ಕಂಬಗಳಲ್ಲಿ ಹನುಮನ ಉಬ್ಬು ಶಿಲ್ಪಗಳನ್ನು ಕಾಣಬಹುದು. ಇಲ್ಲಿ ಹನುಮನನ್ನು ವಿವಿಧ ಭಂಗಿಗಳಲ್ಲಿ, ಹಲವು ಹತ್ತು ಶೌರ್ಯದ ಪ್ರದರ್ಶನಗಳಲ್ಲಿ ಕೆತ್ತಿರುವುದನ್ನು ಕಾಣಬಹುದು.[7] ಗಾಳಿಯಲ್ಲಿ ಹಾರಾಡುತ್ತಿರುವಂತೆ, ದೊಡ್ಡ ಹೆಬ್ಬಂಡೆಯನ್ನು ಹೊತ್ತು ಸಾಗುವಂತೆ, ಸಂಜೀವಿನಿ ಬೆಟ್ಟವನ್ನು ಹೊತ್ತು ಹೋಗುವಂತೆ, ರಾಮನ ಮುದ್ರೆಯುಂಗರವನ್ನು ಸೀತಾದೇವಿಗೆ ನೀಡುವಂತೆ, ಅಂದರೆ ರಾಮಾಯಣದಲ್ಲಿ ಆತ ವಹಿಸಿದ ನಿರ್ಣಯಾತ್ಮಕ ಪಾತ್ರದ ಮುಖ್ಯ ದೃಶ್ಯಾವಳಿಯನ್ನು ಕಾಣಬಹುದು. ರಾವಣನ ಆಸ್ಥಾನದಲ್ಲಿ ಬಾಲದ ಸುರುಳಿಯ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ರಘುನಂದನ ತೀರ್ಥರ ಬೃಂದಾವನದ ಎದುರಿಗಿರುವ ಹನುಮನ ಶಿಲ್ಪವು ವಿಶಿಷ್ಟವಾಗಿದೆ. ಇಲ್ಲಿ ಹನುಮ ಚತುರ್ಭುಜನಾಗಿದ್ದು, ಮೇಲಣ ಕೈಗಳಲ್ಲಿ ಚಕ್ರ, ಶಂಕಗಳಿದ್ದರೆ, ಕೆಳಗಿನ ಎರಡು ಕೈಗಳಲ್ಲಿ ಪುಸ್ತಕ, ಗದೆಗಳಿವೆ. ಇದು ಹನುಮ, ಭೀಮ, ಮಧ್ವರ ಸಮಾಗಮವೆಂದು ತಿಳಿಯಲಾಗಿದೆ.

ಹನುಮನನ್ನು ವಿವಿಧ ಭಂಗಿಯಲ್ಲಿ ಚಿತ್ರಿಸಿದ್ದರೂ ಹೆಚ್ಚು ಪ್ರಖ್ಯಾತವಾಗಿರುವುದು ಹಾರುತ್ತಿರುವ ಭಂಗಿಯದು. ಬಲಗೈಯನ್ನು ಮೇಲಕ್ಕೆತ್ತಿ ಎಡಗೈಯನ್ನು ಸೊಂಟದ ಬಳಿ ತಂದಿರುವ ರೀತಿಯಲ್ಲಿದೆ. ಕೆಲವು ಶಿಲ್ಪಗಳಲ್ಲಿ ಕೈಯಲ್ಲಿ ಹೂಗೊಂಚಲುಗಳಿರುವುದು ಸಾಮಾನ್ಯ. ಹಲವು ಶಿಲ್ಪಗಳಲ್ಲಿ ರಾಕ್ಷಸನನ್ನು ಕಾಲ ಬಳಿ ಚಿತ್ರಿಸಿರುವುದನ್ನು ಕಾಣಬಹುದು. ಅಂಜಲಿ ಹಸ್ತದಲ್ಲಿ ನಿಂತಿರುವ ಹನುಮನ ವಿಗ್ರಹಗಳೂ ಕೂಡ ಅಲ್ಲಲ್ಲಿ ದೊರಕುತ್ತವೆ. ಹೀಗೆ ವಿಜಯನಗರ ಕಾಲದಲ್ಲಿ ವಿವಿಧ ಬಗೆಯ ಹನುಮನ ವಿಗ್ರಹಗಳನ್ನು ನೋಡಬಹುದಾಗಿದೆ.

ವಿಜಯನಗರದ ಉತ್ತರಾರ್ಧದಲ್ಲಿ ಹನುಮನ ವಿಗ್ರಹಗಳು ಹೆಚ್ಚಿಗೆ ದೊರಕುತ್ತವೆ. ವೈಷ್ಣವ ಸಂಪ್ರದಾಯದ ಒಲವು ಹೆಚ್ಚಾದಂತೆ, ರಾಮನ ದೇವಾಲಯಗಳೊಂದಿಗೆ ಹನುಮನ ಗುಡಿಗಳು ಹೆಚ್ಚಾಗಿರುವುದನ್ನು ಕಾಣಬಹುದು. ಹನುಮ ಜನಪರ ದೈವವಾಗಿ ಇಂದೂ ಮುಂದುವರಿದಿದ್ದಾನೆ.



ಕಮಾಲಾಪುರ, ಹನುಮಂತನ ಗುಡಿ



ಕಮಾಲಾಪುರ, ಹನುಮಂತನ ಗುಡಿಯಲ್ಲಿಯ ಶಿಲ್ಪ



ಹಂಪಿ, ರಘುನಂದನ ತೀರ್ಥದ ಬಳಿಯ ಹನುಮಂತನ ಶಿಲ್ಪ

## ಟಿಪ್ಪಣಿಗಳು

1. ಸೀವೆಲ್ ರಾಬರ್ಟ್, *ಎ ಫರ್‌ಗಾಟನ್ ಎಂಪೈರ್,* ಪುಟ 390.
2. ಶ್ಯಾಮಾಶಾಸ್ತ್ರಿ ಆರ್., "ಎ ಫ್ಯೂ ಇನ್‌ಸ್ಕ್ರಿಪ್‌ಷನ್ಸ್ ಆಫ್ ಎನ್ಷಿಯಂಟ್ ಕಿಂಗ್ಸ್ ಆಫ್ ಆನೆಗೊಂದಿ," *ಕ್ವಾಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸಾಯಿಟಿ,* VII, ಪುಟ 287, 291.
3. *ಸೌತ್ ಇಂಡಿಯನ್ ಇನ್ಸ್‌ಕ್ರಿಪ್‌ಶನ್ಸ್,* IX, ಭಾಗ–ii, ಸಂಖ್ಯೆ 445.
4. *ಅದೇ,* ಸಂ. 635.
5. *ಆನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ,* 1957-58, ಬಿ. 205.
6. ಬಿ. ವೆಂಕೋಬರಾವ್, *ಇನ್‌ಟ್ರೊಡಕ್ಷನ್ ಟು ವ್ಯಾಸಯೋಗಿ ಚರಿತಮ್: ದಿ ಲೈಫ್ ಆಫ್ ವ್ಯಾಸರಾಯ,* ಪು. xiv-xv.
7. ವರ್ಗಿಸ್ ಅನೀಲಾ, *ರಿಲಿಜಿಯಸ್ ಟ್ರೆಡಿಶನ್ಸ್ ಎಟ್ ವಿಜಯನಗರ,* ಪುಟ 91.

# 3. ಕೃಷ್ಣಾಪುರದ ಶಿಲ್ಪಗಳು - ಒಂದು ಟಿಪ್ಪಣಿ

– ಹೆಚ್.ಟಿ. ತಳವಾರ್

ವಿಜಯನಗರ ಕಾಲದಲ್ಲಿ ಅನೇಕ ಉಪನಗರಗಳು ನಿರ್ಮಾಣಗೊಂಡು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಾ ಬಂದಿರುವುವು. ಅಂತೆಯೇ ಕಾಮಲಾಪುರ, ಕೃಷ್ಣಾಪುರ, ಅಚ್ಯುತಾಪುರ, ವಿಠ್ಠಲಾಪುರ, ಮಲಪನಗುಡಿ, ಅನಂತಶಯನನ ಗುಡಿ (ಸಾಲೆ ತಿರುಮಲರಾಯ ಪಟ್ಟಣ), ತಿರುಮಲಾದೇವಿ ಪಟ್ಟಣ, ವರದಾಜಮ್ಮನ ಪಟ್ಟಣ, ವೆಂಕಟಾಪುರ, ನಿಂಬಾಪುರ, ನಾಗಲಾಪುರ ಇತ್ಯಾದಿ ಬಹು ಪ್ರಾಮುಖ್ಯವಾದ ಉಪನಗರಗಳಾಗಿದ್ದುದಲ್ಲದೇ, ಭೌಗೋಳಿಕವಾಗಿ ತಮ್ಮದೇ ಆದ ಪ್ರಭಾವವನ್ನು ಬೀರಿರುವುವು. ಹಂಪಿಯ ಪರಿಸರದಲ್ಲಿ ಕೃಷ್ಣಾಪುರ, ಅಚ್ಯುತಾಪುರ, ವಿಠ್ಠಲಾಪುರ, ಇವುಗಳು ಪ್ರತಿಷ್ಠಿತ ಉಪನಗರಗಳಾಗಿರುವವು. ಈ ಎಲ್ಲಾ ಉಪನಗರಗಳಲ್ಲಿಯೂ ಒಂದೊಂದು ದೇವಾಲಯವನ್ನು ಕಟ್ಟಿಸಿ ಅದಕ್ಕೆ ಪೂರಕವಾಗಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಪೇಟೆ (ಬಜಾರ್)ಗಳು ನಿರ್ಮಾಗೊಂಡ ಬಗ್ಗೆ ಶಾಸನಗಳಿಂದ ತಿಳಿದು ಬರುತ್ತದೆ.[1] ಕೆಲವು ಉಪನಗರಗಳು ರಾಜಧಾನಿಯ ಹೊರವಲಯಗಳಲ್ಲಿ ಬೆಳೆಯಲು, ರಾಜಧಾನಿಯಲ್ಲಿರುವ ನೈಸರ್ಗಿಕ ಬಂಡೆಗಳು ಹಾಗೂ ಸಮತಳ ಪ್ರದೇಶದ ಅಭಾವವು ಕಾರಣವಾಗಿರಬಹುದು. ಹೊರವಲಯಗಳು ಉಪನಗರಗಳ ದಿನನಿತ್ಯದ ಅವಶ್ಯಕ ವಸ್ತುಗಳ ಪೂರೈಕೆಯಲ್ಲಿ ತಮ್ಮದೇ ಆದ ವಿಶೇಷ ಪಾತ್ರಗಳನ್ನು ವಹಿಸಿರುವುವು.

ಕೃಷ್ಣದೇವರಾಯನು ಕ್ರಿ.ಶ. 1513ರಲ್ಲಿ ಒರಿಸ್ಸಾ ರಾಜನಾದ ಗಜಪತಿಯನ್ನು ಗೆದ್ದು ಬಾಲಕೃಷ್ಣನ ವಿಗ್ರಹವನ್ನು ತಂದು ಕೃಷ್ಣದೇವಾಲಯ ಮತ್ತು ಕೃಷ್ಣಾಪುರಪೇಟೆಯನ್ನು ಸ್ಥಾಪಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ.[2]

ಕೃಷ್ಣಾಪುರದ ಕೃಷ್ಣ ದೇವಸ್ಥಾನದ ಗೋಪುರದ ಮೇಲೆ ಗಾರೆಯಿಂದ ಮಾಡಿದ ಯುದ್ಧ ದೃಶ್ಯಗಳು, ದೇವಾನುದೇವತೆಗಳು ಹಾಗೂ ಕೃಷ್ಣನ ಗೋಪಿಕಾಸ್ತ್ರೀಯರ ವಸ್ತ್ರಾಪಹರಣದ ದೃಶ್ಯಗಳ ಶಿಲ್ಪಗಳಿವೆ. ಅದರ ಪರಿಸರದಲ್ಲಿರುವ ಶಿಲ್ಪಗಳು ವಿಜಯನಗರದ ಶಿಲ್ಪಗಳಿಗೆ ಉತ್ತೇಜನ ಮತ್ತು ಒತ್ತು ಕೊಡುವವು. ಅಲ್ಲದೇ ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಇವು ವಿಜಯನಗರ ಶಿಲ್ಪಗಳ ರಾಶಿಯ ಶ್ರೀಮಂತಿಕೆಯನ್ನು ಒದಗಿಸುವ ಬಗ್ಗೆ ಯಾವುದೇ ಸಂದೇಹವಿಲ್ಲವೆಂದು ಹೇಳಬಹುದು.

**ಶಿಲ್ಪ ಲಕ್ಷಣಗಳು:**

ಸಾಮಾನ್ಯವಾಗಿ ದೇವಸ್ಥಾನದ ಕಂಬಗಳ ಮತ್ತು ಬಾಗಿಲುಗಳ ಮೇಲೆ ಶಿಲ್ಪಿಗಳು ಚಿತ್ರಗಳನ್ನು ಬಿಡಿಸಿ ತಮ್ಮ ಕೈಚಳಕವನ್ನು ತೋರಿಸಿರುವುದು ಎದ್ದು ಕಂಡುಬರುತ್ತದೆ.

ಕೃಷ್ಣಾಪುರದ ಪರಿಸರದಲ್ಲಿ ಶ್ರೀವೈಷ್ಣವ ಪಂಥಕ್ಕೆ ಸೇರಿದ ಶಿಲ್ಪಗಳನ್ನು ಹೆಚ್ಚಾಗಿ ಕಾಣಬಹುದು. ವಿಷ್ಣುವಿನ ಅವತಾರಗಳು ಪ್ರಮುಖವಾಗಿದ್ದರೆ, ಲಕ್ಷ್ಮೀ, ಗಜಲಕ್ಷ್ಮೀ ಶಿಲ್ಪಗಳು ಇಲ್ಲಿ ಗಮನಾರ್ಹವಾಗಿರುವುವು. ವೈಷ್ಣವ ಧರ್ಮದ ಸಂಕೇತಗಳಾದ ಶಂಖ, ಚಕ್ರಗಳು ಹಾಗೂ ಧಾರ್ಮಿಕ ಸುಧಾರಕರಾದ ಆಳ್ವಾರರ ಶಿಲ್ಪಗಳನ್ನು ಇಲ್ಲಿ ಕಾಣಬಹುದು.

ಅದೇ ರೀತಿಯಾಗಿ ಶೈವ ಪಂಥಕ್ಕೆ ಸೇರಿದ ಶಿಲ್ಪಗಳನ್ನೂ ಸಹ ಇಲ್ಲಿ ಗಮನಿಸಬಹುದು. ಹೆಚ್ಚಾಗಿ ಭೈರವ, ದುರ್ಗಾ ಮತ್ತು ಗಣೇಶನ ಕೆತ್ತನೆಗಳು ಪ್ರಮುಖವಾಗಿರುವುದು ಕಂಡುಬರುತ್ತದೆ.

ಜೈನ ಪಂಥಕ್ಕೆ ಸೇರಿದ ಅಪರೂಪವಾದ ಒಂದೇ ಒಂದು ಶಿಲ್ಪವು ಕೃಷ್ಣಾಪುರದ ಬಜಾರಿನ ಪುಷ್ಕರಣಿಯ ಮಂಟಪದಲ್ಲಿ ಕಾಣುವುದು ವಿಶೇಷವಾಗಿದೆ. ಅದೇ ರೀತಿಯಾಗಿ ಗಣ ದೇವತೆಗಳು, ಕಿನ್ನರ ಮತ್ತು ಗಂಧರ್ವರನ್ನು ಮನಮೋಹಕವಾಗಿ ಬಿಡಿಸಿರುವರು. ಮಾನವನ ನಿಜ ಜೀವನದ ಮೇಲೆ ಬೆಳಕನ್ನು ಚೆಲ್ಲುವಂತಹ ಶಿಲ್ಪಗಳಾದ ಬೇಟೆಯಾಡುವುದು, ಭೂಮಿ ಉಳುಮೆ ಮಾಡುವುದು, ನೀರು ತರುವುದು, ಹಣ್ಣುಗಳನ್ನು ಕೀಳುವುದು, ಹಾಡುವುದು, ಕುಣಿಯುವುದು ಹಾಗೂ ಕಣಿ ಹೇಳುವುದು ಇಂತಹ ಹತ್ತಾರು ಶಿಲ್ಪಗಳನ್ನು ಕೃಷ್ಣಾಪುರ ಪ್ರದೇಶದಲ್ಲಿ ಕಾಣಬಹುದು. ಇವೆಲ್ಲವೂ ಅಂದಿನ ದಿನನಿತ್ಯದ ಸಾಮಾಜಿಕ ಜೀವನದ ವಿವಿಧ ಶೈಲಿಯನ್ನು ಪ್ರತಿಬಿಂಬಿಸುವವು. ಅದೇ ರೀತಿಯಾಗಿ ಪ್ರಾಣಿಗಳು, ಸಸ್ಯಗಳು ಮತ್ತು

ಪಕ್ಷಿಗಳ ಶಿಲ್ಪಗಳಾದ ಮಕರ, ಹುಲಿ, ಹಸು, ಮನುಷ್ಯನೊಂದಿಗೆ ಸಿಂಹ, ಆನೆ, ಹಂಸ, ಗಿಳಿ ಮತ್ತು ಹಾವುಗಳು ಗಮನಾರ್ಹವಾಗಿರುವವು. ಅಲ್ಲದೇ ಏಖಂಡ ಶಿಲೆಯಲ್ಲಿ ಕೆತ್ತಿದ ಲಕ್ಷ್ಮೀನರಸಿಂಹ, ಉದ್ದಾನ ವೀರಭದ್ರ, ಬಡವಿ ಲಿಂಗ ಹಾಗೂ ಚಂಡಿಕೇಶ್ವರ ದೇವಾಲಯ ಮತ್ತು ತಿರುವೆಂಗಳನಾಥ, ಉದ್ದಾನ ವೀರಭದ್ರ ದೇವಸ್ಥಾನದ ಶಿಲ್ಪಗಳು ಕೃಷ್ಣಾಪುರದ ಶಿಲ್ಪಗಳ ಶ್ರೀಮಂತಿಕೆಯನ್ನು ಹೆಚ್ಚಿಸಿರುವವು.

## ಟಿಪ್ಪಣಿಗಳು

1. *SII.*, IV, No. 254.
2. *ಅದೇ,* No. 250.

# 4. ಇಕ್ಕೇರಿಯ ಅಘೋರೇಶ್ವರಮೂರ್ತಿ

— ಸಿ.ಟಿ.ಯಂ. ಕೊಟ್ರಯ್ಯ

ವಿಜಯನಗರ ಸಾಮ್ರಾಜ್ಯದ ಅಧೀನಕ್ಕೊಳಪಟ್ಟ ಅನೇಕ ಸಾಮಂತ ಅರಸರಲ್ಲಿ ಕೆಳದಿ–ಇಕ್ಕೇರಿಯ ನಾಯಕರೂ ಸೇರಿದ್ದರೆಂಬ ವಿಷಯವು ಹಲವಾರು ಶಿಲಾಶಾಸನಗಳಿಂದ ದೃಢವಾಗಿರುತ್ತದೆಯಷ್ಟೆ.[1] ಉದಾಹರಣೆಗೆ, '..... ಶ್ರೀ ಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರ ಪ್ರತಾಪ ಶ್ರೀವೀರ ಸದಾಶಿವರಾಯ ಮಹಾರಾಯರು ವಿದ್ಯಾನಗರಿಯಲಿ ಸ್ಥಿರ ಸಾಂಬ್ರಾಜ್ಯ ಪಟ್ಟಯುಕ್ತರಾಗಿ ..... ಕೆಳದಿಯ ಸದಾಶಿವನಾಯಕರಿಗೆ ಅಮರಮಾಗಣಿಯಾಗಿ ಕೊಟ್ಟ .....' ಎಂದಿರುವುದನ್ನು ಉಲ್ಲೇಖಿಸಬಹುದು.[2]

ಆ ಕಾಲದ ಕೆಳದಿ–ಇಕ್ಕೇರಿ ಅರಸರಲ್ಲೊಬ್ಬನಾದ ದೊಡ್ಡ ಸಂಕಣ್ಣನಾಯಕನು (ಕ್ರಿ.ಶ. 1546-1559) ತನ್ನ ರಾಜಧಾನಿಯಾಗಿದ್ದ ಇಕ್ಕೇರಿ ನಗರದೊಳಗೆ ಶುಭವಾದ ದೇವಾಲಯವನ್ನು ಕಟ್ಟಿಸಿ ಆಗಮ, ಶಾಸ್ತ್ರಗಳಲ್ಲಿ ನಿರ್ದೇಶಿಸಿರುವ ಕಟ್ಟಳೆಗಳಿಗನುಗುಣವಾಗಿ ಅಲ್ಲಿ ಅಘೋರೇಶ್ವರಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿದನು.[3] ಅದೇ ಸಮಯದಲ್ಲಿ, ಮತ್ತು ಅದೇ ಅರಸನಿಂದ, ಕೆಳದಿಯಲ್ಲಿ ಈಗಲೂ ಕಾಣಬರುವ ವೀರಭದ್ರೇಶ್ವರ ದೇವಾಲಯವೂ ನಿರ್ಮಾಣಗೊಂಡು, ಮೂರ್ತಿಯೂ ಸ್ಥಾಪನೆಯಾಯಿತು.[4]

ಹಿಂದೆ, ಆ ಅರಸರ ರಾಜಧಾನಿಯಾಗಿ ವೈಭವದಿಂದ ಮೆರೆದು, ಈಗಲೂ ಅದೇ ಹೆಸರಿನಿಂದ ಕರೆಯಲ್ಪಡುವ ಇಕ್ಕೇರಿ ಎಂಬ ಚಿಕ್ಕ ಗ್ರಾಮದಲ್ಲಿ (ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ಅರಳಿಕೊಪ್ಪ ಹೋಬಳಿ) ಆ ಅಘೋರೇಶ್ವರ ದೇವಾಲಯವು ಈಗಲೂ ಕಾಣಸಿಗುತಿದ್ದು, ಭಾರತ ಸರಕಾರದ ಪುರಾತತ್ವ ಸರ್ವೇಕ್ಷಣಾ ವಿಭಾಗದ ಪರಿಪೋಷಣೆಗೊಳಪಟ್ಟಿದೆ. ಆಗ ಸ್ಥಾಪಿತವಾಗಿದ್ದ ಅಘೋರೇಶ್ವರ ಮೂರ್ತಿಯಾದರೋ, ಬಹು ವಿಶಿಷ್ಟವಾದ, ಕರ್ನಾಟಕದಲ್ಲಿ ಮತ್ತೆಲ್ಲಿಯೂ ಕಾಣಬಂದಿಲ್ಲದಂತಹ ವಿಶೇಷ ಲಕ್ಷಣ–ವೈಶಿಷ್ಟ್ಯಗಳನ್ನು ಹೊಂದಿದ್ದ ಒಂದು ವಿನೂತನ ಶಿಲಾ ದೇವತಾಮೂರ್ತಿಯಾಗಿತ್ತು. ಅಂತೆಯೇ, ಆ ಮೂರ್ತಿಗಾಗಿಯೇ ನಿರ್ಮಿತವಾದ ಶಿಲಾ ದೇವಾಲಯವೂ ಸಹ ತನ್ನದೇ ಆದ, ಕೆಳದಿ–ಇಕ್ಕೇರಿ ಅರಸರಿಂದ ಪೋಷಿಸಿ, ಪ್ರೋತ್ಸಾಹಿಸಲ್ಪಟ್ಟ ವಾಸ್ತು ವೈಶಿಷ್ಟ್ಯಗಳಿಂದ ಕೂಡಿದ ದೇವಮಂದಿರವಾಗಿದೆ (ಚಿತ್ರ 25). ಇಲ್ಲಿ ಆ ವಿನೂತನ ಅಘೋರೇಶ್ವರ ಮೂರ್ತಿಯನ್ನು ಕುರಿತು ಮಾತ್ರ ಪ್ರಸ್ತುತಪಡಿಸಲಾಗಿದೆ.

ಆ ಅಘೋರೇಶ್ವರಮೂರ್ತಿಯು, ಶಿವನ ಒಂದು ಸ್ವರೂಪ, ಈಗ ಲಭ್ಯವಿಲ್ಲದಿದ್ದರೂ, ಅದಕ್ಕೆ ಸಂಬಂಧಿಸಿದ ಪೀಠವು (pedestal) ಮಾತ್ರ ಈಗಲೂ ಅದೇ ದೇವಾಲಯದ ಗರ್ಭಗೃಹದಲ್ಲಿ ಕಾಣಬರುತ್ತಿದ್ದು, ಆ ಪೀಠದ ಮೇಲೆ ಬೇರೊಂದು ಚಿಕ್ಕದಾದ ಪೀಠಸ್ಥ ಶಿವಲಿಂಗವನ್ನು ತರುವಾಯದಲ್ಲಿ ಪ್ರತಿಷ್ಠಾಪಿಸಿರುವುದರ ಮೂಲಕ, ಅದನ್ನು ಉಪಯೋಗಿಸಿಕೊಳ್ಳಲಾಗಿದೆ (ಚಿತ್ರ 26) ಮತ್ತು ನಿತ್ಯ ಪೂಜಾಕಾರ್ಯಗಳು ಜರುಗುತ್ತಾ ಇವೆ.

ಅದನ್ನು ಕುರಿತು ಪುರಾತತ್ವವಿದರು 1932ರಲ್ಲಿ ಈ ಕೆಳಗಿನಂತೆ ವಿವರಿಸಿದ್ದಾರೆ: "The *garbhagriha* which is about ten feet square has a small *linga* on a small *pitha* installed on a large *pitha* which might have originally borne a larger *linga*. The larger *pitha* is about 8 feet x 5 feet, and has a *frieze* of 32 figures of seated Durgas. Each of these has six hands holding *abhaya*, *khadga*, *bana*, *dhanus*, *pasa* and *padma* with a peacock on the pedestal of each (Kaumari ?).[5] ಎಂದರೆ, "ಆ ಅಘೋರೇಶ್ವರ ದೇವಾಲಯದ ಗರ್ಭಗೃಹವು ಚೌಕಾದ ವಿನ್ಯಾಸವನ್ನು ಹೊಂದಿದ್ದು, ಅದರ ಮಧ್ಯದಲ್ಲಿ 8 ಅಡಿ ಉದ್ದ ಮತ್ತು 5 ಅಡಿ ಅಗಲದ ಬೃಹದಾಕಾರದ ಪೀಠವಿದೆ. ಮೂಲದಲ್ಲಿ, ಅದಕ್ಕೆ ಸರಿಪ್ರಮಾಣದ ಲಿಂಗವನ್ನು ಅದರ ಮೇಲೆ ಪ್ರತಿಷ್ಠಾಪಿಸಿದ್ದಿರಬೇಕು. ಆದರೆ, ಈಗ ಆ ಬೃಹತ್ ಪೀಠದ ಮೇಲೆ ಚಿಕ್ಕದಾದ ಒಂದು ಪೀಠಸ್ಥ ಲಿಂಗವು ಕಾಣಬರುತ್ತದೆ. ಆ ಬೃಹದಾಕಾರದ ಪೀಠದ ಸುತ್ತಲೂ ಇರುವ ಮೇಲಿನ ಅಲಂಕಾರಿಕ ಪಟ್ಟಿಯ ಮೇಲೆ (frieze on upper band) 32 ದುರ್ಗೆಯರ ಮೂರ್ತಿಗಳನ್ನು ಕುಳಿತಿರುವ ಭಂಗಿಯಲ್ಲಿ ಕಡೆಯಲಾಗಿದೆ. ಆ ದೇವತಾಮೂರ್ತಿಗಳಿಗೆ ಪ್ರತಿಯೊಂದಕ್ಕೂ ಆರು ಕೈಗಳಿದ್ದು, ಅವುಗಳಲ್ಲಿ ಒಂದು ಅಭಯಮುದ್ರೆಯಲ್ಲಿದ್ದರೆ, ಉಳಿದ ಐದು ಕೈಗಳಲ್ಲಿ ಖಡ್ಗ, ಬಾಣ, ಧನಸ್ಸು, ಪಾಶ ಮತ್ತು ಪದ್ಮಗಳನ್ನು ಹಿಡಿದುಕೊಂಡಿರುವಂತೆ ತೋರಿಸಲಾಗಿದೆ ಮತ್ತು ಆ ಮೂರ್ತಿಗಳ ವೈಯಕ್ತಿಕ ಪೀಠಗಳ ಮೇಲೆ ನವಿಲುಗಳ ಕೆತ್ತನೆಗಳು ಕಾಣಬರುತ್ತವೆ. ಆದುದರಿಂದ ಅವು ಕೌಮಾರಿದೇವಿಯನ್ನು ಪ್ರತಿನಿಧಿಸುತ್ತಿರಬೇಕೆಂದು ತರ್ಕಿಸಲಾಗಿದೆ."[6] ಇದೇ ಅಭಿಪ್ರಾಯವನ್ನು ಕರ್ನಾಟಕ ಚರಿತ್ರೆಯ ಮೂರನೆಯ ಸಂಪುಟದಲ್ಲಿ ಪುನರುಚ್ಚರಿಸಲಾಗಿದೆ.[7]

ಆದರೆ, ಈ ವಿವರಣೆಯು ಅಪೂರ್ಣವೂ ಹಾಗೂ ಅಸಮರ್ಪಕವೂ ಆಗಿರುವುದರಿಂದ ಇಲ್ಲಿ ಪುನಃ ಆ ವಿಷಯವನ್ನೇ ಸಂಶೋಧನೆಗೊಳಪಡಿಸಿ, ಸಂಪೂರ್ಣ ವಿವರಣೆಗಳೊಂದಿಗೆ ಪ್ರಸ್ತುತಪಡಿಸಲಾಗಿದೆ. ಹಾಗೆ ಮಾಡುವಲ್ಲಿ ಸರಿಪ್ರಮಾಣದಲ್ಲಿ ಲಭ್ಯವಿರುವ ಸಾಹಿತ್ಯಾಧಾರಗಳನ್ನು ಉಪಯೋಗಿಸಿಕೊಳ್ಳಲಾಗಿದೆ ಎಂಬ ವಿಷಯವು ಮುಂದಿನ ವಿವರಣೆಗಳಿಂದ ವೇದ್ಯವಾಗುತ್ತದೆ.


ಮೊದಲಿಗೆ, ಆ ಬೃಹದಾಕಾರದ ಪೀಠದ ಮೇಲಿನ ಪಟ್ಟಿಕೆಯಲ್ಲಿ (frieze-band) ಈಗಲೂ ಕಾಣಬರುವ 32 ದೇವತಾ ವಿಗ್ರಹಗಳನ್ನು ಕುರಿತು ತಿಳಿಯೋಣ. ಈ ದಿಸೆಯಲ್ಲಿ ನಮಗೆ ಸಹಾಯಕ್ಕೆ ಬರುವ ಮುಖ್ಯ ಸಾಹಿತ್ಯಾಧಾರವೆಂದರೆ, 'ಶಿವತತ್ವ ರತ್ನಾಕರ'ವೆಂಬ ಸಂಸ್ಕೃತ ಗ್ರಂಥವು. ಹೆಸರೇ ಸೂಚಿಸುವಂತೆ ವಿಶ್ವಕೋಶದೋಪಾದಿಯಲ್ಲಿ ರಚಿತವಾಗಿರುವ ಈ ಗ್ರಂಥವು, ಅದೇ ಕೆಳದಿ–ಇಕ್ಕೇರಿ ರಾಜ್ಯದ ಅರಸರಲ್ಲೊಬ್ಬನಾದ ಬಸವರಾಜರಸ (ಕ್ರಿ.ಶ. 1698-1715)ನಿಂದ ತನ್ನ ರಾಜ್ಯಾಡಳಿತ ಸಮಯದಲ್ಲಿ, ಎಂದರೆ ಕ್ರಿ.ಶ. 1709ರಲ್ಲಿ ಅಸ್ತಿತ್ವಕ್ಕೆ ಬಂದಿತು. ಮತ್ತು ಗ್ರಂಥಕರ್ತನು ಕೆಳದಿ–ಇಕ್ಕೇರಿ ರಾಜ್ಯದ ಅರಸನೇ ಆಗಿದ್ದುದರಿಂದ, ತನ್ನ ಪೂರ್ವಜರಿಂದ ನಿರ್ಮಿತವಾಗಿದ್ದ ಆ ಅಘೋರೇಶ್ವರ ಮೂರ್ತಿಯನ್ನು ಕುರಿತು ವಿವರಣೆಗಳನ್ನೊದಗಿಸುವುದು ಅವಶ್ಯಕ ಕರ್ತವ್ಯವೂ ಹಾಗೂ ಸಂದರ್ಭೋಚಿತವೂ ಎಂದು ತಿಳಿದಿರಬೇಕು. ಆ ವಿವರಣೆಗಳಾದರೋ, ಪೂರ್ವದ ಲಿಂಗ ಪುರಾಣ, ಕಾರಣಾಗಮ ಮುಂತಾದ ಶಿಲ್ಪ ಲಕ್ಷಣಾಶಾಸ್ತ್ರ ಗ್ರಂಥಗಳಲ್ಲಿ ಕಾಣಬರುವವುಗಳಿಗಿಂತ ಸ್ವಲ್ಪ ಭಿನ್ನವಾಗಿರುವುದು ಮತ್ತೊಂದು ವಿಶೇಷತೆ.[8] ಆ 'ಶಿವತತ್ವ ರತ್ನಾಕರ' ಗ್ರಂಥದಲ್ಲಿ ವಿವರಿಸಿರುವ ಪ್ರಕಾರ, ಅಘೋರೇಶ್ವರಮೂರ್ತಿಯು 32 'ಪೀಠಶಕ್ತಿ ದೇವತೆ'ಗಳಿಂದ ಆವೃತವಾಗಿರಬೇಕು.[9] ಆದುದರಿಂದ ಆ 32 'ಪೀಠಶಕ್ತಿದೇವತೆ'ಗಳನ್ನು ಆ ಪೀಠದ ಮೇಲಿನ ಪಟ್ಟಿಕೆಯ ಭಾಗದ ಮೇಲೆ ತೋರಿಸಲಾಗಿದೆ (ಚಿತ್ರ 27). ಆ 32 'ಪೀಠಶಕ್ತಿ ದೇವತೆ'ಗಳ ಹೆಸರುಗಳನ್ನು (ದ್ವಾತ್ರಿಂಶಚ್ಛಕ್ತಿ ದೇವತಾಃ) ಆ ಗ್ರಂಥದಲ್ಲಿಯೇ ವಿವರಿಸಲಾಗಿದೆ. ಅವುಗಳು ಈ ಕೆಳಗಿನಂತಿವೆ.

| | | | | | | | |
|---|---|---|---|---|---|---|---|
| 1. | ಸುಪ್ರಭಾ | 9. | ಮಾಲಿನೀ | 17. | ಮಿತ್ರಪೀಠಾ | 25. | ಕಾಮದಾಯಿನೀ |
| 2. | ಮೇಘದೂತಿ | 10. | ವಸುಂಧರಾ | 18. | ಭದ್ರಾ | 26. | ದೂತಿನೀ |
| 3. | ವಿಜಯಾ | 11. | ಹುಂಕರಾ | 19. | ಸ್ವಸ್ತಿ | 27. | ಶಾಕಿನೀ |
| 4. | ಭಾಸ್ಕರಾ | 12. | ರಾಕ್ಷಸೀ | 20. | ಕರಾಲಿಕಾ | 28. | ಹಂಸೀ |
| 5. | ಯಮಾ | 13. | ರಂಭಾ | 21. | ಕಾಳೀ | 29. | ಮಾಯಾ |
| 6. | ಗಂಧರ್ವಾ | 14. | ತ್ರಿಣೇತ್ರಾ | 22. | ಬಲವತೀ | 30. | ವಾಗೀಶ್ವರೀ |
| 7. | ಶಕಟಾ | 15. | ನೇತ್ರಭೂಷಿಣೀ | 23. | ಶೂರಾ | 31. | ವನಮಾಲೀ |
| 8. | ಶೂರ್ಪಾ | 16. | ಅಂಜನಾ | 24. | ರೋಗಘ್ನೀ | 32. | ಗವಾಕ್ಷೀ[10] |


ಈಗಾಗಲೇ ತಿಳಿಸಿರುವಂತೆ, ಪ್ರತಿಯೊಂದು ಪೀಠಶಕ್ತಿದೇವತೆಗೆ ಒಂದು ಮುಖ, ಮೂರು ಕಣ್ಣುಗಳು, ಆರು ಭುಜಗಳು ಮತ್ತು ವಾಹನವಾಗಿ ನವಿಲುಗಳಿರುತ್ತವೆ. ಈ ದೇವತೆಗಳು, ಖಡ್ಗ, ಖಟ್ವಾಂಗ, ಧನಸ್ಸು ಹಾಗೂ ಬಾಣಗಳನ್ನು ನಾಲ್ಕು ಕೈಗಳಲ್ಲಿ ಹಿಡಿದುಕೊಂಡಂತೆ ಮತ್ತು ಉಳಿದ ಎರಡು ಕೈಗಳು ವರದ ಮತ್ತು ಅಭಯಮುದ್ರೆಗಳಲ್ಲಿರುವಂತೆ ರಚಿತವಾಗಿವೆ.[11] ಮೇಲೆ ಉಲ್ಲೇಖಿಸಿರುವ ಪುರಾತತ್ವವಿದರು 1932ರಲ್ಲಿ ಹೇಳಿರುವಂತೆ ಈ ದೇವತೆಗಳು ದುರ್ಗ ಅಥವಾ ಕೌಮಾರಿಗಳಾಗಿರದೆ, ಅಘೋರೇಶ್ವರಮೂರ್ತಿಗೆ ಸಂಬಂಧಿಸಿದ 'ಪೀಠಶಕ್ತಿ ದೇವತೆ'ಗಳ ಪ್ರತೀಕಗಳಾಗಿರುತ್ತವೆಂದು ಈಗ ಖಚಿತವಾಗಿ ತಿಳಿದಂತಾಯಿತು.

ಈಗ ಅಘೋರೇಶ್ವರಮೂರ್ತಿಯನ್ನು ಕುರಿತು ತಿಳಿಯೋಣ. ಮೇಲೆ ತಿಳಿಸಿರುವಂತೆ, ಮೂಲದ ಪೀಠವು ಈಗಲೂ ಲಭ್ಯವಿದ್ದು ಉಪಯೋಗಿಸಲ್ಪಡುತ್ತಿದ್ದರೂ, ಆ ಪೀಠದ ಮೇಲೆ ಸ್ಥಾಪಿತವಾಗಿದ್ದ ಮೂಲದ ಮೂರ್ತಿಯು ಲಭ್ಯವಿರುವುದಿಲ್ಲ. ಅದು, ಬಿಜಾಪುರದ ಅದಿಲ್‌ಶಾಹೀ ಸುಲ್ತಾನನ ದಂಡನಾಯಕರಲ್ಲೊಬ್ಬನಾಗಿದ್ದ ರಣದುಲ್ಲಾಖಾನನು, ಕ್ರಿ.ಶ. 1637ರ ಡಿಸೆಂಬರ್ 30ರಂದು ಇಕ್ಕೇರಿ ನಗರಕ್ಕೆ ದಾಳಿಯಿಟ್ಟು, ಬಹಳವಾಗಿ ನಾಶಮಾಡಿದ ಸಮಯದಲ್ಲಿ[12] ನಾಶವಾಗಿ ಹೋಗಿರಬೇಕು. ಆ ಕಾಲದಲ್ಲಿಯೇ ಆ ಮೂರ್ತಿ ಮತ್ತು ದೇವಾಲಯಗಳಿಗೆ ಸಂಬಂಧಿಸಿದ ಶಿಲಾಶಾಸನಗಳಂತಹ ದಾಖಲೆಗಳೂ ನಾಶವಾಗಿರಬೇಕು. ಏಕೆಂದರೆ, ಮೂಲ ವಿಗ್ರಹವು 32 ಕೈಗಳಿಂದ ಕೂಡಿದ್ದ ದೇವಮಾನವ ರೂಪದ ವಿನೂತನ ಮೂರ್ತಿಯಾಗಿತ್ತೆಂದು ಆ ಕಾಲದ ಸಾಹಿತ್ಯದಿಂದ ತಿಳಿಯುತ್ತದೆ. ಆ ಅಭಿಪ್ರಾಯವನ್ನು ಸಮರ್ಥಿಸುವಲ್ಲಿ 'ಶಿವತತ್ವ ರತ್ನಾಕರ' ಗ್ರಂಥದಲ್ಲಿ ಕಾಣಬರುವ ವಿವರಗಳೇ ಮುಖ್ಯ ಸಾಕ್ಷಾಧಾರ.[13] ಇದೇ ಅಭಿಪ್ರಾಯವನ್ನು ಇನ್ನೊಂದು ಗ್ರಂಥವಾದ 'ಕೆಳದಿ ನೃಪವಿಜಯ'ದಲ್ಲಿಯೂ ಅನುಮೋದಿಸಲಾಗಿದೆ.[14]

'ಕೆಳದಿ ನೃಪವಿಜಯ'ದಲ್ಲಿ ವಿವರಿಸಿರುವ ಪ್ರಕಾರ, ಇಂತಹ ವಿಶೇಷ ಲಕ್ಷಣ, ವೈಶಿಷ್ಟ್ಯಗಳಿಂದ ಕೂಡಿದ್ದ ದೇವಮಾನವ ರೂಪದ ವಿಗ್ರಹವನ್ನು ಕೆಳದಿಯರಸ ದೊಡ್ಡ ಸಂಕಣ್ಣನಾಯಕನು (ಕ್ರಿ.ಶ. 1546-1559), ತನ್ನ ದೇಶಾಟನೆಯ ಸಮಯದಲ್ಲಿ ಮಹಾರಾಷ್ಟ್ರ ದೇಶದ ಪೈಠಣ (ಪ್ರಾಚೀನ ಕಾಲದ ಪ್ರತಿಷ್ಠಾನ)[15] ಎಂಬ ಊರಿನ ಒಂದು ದೇವಾಲಯದಲ್ಲಿ ನೋಡಿದನು. ಮೂವತ್ತೆರಡು ಕೈಗಳಿಂದ ಶೋಭಿಸುತ್ತಿದ್ದ ಆ ಅಘೋರ ಮೂರ್ತಿಯನ್ನು ನೋಡಿ, ಬಹುವಾಗಿ ಪ್ರಭಾವಿತನಾಗಿ, ಅದರ ಯಥಾರೂಪವನ್ನು ಕಾಗದದ ಮೇಲೆ ಚಿತ್ರಿಸಿಕೊಂಡು, ತನ್ನ ರಾಜ್ಯಕ್ಕೆ ಹಿಂದಿರುಗಿದ ನಂತರ, ಇಕ್ಕೇರಿಯಲ್ಲಿ ಒಂದು ಶಿಲಾಮಯ ದೇವಾಲಯವನ್ನು ನಿರ್ಮಿಸಿ, ತಾನು ಕಾಗದದ ಮೇಲೆ ಚಿತ್ರಿಸಿಕೊಂಡು ತಂದಿದ್ದಂತೆ, ಅಘೋರೇಶ್ವರನ ಭವ್ಯ ಶಿಲಾಮೂರ್ತಿಯನ್ನು ಮಾಡಿಸಿ, ಆ ದೇವಾಲಯದಲ್ಲಿ ಪ್ರತಿಷ್ಠೆ ಮಾಡಿಸಿದನು. ಅಲ್ಲದೆ, ಆ ಮೂರ್ತಿಯ ಪೂಜಾ ಮತ್ತಿತರ ಸೇವಾ



ಇಕ್ಕೇರಿ, ಅಘೋರೇಶ್ವರ ದೇವಾಲಯ



ಇಕ್ಕೇರಿ, ಅಘೋರೇಶ್ವರ ದೇವಾಲಯ, ಲಿಂಗ ಮತ್ತು ಪೀಠ

ಕೈಂಕರ್ಯಾರ್ಥವಾಗಿ ಅಪರಿಮಿತವಾದ ಭೂಸ್ವಾಸ್ಥೆಯನ್ನು ದಾನವಾಗಿ ಧಾರೆಯನೆರೆದು ಸಮರ್ಪಿಸಿದನು ಮತ್ತು ಅವಶ್ಯವೆನಿಸಿದ ತಟಾಕ, ಆರಾಮಗಳು ಹಾಗೂ ಹೂದೋಟಗಳನ್ನು ರಚನೆಮಾಡಿಸಿ ದಾನಮಾಡಿದನು ಮತ್ತು ರಾರಾಜಿಸುವ ಆ ಅಘೋರಮೂರ್ತಿಗೆ ರಾಜನು ಸ್ವತಃ ಪೂಜಾಕಾರ್ಯಗಳನ್ನು ಅತ್ಯಂತ ವೈಭವದಿಂದ ನೆರವೇರಿಸುತ್ತಿದ್ದನು.[16] ಅದೇ ಕಾಲದಲ್ಲಿ ಆತನು ಕೆಳದಿಯಲ್ಲಿ ರಾಮೇಶ್ವರಲಿಂಗ ದೇವಾಲಯದ ದಕ್ಷಿಣ ಭಾಗದಲ್ಲಿ ವೀರಭದ್ರದೇವರ ಮೂರ್ತಿಗೆ ಒಂದು ಶಿಲಾಮಯವಾದ ಗರ್ಭಗೃಹವನ್ನು ಕಟ್ಟಿಸಿ, ಆ ಮೂರ್ತಿಯ ಪ್ರತಿಷ್ಠಾಪನೆಗೂ ಕಾರಣವಾದನು.[17]

ಇದೇ ವಿಷಯವನ್ನು ಕುರಿತು, ವಿಶೇಷ ಲಕ್ಷಣಗಳನ್ನು ಹೊಂದಿದ್ದ ಆ ಅಘೋರೇಶ್ವರ ಮೂರ್ತಿಯನ್ನು ಅರಸ (ದೊಡ್ಡ) ಸಂಕಣ್ಣನಾಯಕನು ಇಕ್ಕೇರಿ ನಗರದ ಶಿವಾಲಯದಲ್ಲಿ ಪ್ರತಿಷ್ಠಾಪನೆ ಮಾಡಿಸಿದನೆಂದು 'ಶಿವತತ್ವ ರತ್ನಾಕರ'ದಲ್ಲಿಯೂ ಹೇಳಿ ದೃಢೀಕರಿಸಲಾಗಿದೆ.[18]

ಈಗ ಆ ವಿನೂತನ ಅಘೋರೇಶ್ವರಮೂರ್ತಿಯ ವಿಶೇಷ ಲಕ್ಷಣಗಳನ್ನು ಕುರಿತು ತಿಳಿಯೋಣ. ಆ ವಿವರಗಳು 'ಶಿವತತ್ವ ರತ್ನಾಕರ' ಗ್ರಂಥದಲ್ಲಿ ಮಾತ್ರ ಕಾಣಬರುತ್ತವೆ. ಅದು ನೀಲ ಕಾಂತಿಯ ಮೂರ್ತಿಯಾಗಿದ್ದು, ಒಂದೇ ಮುಖ, ಮೂರು ಕಣ್ಣುಗಳು, ಜಟಾಮಕುಟ, ತಲೆಯಲ್ಲಿ ಶಶಿರೇಖೆ ಮತ್ತು ಕೊರಳಲ್ಲಿ ರುಂಡಮಾಲೆಯನ್ನು ಧರಿಸಿಕೊಂಡಿರುವ, ಮೂವತ್ತೆರಡು ಕೈಗಳಿಂದ ಕೂಡಿರುವ ಹಾಗೂ ಮುಖದಲ್ಲಿ ಸದಾನಂದವನ್ನು (ನಿತ್ಯಾನಂದವನ್ನು) ಬಿಂಬಿಸುವಂತೆ ನಿರ್ಮಿತವಾದುದಾಗಿರಬೇಕು ಮತ್ತು ಅದು ಕಾಲನ ದೇಹ ಹಾಗೂ ಶಿರಸ್ಸುಗಳ ಮೇಲೆ ನಿಂತ ಭಂಗಿಯಲ್ಲಿದ್ದು, ಸರ್ವ ಅಭಯವನ್ನು ನೀಡುವ ಮುದ್ರೆಯಲ್ಲಿ ರಚಿತವಾದುದಾಗಿರಬೇಕು.[19] ಬಹುಶಃ ಈ ಕಾರಣದಿಂದಾಗಿಯೇ, ಅದನ್ನು ಅಘೋರಮೂರ್ತಿ (ಸೌಮ್ಯಮೂರ್ತಿ)ಯೆಂಬ ಹೆಸರಿನಿಂದ ಕರೆದಿರಬೇಕು.

ಇನ್ನು ಆ ಮೂವತ್ತೆರಡು ಹಸ್ತಗಳ ವಿನ್ಯಾಸ ಅಥವಾ ಮುದ್ರೆಗಳು, ಅವುಗಳಲ್ಲಿ ಹಿಡಿಯಲಾಗಿದ್ದ ಆಯುಧ ಮುಂತಾದ ಸಲಕರಣೆಗಳ ವಿವರಗಳು ಈ ಕೆಳಗಿನಂತಿವೆ.[20]

| ಬಲಭಾಗದ ಹಸ್ತಗಳಲ್ಲಿ: | ಅವುಗಳಿಗನುಗುಣವಾಗಿ ಎಡದ ಹಸ್ತಗಳಲ್ಲಿ: |
|---|---|
| 1. ಅಭಯ ಮುದ್ರೆ | 17. ವರದಮುದ್ರೆ |
| 2. ಖಡ್ಗ | 18. ಫಲಕ (ಗುರಾಣಿ) |
| 3. ಶೂಲ | 19. ಟಂಕ |
| 4. ಚಕ್ರ | 20. ಪಾಶಂ |
| 5. ಡಮರು | 21. ಮುದ್ಗರ |
| 6. ಅಸ್ತಿ (ಮೂಳೆ) | 22. ಸರ್ಪ |
| 7. ಬಾಣ | 23. ಅಗ್ನಿ |
| 8. ಗದಾ | 24. ಮೃಗ |
| 9. ಪದ್ಮ | 25. ಘಂಟಾ |
| 10. ಕಪಾಲ | 26. ಧನಸ್ಸು |
| 11. ಜ್ಞಾನಮುದ್ರೆ | 27. ಕಟಿಹಸ್ತ ಮುದ್ರೆ |
| 12. ಕುಂತ | 28. ರತ್ನಂ |
| 13. ಅಂಕುಶ | 29. ಕುಮುದಂ |
| 14. ರುದ್ರಾಕ್ಷಮಾಲೆ | 30. ಕುಂಭಂ |
| 15. ಖಟ್ವಾಂಗ | 31. ಖೇಟಕಂ |
| 16. ಪರಶು | 32. ಪುಸ್ತಕಂ |

ಮೇಲೆ ವಿವರಿಸಲಾದ ಆ ದೇವಮಾನವ ರೂಪದ ಶಿಲಾಮೂರ್ತಿಯು ಈಗ ಲಭ್ಯವಿಲ್ಲವಾದರೂ, ಅದರ ಪ್ರತಿರೂಪವಾಗಿ ಕಂಚಿನಲ್ಲಿ ನಿರ್ಮಿಸಲಾಗಿರುವ, ಚಿಕ್ಕ ಪ್ರಮಾಣದ, ಉತ್ಸವ ಮೂರ್ತಿಯು ಈಗಲೂ ಅದೇ ದೇವಸ್ಥಾನದಲ್ಲಿ ಕಾಣಬರುತ್ತದೆ.[21] ಈ ಕಂಚಿನ ಮೂರ್ತಿಯು ಸಹಾ 32 ಕೈಗಳನ್ನು ಹೊಂದಿದ್ದು, ಅವುಗಳ ವಿನ್ಯಾಸ, ಲಕ್ಷಣಗಳು ಮುಂತಾದ ವಿವರಣೆಗಳೆಲ್ಲವೂ ಬಹುಶಃ ಮೂಲದ ಶಿಲಾಮೂರ್ತಿಯನ್ನು ಅನುಕರಣೆಮಾಡಿ ನಿರ್ಮಿತವಾದುದಾಗಿರಬೇಕು ಮತ್ತು ಆ ಉತ್ಸವಮೂರ್ತಿಯು ಮೂಲ ವಿಗ್ರಹದ ಸಮಕಾಲೀನದ್ದಾಗಿರಬೇಕು.


ಇಕ್ಕೇರಿಯಲ್ಲಿ ಸ್ಥಾಪಿತವಾಗಿದ್ದ ಆ ಅಘೋರೇಶ್ವರ ಮೂರ್ತಿಯ ವರ್ಣನೆಯನ್ನು ಇಕ್ಕೇರಿಯನ್ನು ಸಂದರ್ಶಿಸಿದ ವಿದೇಶೀ ಪ್ರವಾಸಿಗರಲ್ಲೊಬ್ಬನಾದ ಪಿಯತ್ರೊ ದೆಲ್ಲಾವಲ್ಲೆಯ ಪ್ರವಾಸಿ ಕಥನದಲ್ಲಿಯೂ ಕಾಣಬಹುದು. ಅವನು ಇಟಲಿದೇಶದ ರೋಮನಗರದ ಪ್ರವಾಸಿಯಾಗಿದ್ದು, ಇಕ್ಕೇರಿಯನ್ನು ಕ್ರಿ.ಶ. 1623ರ ನವಂಬರ್ ತಿಂಗಳಲ್ಲಿ ಸಂದರ್ಶಿಸಿದನು. ಎಂದರೆ, ಆತನು ಮುಸಲ್ಮಾನ ದಂಡನಾಯಕ ರಣದುಲ್ಲಾಖಾನನ ದಾಳಿಗಿಂತ ಮೊದಲೇ ಇಕ್ಕೇರಿಯಲ್ಲಿದ್ದನು. ಆತನು, ಇತರ ವಿಷಯಗಳನ್ನು ಕುರಿತು ಬರೆಯುವಾಗ, ಇಕ್ಕೇರಿಯಲ್ಲಿ ತಾನು ನೋಡಿದ ಅಘೋರೇಶ್ವರ ಮೂರ್ತಿಯ ಬಗೆಗೂ ಹೇಳಿರುತ್ತಾನೆ. ಆತನು ವಿದೇಶಿಯನಾಗಿದ್ದುದರಿಂದ, ಆ ಮೂರ್ತಿಯನ್ನು 'ಅಗೋರ್ ಶೌರಾ' (Agore Seoura) ಎಂದು ಸ್ವಲ್ಪ ವ್ಯತ್ಯಾಸದಿಂದ ಹೇಳಿರುವವನಲ್ಲದೆ, ಅದು "ಕ್ಯಾಂಬೆಯಲ್ಲಿ (ಗುಜರಾತ ಪ್ರಾಂತದ ಸೂರತ್‌ಗೆ ಹತ್ತಿರವಿದ್ದ ಊರು) ಕಂಡ ಮಹಾದೇವನ ವಿಗ್ರಹವೂ ಈ ವಿಗ್ರಹವೂ ಒಂದೇ. ಆದರೆ ರೂಪುಗಳು ಬೇರೆ ಬೇರೆ ಅಷ್ಟೆ. ಒಂದು ತಲೆ, ಒಂದು ಮುಖ, ಮೂವತ್ತೆರಡು ಕೈಗಳು. ಇದು ವಿಚಿತ್ರವೇನಲ್ಲ. ನಮ್ಮ ಪೂರ್ವಿಕರು ಅನೇಕ ವಿಗ್ರಹಗಳನ್ನು ಬೇರೆ ಬೇರೆ ಹೆಸರಿನಲ್ಲಿ ಭಿನ್ನ ಭಿನ್ನ ಆಕಾರಗಳಲ್ಲಿ ಮಾಡಿದ್ದರು. ಈ ದೇವಸ್ಥಾನದಲ್ಲಿ ಮಹಾದೇವನ ಹೆಂಡತಿ ಪಾರ್ವತಿಯ ವಿಗ್ರಹವೂ ಇದೆ" ಎಂದು ವರ್ಣಿಸಿರುತ್ತಾನೆ.[22] ಎಂದರೆ, ಪಿಯತ್ರೊ ದೆಲ್ಲಾವಲ್ಲೆ ಸಂದರ್ಶಿಸಿದ ಕ್ರಿ.ಶ. 1623ರಲ್ಲಿ ದೊಡ್ಡ ಸಂಕಣ್ಣನಾಯಕನಿಂದ ಪ್ರತಿಷ್ಠಾಪಿತವಾಗಿದ್ದ ಆ ಅಘೋರೇಶ್ವರಮೂರ್ತಿಯು ಇನ್ನೂ ಅಸ್ತಿತ್ವದಲ್ಲಿದ್ದು, ಪೂಜೆಪುನಸ್ಕಾರಗಳು ವಿಧಿವತ್ತಾಗಿ ಜರುಗುತ್ತಿದ್ದುವೆಂದಾಯಿತು. ಆತನು ಹೇಳಿರುವಂತೆ, ಕ್ಯಾಂಬೆಯಲ್ಲಿ ಇಂತಹುದೇ ವಿಗ್ರಹವು ಇತ್ತೋ, ಇಲ್ಲವೋ ಎಂಬುದನ್ನು ಈಗ ಖಚಿತವಾಗಿ ಹೇಳಲಾಗದು. ಬಹುಶಃ ಆತನು ಬಹು ಭುಜಗಳ ಹಿಂದೂ ದೇವತಾ ವಿಗ್ರಹವನ್ನು ಕುರಿತು ಹೇಳಿರಬೇಕು.

ಇಕ್ಕೇರಿಯ ಆ ಅಘೋರೇಶ್ವರಮೂರ್ತಿಯ ವಿಚಾರವಾಗಿ ವಿವರಣೆಗಳನ್ನೊದಗಿಸುವ ಮತ್ತೊಂದು ಆಕರ ಸಾಹಿತ್ಯವೆಂದರೆ, ಹಿಂದೆ ಬ್ರಿಟಿಷ್ ಅಧಿಕಾರಿಗಳಲ್ಲೊಬ್ಬನಾದ ಕರ್ನಲ್ ಮೆಕೆಂಝಿಯು ದಾಖಲಿಸಿರುವ 'ಸಾಗರ ಕೈಫಿಯತ್ತು' ಸ್ಥಳೀಯರಲ್ಲೊಬ್ಬನಾದ ಪಟ್ಟಣಸೆಟ್ಟಿ ನಂಚಣ್ಣನೆಂಬ ಮಾಹಿತಿದಾರನ ಸಹಾಯದಿಂದ ಮೆಕೆಂಝಿಯು ಸಂಗ್ರಹಿಸಿದ, ಹಿಂದೆ ಜರುಗಿದ ವಿವರಣೆಗಳೇ ಆ ಕೈಫಿಯತ್ತಿನ ವಿಷಯಗಳು. ಆತನು ಕೆಳದಿ–ಇಕ್ಕೇರಿ ಸೇರಿದಂತೆ ಮೈಸೂರು ಪ್ರಾಂತದಲ್ಲಿ ಕ್ರಿ.ಶ. 1799-1810ರ ವರೆಗೆ, ಎಂದರೆ ಮೈಸೂರಿನ ಟೀಪು ಸುಲ್ತಾನನ ಪತನದನಂತರ, ಕಾರ್ಯನಿರತನಾಗಿದ್ದನು.[23] ಈ ಕೈಫಿಯತ್ತಿನ ಪ್ರಕಾರವೂ, ಇಕ್ಕೇರಿಯಲ್ಲಿ ಮೂವತ್ತೆರಡು ಕೈಗಳಲ್ಲಿ, ಮೂವತ್ತೆರಡು ಆಯುಧಗಳನ್ನು ಹಿಡಿದಿದ್ದ ಅಘೋರೇಶ್ವರ ಶಿಲಾಮೂರ್ತಿಯನ್ನು, ಹೊಸದಾಗಿ ನಿರ್ಮಿಸಲಾಗಿದ್ದ ಶಿಲಾದೇವಾಲಯದಲ್ಲಿ ಪ್ರತಿಷ್ಠಾಪನೆಗೆ ಕಾರಣನಾದವನು, ಇಕ್ಕೇರಿಯ ಅರಸರಲ್ಲೊಬ್ಬನಾದ ಹಿರಿಯ ಸಂಕಣ್ಣ ನಾಯಕನೆಂದೇ ದಾಖಲಿಸಲಾಗಿದೆ. ಆದರೂ, ಕೆಲವು ಗೌಣವಾದ ವ್ಯತ್ಯಾಸಗಳನ್ನು ಗುರುತಿಸಬಹುದು. ಎಂದರೆ, ಈ ಕೈಫಿಯತ್ತಿನ ಪ್ರಕಾರ, ಹಿರಿಯ ಸಂಕಣ್ಣನಾಯಕನು ತನ್ನ ಪರ್ಯಟನಾ ಸಮಯದಲ್ಲಿ ಮೂವತ್ತೆರಡು ಆಯುಧಗಳನ್ನು ಧರಿಸಿದ್ದ ಮೂರ್ತಿಯನ್ನು ನೋಡಿದುದು ಹರಿದ್ವಾರದಲ್ಲಿ ಎಂದಿದೆಯಲ್ಲದೆ, ಈ ಮೋದಲೇ ತಿಳಿಸಿರುವಂತೆ ಮಹಾರಾಷ್ಟ್ರ ಪ್ರಾಂತದ ಪೈಠಣ ನಗರದಲ್ಲಲ್ಲ. ಮತ್ತು ಹರಿದ್ವಾರದಲ್ಲಿ ಆತನು ನೋಡಿದ ಮೂವತ್ತೆರಡು ಕೈಗಳ ಮೂರ್ತಿಯನ್ನು 'ಅಘೋರವೀರಭದ್ರ' ಎಂಬ ಹೆಸರಿನಿಂದ ದಾಖಲಿಸಲಾಗಿದೆ. ಇಲ್ಲಿ ಹಿರಿಯ ಸಂಕಣ್ಣ ನಾಯಕನ ಕಾಲಕ್ಕೂ, ಮಾಹಿತಿದಾರನು ವಿವರಣೆಗಳನ್ನೊದಗಿಸಿದ ಕಾಲಕ್ಕೂ, ಸುಮಾರು 250 ವರ್ಷಗಳು (ಕ್ರಿ.ಶ. 1550 ರಿಂದ 1800ರ ವರೆಗೆ) ಗತಿಸಿ ಹೋಗಿದ್ದ ಕಾರಣದಿಂದಾಗಿ ಮತ್ತು ಲಿಖಿತವಾಗಿಲ್ಲದ ಆದರೆ ನೆನಪಿನ, ಬಾಯ್ಮಾತಿನ ವಿವರಣೆ, ವದಂತಿಗಳನ್ನು ನೀಡಬೇಕಾಗಿ ಬಂದುದರಿಂದ ಹಲವು ವಿವರಣಾಭೇದಗಳು ನುಸುಳಿ ಬಂದಿರುವುದರಲ್ಲಿ ಅಚ್ಚರಿಯೇನೂ ಇರುವುದಿಲ್ಲ. ಆದರೂ, ಇಕ್ಕೇರಿಯಲ್ಲಿ 32 ಕೈಗಳನ್ನೊಳಗೊಂಡಿದ್ದ ಅಘೋರೇಶ್ವರನ ಶಿಲಾಮೂರ್ತಿಯ ದೇವಾಲಯವು, ಹಿಂದಿನ ರಾಜನಾದ ಹಿರಿಯ ಸಂಕಣ್ಣನಾಯಕನಿಂದ ಸ್ಥಾಪಿತವಾಗಿತ್ತು ಮತ್ತು ಪೂಜಾಕಾರ್ಯಗಳು ಜರುಗುತ್ತಿದ್ದವು ಎಂಬ ವಿಷಯಗಳು ಈ ಆಕರದಿಂದಲೂ ಖಚಿತವಾಗಿ ತಿಳಿದುಬರುತ್ತವೆ.[24]

ಕ್ರಿ.ಶ. 1550ರ ಸುಮಾರಿನಲ್ಲಿ ಅಸ್ತಿತ್ವಕ್ಕೆ ಬಂದ ಆ ಅಪೂರ್ವವಾದ ದೇವಮಾನವ ಸ್ವರೂಪದ ಅಘೋರೇಶ್ವರಮೂರ್ತಿಯು ಈಗ ಲಭ್ಯವಿಲ್ಲವೆಂದೂ, ಮತ್ತು ಅದು ಕ್ರಿ.ಶ. 1637ರಲ್ಲಿ ಬಿಜಾಪುರದ ಮುಸಲ್ಮಾನ ದಂಡನಾಯಕ ರಣದುಲ್ಲಾಖಾನನು ನಡೆಸಿದ ದಾಳಿಯಲ್ಲಿ, ಇಕ್ಕೇರಿಯು ನಾಶವಾಗುವದರೊಂದಿಗೆ, ಆ ಶಿಲಾಮೂರ್ತಿಯೂ ನಾಶವಾಗಿಹೋಗಿರಬೇಕೆಂದು ತರ್ಕಿಸಿ ವಿವರಿಸಲಾಗಿದೆಯಷ್ಟೆ? ಅದರ ಬೃಹದಾಕಾರದ ಪೀಠವು ಮಾತ್ರ ಉಳಿದು ಬಂದಿದೆ. ಅಲ್ಲದೆ, ನಾಶಕ್ಕೀಡಾದ ಆ ಭವ್ಯ ಅಘೋರೇಶ್ವರ ಮೂರ್ತಿಯ ಪಾದಗಳ ಮತ್ತು ಪೀಠಭಾಗ ಮಾತ್ರವಿರುವ ಭಗ್ನ ಶಿಲ್ಪಭಾಗವು ದೇವಸ್ಥಾನದ ಆವರಣದಲ್ಲಿ ಈಗಲೂ ಕಾಣಬರುತ್ತದೆ (ಚಿತ್ರ 28). ಅದು ಬಹು ಮೂಲೆಗಳನ್ನು ಹೊಂದಿರುವ ಪೀಠವಾಗಿದೆ ಮತ್ತು ಮೂರ್ತಿಯನ್ನು ಭದ್ರವಾಗಿ ನಿಲ್ಲಿಸಲು ಅವಶ್ಯವಿದ್ದ ಕೀಲ ಅಥವಾ ಗೂಟವು (tang/peg) ಚೌಕಾಕಾರದಲ್ಲಿ ಸರಿಪ್ರಮಾಣದಲ್ಲಿದೆ. ಈ ಕೀಲಕ್ಕೆ ಸರಿಹೊಂದುವ ಕುಳಿ (socket) ಮೂಲ ಪೀಠದ ಮಧ್ಯದಲ್ಲಿರುವುದಾಗಿ ಪ್ರತೀತಿ. ಆ ಕುಳಿಯು ಕಾಣದಂತೆ, ಅದರ ಮೇಲೆ ಈಗ ಕಾಣಬರುವ ಪೀಠಸ್ಥ ಲಿಂಗವು ಸ್ಥಾಪನೆಗೊಂಡಿದೆ. ಪ್ರಧಾನ ಮೂರ್ತಿಯ ಪಾದಗಳು, ಆ ಕಾಲದ ವೈಶಿಷ್ಟ್ಯಪೂರ್ಣ ಹಾವುಗೆಗಳ ಮೇಲೆ ನಿಂತಿರುವಂತೆ ತೋರಿಸಲಾಗಿದೆ. ವೀರಭದ್ರಮೂರ್ತಿ ಶಿಲ್ಪಗಳಿಗೆ ಅಂತಹ ಹಾವುಗೆಗಳನ್ನು ತೋರಿಸುವುದು ಸಾಮಾನ್ಯ ಪದ್ಧತಿಯಾಗಿತ್ತು ಮತ್ತು ಆ ಮೂರ್ತಿಯು ಒತ್ತಾಗಿಲ್ಲದ ಕಾಲಂದುಗೆಗಳನ್ನು, ಎರಡನೇ ಬೆರಳುಗಳಿಗೆ ಕಾಲುಂಗುರಗಳನ್ನು ಧರಿಸಿರುವಂತೆ ತೋರಿಸಲಾಗಿದೆ. ಪ್ರಧಾನ ಮೂರ್ತಿಯ ಎರಡೂ ಪಕ್ಕಗಳಲ್ಲಿ ಚಿಕ್ಕ ಪ್ರಮಾಣದ ಉಪದೇವತೆಗಳು ಇದ್ದಿರಬೇಕೆಂದು ಲಭ್ಯವಿರುವ ಪಾದಗಳ ಗುರುತುಗಳಿಂದ ಹೇಳಬಹುದು. ಪಾದಗಳ ಕೆಳಗೆ,



ಇಕ್ಕೇರಿ, ಅಘೋರೇಶ್ವರ ದೇವಾಲಯ, ಪೀಠ



ಇಕ್ಕೇರಿ, ಅಘೋರೇಶ್ವರ ದೇವಾಲಯ, ಅಘೋರೇಶ್ವರ ಮೂರ್ತಿಯ ಕೆಳ ಭಾಗ



ಇಕ್ಕೇರಿ, ಅಘೋರೇಶ್ವರ ದೇವಾಲಯ, ಲಿಂಗ

ಪೀಠದ ಮುಂದಿನ ಮುಖದ ಮೇಲೆ ಒಂದು ಗೂಡನ್ನು ಕಡೆಯಲಾಗಿದ್ದು, ಅದರೊಳಗೆ ಕಾಲನ ಶಿರಸ್ಸನ್ನು ತೋರಿಸಲಾಗಿದೆ. ಅದರ ಉಗ್ರರೂಪವನ್ನು, ದೊಡ್ಡ ದುಂಡಾದ ಕಣ್ಣುಗಳು ಮತ್ತು ಕೋರೆ ಹಲ್ಲುಗಳಿಂದ ಗುರುತಿಸಬಹುದು.

ಈ ಸಂದರ್ಭದಲ್ಲಿ, ಪ್ರಧಾನ ಮೂರ್ತಿಯ ಪ್ರಮಾಣಗಳ ಕುರಿತು ಶಿವತತ್ವ ರತ್ನಾಕರ ಗ್ರಂಥದಲ್ಲಿ ನೀಡಲಾಗಿರುವ ವಿವರಣೆಗಳ ಆಧಾರಗಳಿಂದ ಊಹಿಸಬಹುದಾಗಿದೆ. ಆ ಪ್ರಕಾರ "ಪೀಠವು ಮೂರ್ತಿಯ ಅರ್ಧದಷ್ಟು ವಿಸ್ತಾರವಾಗಿರಬೇಕು. ನಾಳವು (ಪ್ರನಾಳ) ಪೀಠದ ಅರ್ಧದಷ್ಟಿದ್ದು, ನಾಳದಷ್ಟೇ ಅಳತೆ ಮೂರ್ತಿ ಕೀಲದ್ದಾಗಿರಬೇಕು. ನಾಳದ ಅರ್ಧದಷ್ಟು ಕೀಲದ ವಿಸ್ತಾರ ...."[25] ಈ ವಿವರಣೆಗಳ ಆಧಾರದಿಂದ ಮೂಲದ ಶಿಲ್ಪವು, ಪೀಠದ ಮೇಲಿನಿಂದ ಹತ್ತು ಅಡಿಗಳಿಗಿಂತಲೂ ಹೆಚ್ಚಾಗಿ ಎತ್ತರವಾಗಿದ್ದ ಭವ್ಯ ಮೂರ್ತಿಯಾಗಿದ್ದಿತೆಂದು ಊಹಿಸಬಹುದು.

ಅಲ್ಲದೆ, ಮೂಲದ ಎತ್ತರವಾದ ಆ ಅಘೋರೇಶ್ವರ ಮೂರ್ತಿಯನ್ನು, ಕೆಳಗಿನಿಂದ ಮೇಲಿನವರೆಗೆ ಸಂಪೂರ್ಣವಾಗಿ ದೀಪಗಳ ಪ್ರಕಾಶವು (ವಿದ್ಯುತ್ ದೀಪಗಳಿಲ್ಲದ ಆ ಕಾಲದಲ್ಲಿ) ವ್ಯಾಪಕವಾಗಿ ಪರಿಣಾಮಕಾರಿಯಾಗಿ ಪಸರಿಸುವಂತೆ ಮಾಡುವ ಉದ್ದೇಶದಿಂದ, ಗರ್ಭಗೃಹದಲ್ಲಿಯೇ ನಿಲ್ಲಿಸಲಾಗಿರುವ ಒಂದು ದೀಪಕಂಭದ ವ್ಯವಸ್ಥೆಯು ಕುತೂಹಲಕಾರಿಯಾಗಿದೆ. ಅಲ್ಲಿ ಬೇರೆ ಬೇರೆ ಎತ್ತರಗಳಲ್ಲಿ, ಐದು ಹಂತಗಳಲ್ಲಿ ದೀಪಗಳನ್ನು ಬೆಳಗಿಸುವ ಕ್ರಮವಾದ ಏರ್ಪಾಟಿರುವುದನ್ನು ಗಮನಿಸಬಹುದು. ಆದರೆ ಮೂಲದ ಅದೇ ಪೀಠದ ಮೇಲೆ ಮತ್ತೊಂದು ಚಿಕ್ಕ ಪ್ರಮಾಣದ ಪೀಠಸ್ಥ ಲಿಂಗವು ಈಗ ಕಾಣಬರುತ್ತಿದೆ.[26] ಈ ವಿಷಯವನ್ನು ದೃಢೀಕರಿಸುವ ಆಧಾರ ಸಾಹಿತ್ಯವನ್ನು ಈಗ ಪರಾಮರ್ಶಿಸೋಣ.

ಆಗ, ಎಂದರೆ ಕ್ರಿ.ಶ. 1637ರ ರಣದುಲ್ಲಾಖಾನನ ದಾಳಿಯ ಸಮಯದಲ್ಲಿ, ಇಕ್ಕೇರಿಯಲ್ಲಿ ವೀರಭದ್ರನಾಯಕನ ರಾಜ್ಯಭಾರದ ಕಾಲ (ಕ್ರಿ.ಶ. 1630 ರಿಂದ ಕ್ರಿ.ಶ. 1646ರ ವರೆಗೆ). ಆ ಅರಸ, ವೀರಭದ್ರನಾಯಕನು ಕ್ರಿ.ಶ. 1641 ರಲ್ಲಿ ಹೊರಡಿಸಿದ ತಾಮ್ರ ಶಾಸನವು, ಕುಪ್ಪಣ ಸೋಮಯಾಜಿ ಎಂಬ ಬ್ರಾಹ್ಮಣನೊಬ್ಬನಿಗೆ ಅರಸನಿಂದ ಕೊಡಲಾದ ಭೂದಾನ ಕ್ರಮವನ್ನು ವಿವರಿಸುತ್ತದೆ.[27] ಹಾಗೆ ಕೊಡಮಾಡಿದ ಭೂಮಿಯ ವಿವರಗಳನ್ನು ತಿಳಿಸುವ ಸಮಯದಲ್ಲಿಯೇ '.... ಅಘೋರೇಶ್ವರ ದೇವರ ಸಹಸ್ರ ಕಲಶಾಭಿಷೇಕದ ಸಮಯದಲ್ಲಿ ಧಾರೆನೆರದು ಗ(ದ್ದೆ) ಅಥವಾ ಗ(ದ್ಯಾಣ) 24 ....' ಎಂದು ದಾಖಲಿಸಿರುತ್ತದೆ.[28] ಎಂದರೆ, ರಣದುಲ್ಲಾಖಾನನ ದಾಳಿಯಲ್ಲಿ ನಾಶವಾಗಿದ್ದ ಮತ್ತು ಅಪವಿತ್ರತೆಗೆ ಗುರಿಯಾಗಿದ್ದ ಆ ಅಘೋರೇಶ್ವರ ದೇವರಿಗೆ, ನಾಯಕನು, '.... ಶಾಲಿವಾಹನ ಶಕೆ 1563ನೆಯ ವಿಕ್ರಮ ಸಂವತ್ಸರದ (ಕ್ರಿ.ಶ. 1641) ಆಶ್ವೀಜ ಮಾಸ'ದಲ್ಲಿ ಅಥವಾ ಆ ಸುಮಾರಿನಲ್ಲಿ ಧಾರ್ಮಿಕ ಶುದ್ಧೀಕರಣ ವಿಧಿವಿಧಾನಗಳ ಭಾಗವಾಗಿ, ಆ ಅಘೋರೇಶ್ವರ ದೇವರಿಗೆ ಶಾಂತಿಮಾಡಿಸಿ, ಸಹಸ್ರ ಕಲಶಾಭಿಷೇಕವನ್ನು ಮಾಡಿಸಿ, ಭೂದಾನ ಕಾರ್ಯಗಳನ್ನು ಮೇಲಿನಂತೆ ನೆರವೇರಿಸಿರಬೇಕು. ಪೂರ್ವಜರ ಅಭಿಮಾನಕ್ಕನುಗುಣವಾಗಿ ಜರುಗಿಸಿರಬೇಕು. ಬಹುಶಃ, ಆ ಸಮಯದಲ್ಲಿಯೇ ಹಾಳಾಗಿದ್ದ ದೇವಮಾನವ ಸ್ವರೂಪದ ಮೂರ್ತಿಯ ಸ್ಥಳದಲ್ಲಿ, ಚಿಕ್ಕ ಪ್ರಮಾಣದ ಪೀಠಸ್ಥ ಲಿಂಗವೊಂದನ್ನು, ಮೂಲದ ಬೃಹದಾಕಾರದ ಪೀಠದ ಮೇಲೆಯೇ ಸ್ಥಾಪಿಸಿ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿರಬೇಕು. ಅರಸ ವೀರಭದ್ರನಾಯಕನು ಹಾಗೆ ಮಾಡುವುದಕ್ಕೆ ಮೊದಲೇ, ಎಂದರೆ ರಣದುಲ್ಲಾಖಾನನಿಂದಾದ ಪರಾಭವದಿಂದ ಚೇತರಿಸಿಕೊಂಡು, ರಾಜನೀತಿ ಚತುರತೆ ಮತ್ತು ಧೈರ್ಯ ಸ್ಥೈರ್ಯಗಳಿಂದ ಆ ಮುಸಲ್ಮಾನ ದಂಡನಾಯಕನನ್ನೆದುರಿಸಿ ತನ್ನ ಅಧಿಕಾರವನ್ನು ಪುನಃ ಭದ್ರಪಡಿಸಿಕೊಂಡು '.... ನಿಶ್ಚಿಂತೆಯಿಂದ ಶಿವಾರ್ಚನಾದಿ ಸತ್ಕೃತ್ಯ ನಿತ್ಯ ನಿಯಮಂಗಳಂ ಲೋಪಮಾಗದಂತಾಚರಿಸುತ್ತಂ ನಡೆಸುತ್ತಂ' ಇದ್ದನು.[29] ಆದರೆ ಆಗ ವೇಣುಪುರ ಅಥವಾ ಬಿದನೂರು ಅವನ ರಾಜಧಾನಿಯಾಗಿತ್ತು.

ಇದೇ ವಿಷಯವನ್ನು ದೃಢೀಕರಿಸುವಲ್ಲಿ, ಬ್ರಿಟಿಷ್ ಅಧಿಕಾರಿ ಕರ್ನಲ್ ಮೆಕೆಂಝಿಯು ದಾಖಲಿಸಿರುವ 'ಸಾಗರ ಕೈಫಿಯತು' ಸಹಾಯವಾಗುತ್ತದೆ. ಅಲ್ಲಿ '..... ಯಿಕ್ಕೇರಿ ವಳಗೆ ಅಘೋರವೀರಭದ್ರ ದೇವರು ವಿಗ್ರಹಾ ಮಾಳಿಗೆ ಮೇಲೆ ಹಲಗೆ ತೆಗೆದುಕೊಂಡು ಹೋಗಿ ಗಂಗೆ ಕೆರೆಯಲ್ಲು ಬಿದ್ದದೆ .... ಯಂಬುದಾಗಿ ಹೇಳುತ್ತಾರೆ. ಅನಂತರದಲ್ಲಿ ಯೀ ಗುಡಿಯನ್ನು ಹಾಳು ಬಿದ್ದು ಯಿರಬಾರದುಯಂದು ...... ಅನೇಕ ಶಾಂತಿಗಳು ಕೊಡಿಸಿ ಮತ್ತು ವೆಂಕಟಪ್ಪನಾಯಕರು (ವೀರಭದ್ರ ನಾಯಕನೆಂದು ಓದಿಕೊಳ್ಳಬೇಕು) ಅಘೋರೇಶ್ವರಯೆಂಬುದಾಗಿ ಲಿಂಗ ಪ್ರತಿಷ್ಟೆ ಮಾಡಿದರು ....'[30] ಇಲ್ಲಿ 'ಲಿಂಗ' ಎಂಬ ಪದ ಪ್ರಯೋಗವನ್ನು ಗಮನಿಸಬೇಕಾಗುತ್ತದೆ. ಇಲ್ಲಿ ಮೊದಲಿನ ವಿಗ್ರಹವು (ಬಹುಶಃ ನಾಶವಾಗಿ) ಕೆರೆಯಲ್ಲಿ ಬಿದ್ದಿದೆ, ಗುಡಿಯು ಹಾಳಾಗಿದೆ ಮತ್ತು ಹಾಗಾಗಿರಬಾರದೆಂದು, ಅರಸನು ಅನೇಕ ಶಾಂತಿಗಳನ್ನು ಮಾಡಿಸಿ 'ಲಿಂಗ'ವನ್ನು ಪ್ರತಿಷ್ಠೆಮಾಡಿಸಿದನು ಎಂಬ ವಿವರಗಳನ್ನು ವಿಶೇಷವಾಗಿ ಗಮನಿಸಬೇಕು. ಅದೇ ದಾಖಲೆಯು ಮುಂದುವರೆದು, '.... ಯೀತನು (ವೀರಭದ್ರನಾಯಕನು) ಅಘೋರೇಶ್ವರ ದೇವಸ್ಥಾನವನ್ನು ಕಟ್ಟಿಸಿ, ಕೆಲವು ಕೆಲಸವೆಲ್ಲಾ ತೀರಿಸಿ ಕಲಶಗಳಯಿಟ್ಟನು' ಎಂದು ತಿಳಿಸುತ್ತದೆ.[31] ಎಂದರೆ, ರಣದುಲ್ಲಾಖಾನನ ದಾಳಿಯ ಸಮಯದಲ್ಲಿ ಹಾಳಾಗಿದ್ದ ಆ ದೇವಾಲಯವನ್ನು ಪುನಃ ಕಟ್ಟಿಸಿ, ಜೀರ್ಣೋದ್ಧಾರ ಮಾಡಿಸಿ, ಹಲವಾರು ಇತರ ಕೆಲಸಗಳನ್ನು ನೆರವೇರಿಸಿ, ಕಲಶಗಳನ್ನಿಡಿಸಿ, ವಿಧಿವತ್ತಾದ ಪೂಜಾಕಾರ್ಯಗಳನ್ನು ಪುನರುಜ್ಜೀವನಗೊಳಿಸಿದನೆಂದು ಹೇಳಬೇಕಾಗುತ್ತದೆ. ಈಗಾಗಲೇ ತಿಳಿಸಿರುವಂತೆ, ಮೆಕೆಂಝಿಯ ದಾಖಲೆಗಳು, ಸುಮಾರು 250 ವರ್ಷಗಳು ಗತಿಸಿದ ನಂತರ, ಮತ್ತು ಮೌಖಿಕ ವದಂತಿಗಳನ್ನಾಧರಿಸಿ ಬರೆದವುಗಳಾಗಿವೆ. ಹಾಗಾಗಿ ರಾಜನ ಹೆಸರಿನ ಬಗ್ಗೆ ವ್ಯತ್ಯಾಸವಿದ್ದರೂ, ಮೂಲ ವಿಷಯವು ತಾಳೆಯಾಗುವದರೊಂದಿಗೆ, ಮೇಲಿನ ವಿಷಯವು ಖಚಿತವಾಗಿ ವೇದ್ಯವಾಗುತ್ತದೆ. ಅದು ಇನ್ನೂ ಮುಂದುವರಿದು, '.... ಯೀ ಲಿಂಗದ (ಅಘೋರೇಶ್ವರ ಲಿಂಗ/ಮಂದಿರ) ಯೆದುರಿಗೆ ಬಿಳಿಕಲ್ಲುಯಿಂದಾ ಬಸವೇಶ್ವರನ ಮಾಡಿಯಿಟ್ಟು ಯಿದ್ದಾನೆ. ಯೀಶ್ವರನ ಯಡದ ಭಾಗಕ್ಕೆ ಪಾರ್ವತಿ ಅಮ್ಮಾನವರ ಗುಡಿಯನ್ನು ಕಟ್ಟಿಸಿ ಪ್ರತಿಷ್ಟೆಮಾಡಿ ಯಿದ್ದಾರೆ

....' ಎಂದು ವಿವರಿಸುತ್ತದೆ.[32] ಬಹುಶಃ ಆ ಕಾರಣದಿಂದಾಗಿ, ಅವುಗಳಲ್ಲಿ ಹೊಯಿಸಳ, ದ್ರಾವಿಡ ವಾಸ್ತು ವೈಶಿಷ್ಟ್ಯಗಳಲ್ಲದೆ (architectural features), ಹಿಂದೂ–ಮುಸಲ್ಮಾನ (Indo-Saracenic) ಸಂಪ್ರದಾಯದ ಹಲವಾರು ವೈಶಿಷ್ಟ್ಯಗಳನ್ನು ಗುರುತಿಸಬಹುದಾಗಿದೆ.[33] ಅವುಗಳಲ್ಲಿ ಮುಖ್ಯವಾಗಿ ಇಸ್ಲಾಂ ವಾಸ್ತುಶೈಲಿಯಲ್ಲಿ ಕಾಣಬರುವ ಕಮಾನುಗಳನ್ನು ಈ ಹಿಂದೂ ದೇವ ಮಂದಿರಗಳಲ್ಲಿ ಸೂಕ್ತವಾಗಿ ಅಳವಡಿಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ.[34] ಬಹುಶಃ, ಆ ಸಮಯಕ್ಕಾಗಲೇ ಆ ವೈಶಿಷ್ಟ್ಯಗಳು ಜನಾಕರ್ಷಣೆಯನ್ನು ಪಡೆದಿದ್ದುದರ ದ್ಯೋತಕ ಮತ್ತು ಪ್ರಭಾವದಿಂದ ಹಾಗಾಗಿರಬೇಕೆಂದು ತರ್ಕಿಸಬಹುದು.

ಈಗ ಶಾಸನಗಳಲ್ಲಿ ಲಭ್ಯವಿರುವ ವಿವರಗಳನ್ನು ವಿವೇಚಿಸೋಣ. ಇಕ್ಕೇರಿಯ ಅಘೋರೇಶ್ವರ ದೇವರ ಹೆಸರು ನಾಲ್ಕು ತಾಮ್ರಪಟ ಶಾಸನಗಳಲ್ಲಿ ಮತ್ತು ಕಂಚಿನ ಪ್ರಭಾವಳಿಯ ಹಲಗೆಯ ಮೇಲೆ ಉಲ್ಲೇಖವಾಗಿರುತ್ತದೆ.[35] ಇಂತಹ ಬಹು ಪ್ರಮುಖ, ವಿನೂತನ ಮೂರ್ತಿಯನ್ನೊಳಗೊಂಡ, ರಾಜ ಪೋಷಿತವಾಗಿದ್ದ ದೇವಾಲಯಕ್ಕೆ, ಆರಂಭದಲ್ಲಿ ಹಲವಾದರೂ ದಾನದತ್ತಿಗಳು ಕೊಡಲ್ಪಟ್ಟು ಶಿಲಾ ಶಾಸನಗಳಲ್ಲಿ ನೇರವಾಗಿ ದಾಖಲೆಗೊಂಡಿರಬೇಕು. ಆದರೆ, ಅವುಗಳು ಮುಸಲ್ಮಾನರ ದಾಳಿಗಳ ಸಂದರ್ಭಗಳಲ್ಲಿ ನಾಶವಾಗಿಹೋಗಿರುವ ಸಾಧ್ಯತೆಯಿರುವುದರಿಂದ, ಈಗ ಒಂದಾದರೂ ಲಭ್ಯವಿರುವುದಿಲ್ಲ. ಈಗ ದೊರಕಿರುವ ಐದು ದಾಖಲೆಗಳು ತಾಮ್ರಪತ್ರ ಶಾಸನಗಳಾಗಿದ್ದು, ಅವು ಕೆಲವು ವ್ಯಕ್ತಿಗಳ ವೈಯಕ್ತಿಕ ಅಧೀನದಲ್ಲಿದ್ದುದರಿಂದ ಉಳಿದು ಬಂದವುಗಳಾಗಿವೆ. ಇವುಗಳ ಕಾಲವ್ಯಾಪ್ತಿಯು ಕ್ರಿ.ಶ. 1641 ರಿಂದ 1702ರ ವರೆಗೆ ಇರುತ್ತದೆ. ಇವುಗಳಲ್ಲಿ ಮೊದಲನೆಯದು, ಈಗಾಗಲೇ ವಿವರಿಸಿರುವಂತೆ, ಅಘೋರೇಶ್ವರ ದೇವರಿಗೆ ಸಹಸ್ರ ಕಲಶಾಭಿಷೇಕದ ಸಮಯದಲ್ಲಿ ಸುಮಾರು ಕ್ರಿ.ಶ. 1641ರಲ್ಲಿ ಅರಸ ವೀರಭದ್ರನಾಯಕನಿಂದ ಕೊಡಲಾದ ದಾನಗಳ ಸಂದರ್ಭವನ್ನು ತಿಳಿಸುತ್ತದೆ. ಇತರೆ ಮೂರು ತಾಮ್ರಪಟ ಶಾಸನಗಳು, ಅರಸರಾದ ಸೋಮಶೇಖರನಾಯಕ (ಕ್ರಿ.ಶ. 1666) ಮತ್ತು ಬಸವಪ್ಪನಾಯಕ (ಕ್ರಿ.ಶ. 1702)ರ ಆಳ್ವಿಕೆಗಳಿಗೆ ಸಂಬಂಧಿಸಿದವುಗಳಾಗಿದ್ದು, ಇತರೆ ದಾನಗಳ ವಿವರಗಳನ್ನು ಉಲ್ಲೇಖಿಸುವಾಗ 'ಅಘೋರೇಶ್ವರ ಹೋಬಳಿ' ಮತ್ತು 'ಅಘೋರೇಶ್ವರ ಸ್ವಾಸ್ಥೆಯಿಂದ' ಎಂದು ಮಾತ್ರ ತಿಳಿಸುತ್ತವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಅರಸ ವೀರಭದ್ರನಾಯಕನು, ರಣದುಲ್ಲಾಖಾನನ ದಾಳಿಯಲ್ಲಿ ಸೋಲನ್ನನುಭವಿಸಿದ ನಂತರ ತನ್ನ ರಾಜಧಾನಿಯನ್ನು ಇಕ್ಕೇರಿಯಿಂದ ವೇಣುಪುರ ಅಥವಾ ಬಿದನೂರಿಗೆ ಕ್ರಿ.ಶ. 1639ರಲ್ಲಿ ಸ್ಥಳಾಂತರಿಸಿದ್ದನಷ್ಟೆ.[36] ಆನಂತರ, ಆತನು ತನ್ನ ಪೂರ್ವಜರ ಅಭಿಮಾನ, ಧರ್ಮನಿಷ್ಠೆ ಮತ್ತು ಭಾವನೆಗಳಿಗೆ ಸ್ಪಂದಿಸಿ, ಇಕ್ಕೇರಿಯ ಅಘೋರೇಶ್ವರನ ದೇವಾಲಯದ ಜೀರ್ಣೋದ್ಧಾರ ಮಾಡಿಸಿ, ಮೂಲದ ಪೀಠದ ಮೇಲೆ ನಾಶವಾಗಿದ್ದ ಮೂರ್ತಿಗೆ ಬದಲಾಗಿ ಮತ್ತೊಂದು ಲಿಂಗ ರೂಪದ ವಿಗ್ರಹವನ್ನು ಸುಲಭವಾಗಿ ಸ್ಥಾಪನೆ ಮಾಡಿಸಿ, ಪೂಜಾಕಾರ್ಯ ಮುಂತಾದ ಧಾರ್ಮಿಕ ಆಚರಣೆಗಳಿಗೆ ಏರ್ಪಾಡು ಮಾಡಿದನು. ಆದರೂ, ಇಕ್ಕೇರಿಯಾಗಲೀ, ಅಘೋರೇಶ್ವರ ದೇವಸ್ಥಾನವಾಗಲೀ, ಮೊದಲಿನ ಪ್ರಾಮುಖ್ಯತೆಯನ್ನು, ಪ್ರಖ್ಯಾತಿಯನ್ನು ಪಡೆಯಲು ಸಾಧ್ಯವಾಗಲಿಲ್ಲ. ಆ ಕಾರಣಗಳಿಂದಾಗಿ ಅರಸ ಸೋಮಶೇಖರನ ಕ್ರಿ.ಶ. 1666ರ ತಾಮ್ರ ಶಾಸನದಲ್ಲಿ 'ಅಘೋರೇಶ್ವರ ಹೋಬಳಿ' ಎಂದು ಇಕ್ಕೇರಿಯು ಸಂಬೋಧಿತವಾಗಿರುವುದು ಗಮನಾರ್ಹವಾಗಿದೆ. ಎಂದರೆ, ಆ ಸಮಯಕ್ಕೆ ಇಕ್ಕೇರಿಯು ಪ್ರಾಮುಖ್ಯವಾದ ಊರಾಗಿರದೆ ಹೋಬಳಿಯೆಂದು ಕರೆಯಲ್ಪಡುತ್ತಿತ್ತು. ಆನಂತರದ, ಕ್ರಿ.ಶ. 1702ರ ಮೂರು ತಾಮ್ರ ಶಾಸನಗಳಲ್ಲಿ 'ಅಘೋರೇಶ್ವರ ಸ್ವಾಸ್ಥೆ' ಎಂದು ಮಾತ್ರ, ಸಂದರ್ಭಕ್ಕನುಗುಣವಾಗಿ, ದಾನಮಾಡಿದ ಇತರ ವಿವರಣೆಗಳೊಂದಿಗೆ ಉಲ್ಲೇಖವಾಗಿದೆ. ಇನ್ನು ಕೊನೆಯ ಶಾಸನವು ಕಂಚಿನ ಪ್ರಭಾವಳಿಯ ಮೇಲೆ ಕಾಣಬರುತ್ತಿದ್ದು,[37] ಅದು ಬಹುಶಃ ಮೂಲದ ವಿಗ್ರಹದ ಜೊತೆಯಲ್ಲಿಯೇ ಅಸ್ತಿತ್ವಕ್ಕೆ ಬಂದ ಕಂಚಿನ ಉತ್ಸವಮೂರ್ತಿಯ ಕಾಲದ್ದಾಗಿರಬೇಕೆಂದು ತರ್ಕಿಸಬಹುದಾಗಿದೆ. ಅದು ಶಾಸನದ ಕಾಲವನ್ನು ತಿಳಿಸುತ್ತಾ ಇಲ್ಲ; 'ಅಘೋರೇಶ್ವರನ ಪ್ರಭಾವಳಿ' ಎಂದು ಮಾತ್ರ ಉಲ್ಲೇಖಿಸುತ್ತಾ ಮೂರ್ತಿಯ ಅಳತೆ ಮುಂತಾದ ವಿವರಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ. ಲಿಪಿಶಾಸ್ತ್ರಕ್ಕನುಗುಣವಾಗಿ, ಅದರ ಕಾಲವನ್ನು ಇನ್ನೂ ಅಧ್ಯಯನಮಾಡಬೇಕಾಗಿದೆ. ಆ ಇಕ್ಕೇರಿಯು ಕ್ರಿ.ಶ. 1763ರಲ್ಲಿ ಜರುಗಿದ ಮೈಸೂರಿನ ಹೈದರ್ ಆಲಿಯ ಸೈನಿಕಾಚರಣೆಯ ಕಾಲದಲ್ಲಿ, ಬಿದನೂರು ಸಹಿತವಾಗಿ, ಬಹಳವಾಗಿ ನಾಶವಾಗಿ ಈಗಿನ ದುಸ್ಥಿತಿಗೆ ಬಂದಿರಬೇಕು. ಅದರೊಂದಿಗೆ, ಕೆಳದಿ ವಂಶದ ಅರಸರ ರಾಜ್ಯಭಾರವೂ ಕೊನೆಗೊಂಡಿತೆಂಬುದು ಚಾರಿತ್ರಿಕ ವಿಷಯ. ಈಗ ಆ ಇಕ್ಕೇರಿಯನ್ನು ಅರಳೆಕೊಪ್ಪ ಎಂಬ ಹತ್ತಿರದ ಇನ್ನೊಂದು ಊರಿಗೆ ಜೋಡಿಸಲಾಗಿರುವ ಹೋಬಳಿ ಗ್ರಾಮವಾಗಿ (hamlet) ಸರ್ಕಾರಿ ದಾಖಲೆಗಳಲ್ಲಿ ನಮೂದಿಸಲಾಗಿದೆ.

ಹೈದರನ ಆ ದಾಳಿಯ ಸಮಯದಲ್ಲಿಯೇ, ವೀರಭದ್ರ ಅರಸನಿಂದ ಕ್ರಿ.ಶ. 1641ರಲ್ಲಿ ಸ್ಥಾಪಿತವಾಗಿದ್ದ ಆ ಶಾಸನಪ್ರೋಕ್ತ ಶಿವಲಿಂಗವೂ ಪುನಃ ಎರಡನೇ ಬಾರಿಗೆ ನಾಶವಾಗಿರಬೇಕು. ಆನಂತರ, ಸ್ಥಳೀಯ ಭಕ್ತರು ಮತ್ತು ಧರ್ಮಗುರುಗಳು ಸೇರಿ, ಈಗ ಕಾಣಬರುವ ಲಿಂಗವನ್ನು, ಪೂರ್ವದ ಬೃಹತ್ ಪೀಠದ ಮೇಲೆಯೇ ಮತ್ತೊಂದು ಚಿಕ್ಕ ಪೀಠಸ್ಥ ಲಿಂಗವನ್ನು ಸ್ಥಾಪಿಸಿ, ಪೂಜಾ ಕೈಂಕರ್ಯಗಳನ್ನು ಪುನರುಜ್ಜೀವನಗೊಳಿಸಿರಬೇಕು. ಈಗ ಕಾಣಬರುವ ಆ ಚಿಕ್ಕ ಪೀಠಸ್ಥ ಲಿಂಗವನ್ನು ನೋಡಿದರೆ ಆ ವಿಷಯವು ಖಚಿತವಾಗದೆ ಇರದು (ಚಿತ್ರ 29). ಈಗ ಕಾಣಬರುವಂತೆ, ಆ ಚಿಕ್ಕ ಪೀಠದ ಕೆಳಗಿನ ಮತ್ತು ಮಧ್ಯದ ಭಾಗಗಳು, ಅಲಂಕೃತ ಚೌಕಾಕಾರದಲ್ಲಿದ್ದು, ಪೂರ್ವದ ಒಂದು ಶಿಲ್ಪಶೈಲಿಯನ್ನು ನಿರೂಪಿಸುತ್ತಿದ್ದರೆ, ಅವುಗಳ ಮೇಲಿನ ಭಾಗವು ಸರಳವಾದ ಆಧುನಿಕ ನಿರ್ಮಾಣವೆಂದು ಖಚಿತವಾಗಿ ಹೇಳಬಹುದು. ಅದಕ್ಕೂ ಮೇಲಿನ ಭಾಗವು ಗುಂಡಾಗಿದ್ದು ಮತ್ತೊಂದು ಶಿಲ್ಪಶೈಲಿಯನ್ನು ಪ್ರತಿನಿಧಿಸುತ್ತದೆ. ಅದರ ಮಧ್ಯದಲ್ಲಿ ಲಿಂಗ (ಬಾಣ ಭಾಗ) ಇದೆ. ಒಟ್ಟಿನಲ್ಲಿ, ಆ ಚಿಕ್ಕ ಪೀಠಸ್ಥ ಲಿಂಗವು ಬೇರೆ ಬೇರೆ ಕಾಲದ ಮೂರು ಅಥವಾ ನಾಲ್ಕು ಶಿಲ್ಪ ಶೈಲಿಗಳನ್ನು ಪ್ರತಿಬಿಂಬಿಸುವ, ಎಲ್ಲಿಂದಲೋ ತಂದ ಭಾಗಗಳನ್ನು ಅಡ್ಡದಿಡ್ಡಿಯಾಗಿ, ಅವಸರದಲ್ಲಿ ಜೋಡಿಸಲ್ಪಟ್ಟು

ಸ್ಥಾಪಿತಗೊಂಡಿರುವಂತಹುದಾಗಿದೆ. ಅಲ್ಲದೆ ಆ ಭಾಗಗಳನ್ನು ಜೋಡಿಸುವ ಸಮಯದಲ್ಲಿ ಬಳಸಲಾಗಿರುವ ಅಷ್ಟಬಂಧನ ಸಾಮಗ್ರಿಯು ಈಗಲೂ ವಿಕಾರವಾಗಿ ಕಾಣಬರುತ್ತಿದ್ದು, ಆ ಲಿಂಗದ ಶೋಭೆಯನ್ನು ಕುಂಠಿತಗೊಳಿಸಿದೆ ಎಂದು ಹೇಳಬಹುದು.

ಮೇಲೆ ವಿವರಿಸಿದ ಅಪರೂಪದ ಅಘೋರೇಶ್ವರ ಮೂರ್ತಿಯ ಆರಾಧನೆಗೆ, ಮೂಲಸ್ಥಾಪಕನಾದ ಹಿರಿಯ ಸಂಕಣ್ಣನಾಯಕನನ್ನು ಪ್ರೇರೇಪಿಸಿರಬಹುದಾದ ಕಾರಣಗಳನ್ನು ಇಲ್ಲಿ ತರ್ಕಿಸಿ ಹೇಳಬಹುದೇನೋ. ಮೊದಲನೇ ಕಾರಣವಾಗಿ, ಆತನು ಮಹಾರಾಷ್ಟ್ರ ಪ್ರಾಂತದ ಪೈಠಣವೆಂಬ ಊರಿನ ದೇವಾಲಯದಲ್ಲಿ ನೋಡಿದ ಭವ್ಯವಾದ ಮತ್ತು ಆಕರ್ಷಕವಾದ ಅಘೋರಮೂರ್ತಿ. ನಂತರ, ಅಘೋರಮೂರ್ತಿಯ ಆರಾಧನೆಯು ವಿಜಯಲಕ್ಷ್ಮಿ, ಐಶ್ವರ್ಯಲಕ್ಷ್ಮಿಯರ ಆಕಾಂಕ್ಷಿಗಳಾದ ಆಳರಸರಿಗೆ ಅತ್ಯವಶ್ಯಕವೆಂಬ ಧಾರ್ಮಿಕ ನಂಬಿಕೆ, ಶ್ರದ್ಧೆ ಮತ್ತು ವೈದಿಕ ಸಾಹಿತ್ಯ ಗ್ರಂಥಗಳಲ್ಲಿ ಕಾಣಬರುವ ಪ್ರತಿಪಾದನೆಗಳಿಂದಲೂ ಪ್ರೇರೇಪಿತನಾಗಿರಬೇಕು. ಹಾಗೂ 'ಶಿವತತ್ವ ರತ್ನಾಕರ' ಗ್ರಂಥದ ಆರಂಭದಲ್ಲಿಯೇ, ಗ್ರಂಥಕರ್ತನಾದ ಬಸವರಾಜರಸನು ತಮ್ಮ ಗುರು ಅಥವಾ ಆಚಾರ್ಯ ಪರಂಪರೆಯನ್ನು ವಿವರಿಸುವಾಗ ಉಜ್ಜಯನಿಯ ದಾರ್ಮಿಕ ಒಡೆಯರಾದ ಮರುಳಸಿದ್ಧೇಶ್ವರನೆಂಬ, ಬಹುಶಃ ಪ್ರಸ್ತುತದ ಗುರುವಿನ ಹೆಸರನ್ನು ಹೇಳಿ, ಅವರ ಪರಂಪರೆಯನ್ನೂ ಹೇಳಿರುತ್ತಾನೆ.[38] ಈ ಉಜ್ಜಯನಿಯು ಈಗಿನ ಬಳ್ಳಾರಿ ಜಿಲ್ಲೆಯಲ್ಲಿರುವ, ವೀರಶೈವರ ಪಂಚ ಆಚಾರ್ಯ ಪೀಠಾಧಿಪತಿಗಳ ಕೇಂದ್ರ ಕಾರ್ಯಸ್ಥಾನಗಳಲ್ಲೊಂದು. ಈ ಗ್ರಂಥದಲ್ಲಿ ಆ ಪೀಠಾಚಾರ್ಯರ ಗುರುಪರಂಪರೆಯನ್ನು ಮಾತ್ರ ಮತ್ತು ಪ್ರಮುಖವಾಗಿ ವಿವರಿಸಲಾಗಿದೆ. ಎಂದರೆ, ಇತರೆ ನಾಲ್ಕು ಪೀಠಾಧಿಪತಿಗಳ ಆಚಾರ್ಯ ಪರಂಪರೆಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.[39] ಅದೇ ಸಂದರ್ಭದಲ್ಲಿ, ಆ ಉಜ್ಜಯನಿಯ ಪೀಠದ ಆಚಾರ್ಯರಾದ ಮರುಳಸಿದ್ಧರು, ಶಿವನ ಪಂಚಮುಖಗಳಲ್ಲೊಂದಾದ ಅಘೋರಮುಖ ಸಂಭೂತರೆಂದು ಹೇಳಲಾಗಿದೆ. ಈ ವಿಷಯವನ್ನು ಅವರ ಇತರ ಧಾರ್ಮಿಕ ಸಾಹಿತ್ಯದಲ್ಲಿಯೂ ಕಾಣಬಹುದಾಗಿದೆ. ಈ ಎಲ್ಲಾ ವಿವರಗಳಿಂದ ತಿಳಿದುಬರುವ ಅಂಶವೆಂದರೆ, ಕೆಳದಿ–ಇಕ್ಕೇರಿ ಅರಸರಿಗೆ ಉಜ್ಜಯನಿಯ ಆಚಾರ್ಯರು ವಂಶದ ಅಥವಾ ಮನೆತನದ ಗುರುಗಳಾಗಿದ್ದರು. ಅವರಾದರೋ ಶಿವನ ಪಂಚಮುಖಗಳಲ್ಲೊಂದಾದ, ದಕ್ಷಿಣ ದಿಕ್ಕಿನ ಅಘೋರಮುಖ ಸಂಭೂತರೆಂದು ನಂಬಿಕೆ. ಆ ಕಾರಣದಿಂದಾಗಿಯೂ, ಕೆಳದಿ–ಇಕ್ಕೇರಿ ಅರಸರಿಗೆ ಅಘೋರೇಶ್ವರನ ಆರಾಧನೆಯಲ್ಲಿ ಹೆಚ್ಚಿನ ಒಲವು, ಆಸಕ್ತಿ, ನಿಷ್ಠೆಗಳನ್ನು ತೋರಿಸಲು ಪ್ರೇರಣೆಯುಂಟಾಗಿರಬೇಕೆಂದು ತರ್ಕಿಸಬಹುದಾಗಿದೆ. ತತ್ಫಲವಾಗಿಯೇ, ಇಕ್ಕೇರಿಯಲ್ಲಿ ಅಘೋರೇಶ್ವರ ಮೂರ್ತಿಯ ಆರಾಧನೆಯು ಅಸ್ತಿತ್ವಕ್ಕೆ ಬಂದಿತೆಂದು ತಿಳಿಯಬೇಕಾಗುತ್ತದೆ.

ಇದೇ ಸಂದರ್ಭದಲ್ಲಿ, ಪ್ರಾಚೀನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಅಘೋರ ಶಿಲಾಮೂರ್ತಿಗಳು, ಅವುಗಳ ಆರಾಧನೆ, ಮುಂತಾದ ವಿವರಗಳನ್ನು ಸಂಕ್ಷಿಪ್ತವಾಗಿ ತಿಳಿಯುವುದು ಅಪ್ರಸ್ತುತವಾಗದು. ಈ ವಿವರಗಳನ್ನು ಗೋಪಿನಾಥರಾವ್ ಅವರ ಇಂಗ್ಲೀಷು ಗ್ರಂಥಗಳಿಂದ ಸಂಗ್ರಹಿಸಲಾಗಿದೆ.[40]

(ಅ) ಮೊದಲನೆಯದಾಗಿ, ಕಾರಣಾಗಮದಲ್ಲಿ ಕಾಣಬರುವ ವಿವರಗಳು. ಈ ಗ್ರಂಥದಲ್ಲಿ ಅಘೋರಮೂರ್ತಿಯನ್ನು ಶಿವನ ಉಗ್ರಸ್ವರೂಪಗಳಲ್ಲೊಂದೆಂದು ಪರಿಗಣಿಸಿ ವಿವರಣೆಗಳನ್ನೊದಗಿಸಲಾಗಿದೆಯಾದರೂ, ಆ ಮೂರ್ತಿಯನ್ನು ಅಘೋರಾಸ್ತ್ರಮೂರ್ತಿಯೆಂದು ಕರೆಯಲಾಗಿದೆ. ಅಲ್ಲಿ ನಿರ್ದೇಶಿಸಿರುವ ಪ್ರಕಾರ, ಅದಕ್ಕೆ ಎಂಟು ಕೈಗಳಿರಬೇಕು; ಉದ್ದನೆಯ ದಂಡದಿಂದ ಕೂಡಿದ ತ್ರಿಶೂಲವನ್ನು ದೇಹಕ್ಕೆ ಅಡ್ಡವಾಗಿ ಆಕ್ರಮಣಕಾರಿ ಮುದ್ರೆಯಲ್ಲಿ, ಎಡದ ಮತ್ತು ಬಲದ ಎರಡು ಮುಂದಿನ ಕೈಗಳಲ್ಲಿ ಹಿಡಿದಿರುವಂತಿರಬೇಕು; ಉಳಿದ ಕೈಗಳಲ್ಲಿ ವೇತಾಳ, ಖಡ್ಗ, ಡಮರು, ಕಪಾಲ, ಘಂಟಾ ಮತ್ತು ಪಾಶಗಳಿರಬೇಕು ಮತ್ತು ಆ ಮೂರ್ತಿಗೆ ಮೂರು ಕಣ್ಣುಗಳು, ಕೋರೆಹಲ್ಲುಗಳು, ಕೆದರಿದ ಕೂದಲು, ಉಗ್ರಸ್ವರೂಪ, ಕೆಂಪು ಹೂಗಳಹಾರ, ರುಂಡಮಾಲೆ, ಖಡ್ಗಮಾಲೆ, ವೃಶ್ಚಿಕ ಮಾಲೆ ಮುಂತಾದ ಲಕ್ಷಣಗಳನ್ನು ನಿರ್ದೇಶಿಸಲಾಗಿದೆ.[41] ಈ ಮೂರ್ತಿಯ ಆರಾಧಕನಿಗೆ ವಿಜಯಲಕ್ಷ್ಮಿ, ಐಶ್ವರ್ಯಲಕ್ಷ್ಮಿಗಳು ಲಭಿಸುವುದಲ್ಲದೆ, ಬ್ರಹ್ಮಹತ್ಯಾ ಮುಂತಾದ ಪಾಪದೋಷಗಳ ವಿನಾಶವೆಂದೂ ಹೇಳಲಾಗಿದೆ.

(ಆ) ಅದೇ ರೀತಿ ಲಿಂಗ ಪುರಾಣದಲ್ಲಿಯೂ, ಅಘೋರಮೂರ್ತಿಗೆ ಎಂಟು ಕೈಗಳಿರಬೇಕೆಂದು ಹೇಳಲಾಗಿದೆ. ಅವುಗಳಲ್ಲಿ ಶೂಲ, ಡಮರು, ಪಾಶ, ಕಪಾಲ, ದಂಡ, ಧನಸ್ಸು, ಬಾಣ ಮತ್ತು ಖಡ್ಗಗಳನ್ನು ಹಿಡಿದಂತಿರಬೇಕೆಂದು ತಿಳಿಸಲಾಗಿದೆ. ಆ ಮೂರ್ತಿಯು ಬೆತ್ತಲೆಯಾಗಿ ಅಥವಾ ಆನೆಯ/ಸಿಂಹದ ಚರ್ಮವನ್ನು ಧರಿಸಿರಬೇಕು ಮತ್ತು ಸರ್ಪಹಾರ, ವೃಶ್ಚಿಕಹಾರ ಮತ್ತಿತರ ಆಭರಣಗಳಿಂದ ಅಲಂಕೃತಗೊಂಡಿರಬೇಕೆಂದು ಹೇಳಿದೆ; ಅಲ್ಲದೆ ಕೋರೆ ಹಲ್ಲುಗನ್ನು ಹೊಂದಿದ್ದು, ಉಗ್ರ ರೂಪವನ್ನು ಬಿಂಬಿಸುತ್ತಿರಬೇಕು; ಮತ್ತೊಂದು ಸರ್ಪವನ್ನು ಕೇಶಬಂಧನವನ್ನಾಗಿ ಉಪಯೋಗಿಸಿರಬೇಕು; ಭೂತ ಪಿಶಾಚಿಗಳು ಅದನ್ನು ಸುತ್ತುವರಿದಿರಬೇಕು ಎಂದು ಮುಂತಾಗಿ ವರ್ಣಿಸಲಾಗಿದೆ.[42] ಮೇಲಿನವುಗಳಲ್ಲದೆ ದಶಭುಜಗಳ ಅಘೋರಮೂರ್ತಿಯ ಸಂಕ್ಷಿಪ್ತ ವರ್ಣನೆಯನ್ನು ಕೊಡಲಾಗಿದೆ.[43]

ಈ ಅಘೋರೇಶ್ವರಮೂರ್ತಿಯ ಆರಾಧನೆಯು ಹೆಚ್ಚು ವ್ಯಾಪಕವಾಗಿಯಲ್ಲದಿದ್ದರೂ, ಕೆಲ ಪ್ರಮಾಣದಲ್ಲಿ ತಮಿಳುನಾಡಿನಲ್ಲಿ ಆಚರಣೆಯಲ್ಲಿದ್ದುದಾಗಿ ತಿಳಿದುಬರುತ್ತದೆ. ಗೋಪಿನಾಥರಾವ್ ಅವರು ತಮ್ಮ ಗ್ರಂಥದಲ್ಲಿ ಅಂತಹ ಎರಡು ನಿದರ್ಶನಗಳನ್ನು ಚಿತ್ರಗಳ ಸಹಿತ ಪ್ರಕಟಿಸಿರುತ್ತಾರೆ.[44] ಅವು ಕ್ರಮವಾಗಿ ತಿರುಕುಳಕುಣ್ರಂ ಮತ್ತು ಪಟ್ಟೀಶ್ವರಂ ಎಂಬ ಊರುಗಳಲ್ಲಿರುವ ಶಿವದೇವಾಲಯಗಳಲ್ಲಿ ಕಾಣಬರುತ್ತವೆ. ಆ ದೇವಮಂದಿರಗಳಲ್ಲಿ ಅವು ಪ್ರಧಾನ ದೇವತೆಗಳಾಗಿರದೆ, ಉಪದೇವತಾ/ಪರಿವಾರದೇವತಾ ಮೂರ್ತಿಗಳಾಗಿ ಕಾಣಬರುತ್ತವೆ. ಅವು ಎಂಟು

ಕೈಗಳನ್ನು ಮಾತ್ರ ಹೊಂದಿರುವ ಮೂರ್ತಿಗಳಾಗಿದ್ದು, ಹಸ್ತಗಳಲ್ಲಿ ತ್ರಿಶೂಲ, ಘಂಟಾ, ಪಾಶ, ಖೇಟಕ, ಕಪಾಲ, ಖಡ್ಗ ಮತ್ತು ಡಮರುಗಳನ್ನು ಹೊಂದಿರುತ್ತವೆ. ಉದ್ದನೆಯ ದಂಡಕ್ಕೆ ಜೋಡಿಸಿರುವ ತ್ರಿಶೂಲವನ್ನು ಮೇಲೆ ವಿವರಿಸಿರುವಂತೆ, ಮುಂದಿನ ಕೈಗಳಿಂದ ದೇಹಕ್ಕೆ ಅಡ್ಡವಾಗಿ ಹಿಡಿದುಕೊಂಡಿರುವಂತಿವೆ. ಅವುಗಳಲ್ಲಿ ಕಾಣಬರುವ, ಶಿರಗಳ ಹಿಂದೆ ಅಗ್ನಿಜ್ವಾಲೆಗಳ ಪ್ರಭಾವಲಯ, ದುಂಡಾದ ದೊಡ್ಡದೊಡ್ಡ ಕಣ್ಣುಗಳು, ಕೋರೆ ಹಲ್ಲುಗಳು, ನಿಂತಿರುವ ಭಂಗಿ, ಉದ್ದನೆಯ ರುಂಡಮಾಲೆ ಮುಂತಾದವುಗಳು ಆ ಮೂರ್ತಿಯ ಉಗ್ರಸ್ವರೂಪವನ್ನು ಪ್ರತಿನಿಧಿಸುತ್ತವೆ.[45]

ಆದರೂ, ಅವುಗಳನ್ನು ಅಘೋರಮೂರ್ತಿಗಳೆಂದು ಕರೆಯಲಾಗಿದೆ. ಅದಕ್ಕೆ ಕಾರಣವನ್ನು ಕೆಳಗಿನ ವಿವರಣೆಯಲ್ಲಿ ಕಾಣಬಹುದು. ಅಘೋರ ಎಂಬ ಪದವು, ಶಿವ–ರುದ್ರನಿಗೆ ಅನ್ವಯವಾಗುವಂತೆ ಉಲ್ಲೇಖಗೊಂಡಿರುವುದನ್ನು ಅಥರ್ವಣವೇದ, ಶತರುದ್ರೀಯ, ರೂಪಮಂಡನಗಳಲ್ಲಿ ನೋಡಬಹುದು[46] ಮತ್ತು ಮುಖಲಿಂಗಗಳನ್ನು ರೂಪಿಸುವ ಸಮಯದಲ್ಲಿ, ಶಿವನ ಪಂಚತತ್ವಗಳಾದ ತತ್ಪುರುಷ, ವಾಮದೇವ, ಸದ್ಯೋಜಾತ, ಈಶಾನ ತತ್ವಗಳೊಂದಿಗೆ, ಅಘೋರಲಿಂಗ ತತ್ವವೂ ಆಚರಣೆಯಲ್ಲಿ ಬಂದಿರುವುದಾಗಿ ತಿಳಿದುಬರುತ್ತದೆ.[47] ಹಾಗೂ ಅಘೋರತತ್ವವು, ಅಷ್ಟಾಂಗಗಳಿಂದ ಕೂಡಿದ ಬುದ್ಧಿತತ್ವವನ್ನೂ ಪ್ರತಿನಿಧಿಸುತ್ತದೆಂದು ಲಿಂಗ ಪುರಾಣವು ತಿಳಿಸುತ್ತದೆ.[48] ಅದು ವಿಜಯಲಕ್ಷ್ಮಿ, ಐಶ್ವರ್ಯಲಕ್ಷ್ಮಿ ಮುಂತಾದ ಶುಭಕಾರಕಗಳನ್ನು ಆರಾಧಕರಿಗೆ ಅನುಗ್ರಹಿಸುವ ದೇವತಾಮೂರ್ತಿಯಾಗಿರುವುದರಿಂದ ಹಾಗೆ ಕರೆದಿರಬೇಕೆಂದು ತರ್ಕಿಸಿ ಹೇಳಬಹುದು.

## ಟಿಪ್ಪಣಿಗಳು

1. (ಅ) *EC,* Vol. VIII, Nagara 5, 77.

   (ಆ) *SII,* Vol. VII, No. 366.

   (ಇ) *SII,* Vol. IX, pt. 2, No. 674.

   (ಈ) *Annual Report of the Mysore Archaeological Department (MAR),* 1943, No. 30.

   (ಉ) *EC,* Vol. VII, Honnali 9.

   (ಊ) ಕೆಳದಿ ವೆಂಕಟೇಶ ಜೋಯಿಸ (ಸಂ.), 1991, *ಕೆಳದಿ ಅರಸರ ಶಾಸನ ಸಂಪುಟ,* ವೀರಶೈವ ಅಧ್ಯಯನ ಸಂಸ್ಥೆ, ಗದಗ, ಪುಟ 5 ರಿಂದ 19 ಮುಂತಾಗಿ.

   (ಎ) ಕೆಳದಿ ಗುಂಡಾ ಜೋಯಿಸ (ಸಂ.), 1976, *ಕೆಳದಿ ನೃಪವಿಜಯ,* ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ 72, 73 ಮುಂ.
2. *EC,* Vol. VII, Honnali 9. *ಕೆಳದಿ ಅರಸರ ಶಾಸನ ಸಂಪುಟ - ಪೂರ್ವೋಕ್ತ,* ಪುಟ 10.
3. ವೆಂಕಟೇಶ ಜಿ. ಮಲ್ಲೇಪುರಂ (ಸಂ.), 1999, *ಕೆಳದಿ ಬಸವರಾಜನ ಶಿವತತ್ವ ರತ್ನಾಕರ,* ಕನ್ನಡ ವಿಶ್ವವಿದ್ಯಾಲಯ, ಹಂಪಿ–ವಿದ್ಯಾರಣ್ಯ, ಸಂಪುಟ 1, ಕಲ್ಲೋಲ 5, ತರಂಗ 10, ಶ್ಲೋಕ 171-173, ಪುಟ 305. *ಕೆಳದಿ ನೃಪವಿಜಯ - ಪೂರ್ವೋಕ್ತ,* ಪುಟ 99, ಪದ್ಯ 60, 61.
4. *ಅದೇ.*
5. *MAR*, 1932, p. 44.
6. *ಅದೇ.*
7. *ಕರ್ನಾಟಕ ಚರಿತ್ರೆ,* (ಸಂ.) ಬಿ. ಷೇಕ ಆಲಿ, 1997, ಕನ್ನಡ ವಿಶ್ವವಿದ್ಯಾಲಯ, ಹಂಪೆ, ವಿದ್ಯಾರಣ್ಯ, ಸಂಪುಟ 3, ಪುಟ 373.
8. Gopinatha Rao T.A., 1985 (Reprint), *Elements of Hindu Ionography,* Motilal Banarasidas (reprint), Delhi, 1985, Vol. II, pt. II, p. 197-199.
9. *ಶಿವತತ್ವ ರತ್ನಾಕರ - ಪೂರ್ವೋಕ್ತ,* ಪುಟ 304, 305, ಶ್ಲೋಕ 156-174.
10. *ಅದೇ,* ಶ್ಲೋಕ 156-159.
11. *ಅದೇ,* ಶ್ಲೋಕ 159-160.
12. ಸುಂದರ ಅ., 1986, *ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿ ಶಿಲ್ಪ.* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿದೇಶನಾಲಯ, ಮೈಸೂರು, ಪು. 18, 32. *ಕೆಳದಿ ನೃಪವಿಜಯ - ಪೂರ್ವೋಕ್ತ,* ಪುಟ 146-147, ವಚನ.
13. *ಶಿವತತ್ವ ರತ್ನಾಕರ - ಪೂರ್ವೋಕ್ತ,* ಪುಟ 304, ಶ್ಲೋಕ 165-169.
14. *ಕೆಳದಿ ನೃಪವಿಜಯ - ಪೂರ್ವೋಕ್ತ,* ಪುಟ 97, 99, ವಚನ, ಶ್ಲೋಕ 58-61.

15. *Imperial Gazeteer*, 1908, Vol. XIX, p. 317.

16. *ಕೆಳದಿ ನೃಪವಿಜಯ - ಪೂರ್ವೋಕ್ತ*, ಪುಟ 97-99, ವಚನ, ಶ್ಲೋಕ 60-61.

17. *ಅದೇ.*

18. *ಶಿವತತ್ವ ರತ್ನಾಕರ - ಪೂರ್ವೋಕ್ತ*, ಪುಟ 305, ಶ್ಲೋಕ 171-172.

19. *ಅದೇ*, ಪುಟ 304, 305, ಶ್ಲೋಕ 165-170.

20. *ಅದೇ.*

21. ಕೆಳದಿ ಗುಂಡಾ ಜೋಯಿಸ, 1985, *ಸಾಗರ ತಾಲ್ಲೂಕು ದರ್ಶನ*, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ಪುಟ 18; *Gazetteer - Shimoga District*, Bangalore, 1975, p. 625.

22. ನಾಗೇಗೌಡ ಎಚ್.ಎಲ್., 1972, *ಪ್ರವಾಸಿ ಕಂಡ ಇಂಡಿಯಾ (ಭಾಷಾಂತರ)*, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಸಂಪುಟ 4, ಪುಟ 243.

23. ಕಲಬುರ್ಗಿ ಎಂ.ಎಂ. (ಸಂ.), *ಕರ್ನಾಟಕದ ಕೈಪಿಯತ್ತುಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪೆ–ವಿದ್ಯಾರಣ್ಯ 1994, ಪುಟ x, 144, 147, 148.

24. *ಅದೇ*, ಪುಟ 147, 148.

25. *ಶಿವತತ್ವ ರತ್ನಾಕರ - ಪೂರ್ವೋಕ್ತ*, ಪುಟ 302, ಶ್ಲೋಕ 133.

26. *MAR*, 1932, p. 44.

27. *ಕೆಳದಿ ಅರಸರ ಶಾಸನ ಸಂಪುಟ - ಪೂರ್ವೋಕ್ತ*, ಸಂ. 90, ಪುಟ 137, 138. *MAR*, 1943, No. 31.

28. *ಅದೇ.*

29. *ಕೆಳದಿ ನೃಪವಿಜಯ - ಪೂರ್ವೋಕ್ತ*, ಪುಟ 147, 148, 156. *Gazetteer - Shimoga District*, p. 66.

30. ಕಲಬುರ್ಗಿ ಎಂ.ಎಂ., *ಪೂರ್ವೋಕ್ತ*, ಪುಟ 148.

31. *ಅದೇ.*

32. *ಅದೇ.*

33. *Gazetteer - Shimoga District*, *op. cit.*, p. 625, 626. *MAR*, 1932, p. 41.

34. *ಕರ್ನಾಟಕ ಚರಿತ್ರೆ*, (ಸಂ.) ಬಿ. ಷೇಕ ಅಲಿ, 1997, ಕನ್ನಡ ವಿಶ್ವವಿದ್ಯಾಲಯ, ಹಂಪೆ–ವಿದ್ಯಾರಣ್ಯ, ಸಂಪುಟ, 3, ಪುಟ 373.

35. *ಕೆಳದಿ ಅರಸರ ಶಾಸನ ಸಂಪುಟ - ಪೂರ್ವೋಕ್ತ*, ಸಂಖ್ಯೆ 90, 141, 212, 213, 284.

36. *Gazetteer - Shimoga District*, p. 66.

37. *ಕೆಳದಿ ಅರಸರ ಶಾಸನ ಸಂಪುಟ - ಪೂರ್ವೋಕ್ತ*, ಸಂಖ್ಯೆ 284.

38. *ಶಿವತತ್ವ ರತ್ನಾಕರ - ಪೂರ್ವೋಕ್ತ*, ಕಲ್ಲೋಲ 1, ತರಂಗ 1, ಶ್ಲೋಕ 7, ಪುಟ 11.

39. *ಅದೇ.*

40. Gopinatha Rao, *op.cit.*, Vol. II, Parts 1 & 2.

41. *ಅದೇ*, Vol. II, pt. 1, p. 199.

42. *ಅದೇ*, p. 198.

43. *ಅದೇ*, p. 200.

44. *ಅದೇ*, Opposite to p. 200, Plate XLVIII, fig. 1 & 2.

45. *ಅದೇ*, p. 199.

46. *ಅದೇ*, p. 387.

47. *ಅದೇ*, p. 64.

48. *ಅದೇ*, p. 404.

# 5. ವಿಜಯನಗರ ಪಟ್ಟಣದಲ್ಲಿಯ ಆನೆಯ ಸಾಲೆ

– ಟಿ.ಎಂ. ಮಜುನಾಥಯ್ಯ

ವಿಜಯನಗರ ಕಾಲದಲ್ಲಿ ಆನೆಗಳನ್ನು ಯುದ್ಧ, ದೇವಾಲಯಗಳ ಉತ್ಸವ, ರಾಜ ಪರಿವಾರದವರ ಉತ್ಸವ, ಬೇಟೆ ಮುಂತಾದ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದು, ಅಂತಹ ಆನೆಗಳ ಸಾಲಿನ ಶಿಲ್ಪಗಳನ್ನು ರಾಮಚಂದ್ರ ದೇವಾಲಯದ ಗೋಡೆಯ ಮೇಲೆ ಕಾಣಬಹುದು. ದೇವಾಲಯದ ಮೆಟ್ಟಿಲುಗಳ ಬದಿಯಲ್ಲಿ ಮತ್ತು ಅರಮನೆ ಕಟ್ಟಡಗಳ ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಕೆಲವೊಮ್ಮೆ ಆನೆಯ ಪೂರ್ಣ ಆಕಾರದ ಶಿಲ್ಪಗಳನ್ನು ಅಥವಾ ಆನೆಯ ಸೊಂಡಿಲು ಭಾಗದ ಶಿಲ್ಪಗಳನ್ನು ಕಾಣಬಹುದಾಗಿದೆ. ವಿವಿಧ ಕೆಲಸ ಕಾರ್ಯಗಳಿಗೆ ಅನುಗುಣವಾಗಿ ಆನೆಗಳಲ್ಲಿ ಕೆಲವೊಂದು ವಿಂಗಡಣೆಗಳನ್ನು ಮಾಡಿರುವ ಅಂಶಗಳನ್ನು ಕಾಣಬಹುದು.

ವಿಜಯನಗರ ಪಟ್ಟಣದಲ್ಲಿ ಈಗಿರುವ ಆನೆ ಸಾಲೆಯ ಕಟ್ಟಡವನ್ನು (ಚಿತ್ರ 38) ಆನೆಯ ಸಾಲೆ ಎಂದು ಒಪ್ಪಿಕೊಂಡರೂ ಸಹ ಅಲ್ಲಿರುವ ಸ್ಥಳಾವಕಾಶವು ಕೇವಲ ಹನ್ನೊಂದು ಆನೆಗಳಿಗೆ ಮಾತ್ರ ಇರುವುದನ್ನು ಕಾಣಬಹುದಾಗಿದೆ.[1] ಈ ಆನೆಗಳು ರಾಜಪರಿವಾರದವರಿಗೆ ಮೀಸಲಾಗಿದ್ದವೆಂದು ತೋರುತ್ತದೆ. ಆದರೆ ಉಳಿದ ಅಗಾಧ ಸಂಖ್ಯೆಯ ಸಾಮಾನ್ಯ ಆನೆಗಳಿಗಾಗಿ ಬೇರೊಂದು ಆನೆಯ ಸಾಲೆಯನ್ನು ನಿರ್ಮಿಸಿರಲೇಬೇಕು.[2] ಈ ದಿಸೆಯಲ್ಲಿ ಆನೆಯ ಸಾಲೆಯ ಸಂಶೋಧನೆಯೂ ಸಹ ಅಗತ್ಯವಾಗಿದೆ. ಒಂದು ಶಿಲಾಶಾಸನವು ಅಂತಹ ಒಂದು ಆನೆಯ ಸಾಲೆಯನ್ನು ಉಲ್ಲೇಖಿಸುತ್ತದೆ. ಆನೆಯ ಸಾಲೆಯ ಬಳಿಯ ನರಸಿಂಹ ದೇವರಿಗೆ ದಾನ ಕೊಟ್ಟದ್ದನ್ನು ಇದು ಉಲ್ಲೇಖಿಸುತ್ತದೆ. ಶಾಸನದ ಪಾಠ ಹೀಗಿದೆ:[3]

1 ಶುಭಕೃತು ಸಂವಚರದ ಜೈತ್ರಶುದ್ಧ 7ಲು
2 ಶ್ರೀಮತು ಆನೆಯ ಸಾಲೆಯ ಬಳಿಯಣ ನಾರ
3 ಸಿಂಹ್ಯ ದೇವರಿಗೆ ಕೋನಮರ್ಸಯನವರು
4 ಕೊಟ್ಟ ಧರ್ಮಸಾಸನದ ಕ್ರಮವೆಂತೆಂದ
5 ರೆ ಸ್ವಾಮಿ ನಮಗೆ ಪಾಲಿಸಿದ ವಿಜಯನಾಗ
6 ರದ ತಳವಾರಿಕೆಗೆ ಸಲುವ ಕಂದಾಯ । [ಕೊ]
7 ಟ್ಟ ಮಾಲ ಕಾಣಿಕ್ಕೆ ಅಡಿಕಾಸು । ಕಂದಾಯವು
8 ಸಹಾರಾಯರಿಗೆ ಧರ್ಮವಾಗಬೇಕದು ನಾವು

ಈ ಶಾಸನವು ಹಂಪೆಯ ಅವಶೇಷಗಳ ಮಧ್ಯದಲ್ಲಿರುವ ಟೂರಿಸ್ಟ್ ಕ್ಯಾಂಟೀನ್ ಕಟ್ಟಡದ ಹಿಂಭಾಗದಲ್ಲಿ ಸಿಕ್ಕಿದ್ದು ಪ್ರಸ್ತುತ ಕ್ಯಾಂಟೀನಿನ ಆವರಣದಲ್ಲಿದೆ. ಈ ಟೂರಿಸ್ಟ್ ಕ್ಯಾಂಟೀನ್ ಕಟ್ಟಡವು ಒಂದು ದೊಡ್ಡದಾದ ಕೋಟೆ ಗೋಡೆಯ ಆವರಣದಲ್ಲಿದ್ದು, ಕಮಲ ಮಹಲ್ ಮತ್ತು ರಾಮಚಂದ್ರ ದೇವಾಲಯದ ಮಧ್ಯ ಭಾಗದಲ್ಲಿದೆ. ಈ ಆವರಣವು ಉತ್ತರ–ದಕ್ಷಿಣವಾಗಿ 168 ಮೀಟರ್‌ಗಳಷ್ಟು ಉದ್ದವಾಗಿಯೂ, ಪೂರ್ವ–ಪಶ್ಚಿಮ 105 ಮೀಟರ್‌ಗಳಷ್ಟು ಅಗಲವಾಗಿಯೂ ಇದ್ದು, ದಕ್ಷಿಣ ಭಾಗದಲ್ಲಿ ಬಾಗಿಲು ಇದೆ. ಈ ಆವರಣದ ದಕ್ಷಿಣ ದಿಕ್ಕಿನಲ್ಲಿ ಸ್ವಲ್ಪ ಭಾಗದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಉತ್ಖನನ ಕೆಲಸವನ್ನು ಕೈಗೊಂಡಿದ್ದು ಮಹತ್ವಪೂರ್ಣವಾದ ಅಂಶಗಳು ಬೆಳಕಿಗೆ ಬಂದಿವೆ. ಉತ್ಖನನದ ವರದಿಯಲ್ಲಿ ಆನೆಯ ಅಸ್ಥಿ ಪಂಜರ ಹಾಗೂ ಮಾನವರ 28 ಅಸ್ಥಿ ಪಂಜರದ ಭಾಗಗಳು, ದ್ವಾರ ಬಾಗಿಲೂ, ನೀರಿನ ತೊಟ್ಟಿಗಳು ಮತ್ತು ಇತರ ಕಲ್ಲಿನ ದೀಪಸ್ಥಂಭ ಮುಂತಾದ ಅವಶೇಷಗಳ ವಿವರಗಳು ಇವೆ.[4]


ಈ ದೊಡ್ಡದಾದ ಆವರಣವನ್ನು ಸಾಮಾನ್ಯ ಆನೆಗಳಿಗಾಗಿ ಉಪಯೋಗಿಸಿರುವ ಸಾಧ್ಯತೆಗಳಿವೆ. ನೂರಾರು ಆನೆಗಳ ನಿರ್ವಹಣೆಗಾಗಿ ಈ ಆವರಣವು ಉಪಯುಕ್ತವೆಂದು ತೋರುತ್ತದೆ. ಈ ಆವರಣದ ಬಾಗಿಲಿನಲ್ಲಿ ಚಿಕ್ಕದೊಂದು ದೇವಾಲಯವೂ ಇದ್ದಂತೆ ತೋರುತ್ತದೆ. ಕಾರಣ ಇಲ್ಲಿರುವ ಪೀಠ ಮತ್ತು ದ್ವಾರದಲ್ಲಿ ಬಿದ್ದಿರುವ ದೀಪ ಸ್ತಂಭವೂ, ದೀಪಸ್ತಂಭದ ಎರಡೂ ಬದಿಗಳಲ್ಲಿ ಆನೆಯ ಚಿತ್ರಗಳು, ಒಂದು ಕಡೆ ಹಂಸ ಪಕ್ಷಿಯ ಚಿತ್ರವೂ, ಮತ್ತೊಂದು ಕಡೆ ನಾಮದ ಚಿತ್ರಗಳೂ ಇವೆ. ದ್ವಾರದ ಬದಿಯಲ್ಲಿರುವ ನೀರಿನ ತೊಟ್ಟಿಯು ಒಂದು ಮೀಟರ್‌ನಷ್ಟು ಆಳವಿದೆ. ಅದರ ಬದಿಯಲ್ಲಿ ಚಿಕ್ಕದಾದ ಮನೆಯ ಕಟ್ಟಡವು ಮತ್ತು ಪಕ್ಕದಲ್ಲಿ ಆಯತಾಕಾರದ ಗೋಡೆಗಳಿದ್ದು, ಗೋಡೆಗಳ ಮದ್ಯದಲ್ಲಿ ಒಂದು ಮೀಟರ್‌ನಷ್ಟು ಸ್ಥಳಾವಕಾಶವಿದೆ. ಬಾಗಿಲಿನ ಮೂಲಕ ಹಾಯ್ದು ಬರುವ ನೀರಿನ ಕಾಲುವೆ (ಚಿತ್ರ 30) ಇದೆ. ನೀರಿನ ಸಂಗ್ರಹಣೆಗಳಾಗಿ ಇರುವ ಕಲ್ಲಿನ ತೊಟ್ಟಿಯಿದ್ದು (ಚಿತ್ರ 32) ಅದರ ಮೇಲೆ ಗಣೇಶನ ಶಿಲ್ಪವಿದೆ. ಅಲ್ಲದೇ ಪೂರ್ವ ದಿಕ್ಕಿನ ಆವರಣದ ಗೋಡೆಯಲ್ಲಿ ಕಲ್ಲಿನ ನೀರಿನ ಕಾಲುವೆಯೂ ಇತ್ತೀಚಿಗೆ ಬೆಳಕಿಗೆ ಬಂದಿರುತ್ತದೆ. ಈ ಆವರಣದಲ್ಲಿರುವ ಅವಶೇಷಗಳು ಕೆಳಗಿನಂತಿವೆ.



ಆನೆಯ ಸಾಲೆ, ಮುಖ್ಯದ್ವಾರ ಮತ್ತು ಕಾಲುವೆ



ಆನೆಯ ಸಾಲೆ, ಮುಖ್ಯದ್ವಾರದಲ್ಲಿಯ ರಂಧ್ರಗಳುಳ್ಳ ಕಂಬಗಳು



ಆನೆಯ ಸಾಲೆ, ಕಲ್ಲಿನ ನೀರಿನ ತೊಟ್ಟಿ



ಆನೆಯ ಸಾಲೆ, ಭಾಗಶಃ ಮಣ್ಣಿನಲ್ಲಿ ಮುಚ್ಚಿರುವ ನೀರಿನ ತೊಟ್ಟಿ



ಆನೆಯ ಸಾಲೆ, ದ್ವಾರದ ಬಳಿಯ ಗೋದಲಿಗಳು




ಆನೆಯ ಸಾಲೆ, ನೀರಿನ ತೊಟ್ಟಿಯ ಬಳಿಯ ಗೋದಲಿಗಳು



ಆನೆಯ ಸಾಲೆ, ರಂಧ್ರಗಳಿರುವ ಕಂಬಗಳು



ಆನೆಯ ಸಾಲೆ, ಆವರಣದ ಪೂರ್ವ ದಿಕ್ಕಿನ ಗೋಡೆಯಲ್ಲಿಯ ಕಾಲುವೆ



ಗಜಶಾಲೆ ಎಂದು ಕರೆಯುವ ಕಟ್ಟಡ

**1. ಕಪ್ಪುಬೂದಿ ಮಣ್ಣು:** ಆನೆಗಳ ಮೇವಿಗಾಗಿ ಶೇಖರಿಸಲಾಗಿದ್ದ ಹುಲ್ಲು ಬಣವೆಗಳು, ಸೊಪ್ಪು ಮತ್ತು ಆನೆಯ ತ್ಯಾಜ್ಯ ವಸ್ತುಗಳಾದ ಲದ್ದಿ ಮುಂತಾದ ವಸ್ತುಗಳು ವಿಜಯನಗರದ ಪತನದ ಕಾಲದಲ್ಲಿ ಬೆಂಕಿಯಿಂದ ಸುಟ್ಟು ಹೋಗಿದ್ದು, ಹೇರಳವಾಗಿ ಕಪ್ಪು ಬೂದಿಯು ಈ ಸ್ಥಳದಲ್ಲಿ ಶೇಖರಣೆಗೊಂಡಿರಬಹುದು.

**2. ಆನೆಯ ಅಸ್ಥಿಪಂಜರ:** ಆವರಣದ ಬಾಗಿಲಿನ ಪಶ್ಚಿಮ ಭಾಗದಲ್ಲಿ ಆನೆಯ ಅಸ್ಥಿಪಂಜರವು ದೊರಕಿದ್ದು, ಸತ್ತುಹೋದ ಆನೆಯನ್ನು ಹೊರಗೆ ಸಾಗಿಸಲು ಸಾಧ್ಯವಾಗದೆ ಆವರಣದ ಮೂಲೆಯಲ್ಲಿ ಹೂಳಿದ್ದಾರೆ.

**3. ಆನೆಯ ಸರಪಳಿ:** ಉತ್ಖನನ ಮಾಡಿದ ಸ್ಥಳದಲ್ಲಿ ಒಂದು ಮೀಟರ್‌ನಷ್ಟು ಉದ್ದದ ಸರಪಳಿಯು ದೊರೆತಿದ್ದು ಇದು ಆನೆಯ ಕೊರಳಿಗೆ ಅಥವಾ ಕಾಲಿಗೆ ಕಟ್ಟಲು ಉಪಯೋಗಿಸಿರಬಹುದಾಗಿದೆ.

**4. ಗೋದಲಿಗಳು:** ಬಾಗಿಲಿನ ಪಕ್ಕದಲ್ಲಿ ನೀರಿನ ತೊಟ್ಟಿಯ ಸಮೀಪದಲ್ಲಿರುವ ಕಟ್ಟಡಗಳಲ್ಲಿ ಕೆಲವೊಂದನ್ನು ಆನೆಗಳಿಗೆ ತಿನ್ನಲು ಹುಲ್ಲು ಸೊಪ್ಪುಗಳನ್ನು ಹಾಕುವ ಸ್ಥಳಗಳಾಗಿರಬಹುದಾಗಿದೆ. 1.5 ಮೀ. ಅಗಲ, 6.0 ಮೀ. ಗಳಷ್ಟು ಉದ್ದ ಮತ್ತು 1 ಮೀ. ನಷ್ಟು ಎತ್ತರವಿರುವ ಕಟ್ಟಡಗಳು (ಚಿತ್ರ 34-35) ಮಾನವನ ವಾಸಕ್ಕಾಗಿ ಉಪಯೋಗವಾಗುವುದಿಲ್ಲ.

**5. ನೀರಿನ ಕಾಲುವೆ:** ಆನೆಗಳಿಗೆ ಕುಡಿಯಲು ಬೇಕಾಗುವ ನೀರನ್ನು ನೀರಿನ ಕಾಲುವೆಗಳಿಂದ (ಚಿತ್ರ 30-37) ಹೊರಗಿನಿಂದ ಪೂರೈಸುವ ವ್ಯವಸ್ಥೆ ಮಾಡಿದ್ದು, ಆನೆಗಳ ನಿರ್ವಹಣೆಗೆ ಅತಿ ಹೆಚ್ಚು ನೀರು ಅವಶ್ಯಕವಿರುವುದರಿಂದ ಹೊರ ಭಾಗದಿಂದ ನೀರಿನ ಸರಬರಾಜು ವ್ಯವಸ್ಥೆ ಮಾಡಿರಬಹುದಾಗಿದೆ.

**6. ನೀರಿನ ತೊಟ್ಟಿ:** ನೀರಿನ ತೊಟ್ಟಿಯು (ಚಿತ್ರ 33) 5 ಮೀಟರ್‌ಗಳಷ್ಟು ಉದ್ದವಾಗಿದ್ದು ಇನ್ನು ಸ್ವಲ್ಪ ಭಾಗವು ಭೂಮಿಯಲ್ಲಿ ಮುಚ್ಚಿರುತ್ತದೆ. ಇದು ಕೇವಲ 1 ಮೀಟರ್‌ನಷ್ಟು ಆಳವಿದ್ದು, ಒಂದು ಮೆಟ್ಟಿಲು ಮಾತ್ರವಿದೆ. ಆನೆಗಳು ಇಲ್ಲಿ ಬಂದು ನೀರು ಕುಡಿದು ಹೋಗುವುದಕ್ಕಾಗಿ ನಿರ್ಮಿಸಿರಬಹುದಾಗಿದೆ.

**7. ಮಾನವ ಅಸ್ಥಿಪಂಜರದ ಅವಶೇಷಗಳು:** 28 ಮಾನವರ ಅಸ್ಥಿಪಂಜರಗಳ ಅವಶೇಷಗಳು ದೊರತಿದ್ದು, ಇವುಗಳು 20 ರಿಂದ 60 ವರ್ಷದ ವಯೋಮಾನದ ವ್ಯಕ್ತಿಗಳವಾಗಿವೆ ಎಂದು ನ್ಯಾನ್ಸಿ ಮಾಲ್‌ವಿಲ್ಲೆ ಇವರು ಮೂಳೆಗಳ ಅಧ್ಯಯನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.[5] ಇವು ಆನೆಗಳ ನಿರ್ವಹಣೆಗಾಗಿ ಇದ್ದಂತಹ ವ್ಯಕ್ತಿಗಳ ಅಸ್ಥಿಪಂಜರಗಳಾಗಿರಬಹುದು. ಬಹಳಷ್ಟು ಸಂಖ್ಯೆಯ ಆನೆಗಳನ್ನು ನಿರ್ವಹಿಸಬೇಕಾದರೆ ಕೆಲಸಗಾರರು ಯಾವಾಗಲೂ ಆನೆಗಳ ಬಳಿಯಲ್ಲೆ ಇರಬೇಕಾಗುತ್ತದೆ.[6]

**8. ರಂಧ್ರಗಳಿರುವ ಕಲ್ಲಿನ ಕಂಬಗಳು:** ಮುಖ್ಯದ್ವಾರದ ಒಳಭಾಗದ ಎರಡೂ ಬದಿಗಳಲ್ಲಿ ಎರಡೆರಡು ರಂಧ್ರಗಳಿರವ ಕಲ್ಲಿನ ಕಂಬಗಳಿದ್ದು (ಚಿತ್ರ 31) ಇವುಗಳನ್ನು ಆನೆಗಳು ಹೊರಹೋಗದಂತೆ ಮರದ ಉದ್ದನೆಯ ಕಟ್ಟಿಗೆಗಳನ್ನು ಇರಿಸಲು ಉಪಯೋಗಿಸಿರಬಹುದಾಗಿದೆ. ಇದೇ ಮಾದರಿಯಲ್ಲಿರುವ ಕಂಬಗಳು (ಚಿತ್ರ 36) ಆವರಣದ ಉತ್ತರ ದಿಕ್ಕಿನ ಭಾಗದಲ್ಲಿಯೂ ಇವೆ. ಇವುಗಳನ್ನು ಆನೆಗಳನ್ನು ಪಳಗಿಸಲು ಉಪಯೋಗ ಮಾಡಿರಬಹುದಾಗಿದೆ.

ಮೇಲಿನ ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ ಮತ್ತು ಶಿಲಾಶಾಸನದಲ್ಲಿ ಉಲ್ಲೇಖಗೊಂಡ ವಿಷಯ, ಇಲ್ಲಿರುವ ಅವಶೇಷಗಳು, ಉತ್ಖನನ ಮಾಡಿದ ಸ್ಥಳದಲ್ಲಿ ದೊರೆತಿರುವ ಆನೆಯ ಅಸ್ಥಿ ಪಂಜರ, ಆನೆ ಕಟ್ಟುವ ಸರಪಳಿ, ನೀರಿನ ಕಾಲುವೆಗಳು, ನೀರು ಶೇಖರಣೆಯ ತೊಟ್ಟಿಗಳು, ಗೋದಲಿಗಳು, ಕಟ್ಟಡದ ಅತೀ ಕಡಿಮೆ ಅವಶೇಷಗಳು, ಬೂದಿ, ದೊಡ್ಡದಾದ ಆವರಣಕ್ಕೆ ಒಂದು ಭಾಗದಲ್ಲಿ ಮಾತ್ರವಿರುವ ಬಾಗಿಲು, ದೀಪ ಸ್ತಂಭದ ಮೇಲೆ ಎರಡೂ ಬದಿಯಲ್ಲಿರುವ ಆನೆಯ ಚಿತ್ರಗಳು, ಸುತ್ತಲೂ ಇರುವ ಅರಮನೆಯ ಆವರಣಗಳ ಅವಶೇಷಗಳಿಂದ ಪ್ರಸ್ತುತ ಕಟ್ಟಡವು ಆನೆ ಸಾಲೆಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೇ ಆವರಣದಲ್ಲಿ ಉಳಿದ ಭಾಗವನ್ನು ಪೂರ್ಣವಾಗಿ ಉತ್ಖನನ ಮಾಡಿದಲ್ಲಿ ಆನೆಯ ಸಾಲೆಗೆ ಬೇಕಾದ ಇನ್ನೂ ಹೆಚ್ಚಿನ ಮಹತ್ವವುಳ್ಳ ಅವಶೇಷಗಳು ದೊರೆತು ವಿಜಯನಗರದ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲಬಹುದಾಗಿದೆ. ಈ ಆವರಣದ ಕೋಟೆ ಗೋಡೆಯ ಅರ್ಧದಷ್ಟು ಭಾಗವನ್ನು ಈಗಾಗಲೇ ಸಂರಕ್ಷಣೆ ಮಾಡಿದ್ದು ಉಳಿದ ಭಾಗವನ್ನು ಸಂರಕ್ಷಿಸಿದಲ್ಲಿ ಇದೊಂದು ಉತ್ತಮ ಕಾರ್ಯವಾಗುತ್ತದೆ.

## ಟಿಪ್ಪಣಿಗಳು

1. Longhurst A.H., 1982 (Reprint), *Hampi Ruins described and illustrated*, pp. 82-84; Devakunjari D., 1983, *Hampi*, p. 40; Fritz John M., George Michell and M.S. Nagaraja Rao, *The Royal Centre at Vijayanagara: Preliminary Report*, pp. 17, 18, 33.

2. Sewell Robert, 1982 (Reprint), *A Forgotten Empire*, ಪು. 150, 4000 ಆನೆಗಳ ಬಲವಿದ್ದುದನ್ನು ನ್ಯೂನಿಜ್ ತಿಳಿಸುತ್ತಾನೆ; ಪು. 118, ವರ್ತೆಮಾ 400 ಆನೆಗಳಿದ್ದವೆಂದು ಹೇಳುತ್ತಾನೆ; ಪು. 373, ಅಚ್ಯುತರಾಯನ ಆಳ್ವಿಕೆಯಲ್ಲೂ 400 ಆನೆಗಳಿದ್ದವು.

3. Nagaraja Rao M.S. (Ed.), 1985, *Vijayanagara: Progress of Research 1983-84*, p. 34, Ins. No. 29; Channabasappa S. Patil and Vinoda C. Patil (Eds.), 1995, *Inscriptions at Vijayanagara (Hampi)*, No. 331.

4. Devaraj D.V. and Channabasappa S. Patil (Eds.), 1996, *Vijayanagara: Progress of Research 1988-91*, pp. 9-11.

5. Malville Nancy J., 1996, "Report on Human Skeletal Remains from Enclosure XIII of the Royal Centre," Devaraj D.V. and Channabasappa S. Patil (Eds.), *Vijayanagara: Progress of Research 1988-91*, pp. 74-104.

6. Filliozat Vasundhara, 1999, *Vijayanagara*, p. 231, ಸಾವಿರ ಜನರು ಆನೆಗಳ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು.

# 6. ಹಂಪಿ ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರದ ನಿರ್ಮಾಣ ಕಾಲ ಮತ್ತು ಕರ್ತೃ – ಒಂದು ಪರಿಶೀಲನೆ

– ಶರಣಬಸಪ್ಪ ಕೋಲ್ಕಾರ

ಹಂಪಿಯ ಪ್ರಸಿದ್ಧ ವಿರೂಪಾಕ್ಷ ದೇವಾಲಯವು ಬೇರೆ ಬೇರೆ ಕಾಲದಲ್ಲಿ ನಿರ್ಮಾಣಗೊಂಡ ಒಂದು ಸಂಕೀರ್ಣ ದೇವಾಲಯ ಸಮೂಹವಾಗಿದೆ. ಇಲ್ಲಿ ಒಟ್ಟು ಮೂರು ಗೋಪುರಗಳಿವೆ. ಅವು ಪ್ರಧಾನ ಅಥವಾ ಬಿಷ್ಟಪ್ಪಯ್ಯ ಗೋಪುರ, ಚಿಕ್ಕ ಅಥವಾ ರಾಯಗೋಪುರ ಮತ್ತು ಉತ್ತರ ದಿಕ್ಕಿನ ಕನಕಗಿರಿ ಗೋಪುರ. ಇವುಗಳಲ್ಲಿ ಪ್ರಧಾನ ಗೋಪುರವನ್ನು ಎರಡನೆಯ ದೇವರಾಯನ ಕಾಲದಲ್ಲಿ (ಕ್ರಿ.ಶ. 1424-1446) ಅವನ ಅಧಿಕಾರಿ ಪ್ರೊಲಗಂಟಿ ತಿಪ್ಪ ಎಂಬುವನು ಕಟ್ಟಿಸಿದನೆಂದು ಹರಿಭದ್ರನ ಉತ್ತರ ನರಸಿಂಹ ಪುರಾಣಮ್[1] ಕೃತಿಯಿಂದ ತಿಳಿದುಬರುತ್ತದೆ. ಅಲ್ಲದೇ ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿ[2]ಯೂ ಕೂಡ ಈ ಗೋಪುರವು ಎರಡನೆಯ ದೇವರಾಯನ ಕಾಲದ ನಿರ್ಮಾಣವೆಂದೇ ಹೇಳುತ್ತದೆ. ಪ್ರಧಾನ ಗೋಪುರದ ನಂತರ ಇರುವ ಎರಡನೆಯ ಚಿಕ್ಕ ಗೋಪುರವನ್ನು ಕೃಷ್ಣದೇವರಾಯನು ಕ್ರಿ.ಶ. 1510ರಲ್ಲಿ ತನ್ನ ಪಟ್ಟಬಂಧ ಮಹೋತ್ಸವದ ನೆನಪಿಗಾಗಿ ನಿರ್ಮಾಣಗೈದದ್ದು ಶಾಸನದಿಂದ ಸ್ಪಷ್ಟವಾಗುತ್ತದೆ.[3] ಆದರೆ ಉತ್ತರ ದಿಕ್ಕಿನಲ್ಲಿರುವ ಕನಕಗಿರಿ ಗೋಪುರದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ನಿಖರವಾದ ಆಧಾರಗಳು ಲಭ್ಯವಾಗಿಲ್ಲ. ಆದರೆ ಹಂಪಿ ಪರಿಸರದಲ್ಲಿ ಪ್ರಚಲಿತವಿರುವ ಕೆಲವು ಐತಿಹ್ಯಗಳು ಈ ಗೋಪುರ ನಿರ್ಮಾಣದ ಬಗೆಗೆ ತಿಳಿಸುತ್ತವೆ. ಪರಂಪರಾಗತವಾಗಿ ಬಂದಿರುವ ಇಂಥ ಐತಿಹ್ಯಗಳನ್ನು ಇಟ್ಟುಕೊಂಡು, ಅಂದರೆ ಮೌಖಿಕ ಮಾಹಿತಿಯನ್ನು ಪರಿಶೀಲಿಸುವುದರ ಮೂಲಕ ಕನಕಗಿರಿ ಗೋಪುರದ ನಿರ್ಮಾಣ ಕಾಲ ಮತ್ತು ಕರ್ತೃವಿನ ಬಗ್ಗೆ ಗುರುತಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

**ಕನಕಗಿರಿ ಗೋಪುರದ ವಾಸ್ತು ಪರಿಶೀಲನೆ:**

ಕನಕಗಿರಿ ಗೋಪುರದ ನಿರ್ಮಾಣ ಕಾಲವನ್ನು ಗುರುತಿಸುವಲ್ಲಿ ಅದರ ವಾಸ್ತು ಲಕ್ಷಣಗಳನ್ನು ಪರಿಶೀಲಿಸುವುದು ಅಗತ್ಯವೆನಿಸುತ್ತದೆ. ಗೋಪುರವು ಐದು ತಲಗಳಲ್ಲಿದ್ದು ಬಹುಮಟ್ಟಿಗೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲ್ಪಟ್ಟಿದೆ. ಪ್ರತಿ ತಲದ ಬಾಗಿಲುಗಳ ಛಾವಣಿಯಲ್ಲಿ ಮರದ ಹಲಗೆಗಳನ್ನು ಕೂಡ ಬಳಸಲಾಗಿದೆ. ಮೊದಲ ತಲದ ಮುಂಜೂರಿನ ಕೆಳಭಾಗದಲ್ಲಿ ಸಾಲು ಹಂಸಗಳ ಮೇಲ್ಭಾಗದಲ್ಲಿ ಅರ್ಧಕುಂಭಗಳ, ಕುಳಿತ ಸಿಂಹಗಳ ಗಾರೆ ಶಿಲ್ಪಗಳಿವೆ. ಈ ಸಾಲಿನಲ್ಲಿರುವ ಒಂದು ಮಿಥುನ ಶಿಲ್ಪ ಗಮನ ಸೆಳೆಯುತ್ತದೆ. ಉಳಿದವುಗಳಿಗಿಂತ ಈ ತಲದ ಬಾಗಿಲು ಅಧಿಕ ಅಲಂಕರಣೆಯನ್ನು ಹೊಂದಿದೆ. ಪ್ರತಿ ಬಾಗಿಲ ಬದಿಯಲ್ಲಿ ಶೈವ ದ್ವಾರಪಾಲರ ಶಿಲ್ಪಗಳಿವೆ. ಗೋಪುರದಲ್ಲಿ ಶಾಲ–ಕೂಟಗಳಿದ್ದು, ಅದರಡಿಯಲ್ಲಿ ದೇವಕೋಷ್ಠಗಳ ಬದಲಿಗೆ ಹಲವು ಕಂಭಗಳ ರಚನೆಗಳಿವೆ. ಇವುಗಳಿಂದಾಗಿ ಇಡೀ ಗೋಪುರವು ಗುಂಪು ಕಂಭಗಳ ಅಲಂಕರಣೆಗಳಿಂದ ಕೂಡಿ ವೈಶಿಷ್ಟ್ಯವೆನಿಸುತ್ತದೆ. ಶಾಲ–ಕೂಟಗಳ ಮಧ್ಯ ಕೀರ್ತಿಮುಖಗಳ ಅಲಂಕರಣೆಗಳಿದ್ದು, ಅವುಗಳಲ್ಲಿ ಮನುಷ್ಯ ಮುಖವನ್ನು ತೋರಿಸಿರುವುದು ವಿಶೇಷ. ಈ ರೀತಿಯ ಎಲ್ಲ ಲಕ್ಷಣಗಳು ಗೋಪುರದ ಎರಡೂ ಬದಿಯ ಎಲ್ಲ ತಲಗಳಲ್ಲೂ ಇವೆ. ಸಹಜವಾಗಿ ಗೋಪುರದ ಮೇಲೆ ಶಾಲ ಶಿಖರವಿದೆ.

ಗೋಪುರದ ಉತ್ತರ ಮುಖದಲ್ಲಿಯ ಎರಡು ಗಾರೆ ಪ್ರತಿಮೆಗಳು ಗಮನಸೆಳೆಯುತ್ತವೆ. ಮೊದಲ ತಲದ ಬಾಗಿಲ ಬಲಬದಿಯಲ್ಲಿರುವ ಇವು ಅಂಜಲಿ ಮುದ್ರೆಯಲ್ಲಿರುವ ಪುರುಷ ಹಾಗೂ ಸ್ತ್ರೀಯ ಪ್ರತಿಮೆಗಳಾಗಿವೆ. ಪುರುಷ ಪ್ರತಿಮೆಯ ಪೀಠದಲ್ಲಿ ತಿಂಮಣ[4] ಎಂಬ ಬರಹವಿದೆ. ಈ ಪ್ರತಿಮೆಗಳ ಲಕ್ಷಣ ಹಾಗೂ ರಚನಾಶೈಲಿಯಿಂದ ಇವು ಗೋಪುರಕ್ಕೆ ನಂತರ ಕಾಲದ ಸೇರ್ಪಡೆಗಳೆನ್ನುವುದು ಸ್ಪಷ್ಟವಾಗುತ್ತದೆ. ಇವುಗಳ ಕುರಿತಾಗಿ ಪ್ರಸ್ತುತ ಲೇಖನದಲ್ಲಿ ಸಾಂದರ್ಭಿಕವಾಗಿ ಚರ್ಚೆ ಮಾಡಲಾಗಿದೆ.

**ಕನಕಗಿರಿ ಗೋಪುರದ ಬಗೆಗಿನ ವಿದ್ವಾಂಸರ ಅಭಿಪ್ರಾಯಗಳು ಮತ್ತು ಐತಿಹ್ಯಗಳು:**

ವಿರೂಪಾಕ್ಷ ದೇವಾಲಯದ ಬಗೆಗೆ ಅನೇಕ ವಿದ್ವಾಂಸರು ಬರೆದಿದ್ದಾರೆ. ಅವರಲ್ಲಿ ವಸುಂಧರಾ ಫಿಲಿಯೋಜಾ,[5] ಎಸ್. ರಾಜಶೇಖರ[6] ಮತ್ತು ಸಿ.ಎಸ್. ಪಾಟೀಲರು[7] ದಾಖಲೆಗಳ ಕೊರತೆಯಿಂದಾಗಿ ಕನಕಗಿರಿ ಗೋಪುರದ ಕುರಿತಾಗಿ ವಿವೇಚಿಸಿಲ್ಲ. ವಿಶೇಷವಾಗಿ ಎಸ್. ರಾಜಶೇಖರರವರು ವಿರೂಪಾಕ್ಷ ದೇವಾಲಯ ನಿರ್ಮಾಣ ಕಾಲಾನುಕ್ರಮಣಿಕೆ[8]ಯ ಬಗ್ಗೆ ಬರೆದರೂ ಈ ಗೋಪುರದ ಕುರಿತಾಗಿ ಏನನ್ನೂ ಹೇಳಿಲ್ಲ. ಆದರೆ ಜಾನ್ ಎಮ್. ಫ್ರಿಟ್ಜ್ ಮತ್ತು ಜಾರ್ಜ್ ಮಿಶೆಲ್[9]ರವರು ದ್ವಾರಮಂಟಪವು 15ನೆಯ ಶತಮಾನದ್ದೆಂದು, ಉಳಿದೆರಡು ಗೋಪುರಗಳಿಗಿಂತ ವಿಭಿನ್ನ ಶೈಲಿಯಲ್ಲಿರುವ ಗೋಪುರವು 18ನೆಯ ಶತಮಾನದ್ದೆಂದು ಅಭಿಪ್ರಾಯಪಡುತ್ತಾರೆ. ಗೋಪುರದ ಶೈಲಿಯಿಂದ ಅದು 16ನೆಯ ಶತಮಾನದ ಕೊನೆಯ ಭಾಗದಲ್ಲಿ ನಿರ್ಮಿತವಾಗಿರಬೇಕೆಂದು, ಉಳಿದೆರಡು ಗೋಪುರಗಳಿಗೆ ಹೋಲಿಸಿದಲ್ಲಿ ಅದು ನಂತರದ ಕಾಲದ್ದೆಂದು ತೋರುತ್ತದೆ ಎಂಬ ಇನ್ನೊಂದು ಅಭಿಪ್ರಾಯವು ಇದೆ.[10] ಇನ್ನು ಪ್ರಚಲಿತ ಐತಿಹ್ಯಗಳನ್ನು ಉಲ್ಲೇಖಿಸಿ ಕೆ.ಎಂ.ಸುರೇಶ್[11]ರವರು ಇದನ್ನು ಕನಕಗಿರಿಯ ಮುಖ್ಯಸ್ಥನೊಬ್ಬನು

ಜೀರ್ಣೋದ್ಧಾರ ಮಾಡಿರುವುದು ತಿಳಿಯುತ್ತದೆ, ಆದರೆ ಇದನ್ನು ಕಟ್ಟಿಸಿದ ನಿಖರವಾದ ವರ್ಷ ತಿಳಿಯುವುದಿಲ್ಲ ಎಂದು ಹೇಳಿದ್ದಾರೆ. ಇನ್ನೊಂದು ಐತಿಹ್ಯ[12]ವು ಈ ಗೋಪುರವನ್ನು ಹೈದರಾಬಾದಿನ ನವಾಬ (ನಿಜಾಮ) ಕಟ್ಟಿಸಿದನೆಂದು ಹೇಳುತ್ತದೆ.

ಮೇಲಿನ ಈ ಎಲ್ಲ ಅಭಿಪ್ರಾಯ ಹಾಗೂ ಐತಿಹ್ಯಗಳನ್ನು ಅನುಲಕ್ಷಿಸಿದಾಗ ಎರಡು ಅಂಶಗಳು ವ್ಯಕ್ತವಾಗುತ್ತವೆ. ಮೊದಲನೆಯದಾಗಿ ಉಳಿದೆರಡು ಗೋಪುರಗಳಿಗಿಂತ ವಾಸ್ತು ಭಿನ್ನತೆಯನ್ನು ಹೊಂದಿರುವ ಕನಕಗಿರಿ ಗೋಪುರವನ್ನು 16ನೆಯ ಶತಮಾನದ ಕೊನೆ ಇಲ್ಲವೇ 18ನೆಯ ಶತಮಾನದ ರಚನೆ ಎಂದು ನಿರ್ಧರಿಸಿರುವುದು. ಎರಡನೆಯದಾಗಿ ಐತಿಹ್ಯಗಳು ಈ ಗೋಪುರವನ್ನು ಹೈದರಾಬಾದ್ ನವಾಬ ಕಟ್ಟಿಸಿದನೆಂದು ಮತ್ತು ಕನಕಗಿರಿಯ ಮುಖ್ಯಸ್ಥನೊಬ್ಬ ಜೀರ್ಣೋದ್ಧಾರ ಮಾಡಿದನೆಂದು ಸೂಚಿಸಿರುವುದು. ಈ ಎರಡು ಅಂಶಗಳನ್ನು ಪರಿಶೀಲಿಸಿದಲ್ಲಿ, ಕೇವಲ ವಾಸ್ತು ಭಿನ್ನತೆಯೊಂದನ್ನೆ ಆಧಾರವಾಗಿಟ್ಟುಕೊಂಡು ಗೋಪುರದ ಕಾಲವನ್ನು ನಿರ್ಧರಿಸುವುದು ಸಮಂಜಸವೆನಿಸಲಾರದು. ಹಾಗಾಗಿ ಸೂಚಿತ ಈ ಎರಡು ಕಾಲಾವಧಿಗಳನ್ನು ಒಪ್ಪಲಾಗದು ಮತ್ತು ಗೋಪುರದ ಕಾಲ ಬೇರೆಯಾಗಿರುವ ಸಾಧ್ಯತೆಯನ್ನು ಪುನಃ ಪರಿಶೀಲಿಸಬೇಕಾಗುತ್ತದೆ ಮತ್ತು ಐತಿಹ್ಯಗಳೆರಡು ಭಿನ್ನ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದರೂ ವಾಸ್ತವಿಕವಾಗಿ ಅವು ಮೂಲತಃ ಒಂದೇ ಐತಿಹ್ಯದ ಪರಿವರ್ತಿತ ರೂಪಗಳೆಂಬುದು ನನ್ನ ಗಮನಕ್ಕೆ ಬಂದ ಕನಕಗಿರಿಯಲ್ಲಿಯ ಒಂದು ಐತಿಹ್ಯದಿಂದ ಸ್ಪಷ್ಟವಾಯಿತು. ಈ ಮುಂದೆ ಆ ಐತಿಹ್ಯದ ಪರಿಶೀಲನೆಯಲ್ಲಿ ಮೊದಲ ಐತಿಹ್ಯಗಳೆರಡು ಗೋಪುರದ ಕರ್ತೃವನ್ನು ಅಪರೋಕ್ಷವಾಗಿ ಹೇಗೆ ಉಲ್ಲೇಖಿಸುತ್ತಿವೆ ಎನ್ನುವುದು ತಿಳಿಯುತ್ತದೆ.

### ಕನಕಗಿರಿ ಐತಿಹ್ಯ ಹಾಗೂ ಗೋಪುರದ 'ಕನಕಗಿರಿ' ನಾಮ ಪರಿಶೀಲನೆ:

ಪ್ರಸ್ತುತ ಗೋಪುರಕ್ಕೆ ಕನಕಗಿರಿ ಎಂದು ಹೆಸರಿರುವುದರಿಂದ ಅದಕ್ಕೂ ಕನಕಗಿರಿಗೂ ಸಂಬಂಧವಿರುವುದು ಸೂಚಿತವಾಗುತ್ತದೆ. ಅಲ್ಲದೇ ಗೋಪುರದ ನಿರ್ಮಾಣಕ್ಕೆ ಸಂಬಂಧಿಸಿದ ಐತಿಹ್ಯವೊಂದು ಕನಕಗಿರಿಯಲ್ಲಿ ಪ್ರಚಲಿತದಲ್ಲಿದೆ. ಹಾಗಾಗಿ ಕನಕಗಿರಿಯ ಚರಿತ್ರೆಯ ಅವಲೋಕನದ ಮೂಲಕ ಗೋಪುರದ ನಿರ್ಮಾಣದ ಬಗೆಗೆ ಪರಿಶೀಲಿಸುವುದು ಸರಿ ಎನಿಸುತ್ತದೆ.

ಕನಕಗಿರಿ ಪಾಳೆಯಪಟ್ಟು ಕ್ರಿ.ಶ. 1436 ರಿಂದ 1833ರ ವರೆಗೆ ಅಸ್ತಿತ್ವದಲ್ಲಿತ್ತು. ಈ ಅವಧಿಯಲ್ಲಿ ಗುಜ್ಜಲವಂಶದ ಒಂಭತ್ತು ಜನ ನಾಯಕರು ವಿಜಯನಗರ, ಆನಂತರ ಬಿಜಾಪುರ ಮತ್ತು ಹೈದರಾಬಾದ್ ರಾಜ್ಯಗಳಿಗೆ ಅಧೀನರಾಗಿ ಅಧಿಕಾರ ನಡೆಸಿದರು.[13] ಈ ಪಾಳೆಯಗಾರರ ಆಳ್ವಿಕೆ ಮತ್ತು ಚಟುವಟಿಕೆಗಳ ಬಗ್ಗೆ ಅನೇಕ ಪರಂಪರಾಗತ ಐತಿಹ್ಯಗಳು ಕನಕಗಿರಿ ಪ್ರದೇಶದಲ್ಲಿ ಪ್ರಚಲಿತದಲ್ಲಿವೆ. ಇವರ ಕೆಲವು ಶಾಸನಗಳು[14] ಮತ್ತು ಸಾಹಿತ್ಯಿಕ ಉಲ್ಲೇಖಗಳು ದೊರೆಯುತ್ತವೆ. ಇವುಗಳಿಂದ ಐತಿಹ್ಯಗಳನ್ನು ಪರಿಶೀಲಿಸಲಾಗಿ ಅವುಗಳಲ್ಲಿ ಹೆಚ್ಚಿನ ಸತ್ಯಾಂಶ ಕಂಡುಬಂದಿದೆ. ಹೀಗಾಗಿ ಈ ಐತಿಹ್ಯಗಳನ್ನು ಸಂಪೂರ್ಣವಾಗಿ ದಂತಕತೆಗಳೆಂದು ನಿರ್ಧರಿಸಿ ತಳ್ಳಿಹಾಕುವಂತಿಲ್ಲ.

ಪ್ರಸ್ತುತ ಐತಿಹ್ಯಗಳ ಪ್ರಕಾರ ಪರಸಪ್ಪನಾಯಕ ಕನಕಗಿರಿಯ ಮೊದಲ ದೊರೆ (ಕ್ರಿ.ಶ. 1436-1510). ಇವನ ಮಗ ನವಾಬ ಉಡಚಪ್ಪನಾಯಕ (ಕ್ರಿ.ಶ. 1510-1533) ಕೃಷ್ಣದೇವರಾಯನ ಕಾಲದಲ್ಲಿ ಆಡಳಿತ ನಡೆಸಿದನು. ಇವನಿಗೆ ನವಾಬನೆಂಬ ಹೆಸರು ಹೇಗೆ ಬಂತೆನ್ನುವುದು ತಿಳಿಯುವುದಿಲ್ಲ. ವಾಸ್ತು ಪ್ರೇಮಿಯಾಗಿದ್ದ ಇವನು ಕನಕಗಿರಿ ಸಹಿತ ಎಮ್ಮಿಗುಡ್ಡ, ನವಲಿ (ಗಂಗಾವತಿ ತಾಲೂಕು)ಗಳಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾನೆ. ಅನೇಕ ಸ್ಮಾರಕಗಳ ರಚನೆಯಿಂದಾಗಿ ಇವನ ಕಾಲದಲ್ಲಿ ಕನಕಗಿರಿ ಒಂದು ಪ್ರಾದೇಶಿಕ ಕಲಾಕೇಂದ್ರವಾಗಿ ರೂಪುಗೊಂಡಿತು.[15] ಇವನ ಈ ವಿಪುಲ ವಾಸ್ತು ನಿರ್ಮಾಣಕ್ಕೆ ಸೌರ್ವಭೌಮ ದೊರೆ ಕೃಷ್ಣದೇವರಾಯನ ನಿರ್ಮಾಣ ಚಟುವಟಿಕೆಗಳು ಪ್ರಭಾವ ಬೀರಿರಲಿಕ್ಕೂ ಸಾಕು. ನವಾಬ ಉಡಚಪ್ಪನಾಯಕ ಮೇಲಿನ ನಿರ್ಮಾಣಗಳಲ್ಲದೇ ಹಂಪಿಯ ವಿರೂಪಾಕ್ಷ ದೇವಾಲಯದ ಕನಕಗಿರಿ ಗೋಪುರವನ್ನು ನಿರ್ಮಿಸಿದನೆಂದು ಐತಿಹ್ಯ ಹೇಳುತ್ತದೆ.

ಕನಕಗಿರಿಯ ಈ ಐತಿಹ್ಯವು ಹಂಪಿಯ ಎರಡು ಐತಿಹ್ಯಗಳ ಮೂಲ ರೂಪವೆಂದು ಹೇಳಬಹುದು. ಗೋಪುರವನ್ನು ಕನಕಗಿರಿಯ ಮುಖ್ಯಸ್ಥನೊಬ್ಬ ಜೀರ್ಣೋದ್ಧಾರ ಮಾಡಿದನೆಂಬ ಮತ್ತು ಹೈದರಾಬಾದ್ ನವಾಬ ಕಟ್ಟಿಸಿದನೆಂಬ ಹೇಳಿಕೆಗಳು ಅಪರೋಕ್ಷವಾಗಿ ಕನಕಗಿರಿಯ ನವಾಬ ಉಡಚಪ್ಪ ನಾಯಕನನ್ನೇ ಸೂಚಿಸುತ್ತವೆಂದು ಹೇಳಬಹುದು. ಹೇಗೆಂದರೆ ಚಿಕ್ಕ ಪಾಳೆಯಗಾರ ನವಾಬ ಉಡಚಪ್ಪ ನಾಯಕನ ಈ ಬೃಹತ್ ನಿರ್ಮಾಣ ಕಾರ್ಯವು ಕಾಲಕ್ರಮೇಣ ಉಪೇಕ್ಷಿತಗೊಂಡು ಅವನನ್ನು ಕೇವಲ ಜೀರ್ಣೋದ್ಧಾರಕನೆಂದು ಪರಿಗಣಿಸಲಾಗಿರುವುದು. ಹಾಗೆ ಈ ನಾಯಕನ ನವಾಬನೆಂಬ ವಿಶೇಷ ಅಭಿದಾನ ಜನರಲ್ಲಿ ಗೊಂದಲಕ್ಕೀಡುಮಾಡಿ ಕಾಲಕ್ರಮೇಣ ನವಾಬನೆಂದರೆ ಹೈದರಾಬಾದ್ ನವಾಬ (ನಿಜಾಮ)ನೆಂಬ ತಿಳುವಳಿಕೆಗೆ ಕಾರಣವಾಗಿದೆ. ವಾಸ್ತವಿಕವಾಗಿ ಕನಕಗಿರಿಯ ದೊರೆ ನವಾಬ ಉಡಚಪ್ಪ ನಾಯಕನೇ ಗೋಪುರದ ಕರ್ತೃ ಎಂದು ಸ್ಪಷ್ಟವಾಗುತ್ತದೆ.

ಗೋಪುರದ ವಾಸ್ತು ಅಲಂಕರಣೆಯನ್ನು ಅನುಲಕ್ಷಿಸಿ ಅದು 16ನೆಯ ಶತಮಾನದ ಕೊನೆ ಇಲ್ಲವೇ 18ನೆಯ ಶತಮಾನದ ರಚನೆಯೆಂದು ನಂಬಲಾಗಿರುವುದು ಸರಿ ಎನಿಸುವುದಿಲ್ಲ. ಏಕೆಂದರೆ ನವಾಬ ಉಡಚನಾಯಕ ನಿರ್ಮಿಸಿರುವ ಕನಕಗಿರಿಯ ಲಕ್ಷ್ಮೀನರಸಿಂಹ ದೇವಾಲಯದ ಗರ್ಭಗೃಹದ ಗೋಪುರದಲ್ಲೂ ಇದೇ ರೀತಿಯ ಗುಂಪು ಕಂಬಗಳ ಅಲಂಕರಣಗಳನ್ನು ಕಾಣಬಹುದು ಇದರಿಂದ ಈ ಅಲಂಕರಣ ವಿಧಾನವು 16ನೆಯ

ಶತಮಾನದ ಆರಂಭದಲ್ಲೇ (ನವಾಬ ಉಡಚಪ್ಪನಾಯಕನ ಕಾಲ) ರೂಢಿಯಲ್ಲಿದ್ದಿತೆಂದು ತಿಳಿಯಬಹುದು. ಆದರೆ ಗೋಪುರದಲ್ಲಿಯ ಕೀರ್ತಿಮುಖಗಳ ಹಾಗೂ ದ್ವಾರಪಾಲರ ಶಿಲ್ಪಗಳು ನಂತರದ ರಚನೆಗಳಂತೆ ತೋರುತ್ತವೆ. ಈ ಮೊದಲೇ ಗಮನಿಸಿದಂತೆ ಗೋಪುರದ ಉತ್ತರ ಮುಖದಲ್ಲಿರುವ ತಿಂಮಣ ಎಂಬ ವ್ಯಕ್ತಿಯ ಪ್ರತಿಮೆ ಹಾಗೂ ಈ ಕೀರ್ತಿಮುಖ ಮತ್ತು ದ್ವಾರಪಾಲರ ಶಿಲ್ಪಗಳು ಒಂದೇ ಕಾಲದವೆಂದು ಕಂಡುಬರುತ್ತವೆ. ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ, ಮೂಲ ಗೋಪುರದ ರಚನೆಯ ನಂತರ ಗಣ್ಯ ವ್ಯಕ್ತಿಯಾಗಿದ್ದಿರಬಹುದಾದ ತಿಂಮಣ್ಣ ಎಂಬವನು ಗೋಪುರವನ್ನು ಪ್ರಸ್ತುತ ಶಿಲ್ಪಗಳಿಂದ ಅಲಂಕರಿಸಿ (18ನೇ ಶತಮಾನ) ಈ ಸಂದರ್ಭದಲ್ಲೇ ಅವನು ತನ್ನ ಹಾಗೂ ತನ್ನ ಹೆಂಡತಿಯ ಪ್ರತಿಮೆಗಳನ್ನು ಸ್ಥಾಪಿಸಿಕೊಂಡಿರಬಹುದಾದ ಸಾಧ್ಯತೆಯಿದೆ. ಈ ಅಲಂಕರಣೆಯಲ್ಲದೆ, ಕ್ರಿ.ಶ. 1837ರಲ್ಲಿ ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಆಗಿದ್ದ ಮಿಸ್ಟರ್ ರಾಬರ್ಟ್‌ಸನ್ ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಈ ಗೋಪುರದ ದುರಸ್ತಿ ಕಾರ್ಯಗಳನ್ನು ಕೈಗೊಂಡಿದ್ದಾಗಿ ತಿಳಿಯುತ್ತದೆ.[16] ಹೀಗೆ ಈ ದುರಸ್ತಿ ಮತ್ತು ಅಲಂಕರಣೆಗಳಿಂದ ಗೋಪುರ 16ರ ಕೊನೆ ಇಲ್ಲವೇ 18ನೇ ಶತಮಾನದ ರಚನೆ ಎಂದು ಭಾವಿಸಲು ಕಾರಣವಾಗಿದೆ. ಒಂದು ವೇಳೆ ಅದು 18ನೇ ಶತಮಾನದ ರಚನೆಯಾಗಿದ್ದರೆ ಅಷ್ಟು ಗಮನಾರ್ಹ ಪ್ರಮಾಣದಲ್ಲಿರುತ್ತಿರಲ್ಲಿಲ್ಲ. ಏಕೆಂದರೆ ಆ ಸಮಯದಲ್ಲಿ ಇಂಥ ಬೃಹತ್ ವಾಸ್ತುವನ್ನು ನಿರ್ಮಿಸಲು ಸಾಧ್ಯತೆ ಇದ್ದ ಸ್ಥಳೀಯ ರಾಜಕೀಯ ಶಕ್ತಿಗಳಾವುವು ಅಸ್ತಿತ್ವದಲ್ಲಿರಲಿಲ್ಲ. ಅಲ್ಲದೇ ಈ ಅವಧಿಯಲ್ಲಿ ವಿರೂಪಾಕ್ಷ ದೇವಾಲಯದಲ್ಲಿ ಯಾವುದೇ ಪ್ರಮುಖ ವಾಸ್ತು ಭಾಗಗಳು ಸೇರ್ಪಡೆಗೊಂಡಿಲ್ಲ. ಹೆಚ್ಚೆಂದರೆ ಕೆಲವು ಗಾರೆ ಪ್ರತಿಮೆಗಳನ್ನು ನಿರ್ಮಿಸಲಾಗಿರುವುದು. ಒಟ್ಟಿನಲ್ಲಿ ಕನಕಗಿರಿ ಗೋಪುರ 16ನೆಯ ಶತಮಾನದ ಆರಂಭಕಾಲದ (ನವಾಬ ಉಡಚಪ್ಪ ನಾಯಕನ ಕಾಲ) ರಚನೆ ಎನ್ನುವುದು ಸ್ಪಷ್ಟ.

ಹಂಪಿ ಮತ್ತು ಕನಕಗಿರಿಗಳಲ್ಲಿಯ ಐತಿಹ್ಯಗಳು, ವಿದ್ವಾಂಸರ ಅಭಿಪ್ರಾಯ, ಗೋಪುರದ ವಾಸ್ತು, ಇವೆಲ್ಲವುಗಳ ಪರಿಶೀಲನೆ, ವಿಶ್ಲೇಷಣೆ ಮತ್ತು ವಿವೇಚನೆಯಿಂದ ಸ್ಪಷ್ಟವಾಗುವ ಸಂಗತಿಯೆಂದರೆ, ಹಂಪಿ ವಿರೂಪಾಕ್ಷ ದೇವಾಲಯದ ಉತ್ತರದ ಗೋಪುರವನ್ನು ಕನಕಗಿರಿಯ ಎರಡನೆಯ ಪಾಳೆಯಗಾರ ನವಾಬ ಉಡಚನಾಯಕ ತನ್ನ ಆಳ್ವಿಕೆಯ ಕಾಲದಲ್ಲಿ ಅಂದರೆ ಕ್ರಿ.ಶ. 1510 ರಿಂದ 1533ರ ಅವಧಿಯಲ್ಲಿ (16ನೆಯ ಶತಮಾನದ ಆರಂಭ ಕಾಲ) ನಿರ್ಮಿಸಿರುವುದು. ಆದ್ದರಿಂದಲೇ ಅದಕ್ಕೆ ಕನಕಗಿರಿ ಗೋಪುರವೆಂದು ಹೆಸರಾಗಲು ಕಾರಣವಾಗಿದೆ.

## ಟಿಪ್ಪಣಿಗಳು

1. Neelakanta Sastri K.A. and Venkataramanayya N., 1946, *Further Sourcess of Vijayanagara History*, Vol. I, Madras.
2. ಬಸಪ್ಪ ಎಸ್. (ಸಂ), 1970, *ಶಿವತತ್ವ ಚಿಂತಾಮಣಿ* (ಲಕ್ಕಣ್ಣ ದಂಡೇಶ), ಮೈಸೂರು.
3. *SII*, IV, No. 259.
4. ನನ್ನ ಪರಿಶೀಲನೆಯಲ್ಲಿ ಗಮನಕ್ಕೆ ಬಂದ ಅಪ್ರಕಟಿತ ಶಾಸನ.
5. ವಸುಂಧರಾ ಫಿಲಿಯೋಜಾ, 1979, *ಹಂಪೆ*, ಧಾರವಾಡ.
6. ರಾಜಶೇಖರ ಸಿಂದಗಿ, 1988, *ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ*, ಧಾರವಾಡ.
7. ಪಾಟೀಲ ಸಿ.ಎಸ್., 1997, "ಕಲೆ ಮತ್ತು ವಾಸ್ತುಶಿಲ್ಪ" *ಕರ್ನಾಟಕ ಚರಿತ್ರೆ*, ಸಂ. 3, ಹಂಪಿ.
8. ರಾಜಶೇಖರ ಎಸ್., 1989, "ಹಂಪೆಯ ವಿರೂಪಾಕ್ಷ ದೇವಾಲಯ ಸಮೂಹ : ಕಾಲಾನುಕ್ರಮ ಅಧ್ಯಯನ" *ಇತಿಹಾಸ ದರ್ಶನ*, ಸಂ. 4, ಬೆಂಗಳೂರು.
9. John M. Fritz and George Michell, 1991, *The City of Victory*, New York.
10. ವೀಣಾ ಎಂ.ಪಿ., 1996, "ಹಂಪಿ ವಿರೂಪಾಕ್ಷ ದೇವಾಲಯ ಮತ್ತು ವಿಜಯನಗರದರಸರು" *ಹಂಪಿ ಪರಂಪರೆ*, ಹೊಸಪೇಟೆ.
11. ಸುರೇಶ, ಕೆ.ಎಂ., 1996, "ಹಂಪಿಯ ರಾಯಗೋಪುರಗಳು" *ಹಂಪಿ ಪರಂಪರೆ*, ಹೊಸಪೇಟೆ.
12. ವಿರೂಪಾಕ್ಷಿ ಪೂಜಾರಹಳ್ಳಿ, 1996, "ಹಂಪಿ ಸ್ಮಾರಕಗಳ ರಕ್ಷಣಾ ಕಾರ್ಯಗಳು : ಕಲೆಕ್ಟರುಗಳ ಆಳ್ವಿಕೆಯಲ್ಲಿ" *ಹಂಪಿ ಪರಂಪರೆ*, ಹೊಸಪೇಟೆ.
13. ಶರಣಬಸಪ್ಪ ಕೋಲ್ಕಾರ, 1994, "ಕನಕಗಿರಿ ಪ್ರದೇಶದ ಸ್ಮಾರಕಗಳು ಮತ್ತು ಮೂರ್ತಿಶಿಲ್ಪಗಳು" ಅಪ್ರಕಟಿತ ಎಂ.ಫಿಲ್. ಪ್ರಬಂಧ, ಧಾರವಾಡ.
14. Patil C.S. and Vinoda C. Patil, *Inscriptions of Koppal District*, No. 398 to 905, Mysore.
15. ಶರಣಬಸಪ್ಪ ಕೋಲ್ಕಾರ, *ಪೂರ್ವೋಕ್ತ*.
16. Gribble J.D.E., 1981, *History of Deccan*, Vol. I, p. 77.

# 7. ಛತ್ರದಹಳ್ಳಿ ಮತ್ತು ತಂಬ್ರಹಳ್ಳಿಯ ಬಾವಿಗಳು

– ಚನ್ನಬಸಪ್ಪ ಎಸ್. ಪಾಟೀಲ

ಪ್ರವಾಸಿಗರಿಗೆ ನೀರು ಮತ್ತು ನೆರಳನ್ನು ಒದಗಿಸುವುದು ಇತಿಹಾಸ ಪ್ರಾರಂಭಕಾಲದಿಂದ ರೂಢಿಯಲ್ಲಿದೆ. ವಿಜಯನಗರ ಕಾಲದಲ್ಲಿ ಇಂತಹ ಸೌಕರ್ಯ ಒದಗಿಸಿದ್ದುದು ಅನೇಕ ಶಾಸನಗಳಿಂದ ತಿಳಿಯುತ್ತವೆ. ವಿಜಯನಗರ ಪಟ್ಟಣ ಪರಿಸರದಲ್ಲಿ ಅಹಮದ್‌ಖಾನನು ಕಟ್ಟಿಸಿದ ಧರ್ಮಶಾಲೆ ಮತ್ತು ಬಾವಿ,[1] ಸೋವಣ್ಣಅಣ್ಣ ಕಟ್ಟಿಸಿದ ಮಾಳಿಗೆಕೂಪಾರಾಮ ಮತ್ತು ಅರವಟ್ಟಿಗೆ[2] ಮತ್ತು ಬಢ್ಢೆಯನಾಯಕ ಕಟ್ಟಿಸಿದ ಒರತೆಯಕುಂಡ ಮತ್ತು ಆಲದ ಅರವೆ[3]ಗಳನ್ನು ಇಲ್ಲಿ ಗಮನಿಸಬಹುದು. ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿಯ ಛತ್ರದಹಳ್ಳಿ ಮತ್ತು ತಂಬ್ರಹಳ್ಳಿಗಳಲ್ಲಿ ಇಂತಹ ವ್ಯವಸ್ಥೆಯಿದ್ದುದು ಶಾಸನಗಳಿಂದ ಮತ್ತು ಬಾವಿಗಳಿಂದ ತಿಳಿಯುತ್ತದೆ.

ಛತ್ರದಹಳ್ಳಿಯ ಹೆಸರೇ ಸೂಚಿಸುವಂತೆ ಅಲ್ಲಿ ಪ್ರವಾಸಿಗಳ ಅನುಕೂಲಕ್ಕಾಗಿ ಛತ್ರವಿದ್ದಿರಬೇಕು. ಈ ಊರಲ್ಲಿಯ ಬಾವಿಯ ಪ್ರವೇಶದ ಕಂಬದ ಮೇಲಿನ ಕ್ರಿ.ಶ. 1543ರ ಶಾಸನದಿಂದ ಛತ್ರದಹಳ್ಳಿಯ ಯೆಲವಣ್ಣನು ಬಾವಿಯನ್ನು ಕಟ್ಟಿಸಿ ಮಾರ್ಗದ ಸಾಲುಮರಗಳನ್ನು ನೆಟ್ಟನೆಂಬುದು ತಿಳಿಯುತ್ತದೆ.[4] ಅದೇ ಊರಲ್ಲಿಯ ವಿಜಯನಗರ ಅರಸ ಸದಾಶಿವದೇವರಾಯನ ಕ್ರಿ.ಶ. 1559ರ ಶಾಸನವು ಊರಜನ ಧರ್ಮದ ಡೋಣಿಗೆ ನೀರೆತ್ತುವುದಕ್ಕಾಗಿ ಭೂಮಿಯನ್ನು ದಾನವಾಗಿ ಕೊಟ್ಟುದುದನ್ನು ತಿಳಿಸುತ್ತದೆ. ಉಪ್ಪಾರರು ನೀರೆತ್ತುವವನಿಗೆ ಪ್ರತಿ ಮೋಳಿಗೆ ಎರಡು ಬಳ್ಳ ಉಪ್ಪನ್ನು ಕೊಟ್ಟರು. ವೋಜುಗಳು (ಕಮ್ಮಾರರು) ನೀರಿನ ಬಾನ ಮತ್ತು ಕಟ್ಟನ್ನು ಧರ್ಮವಾಗಿ ಕೊಟ್ಟರು ಮತ್ತು ಗಾವುಂಡಗಳು ನೀರೆತ್ತುವವನಿಗೆ ಈಚಲ ಮರವನ್ನು ಬಿಟ್ಟರು.[5]

ಛತ್ರದಹಳ್ಳಿ ಈಗ ತುಂಗಭದ್ರಾ ಅಣೆಕಟ್ಟಿನಲ್ಲಿ ಮುಳುಗಿಹೋಗಿದೆ. ಶಾಸನದಲ್ಲಿ ಉಲ್ಲೇಖಗೊಂಡ ಬಾವಿಯು ಅಣೆಕಟ್ಟಿನ ನೀರು ಹಿಂಡೆ ಸರಿದಾಗ ಕಾಣುತ್ತದೆ. ಬಾವಿಯು ಶಿಥಿಲಾವಸ್ಥೆಯಲ್ಲಿದೆ. ಅಣೆಕಟ್ಟೆಯ ಹಿನ್ನೀರನ್ನು ಕಾಲುವೆಗೆ ಹರಿಸಲು ಅವಶ್ಯಕವಾದ ಪಂಪನ್ನು ಕೂಡಿಸುವುದಕ್ಕಾಗಿ ಪಂಪಿನ ಮನೆಯನ್ನು ಕಟ್ಟಲು ಬಾವಿಯ ಪ್ರವೇಶದ ಮತ್ತು ಇತರ ಭಾಗದ ಕೆಲವು ಕಲ್ಲುಗಳನ್ನು ಉಪಯೋಗಿಸಿ ಬಾವಿಯನ್ನು ಹಾಳುಗೆಡುವಲಾಗಿದೆ (ಚಿತ್ರ 39). ಈಗಿರುವ ಅವಶೇಷಗಳನ್ನು ಗಮನಿಸಿದಾಗ ಚೌಕಾಕಾರದ ಬಾವಿಗೆ ಉತ್ತರ ದಿಕ್ಕಿನಲ್ಲಿ ಮೆಟ್ಟಿಲುಗಳ ಪ್ರವೇಶವಿರುವುದು ತಿಳಿಯುತ್ತದೆ. ಮತ್ತೊಂದು ಶಾಸನದಲ್ಲಿ ಉಲ್ಲೇಖಗೊಂಡ ಧರ್ಮದ ಡೋಣಿಯು ಬಾವಿಯ ಉತ್ತರಕ್ಕೆ ಸುಮಾರು 30 ಮೀ. ದೂರದಲ್ಲಿದೆ. ಇದನ್ನು ಸಂಪೂರ್ಣವಾಗಿ ಒಡೆದು ಹಾಕಲಾಗಿದೆ. ಆಯತಾಕಾರದ ಡೋಣಿಯ ಕಲ್ಲುಗಳನ್ನು ಕಿತ್ತಿಕೊಂಡು ಹೋಗಿರುವುದರಿಂದ ಸುಣ್ಣದ ಕಾಂಕ್ರೀಟಿನ ದೊಡ್ಡ ಗಾತ್ರದ ತುಂಡುಗಳು ಮಾತ್ರ ಉಳಿದಿವೆ. ಇದರ ಪಕ್ಕದಲ್ಲಿಯೇ ಡೋಣಿಯ ವಿವರಗಳನ್ನು ನೀಡುವ ಶಾಸನ ಬಿದ್ದಿದೆ (ಚಿತ್ರ 40).

ಛತ್ರದಹಳ್ಳಿಯ ಛತ್ರವು ಪ್ರವಾಸಿಗರಿಗೆ ತಂಗುದಾಣವಾಗಿದ್ದರೆ, ಸಾಲುಮರಗಳು ಅವರ ಕುದುರೆ ಮತ್ತು ಎತ್ತುಗಳಿಗೆ ನೆರಳನ್ನು ಒದಗಿಸುತ್ತಿದ್ದವು. ಬಾವಿ ಮತ್ತು ಧರ್ಮದ ಡೋಣಿ ಜನರಿಗೆ ಮತ್ತು ಪ್ರಾಣಿಗಳಿಗೆ ನೀರನ್ನು ಒದಗಿಸುತ್ತಿದ್ದವು.

ತಂಬ್ರಹಳ್ಳಿಯೂ ಸಹ ಅಣೆಕಟ್ಟಿನ ನೀರಿನಲ್ಲಿ ಮುಳುಗಿದೆ. ಆದರೆ ಬಾವಿಯಿರುವ ಪ್ರದೇಶವು ಚಿಕ್ಕ ಬೆಟ್ಟದ ಬುಡದಲ್ಲಿ ಎತ್ತರವಾದ ಪ್ರದೇಶದಲ್ಲಿರುವುದರಿಂದ ಮುಳುಗಡೆಯಾಗಿಲ್ಲ. ಚೌಕಾಕಾರದ ದೊಡ್ಡ ಬಾವಿಗೆ ಪೂರ್ವ ದಿಕ್ಕಿನಲ್ಲಿ ಪ್ರವೇಶವಿದ್ದು ಉಳಿದ ಮೂರು ಬದಿಗಳ ಮಧ್ಯದಲ್ಲಿ ಮುಂದೆ ಚಾಚಿದ ಕಟ್ಟೆಗಳಿವೆ. ಕಟ್ಟೆಗಳನ್ನು ಕೆಳಗಿನ ದೊಡ್ಡ ಬೋದಿಗೆಗಳು ಹೊತ್ತು ನಿಂತಿವೆ. ಕೆಳಗೆ ಬೋದಿಗೆಗಳ ಮಧ್ಯದಲ್ಲಿ ಗೋಡೆಗಳ ಮೇಲೆ ಗಣೇಶ, ಅಂಜನೇಯ ಮತ್ತು ಗರುಡನ ಉಬ್ಬು ಶಿಲ್ಪಗಳಿವೆ. ಈ ಕಟ್ಟೆಗಳನ್ನು ಬಾವಿಯಿಂದ ನೀರನ್ನು ಮೇಲೆತ್ತುವುದಕ್ಕಾಗಿ ಕಟ್ಟಲಾಗಿದೆ. ಉದ್ದವಾದ ಪ್ರವೇಶ ಮಾರ್ಗದ ಪ್ರಾರಂಭದಲ್ಲಿ ನೆಲದ ಮೇಲೆ ಕಟ್ಟಿದ ಮುಖಮಂಟಪವಿದೆ (ಚಿತ್ರ 41). ಮುಂಭಾಗದಲ್ಲಿ ತೆರೆದ ಮುಖಮಂಟಪದಲ್ಲಿ ಮೂರು ಅಂಕಣಗಳಿವೆ. ಮಧ್ಯದ ಅಂಕಣದ ಪಶ್ಚಿಮ ಭಾಗದಲ್ಲಿ ವರ್ತುಲಾಕಾರದ ಕಮಾನಿನ ಪ್ರವೇಶವಿದ್ದು ಪಕ್ಕದ ಅಂಕಣಗಳಲ್ಲಿ ಎತ್ತರದ ವೇದಿಕೆಯ ಮೇಲೆ ಕಂಬಗಳಿವೆ. ವಿಜಯನಗರ ಶೈಲಿಯ ಕಂಬಗಳು ಮೂರು ಚೌಕಾಕಾರದ ಭಾಗವನ್ನು ಮತ್ತು ಮೇಲೆ ಮಡಕೆಯಾಕಾರದ ಭಾಗವನ್ನು ಹೊಂದಿವೆ. ಚೌಕಾಕರದ ಭಾಗಗಳ ಮೇಲೆ ಲಿಂಗವನ್ನು ಪೂಜಿಸುತ್ತಿರುವ ಮೃಗಪುರುಷ, ಗಂಡಭೇರುಂಡ, ಅಂಜನೇಯ, ಪರ್ವತವನ್ನು ಎತ್ತಿರುವ ಅಂಜನೇಯ, ಮನುಷ್ಯನ ರೂಪದಲ್ಲಿರುವ ಗರುಡ, ನಾಗಬಂಧ, ಲಿಂಗ ಮತ್ತು ವಿಷ್ಣುವಿನ ಉಬ್ಬು ಶಿಲ್ಪಗಳಿವೆ. ಪ್ರವೇಶದ ಪಾರ್ಶ್ವಗಳಲ್ಲಿ ಅಧಿಷ್ಠಾನವನ್ನು ಹೂ, ಹಂಸ, ಆಮೆ, ಮೀನು, ಗಜಲಕ್ಷ್ಮಿ, ಆನೆಗಳು ಮತ್ತು ಮಂಗಗಳ ಉಬ್ಬು ಶಿಲ್ಪಗಳಿಂದ ಆಲಂಕರಿಸಿದೆ. ವರ್ತುಲಾಕಾರದ ಕಮಾನನ್ನು ಗೋಡೆಯ ಕಲ್ಲುಗಳನ್ನು ಕ್ರಮೇಣವಾಗಿ ಮುಂದೆ ಚಾಚಿ, ಅವುಗಳ ಬದಿಯನ್ನು ಸೂಕ್ತವಾಗಿ ಕತ್ತರಿಸಿ ಮಾಡಲಾಗಿದೆ. ಕಮಾನಿನ ಮೇಲೆ ಏಳು ಹೆಡೆಗಳ ಸರ್ಪದ ನಾಗಬಂಧವಿದೆ. ಅದರ ಮೇಲೆ ಒಂದೇ ಹೆಡೆಯ ಉದ್ದವಾದ

ಹಾವಿದೆ. ಮುಖಮಂಟಪದ ಹೊರಗೋಡೆಗಳ ಮೇಲೆ ಅಂಜಲಿ ಮುದ್ರೆಯಲ್ಲಿ ನಿಂತಿರುವ ಮನುಷ್ಯ, ಕಾಮನಿರತರಾದ ಸ್ತ್ರೀ–ಪುರುಷರು, ಮೀನು, ಆಮೆ, ಸಿಂಹ ಮತ್ತು ಪಕ್ಷಿಗಳ ಉಬ್ಬು ಶಿಲ್ಪಗಳಿವೆ. ಉದ್ದವಾದ ಪ್ರವೇಶದಲ್ಲಿ ಮೆಟ್ಟಿಲುಗಳು ಮತ್ತು ನಡುನಿಲ್ಲೆಡೆ (landings)ಗಳಿವೆ (ಚಿತ್ರ 43). ಪ್ರವೇಶದ ಮಧ್ಯ ಭಾಗದಲ್ಲಿ ಒಂದೊಂದು ಬದಿಗೆ ಗೋಡೆಯಲ್ಲಿ ಎರಡೆರಡು ಗೂಡುಗಳಿವೆ. ಮೇಲೆ ಕಮಾನಿನಾಕಾರವಿರುವ ಈ ದೊಡ್ಡ ಗೂಡುಗಳಲ್ಲಿ ಕೆಲವು ಜನ ಕುಳಿತು ವಿಶ್ರಾಂತಿ ಪಡೆಯಬಹುದು (ಚಿತ್ರ 44). ಗೂಡುಗಳ ಪಕ್ಕದಲ್ಲಿ ಗೋಡೆಗಳ ಮೇಲೆ ಮೀನನ್ನು ತಿನ್ನುತ್ತಿರುವ ಪಕ್ಷಿ, ಒಂದನ್ನೊಂದು ಸುತ್ತಿಕೊಂಡ ಜೋಡಿ ನಾಗರ ಹಾವುಗಳು, ಏಳು ಹೆಡೆಯ ಹಾವು, ಆನೆ, ವ್ಯಾಳ, ಮಂಗ, ಮೀನು, ಮೀನಿನ ಮೇಲೆ ಕುಳಿತ ಮನುಷ್ಯ, ಆಮೆ, ಕಾಳಿಂಗಮರ್ದನ ಕೃಷ್ಣ, ವೇಣುಗೋಪಾಲ, ಆಂಜನೇಯ ಮತ್ತು ರುಮಾಲು ಸುತ್ತಿಕೊಂಡು ಕೈಮುಗಿದು ಕುಳಿತಿರುವ ಮನುಷ್ಯನ ಉಬ್ಬು ಶಿಲ್ಪಗಳಿವೆ. ಪ್ರವೇಶದ ಕೊನೆಯಲ್ಲಿ ಎತ್ತರ ಮತ್ತು ಚೂಪಾದ ಕಮಾನಿದೆ. ಗೋಡೆಯ ಕಲ್ಲುಗಳನ್ನು ಕ್ರಮೇಣವಾಗಿ ಮುಂದೆ ಚಾಚಿ, ಅವುಗಳ ಬದಿಯನ್ನು ಒಂದು ನಿರ್ದಿಷ್ಟ ಕೋನದಲ್ಲಿ ಕತ್ತರಿಸಿ ಕಮಾನನ್ನು ನಿರ್ಮಿಸಲಾಗಿದೆ. ಕಮಾನಿನ ಮೇಲೆ ಸೇತುವೆ ಮತ್ತು ಅದರ ಮೇಲೆ ಮಾಳಿಗೆ ಇವೆ (ಚಿತ್ರ 42). ಸೇತುವೆ ಮೇಲೆ ಹೋಗಲು ನೆಲಮಟ್ಟದಿಂದ 'L' ಆಕಾರದ ದಾರಿಯಿದೆ. ಉತ್ತರ ದಿಕ್ಕಿಗಿರುವ ದಾರಿಯು ಪೂರ್ವಾಭಿಮುಖವಾಗಿದ್ದು, ಇದರ ಚಿಕ್ಕ ಬಾಗಿಲಿನ ಮೇಲೆ ಗಣೇಶನ ಶಿಲ್ಪವಿದೆ.

ಬಾವಿಯ ನೀರನ್ನು ಮನುಷ್ಯರಿಗೆ, ಪಶುಗಳಿಗೆ ಮತ್ತು ನೀರಾವರಿಗೆ ಬಳಸಲಾಗುತ್ತಿತ್ತು. ಬಾವಿಯ ಮೂರು ಬದಿಗಳಲ್ಲಿರುವ ಏತದಿಂದ ಮೇಲೆತ್ತಿದ ನೀರನ್ನು ಮೊದಲು ಚಿಕ್ಕ ತೊಟ್ಟಿಗಳಲ್ಲಿ ಸಂಗ್ರಹಿಸಿ ನಂತರ ಕಾಲುವೆಯ ಮೂಲಕ ನೀರಾವರಿಗೆ ಬಳಸಲಾಗುತ್ತಿತ್ತು. ಈ ತೊಟ್ಟಿಗಳಲ್ಲಿ ಸಂಗ್ರಹಿಸಿದ ನೀರನ್ನು ಪಶುಗಳಿಗೆ ಉಪಯೋಗಿಸಲಾಗುತ್ತಿತ್ತು. ಮುಖಮಂಟಪ, ದೊಡ್ಡ ಗೂಡುಗಳು ಮತ್ತು ಮಾಳಿಗೆಯಿರುವ ಸೇತುವೆ ಮನುಷ್ಯರಿಗೆ ನೆರಳನ್ನು ಕೊಡುತ್ತಿದ್ದವು. ಬಾವಿಯ ಸುತ್ತಲು ಇರಬಹುದಾಗಿದ್ದ ಮರಗಳು ಪಶುಗಳಿಗೆ ನೆರಳನ್ನು ಕೊಡುತ್ತಿದ್ದವು.

**ಛತ್ರದಹಳ್ಳಿಯ ಬಾವಿಯ ಪ್ರವೇಶದ ಕಂಬದ ಮೇಲಿರುವ ಶಾಸನ**

1 ಶುಭಮಸ್ತು
2 ಷಹಲಿವಹನ
3 ಶಕವರುಷ
4 1465[ರ ಮೆಜಿ]
5 ಶೋಭಕ್ರುತ
6 ಸವಛರದ
7 ಕಾರ್ತಿಕ ಬ 10
8 ಬುದವಲು ಛತ್ರದ
9 ಲಿಯ ಗಉ[ಡ] ಪಾ
10 ಉಬೋತ ಮಗ ಯೆಲ
11 ವಣಗಳೂ ಯಿ ಬಾವಿ ಕ
12 ಟಿಸಿ ಮಾರ್ಗದ ಸಾಲು ಮ
13 ರಗಳ ಹಾಕಿದರೂ ಗ್ರಾಮ
14 [ಕ್ಕೆ] ಉತರ ಬಗದ ಕೆರೆ[ಯ]
15 [ಕ]ಟಿಸಿದರೂ ಛತ್ರದಹಳಿ
16 ಯಲು ಅರ್ಧ ಗಉಡಿ
17 ಕೆಯನು ನಂಮ ತಂದೆ
18 ತೆಂಮಂದಿರು ಯೀ[ಚಲ]
19 ಸಸಿಗಳ [ಕೆರೆ]ಯನು ಏ[ಕ್ರ]



ಛತ್ರದಹಳ್ಳಿ, ಬಾವಿ




ಛತ್ರದಹಳ್ಳಿ, ಡೋಣಿಯ ಅವಶೇಷಗಳು ಮತ್ತು ಶಾಸನ ಕಲ್ಲು



ತಂಬ್ರಹಳ್ಳಿ, ಬಾವಿಯ ಮುಖಮಂಟಪ



ತಂಬ್ರಹಳ್ಳಿ, ಬಾವಿಯ ದ್ವಾರದ ಮೇಲಿನ ಕಟ್ಟಡ



ತಂಬ್ರಹಳ್ಳಿ, ಬಾವಿಯ ದ್ವಾರದ ಮೇಲಿನ ಕಟ್ಟಡ ಮತ್ತು ಮುಖಮಂಟಪ

20 [ಯಿ]ಸಿಕೊಂಡು ಯೀ ಕೆರೆ [ದೇವಸ್ತಾ]

21 ನ ಮಾಡಿದ [ಧರ್ಮ] ಜಯ ಕತ್ತೆ

22 ತುಂ[ಣಿ] [ಕ]ಳ..

## ಛತ್ರದಹಳ್ಳಿಯ ಡೋಣೆಯ ಪಕ್ಕದಲ್ಲಿರುವ ಶಾಸನ

ಒಂದನೆಯ ಬದಿ

1 ಶ್ರೀ ಶುಭಮಸ್ತು [||*] ಸ್ವಸ್ತಿ ಜಯಾಬ್ಯುದಯ ಶಾಲಿವಾಹನ ಶಕವರು

2 ಷ 1481ನೆ ಶ್ರೀಮತು ಸಿಧಾರ್ಥಿ ಸಂವಛರದ ಜೇಷ್ಟ ಬ 7 ಲೂ ಶ್ರೀ ಮಂ

3 ನು ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಾಪ್ರತಾಪ ಶ್ರೀ ವೀ

4 ರ ಸದಾಶಿವ ಮಹಾರಾಯರೂ ರತ್ನ ಸಿಂಹಾಸನಜೂಡನಾಗಿ ಪ್ರಥಿವೀರಾ

5 ಜ್ಯಂಗೈಉತಿರಲಾಗಿ ಶ್ರೀ ಮಾಲ್ಯವಂತ ರಘುನಾಥ ದೇವರ ಅಮ್ರುತಪಡಿ

6 ಗೆ ಸಲುವ ಛತ್ರದಹಳಿಯ ರಾಯಪಗಉಡರು ಬುಸಣಗಉಡರು ಜೆಡಗಣ

7 ಗಉಡರು ಸೇನಭೋವ ನರಸಪನು ಪ್ರಜೆಗಳು ಕೊಟ ಧರ್ಮ ಏತದ ಡೋಣೆಗೆ

8 ನೀರ ಹೊಯಿವದಕೆ ಕೊಟ ಶಿಲಾಶಾಸನದ ದಾನ ಶಾಸನದ ಕ್ರಮವೆಂತೆಂದರೆ ನಾಉ

9 ನಂಮ ಗ್ರಾಮಕೆ ಧರ್ಮ ಡೋಣೆಗೆ ನೀರ ಹೊಯಿವದಕೆ ಉರಿಗೆ ಪಡುವಲು

10 ಆಲದ ಮರನ ಪಟಿಯನು ಧರ್ಮ ಏತದ ನೀರಯೆತುವದಕ ನಾಉ ಸ

11 ರ್ವ ಮಾನ್ಯವಾಗಿ ಬಿಟೆಉ ಯಿ ದರ್ಮಕೆ ಆವನೊಬನು ತಪ್ಪಿದರೆ ತಂದೆ ತಾಯನು

12 ವಾರಣಸಿಲಿ ಕೊಂದ ಪಾತಕಕೆ ಹೋಹರೂ ಗೋಬ್ರಾಹ್ಮರ ಕೊಂದ ಪಾತಕತೆ ಹೋ

13 ಹರು ಮತೆ ತಪ್ಪಿದರೆ ಕತೆ ತುಂಣಿ ತಿಂದು ಕಳ ಕುಡಿದರು ಶ್ರೀಶ್ರೀಶ್ರೀ

ಎರಡನೆಯ ಬದಿ

14 ಸಿದ್ದಾರ್ಥಿ ಸಂವಛರದ ಜೇಷ್ಟ ಬ 7 ಲು ಶ್ರೀ ಮತು ಸಾಗ

15 ರ ಕುಲಕೆ ಚಿಂತಾಮಣಿಗಳು ಉಪಾಜಬೋಉಗಳು ಚೆಡ

16 ಗಲಬೋವ ರಾಮಲಬೋವ ಬುಕೆಬೋವ ಯಿವರು ಮುಂತಾದ ಬೋ

17 ಉಗಳು ದರ್ಮದ ಡೋಣೆಗೆ ನೀರ ಎತುವನಿಗೆ ಮೋಳೆವೊಂದಕೆ ಯಿಬಳ ಉಪಿ

18 ನ ಲೆಕದಲು ಬಿಟು ಕೊಟೆಉ ಯಿ ಧರ್ಮಕೆ ಅವನೊಬನು ತಪಿದರೆ ಕತೆ ತು

19 ಂಣಿ ತಿಂದ ಕಳಕುಡಿದವರು ಶ್ರೀ [||*] ಸಿಧಾರ್ಥಿ ಸಂವತರದ ಜೇಷ್ಟ ಬ 7 ಲು

20 ಶ್ರೀಮತು ಕಾಳಕಾದೇವಿ ಕಮಟೇಶ್ವರದೇವರ ವರಪ್ರಸಾದಿಗಳಾದಂಥಾ ಸೋಮಲಐ

21 ಲ್ಲೋಜ ಗಟತಿಂಮೋಜ ಗೋಪುಲಪಲಿ ಮಲ್ಲೋಜ ಯಿವರು ಮುಂತಾದ ವೋ

22 ಜುಗಳು ಧರ್ಮಡೋಣೆಗೆ ನೀರ ಎತುವ ಕಬಿನದ ಏತದ ಬಾನ ಕಬಿನದ ಕ

23 ಟ್ಟು ಯಿಷ್ಟಂ ಧರ್ಮವನು ತಪದೆ ನಡಸಿ ಬಾಹೆಉ ಧರ್ಮಕೆ ಅವನಾನೊ

24 ಬ್ಬ ತಪಿದರೆ ಕತೆ ತುಂಣಿ ತಿಂದು ಕಳ ಕುಡಿದವರು ಶ್ರೀಶ್ರೀಶ್ರೀ

25 ಸಿಧಾರ್ಥಿ ಸಂವಛರದ ಜೇಷ್ಟ ಬ 7 ಲು ಶ್ರೀಮತು ಯೀಳಿಗರಾ ಪೆದಿಗೌ

26 ಡನ ಮಗ ಮಾಚಗೌಡ ಮಲ್ಲಗೌಡ ಪಾವಿರಾಲ ತಿಪಗೌಡ ಚಿಕಕನ



ತಂಬ್ರಹಳ್ಳಿ, ಬಾವಿಯ ದ್ವಾರದ ಪಕ್ಕದಲ್ಲಿರುವ ದೊಡ್ಡ ಗೂಡುಗಳು

27 ಕಗೌಡ ಬಚಾಯಿ ಕನಕಗೌಡರು ಕಾಚಗೌಡ ಚಿಕವೋಬಗೌಡ

28 ಯಿವರು ಮುಂತಾದ ಪ್ರಜೆಗಳು ನಾಲು ಧರ್ಮ ಡೋಣಿಗೆ ನೀರಯಿತು[ವ]

29 ನಿಗೆ ಅಂಣಗಳ ಕುಂಟೆವೊಳಗಣ ಯೀಚಲ ಮರನೂ ಬೆಟ್ಟು ಕೊಟ್ಟೆಉ

30 ಯಿದಕ್ಕೆ ಮೇರೆ ಅಂಣಗಳ ಕುಂಟೆ ಮೇರೆಯಾಗಿ ಕಡಮಲಕಟೆ ಸೀಮೆ ಮೇರೆ

31 ಯಾಗಿ ಯಿಷ್ಟನು ಬಿಟಕೊಟ್ಟೆಉ ಯೀ ಧರ್ಮಕೆ ಅವನಾನೊ

32 ಬ್ಬನು ತಪಿ[ದರೆ] . ಟಮದೇವರಾಣೆ ಮತೆ ತಪ್ಪಿದರೆ ಕತೆ ತುಂಣಿ

33 ತಿಂದು ಕಳ ಕುಡಿದವರು ಶ್ರೀ [||*]

## ಟಿಪ್ಪಣಿಗಳು

1. M.S. Nagaraja Rao, 1983, "Ahmadkhan's Dharmasala", M.S. Nagaraja Rao (Ed.), *Vijayanagara: Progress of Research 1979-83,* Mysore, pp. 64-65.

2. Channabasappa S. Patil, 1991, "Malige-Kupa-Arama at Malapanagudi", D.V. Devaraj and Channabasappa S. Patil (Eds.), *Vijayanagara: Progress of Research 1984-87,* Mysore, pp. 177-182.

3. D.V. Devaraj and Channabasappa S. Patil (Eds.), 1991, *Vijayanagara: Progress of Research 1984-87,* Mysore, Ins. No. 105, pp. 49-50.

4. *ARIE,* 1914-15, No. 509 of 1914.

5. *ಅದೇ,* No. 510 of 1914; *SII,* IX, ii, No. 670.

# 8. ಕನಕಗಿರಿಯ ವೆಂಕಟಪತಿ ಬಾವಿ

– ವಿನೋದಾ ಪಾಟೀಲ

ನಮ್ಮ ದೇಶದ ಭೌಗೋಳಿಕ ಸ್ಥಿತಿಯು ಜನರು ಹೆಚ್ಚಾಗಿ ಕೃಷಿಯಿಂದ ಬದುಕಲು ಸಾಧ್ಯವೆಂಬುದನ್ನು ಮನದಟ್ಟು ಮಾಡಿದೆ. ಕೃಷಿಗೆ ಅವಶ್ಯವಾದ ನೀರಿಗಾಗಿ ಮೊದಲು ಮಳೆಯ ಮೇಲೆ ಅವಲಂಬಿಸಬೇಕಾದಂತಹ ಪರಿಸ್ಥಿತಿಯಿತ್ತು. ಆದರೆ ಸಮಯಕ್ಕೆ ಸರಿಯಾಗಿ ಬಾರದ ಮಳೆಯಿಂದಾಗುವ ಅನಾನುಕೂಲತೆಗಳಿಂದ ಪರಿಹಾರ ಕಂಡುಕೊಳ್ಳಲು ನೀರಾವರಿ ಪದ್ಧತಿಯನ್ನು ಹುಟ್ಟು ಹಾಕಲೇ ಬೇಕಾಯಿತು. ಅವಶ್ಯಕತೆಯಿದ್ದಾಗ ಉಪಯೋಗಿಸಲು ನೀರನ್ನು ಶೇಖರಿಸಿಡಲು ಕೆರೆ, ಕಟ್ಟೆ, ಬಾವಿಗಳನ್ನು ಕಟ್ಟಿಸುವ ಪದ್ಧತಿಯು ಪ್ರಾಚೀನ ಕಾಲದಿಂದಲೇ ಪ್ರಾರಂಭವಾಗಿದೆ. ಅರಸರು, ಅಧಿಕಾರಿಗಳು ಮತ್ತು ಶ್ರೀಮಂತ ವರ್ಗದ ಜನರು ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಕೆರೆ ಬಾವಿಗಳನ್ನು ಕಟ್ಟಿಸಿದ ಉಲ್ಲೇಖಗಳು ಶಾಸನಗಳಲ್ಲಿ ದೊರೆಯುತ್ತವೆ. ಅದೇ ರೀತಿ ಪ್ರವಾಸಿಗರ ಅನುಕೂಲಕ್ಕಾಗಿ ಬಾವಿಗಳನ್ನು ಕಟ್ಟಿಸಿದ ಅನೇಕ ಉದಾಹರಣೆಗಳಿವೆ.


ಮೌರ್ಯ ಚಕ್ರವರ್ತಿ ಅಶೋಕನ, ಕ್ರಿಸ್ತಪೂರ್ವ ಮೂರನೇ ಶತಮಾನದ, ಏಳನೆಯ ಸ್ತಂಭ ಶಾಸನ ಹೀಗಿದೆ: "ಮಾರ್ಗದಲ್ಲಿ ಪಶುಗಳಿಗಾಗಿ, ಮನುಷ್ಯರಿಗಾಗಿ, ನೆರಳಿಗೆಂದು ಆಲದ ಮರಗಳನ್ನು ನೆಡಲಾಗಿದೆ. ಮಾವಿನ ತೋಪುಗಳನ್ನು ನಿರ್ಮಿಸಲಾಗಿದೆ. ಪ್ರತಿ ಅರ್ಧ ಕ್ರೋಶಕ್ಕೊಂದರಂತೆ ಬಾವಿಗಳನ್ನು ತೋಡಿಸಲಾಗಿದೆ. ತಂಗು ಮನೆಗಳನ್ನು ಕಟ್ಟಿಸಲಾಗಿದೆ. ಪಶುಗಳ, ಮನುಷ್ಯರ ಅನುಕೂಲಕ್ಕಾಗಿ ಅಲ್ಲಿಗಲ್ಲಿಗೆ ಅರವಟ್ಟಿಗೆಗಳನ್ನು ಇಡಲಾಗಿದೆ............... ದಯೆ, ದಾನ, ಸತ್ಯ, ಶುಚಿ, ಪ್ರಸನ್ನತೆ, ಸಾಧುತೆ ಇವುಗಳಿಂದ ಧರ್ಮಕಾರ್ಯ, ಧರ್ಮಾಚರಣೆಗಳು ಜನರಲ್ಲಿ ಹೆಚ್ಚುತ್ತವೆ."[1] ಜನರಿಗೆ ಮತ್ತು ಪಶುಗಳಿಗೆ ದಾರಿ ಮಧ್ಯದಲ್ಲಿ ನೀರು–ನೆರಳನ್ನು ಒದಗಿಸುವುದು ವಿಜಯನಗರ ಕಾಲದವರೆಗೆ ನಿರಂತರವಾಗಿ ನಡೆದುಬಂದಿದೆ. ವಿಜಯನಗರ ಕಾಲದಲ್ಲಿ ನೀರು ನೆರಳಿನೊಂದಿಗೆ ಪೂಜಾಸ್ಥಳದ ವ್ಯವಸ್ಥೆಯನ್ನೂ ಮಾಡಲಾಗಿದೆ. ಇಂತಹ ವ್ಯವಸ್ಥೆಗಳನ್ನೊಳಗೊಂಡ ಒಂದು ಬಾವಿ ಕನಕಗಿರಿಯಲ್ಲಿದೆ.

ಕನಕಗಿರಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿದೆ. ಇಲ್ಲಿ ಒಂದು ವಿಶಾಲವಾದ ಮತ್ತು ಸುಂದರ ಕೆತ್ತನೆಗಳುಳ್ಳ ಮೊಗಸಾಲೆ (ಮಂಟಪ)ಯನ್ನೊಳಗೊಂಡ ಬಾವಿಯಿದೆ. ವಿಜಯನಗರ ಅರಸರ ಸಾಮಂತರಾಗಿದ್ದ ನಾಯಕರು ಕನಕಗಿರಿಯನ್ನು ಆಳುತ್ತಿದ್ದರು. ಕನಕಯ್ಯ ಉಡಿಚ ನಾಯಕನ ತಮ್ಮನಾದ ವೆಂಕಟಪತಿನಾಯಕನು ಈ ಬಾವಿಯನ್ನು ಕಟ್ಟಿಸಿರುವುದರಿಂದ ಇದಕ್ಕೆ ವೆಂಕಟಪತಿ ಬಾವಿ ಎಂಬ ಹೆಸರು ಬಂದಿದೆ.[2]


ಬಾವಿಯನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದಾಗಿದೆ. ಪಶ್ಚಿಮ ಭಾಗದಲ್ಲಿ ತೆರೆದ ಆವರಣದ ಸುತ್ತಲು ಕಂಬಗಳ ದೊಡ್ಡ ಮಂಟಪವಿದೆ ಮತ್ತು ಪೂರ್ವ ಭಾಗದಲ್ಲಿ ಬಾವಿಯ ಸುತ್ತಲು ಮೊಗಸಾಲೆಯಿದೆ.

ಬಾವಿಯ ಪ್ರವೇಶವು ನೈರುತ್ಯ ಮೂಲೆಯಲ್ಲಿ ದಕ್ಷಿಣದಿಂದ ಉತ್ತರಕ್ಕೆ ಇದೆ. ಇದಲ್ಲದೆ ಬಾವಿಯ ಈಶಾನ್ಯ, ವಾಯವ್ಯ ಮತ್ತು ಆಗ್ನೇಯ ಮೂಲೆಗಳಲ್ಲಿ 'L' ಆಕಾರದ ಚಿಕ್ಕ ಪ್ರವೇಶಗಳಿವೆ. ಮೂಲೆಗಳಲ್ಲಿಯ ಪ್ರವೇಶಗಳ ಮೇಲೆ ನೆಲ ಮಟ್ಟದ ಛಾವಣಿಗಳಿವೆ. ಮುಖ್ಯ ಪ್ರವೇಶ ದ್ವಾರದಲ್ಲಿ ಆರು ಚಿಕ್ಕ ಕಂಬಗಳನ್ನು ನಿಲ್ಲಿಸಿ ದನಗಳು ಒಳಗೆ ನುಗ್ಗದಂತೆ ಸಂರಕ್ಷಿಸಲಾಗಿದೆ. ಪ್ರವೇಶ ದ್ವಾರದ ಎರಡೂ ಬದಿಗಳಲ್ಲಿರುವ ಗೋಡೆಗಳ ಮುಂಭಾಗದ ಮೂಲೆಗಳಲ್ಲಿ ಎರಡು ಸಿಂಹಗಳನ್ನು ಕೆತ್ತಿದ್ದಾರೆ. ಬಾವಿಯಲ್ಲಿ ಇಳಿಯುವ ದಾರಿಯಲ್ಲಿ 13 ಮೆಟ್ಟಿಲುಗಳು ಮತ್ತು ಒಂದು ನಡುನಿಲ್ಲೆಡೆ (landing) ಇವೆ. ದಾರಿಯ ಪಕ್ಕದ ಪೂರ್ವ ಮತ್ತು ಪಶ್ಚಿಮ ಗೋಡೆಗಳಲ್ಲಿ ಎತ್ತರವಾದ ಮತ್ತು ಆಳವಿಲ್ಲದ ಒಂದೊಂದು ಗೂಡುಗಳಿವೆ. ಪಶ್ಚಿಮ ಗೋಡೆಯ ಮೇಲೆ ಎರಡು ನಾಗಗಳು ಮತ್ತು ಹತ್ತು ಭುಜಗಳುಳ್ಳ ಗಜಾಸುರ–ಸಂಹಾರ ಶಿವನ ಶಿಲ್ಪಗಳಿವೆ. ಐದು ಹೆಡೆಗಳ ಒಂದು ನಾಗದ ಕುತ್ತಿಗೆಯಲ್ಲಿ ಆಭರಣ ಮತ್ತು ತಲೆಯ ಮೇಲೆ ಮಣಿ ಇವೆ. ಮತ್ತೊಂದು ಹಾವಿಗೆ ಮೂರು ಹೆಡೆಗಳಿವೆ. ಆನೆಯ ರೂಪದ ಗಜಾಸುರನ ಹೊಟ್ಟೆಯನ್ನು ಸೀಳಿ ಪ್ರಕಟಗೊಂಡ ಶಿವನು ವಿವಿಧ ಆಯುಧಗಳನ್ನು ಹಿಡಿದು ನೃತ್ಯ ಮಾಡುತ್ತಿದ್ದಾನೆ. ಕೆಳಗೆ ನಂದಿ ಇದೆ. ಶಿವನ ಬಲಕ್ಕೆ ಆನೆಯ ತಲೆ, ಮುಂಗಾಲುಗಳು, ಎಡಕ್ಕೆ ಬಾಲ, ಹಿಂಗಾಲುಗಳು ಮತ್ತು ಸುತ್ತಲು ದೇಹದ ಚರ್ಮವಿದೆ. ಕೆಳಭಾಗದಲ್ಲಿ ಪಕ್ಕದಲ್ಲಿ ಪುಷ್ಪ ವಿನ್ಯಾಸವಿದೆ (ಚಿತ್ರ 47).

ಪ್ರವೇಶ ದಾಟಿದ ಮೇಲೆ ಮುಂದೆ ತೆರೆದ ಆವರಣವಿದೆ (ಚಿತ್ರ 45). ಆವರಣದ ಪಶ್ಚಿಮ, ಉತ್ತರ ಮತ್ತು ದಕ್ಷಿಣ ಬದಿಗಳಲ್ಲಿ ಕಂಬಗಳುಳ್ಳ ಮಂಟಪವಿದ್ದು ಪೂರ್ವಕ್ಕೆ ಅರ್ಧ ವರ್ತುಲಾಕಾರದ ಕಮಾನುಳ್ಳ ಪ್ರವೇಶ ದ್ವಾರವು ಬಾವಿಗೆ ಸೇರುತ್ತದೆ. ಪಶ್ಚಿಮ ಮಂಟಪದ ಪಶ್ಚಿಮ ಗೋಡೆಯಲ್ಲಿ



ಕನಕಗಿರಿ, ವೆಂಕಟಪತಿ ಬಾವಿಯ ದ್ವಾರ ದಕ್ಷಿಣದಿಂದ




ಕನಕಗಿರಿ, ವೆಂಕಟಪತಿ ಬಾವಿಯ ಕಮಾನು ದ್ವಾರ ಮತ್ತು ಮುಂದೆ ಚಾಚಿದ ಬಾಲ್ಕನಿ



ಕನಕಗಿರಿ, ವೆಂಕಟಪತಿ ಬಾವಿ, ಗಜಾಸುರಸಂಹಾರ ಶಿವ



ಕನಕಗಿರಿ, ವೆಂಕಟಪತಿ ಬಾವಿ, ನೃತ್ಯಗಾರ್ತಿ



ಕನಕಗಿರಿ, ವೆಂಕಟಪತಿ ಬಾವಿ, ಮುಂದೆ ಚಾಚಿದ ಬಾಲ್ಕನಿ

ಹಿಂದಕ್ಕೆ ಚಾಚಿಕೊಂಡ ಒಂದು ಚಿಕ್ಕ ಗುಡಿಯಿದೆ. ಇದರಲ್ಲಿ ಗರ್ಭಗೃಹ ಮತ್ತು ಅಂತರಾಳಗಳಿವೆ. ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ಮಂಟಪಗಳಲ್ಲಿ ಒಂದೊಂದು ಚಿಕ್ಕ ಗುಡಿಗಳಿವೆ.


ಆವರಣದ ಪಶ್ಚಿಮಕ್ಕಿರುವ ಮಂಟಪದಲ್ಲಿ ವಿಜಯನಗರ ಶೈಲಿಯ ಸಂಯುಕ್ತ (composite) ಕಂಬಗಳಿವೆ. ಈ ಕಂಬಗಳ ದಿಂಡು (shaft) ಅಷ್ಟಭುಜಾಕೃತಿಯ ಪಟ್ಟಿಗಳಿಂದ ವಿಭಾಗಿಸಲ್ಪಟ್ಟ ಮೂರು ಚೌಕಾಕಾರದ ಭಾಗಗಳನ್ನು (blocks) ಹೊಂದಿದೆ. ಕೆಲವು ಕಂಬಗಳಿಂದ ಒಂದು ವ್ಯಾಳ ಅಥವಾ ಕುದುರೆ ಮುಂದೆ ಚಾಚಿಕೊಂಡಿದೆ. ಪ್ರತಿಯೊಂದು ಕಂಬದ ಕೆಳಗೆ ಅಧಿಷ್ಠಾನ ಭಾಗದಲ್ಲಿ ಸಿಂಹ, ನೃತ್ಯ ಮತ್ತು ಸಂಗೀತಗಾರರ ಶಿಲ್ಪಗಳಿವೆ. ಮೊದಲನೆಯ ಕಂಬದ ದಿಂಡಿನಿಂದ ಅಷ್ಟಭುಜಾಕೃತಿಯ ಉಪಕಂಬ (pillaret) ಮುಂದೆ ಚಾಚಿಕೊಂಡಿದೆ. ದಿಂಡು ಮತ್ತು ಉಪಕಂಬದ ಮಧ್ಯದಲ್ಲಿರುವ ಭಾಗದ ಒಂದು ಬದಿಯನ್ನು ಕೈಯಲ್ಲಿ ಕರತಾಳಗಳನ್ನು ಹಿಡಿದು ನೃತ್ಯ ಮಾಡುತ್ತಿರುವ ಮನುಷ್ಯ ಮತ್ತು ಇನ್ನೊಂದು ಬದಿಯನ್ನು ಸರ್ಪವನ್ನು ಹಿಡಿದಿರುವ ಗರುಡನ ಶಿಲ್ಪದಿಂದ ಅಲಂಕರಿಸಿದೆ. ಕೆಳಗೆ ಅಧಿಷ್ಠಾನ ಭಾಗದಲ್ಲಿ ಸಿಂಹವಿದೆ. ಎರಡನೇ ಕಂಬದಿಂದ ವ್ಯಾಳ ಮುಂದೆ ಚಾಚಿದೆ. ಆನೆಯ ಮೇಲೆ ಹಿಂಗಾಲುಗಳ ಮೇಲೆ ನಿಂತಿರುವ ವ್ಯಾಳದ ಮೇಲೆ ಖಡ್ಗ ಮತ್ತು ಗುರಾಣಿ ಹಿಡಿದ ಸವಾರನಿದ್ದಾನೆ. ಕೆಳಗೆ ಅಧಿಷ್ಠಾನ ಭಾಗದಲ್ಲಿ ಇಬ್ಬರು ಸಂಗೀತಗಾರರಿದ್ದಾರೆ. ಅವರಲ್ಲಿ ಗಡ್ಡದಾರಿಯು ತಂತಿವಾದ್ಯವನ್ನು ಮತ್ತು ಮತ್ತೊಬ್ಬ ಮೃದಂಗವನ್ನು ನುಡಿಸುತ್ತಿದ್ದಾರೆ. ಮೂರನೇ ಕಂಬದಿಂದ ಕುದುರೆ ಮುಂದೆ ಚಾಚಿದೆ. ಹಿಂಗಾಲುಗಳ ಮೇಲೆ ನಿಂತಿರುವ ಕುದುರೆಯ ಮೇಲೆ ಸವಾರನಿದ್ದಾನೆ. ಸಿಂಹದೊಂದಿಗೆ ಹೋರಾಡುತ್ತಿರುವ ಮನುಷ್ಯನನ್ನು ಕುದುರೆ ಮುಂಗಾಲುಗಳಿಂದ ತುಳಿಯುತ್ತಿದೆ. ಕೆಳಗೆ ಅಧಿಷ್ಠಾನದ ಭಾಗದಲ್ಲಿ ಸಂಗೀತಗಾರ ಮತ್ತು ನೃತ್ಯಗಾರ್ತಿ ಇದ್ದಾರೆ. ಸಂಗೀತಗಾರನ ಕೈಯಲ್ಲಿ ತಾಳಗಳಿವೆ. ನೃತ್ಯಗಾರ್ತಿ ಎರಡು ಕೈಗಳಲ್ಲಿ ಹಿಡಿದ ಬಟ್ಟೆಯನ್ನು ತಲೆಯ ಮೇಲೆ ಹೊದ್ದುಕೊಂಡಿದ್ದಾಳೆ. ನಾಲ್ಕನೇ ಕಂಬದಿಂದ ಕುದುರೆ ಸವಾರನ ಶಿಲ್ಪ ಮುಂದೆ ಚಾಚಿದೆ. ಖಡ್ಗವನ್ನು ಹಿಡಿದ ಗಡ್ಡಧಾರಿಯನ್ನು ಕುದುರೆ ಮುಂಗಾಲುಗಳಿಂದ ತುಳಿಯುತ್ತಿದೆ. ಕೆಳಗೆ ಅಧಿಷ್ಠಾನದ ಭಾಗದಲ್ಲಿ ನೃತ್ಯಗಾರ್ತಿಯಿದ್ದಾಳೆ (ಚಿತ್ರ 48). ಐದನೆಯ ಕಂಬದ ಮುಂದೆ ಚಾಚಿದ ಭಾಗದಲ್ಲಿ ಎರಡು ಸಿಂಹಗಳ ಮೇಲೆ ಹಿಂಗಾಲುಗಳ ಮೇಲೆ ನಿಂತಿರುವ ವ್ಯಾಳದ ಮೇಲೆ ಕುಳಿತ ಸವಾರನು ಖಡ್ಗವನ್ನು ಹಿಡಿದಿದ್ದಾನೆ. ಆರನೆಯ ಕಂಬದ ದಕ್ಷಿಣ ಬದಿಯಲ್ಲಿ ಕತ್ತರಿಗಾಲಲ್ಲಿ ನಿಂತ ಸ್ತ್ರೀ ಬಲಗೈಯಲ್ಲಿ ಹೂವಿನ ಮೊಗ್ಗು ಹಿಡಿದಿದ್ದಾಳೆ. ಅವಳು ತನ್ನ ಎಡಗೈಯನ್ನು ಕುಬ್ಜ ಪರಿಚಾರಕನ ತಲೆಯ ಮೇಲಿಟ್ಟಿದ್ದಾಳೆ. ಅದೇ ಕಂಬದ ಬಲಬದಿಯಲ್ಲಿ ಮಜ್ಜಿಗೆ ಕಡೆಯುವ ಸ್ತ್ರೀ ಇದ್ದಾಳೆ. ಕೆಳಭಾಗದಲ್ಲಿ ಸಿಂಹವಿದೆ. ಏಳನೇ ಕಂಬದ ದಕ್ಷಿಣ ಬದಿಯಲ್ಲಿ ರಾಕ್ಷಸನ ಮೇಲೆ ಹಾರುವ ಭಂಗಿಯಲ್ಲಿರುವ ಆಂಜನೇಯನಿದ್ದಾನೆ. ಆಂಜನೇಯನು ಬಲಗೈಯನ್ನು ಮೇಲೆತ್ತಿ ಎಡಗೈಯಲ್ಲಿ ಹೂವನ್ನು ಹಿಡಿದಿದ್ದಾನೆ. ಅದೇ ಕಂಬದ ಉತ್ತರ ಬದಿಯಲ್ಲಿ ಹಯಗ್ರೀವನ ಶಿಲ್ಪವಿದೆ. ಕೆಳಭಾಗದಲ್ಲಿ ಸಿಂಹವಿದೆ.

ಈ ಬಾವಿಯ ಇತರ ಭಾಗಗಳಲ್ಲಿ ಮೂರು ಶೈಲಿಯ ಕಂಬಗಳಿವೆ. (1) ಮೂರು ಚೌಕಾಕರದ ಘನಾಕೃತಿಗಳಿದ್ದು, ಇವು ಅಷ್ಟಭುಜಾಕೃತಿಯ ಪಟ್ಟಿಗಳಿಂದ ಬೇರ್ಪಟ್ಟಿವೆ. (2) ಉದ್ದವಾದ ಚೌಕಾಕಾರದ ಘನಾಕೃತಿಗಳಿದ್ದು, ಅಷ್ಟಭುಜಾಕೃತಿಯ ಕಂಠ ಭಾಗ ಮತ್ತು ತುದಿಯಲ್ಲಿ ಅಷ್ಟಭುಜಾಕೃತಿಯ ಘನಾಕೃತಿಗಳನ್ನು ಹೊಂದಿದೆ. (3) ಮೇಲಿನ ಎರಡನೇ ಶೈಲಿಯ ಕಂಬದಿಂದ ತೆಳುವಾದ ಉಪಕಂಬ ಮುಂದೆ ಚಾಚಿದೆ.

ಆವರಣದ ಪಶ್ಚಿಮಕ್ಕಿರುವ ದೇವಾಲಯದ ಗರ್ಭಗೃಹದಲ್ಲಿ ದೇವರಿಲ್ಲ. ಗರ್ಭಗೃಹದ ಬಾಗಿಲಿನ ಹಣೆಪಟ್ಟಿಯ ಮೇಲೆ ಬೆಣ್ಣೆ ಹಿಡಿದಿರುವ ಕೃಷ್ಣನ ಶಿಲ್ಪವಿದೆ. ತಳಭಾಗದಲ್ಲಿ ಪೂರ್ಣಕುಂಭಗಳಿವೆ. ಅಂತರಾಳದ ಬಾಗಿಲಿನ ಹಣೆಪಟ್ಟಿಯ ಮೇಲೆ ಗಜಲಕ್ಷ್ಮಿ ಮತ್ತು ತೋಳುಗಳ ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರಿದ್ದಾರೆ. ಮುಂದೆ ನೆಲದ ಮೇಲೆ ಅಲಂಕಾರಮಯವಾದ ಚಂದ್ರಶಿಲೆಯಿದೆ.

ಉತ್ತರಕ್ಕಿರುವ ಗುಡಿಯಲ್ಲಿ ಭಗ್ನವಾದ ಲಿಂಗ ಮತ್ತು ನಂದಿಯ ವಿಗ್ರಹಗಳಿವೆ. ಈ ಗುಡಿಯ ಬಾಗಿಲಿನ ತೋಳುಗಳ ಮೇಲೆ ಶೈವ ದ್ವಾರಪಾಲಕರಿದ್ದಾರೆ. ಪಕ್ಕದಲ್ಲಿಯ ಕಂಬದ ಮೇಲ್ಭಾಗದಲ್ಲಿ ಮೇಲಿನ ತೊಲೆಯನ್ನು ಎತ್ತಿ ಹಿಡಿದಂತಿರುವ ಯಕ್ಷರು, ನೃತ್ಯಗಾರ ಮತ್ತು ಕೆಳಗೆ ಕುಳಿತಿರುವ ಮಹಿಳೆಯ ಶಿಲ್ಪಗಳಿವೆ. ದಕ್ಷಿಣಕ್ಕಿರುವ ಗುಡಿಯಲ್ಲಿ ದೇವರಿಲ್ಲ. ಇದರ ಬಾಗಿಲಿನ ಮೇಲೆ ವೈಷ್ಣವ ದ್ವಾರಪಾಲಕರಿದ್ದಾರೆ. ಪಕ್ಕದ ಕಂಬದ ಮೇಲ್ಭಾಗದಲ್ಲಿ ತೊಲೆಯನ್ನು ಎತ್ತಿ ಹಿಡಿದಿರುವ ಯಕ್ಷರು ಮತ್ತು ಕೆಳ ಭಾಗದಲ್ಲಿ ಶಂಖವನ್ನು ಊದುವ ಮನುಷ್ಯನ ಶಿಲ್ಪಗಳಿವೆ.

ಪೂರ್ವಕ್ಕಿರುವ ಬಾವಿಯ ಭಾಗ ಚೌಕಾಕಾರವಾಗಿದೆ. ಈ ಭಾಗದಲ್ಲಿ ಪಶ್ಚಿಮಕ್ಕೆ ಅರ್ಧ ವೃತ್ತಾಕಾರದ ಕಮಾನಿನ ಪ್ರವೇಶ ಮತ್ತು ಉಳಿದ ಮೂರು ಬದಿಗಳಲ್ಲಿ ಕಂಬಗಳ ಮೊಗಸಾಲೆ ಇವೆ (ಚಿತ್ರ 46, 50). ಚೌಕಾಕಾರದ ಬಾವಿಯ ಪ್ರವೇಶದಲ್ಲಿ ಕಲ್ಲುಗಳಿಂದ ಕಟ್ಟಿದ ನಾಲ್ಕು ಕಂಬಗಳಿವೆ. ನಾಲ್ಕು ದಿಕ್ಕಿಗಿರುವ ನಾಲ್ಕು ಕಮಾನುಗಳನ್ನು ಈ ಕಂಬಗಳು ಹೊತ್ತುನಿಂತಿವೆ. ಪ್ರವೇಶದ ಆಳವಾದ ಚೌಕಾಕಾರದ ಒಳಮಾಳಿಗೆಯನ್ನು ಪುಷ್ಪದಳಗಳ ನಾಲ್ಕು ಸಾಲು, ಮೊಗ್ಗುಗಳ ಒಂದು ಸಾಲು ಮತ್ತು ಚೌಕಾಕಾರದ ದೊಡ್ಡ ಪುಷ್ಪಗಳಿಂದ ಅಲಂಕರಿಸಿದೆ. ಪುಷ್ಪದ ಮಧ್ಯದಲ್ಲಿ ಹೆಚ್ಚು ಕೆಳಗೆ ಚಾಚಿದ ಲೋಲಕವಿದೆ. ಬಾವಿಯ ಪಶ್ಚಿಮ, ಉತ್ತರ ಮತ್ತು ದಕ್ಷಿಣ ಬದಿಗಳ ಮಧ್ಯದಲ್ಲಿ ಮೆಟ್ಟಿಲುಗಳಿವೆ. ಬಾವಿ ಸುತ್ತಲಿರುವ ಮಂಟಪದ ಒಳಮಾಳಿಗೆಯಲ್ಲಿ ಶಂಖದ ಹೊರಗೆ ಕಾಣುವ ಹುಳು, ಆಮೆ, ವೃತ್ತದಲ್ಲಿ ಮೂರು ಹಂಸಗಳು, ಮೀನು, ಪುಷ್ಪ, ವೃತ್ತದಲ್ಲಿ ಇಬ್ಬರು ಮನುಷ್ಯರು



ಕನಕಗಿರಿ, ವೆಂಕಟಪತಿ ಬಾವಿ

ಮತ್ತು ವೃತ್ತದಲ್ಲಿ ಮೂರು ಮೀನುಗಳ ಸುಂದರ ಉಬ್ಬು ಶಿಲ್ಪಗಳಿವೆ. ಪೂರ್ವಕ್ಕಿರುವ ಮೊಗಸಾಲೆಯ ಮಧ್ಯದಲ್ಲಿ ಒಂದು ಜಗಲಿ ಮುಂದೆ ಚಾಚಿಕೊಂಡಿದೆ. ಈ ಜಗಲಿಯ ಮೇಲಿರುವ ಕಂಬಗಳ ಮೇಲೆ ಒಂದು ಬಾಲ್ಕನಿಯಿದೆ (ಚಿತ್ರ 49). ಕಂಬಗಳಿಂದ ಮುಂದೆ ಚಾಚಿಕೊಂಡಿರುವ ಸಿಂಹದ ಮೇಲೆ ಖಡ್ಗಧಾರಿ ಸವಾರರು ಕುಳಿತಿದ್ದಾರೆ. ಸಿಂಹವು ಆನೆಯ ಮೇಲೆ ಹಿಂಗಾಲುಗಳನ್ನಿಟ್ಟು ನಿಂತಿದೆ. ಕಂಬದ ಮೇಲೆ ಪುಟ್ಟ ಹಲಗೆಯನ್ನು ಬಾರಿಸುವ ಮನುಷ್ಯ, ಪುಷ್ಪ ವಿನ್ಯಾಸಗಳ ಉಬ್ಬು ಶಿಲ್ಪಗಳಿವೆ. ಬಾಲ್ಕನಿಯ ಮುಂಭಾಗ ಮತ್ತು ಪಕ್ಕಗಳಲ್ಲಿ ಕಮಾನುಗಳಿವೆ. ಬಾಲ್ಕನಿಯ ಮೇಲೆ ಕುಸ್ತಿ ಆಡುವ, ಕಾಮನಿರತರಾದವರ, ನೃತ್ಯ ಮತ್ತು ಸಂಗೀತಗಾರರ, ಗಿಳಿ ಮತ್ತು ಹೂವು ಎಲೆಗಳ ಶಿಲ್ಪಗಳಿವೆ. ಬಾಲ್ಕನಿಯ ಒಳಮಾಳಿಗೆಯಲ್ಲಿ ಹೂವುಗಳ ಮತ್ತು ಜ್ಯಾಮಿತಿಯ ವಿವಿಧ ವಿನ್ಯಾಸಗಳ ಅಲಂಕಾರವಿದೆ. ಬಾಲ್ಕನಿಯು ಪೂರ್ವದ ಕೈಸಾಲೆಯ ಮೇಲೂ ಚಾಚಿದೆ. ಬಾಲ್ಕನಿಯ ಮಾಳಿಗೆಯ ಮೇಲೆ ನೀರನ್ನು ಮೇಲೆತ್ತುವ ಏತದ ವ್ಯವಸ್ಥೆಯಿದೆ.

## ಟಿಪ್ಪಣಿಗಳು

1. ರಿತ್ತಿ ಶ್ರೀನಿವಾಸ, 1969, *ಅಶೋಕನ ಧರ್ಮ ಶಾಸನಗಳು*, ಧಾರವಾಡ, ಪು. 57.
2. ರಾಜಪುರೋಹಿತ ಜಯತೀರ್ಥ, 1975, *ಕನಕಗಿರಿ*, ಬೆಂಗಳೂರು, ಪು. 33.

# 9. ಹರಪನಹಳ್ಳಿ ಪ್ರದೇಶದ ವಿಜಯನಗರ ಕಾಲದ ದೇವಾಲಯ–ಶಿಲ್ಪಗಳು

– ರು.ಮ. ಷಡಕ್ಷರಯ್ಯ

ವಿಜಯನಗರ ಕಾಲದವರೆಗೆ ಹರಪನಹಳ್ಳಿ ಪ್ರದೇಶವು ಪ್ರಾಚೀನ ಆಡಳಿತ ಕೇಂದ್ರವೆನಿಸಿದ ಕೋಗಳಿ–500 ನಾಡಿನಲ್ಲಿ ಸಮಾವೇಶಗೊಂಡಿದ್ದಿತು. ಹರಪನಹಳ್ಳಿ ಪ್ರದೇಶವು ಈ ಮೊದಲು ಬಳ್ಳಾರಿ ಜಿಲ್ಲೆಯಲ್ಲಿ ಸೇರಿಕೊಂಡಿದ್ದಿತು. ಇತ್ತೀಚಿಗೆ ಹೊಸದಾಗಿ ನಿರ್ಮಾಣಗೊಂಡ ದಾವಣಗೆರೆ ಜಿಲ್ಲೆಗೆ ಈಗ ವರ್ಗಾವಣೆಗೊಂಡಿದೆ.

ಈ ಪ್ರದೇಶದ ರಾಜಕೀಯ ಸ್ಥಿತ್ಯಂತರವನ್ನು ಗಮನಿಸಿದಾಗ ಹರಪನಹಳ್ಳಿ ತಾಲೂಕಿನ ಇಂದಿನ ಉಚ್ಚಂಗಿದುರ್ಗ ಆದಿ ಕದಂಬರಿಗೆ 'ಉಚ್ಚಶ್ರಿಂಗಿ' ಎಂಬ ನಾಮಾಂಕಿತದಿಂದ ಮತ್ತೊಂದು ರಾಜಧಾನಿಯಾಗಿದ್ದಿತು.[1] ಬಾದಾಮಿ ಚಾಲುಕ್ಯರ ಕಾಲದ ಶಾಸನಗಳಲ್ಲಿ ಯರಬಳ್ಳಿಯ ಇಮ್ಮಡಿ ಪುಲಕೇಶಿಯ ಶಾಸನ ಈ ಪ್ರದೇಶದಲ್ಲೇ ಪ್ರಾಚೀನ. ಹೀಗೆ ತದನಂತರ ಕಾಲದ ಸಾಂಸ್ಕೃತಿಕ ಅವಶೇಷಗಳಿಂದ ವಿಜಯನಗರ ಪೂರ್ವದವರೆಗಿನ ಕರ್ನಾಟಕ ಇತಿಹಾಸದಲ್ಲಿ ಈ ಪ್ರದೇಶವು ತನ್ನದೇ ಆದ ಸ್ಥಾನವನ್ನು ಇರಿಸಿಕೊಂಡಿದೆ. ವಿಜಯನಗರ ಕಾಲ ಮತ್ತು ಅದರ ನಂತರದ ಈ ಪ್ರದೇಶದ ಚರಿತ್ರೆಯಲ್ಲಿ ನಾಯಕರ ಸಾಂಸ್ಕೃತಿಕ ಕೊಡುಗೆ ಪ್ರಸಿದ್ಧಿಯನ್ನು ಪಡೆದಿದ್ದರೂ ಅವರ ಹೆಚ್ಚಿನ ಮಾಹಿತಿಗಳು ಜನರ ಬಾಯಿಯಲ್ಲೇ ಉಳಿದಿವೆ. ಈ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯ, ಕೋಟೆ–ಕೊತ್ತಳ, ಬಾವಿ, ಕೆರೆಗಳಲ್ಲದೆ, ಪ್ರತಿಷ್ಠಾಪಿಸಲ್ಪಟ್ಟ ಮೂರ್ತಿಗಳ ಅಧ್ಯಯನ ವಿರಳವೆನ್ನಬಹುದು. ಈ ಹಿನ್ನೆಲೆಯಲ್ಲಿ ಈ ಪ್ರದೇಶದ ಯರಬಳ್ಳಿ, ಅರಸೀಕೆರೆ ಮತ್ತು ದೇವರ ತಿಮ್ಮಲಾಪುರ ಗ್ರಾಮಗಳ ಸಾಂಸ್ಕೃತಿಕ ಅವಶೇಷಗಳು ಈ ಪ್ರಸ್ತುತ ಅಧ್ಯಯನದಲ್ಲಿವೆ.

ವಿಜಯನಗರ ಕಾಲದಲ್ಲಿ ನಾಯಕರ ಆಳ್ವಿಕೆಯ ಪ್ರಭುತ್ವ ಹರಪನಹಳ್ಳಿ ಪ್ರದೇಶದಲ್ಲೂ ಉಗಮವಾಯಿತು. ಅವರನ್ನು ಹರಪನಹಳ್ಳಿ ಪಾಳೇಗಾರರೆಂದು ಕರೆಯುವರು. ಅವರು ಚಿತ್ರದುರ್ಗ, ಜರ್ಮಲಿ, ಕೆಳದಿ ಮುಂತಾದ ನಾಯಕರ ಮನೆತನಗಳಿಗೆ ಸಮಕಾಲೀನರು. ಅವರ ಆಳ್ವಿಕೆಯ ಕಾಲದಲ್ಲಿ ವೀರಶೈವ ಧರ್ಮದ ಬೆಳವಣಿಗೆಗೆ ಅಪಾರ ಪ್ರೋತ್ಸಾಹ ಈ ಭಾಗದಲ್ಲೂ ನೀಡಲಾಯಿತು. ಇದರಿಂದಾಗಿ ಪ್ರತಿಸ್ಥಳದಲ್ಲೂ ಮಠ ಮಾನ್ಯಗಳು ಬೆಳಕಿಗೆ ಬರಲು ಕಾರಣವಾಯಿತು. ಈ ಹಿನ್ನೆಲೆಯಲ್ಲಿ ಈ ಪ್ರಾಂತದಲ್ಲಿ ಪ್ರಸಿದ್ಧರೆನಿಸಿದ ಪಂಚಗಣಾಧೀಶ್ವರರಲ್ಲಿ ಮೂವರು ಹರಪನಹಳ್ಳಿ ಪ್ರದೇಶದಲ್ಲಿದ್ದಾರೆ. ಅವರು ಹರಪನಹಳ್ಳಿಯ ಕೆಂಪೇಶ, ಅರಸೀಕೆರೆಯ ಕೋಲಶಾಂತೇಶ ಮತ್ತು ಕೂಲಹಳ್ಳಿಯ ಮದ್ದಾನೇಶ್ವರರು. ಅವರ ಅಸ್ತಿತ್ವ ವಿಜಯನಗರ ಕಾಲದಿಂದ ಕಾಣಸಿಕೊಳ್ಳುವದು. ಇದರೊಂದಿಗೆ ಕೆಲವೆಡೆ ವೈಷ್ಣವ ಕೇಂದ್ರಗಳು ಈ ಕಾಲದಲ್ಲಿ ಉಗಮವಾಗಿವೆ. ಅಂತಹವುಗಳಲ್ಲಿ ದೇವರ ತಿಮ್ಮಲಾಪುರ ಒಂದು ಮಹತ್ವದ ಸ್ಥಾನವಾಗಿದೆ.

**ದೇವರ ತಿಮ್ಮಲಾಪುರ:**

ದೇವರ ತಿಮ್ಮಲಾಪುರದ ಚರಿತ್ರೆಯು ವಿಜಯನಗರ ಕಾಲದಿಂದ ಆರಂಭಗೊಳ್ಳುವುದು. ಅಲ್ಲಿಯ ವೆಂಕಟೇಶ ದೇವಾಲಯ ಮಹತ್ವದ್ದೆನಿಸಿದೆ. ಈ ದೇವಾಲಯ ವಿಶಾಲವಾಗಿದ್ದು ಅದರ ಪ್ರವೇಶ ಮಹಾದ್ವಾರದ ಎದುರಿಗೆ ದೀಪಸ್ತಂಭ ಮತ್ತು ತೆರೆದ ಸ್ತಂಭ ಮಂಟಪವಿದೆ. ದೇವಾಲಯದ ಸುತ್ತ ಕೆಲ ಭಾಗದಲ್ಲಿ ಇತ್ತೀಚಿನ ಕಾಲದ ಪ್ರಾಕಾರ ಗೋಡೆಯಿದೆ. ಅದರ ಎದುರು ರಂಗಯ್ಯ ಮತ್ತು ದಾದಯ್ಯರ ಕಿರು ದೇವಾಲಯಗಳಿವೆ. ಈ ದೇವಾಲಯದ ಮುಖ್ಯ ದೇವತೆ ವಿಗ್ರಹಗಳು ವೆಂಕಟೇಶ್ವರ ಮತ್ತು ಲಕ್ಷ್ಮಿ, ಇನ್ನಿತರವುಗಳಲ್ಲಿ ಆಳ್ವರು, ದಾದಯ್ಯ, ರಂಗಯ್ಯರ ಶಿಲ್ಪಗಳು ಮುಖ್ಯವೆನಿಸಿವೆ.

**ದೀಪಸ್ತಂಭ:** ಈ ದೇವಾಲಯದ ದೀಪಸ್ತಂಭವನ್ನು ಎತ್ತರವಾದ ಚೌಕಾಕಾರದ ವೇದಿಕೆ ಮೇಲೆ ನಿಲ್ಲಿಸಿದ್ದಾರೆ. ವೇದಿಕೆಯ ಅಧಿಷ್ಠಾನವು ಮಂಚಬಂಧ ಮಾದರಿಯಲ್ಲಿದೆ. ಕಂಬದ ಚೌಕಾಕಾರದ ಕಾಂಡ ಭಾಗದಲ್ಲಿ ವಿವಿಧ ಅಲಂಕರಣೆಗಳಿವೆ. ಒಂದನೆಯ ಮುಖದಲ್ಲಿ ನಿಂತ ಭಕ್ತ, ನಾಗ, ಚಕ್ರ, ಮತ್ತು ಹೂಬಳ್ಳಿ ಚಿತ್ರಗಳಿವೆ. ಎರಡನೆಯ ಮುಖದಲ್ಲಿ ನಿಂತ ಭಕ್ತರಿದ್ದಾರೆ. ಮೂರನೆಯ ಮುಖದಲ್ಲಿ ಮಕರದ ಮುಖದ ಬಾಯಿಂದ ವೃತ್ತಾಕಾರದ ಹೂಬಳ್ಳಿ ಹೊರಬಂದಿದೆ.

**ಮಂಟಪ:** ಮಂಟಪಕ್ಕೆ ಎತ್ತರದ ಚೌಕಾಕಾರದ ಐದು ಪಟ್ಟಿಕೆಗಳ ವೇದಿಕೆಯಿದೆ. ವೇದಿಕೆಯ ಮೇಲಿನ ನಾಲ್ಕು ಕಂಬಗಳು ಚೌಕಾಕಾರದ ಛತ್ತನ್ನು ಹೊತ್ತಿವೆ. ಪ್ರತಿಯೊಂದು ಕಂಬ ಚೌಕಾಕಾರದ ಪೀಠದ ಮೇಲಿದೆ. ಪೀಠದ ನಾಲ್ಕು ಮುಖಗಳಲ್ಲಿ ಕಿರಿದಾದ ಭಕ್ತ, ಹೂ–ಬಳ್ಳಿಗಳ ಅಲಂಕರಣಗಳಿವೆ. ಕಾಂಡಭಾಗದಲ್ಲಿ ಕ್ರಮವಾಗಿ ಒಂದು ಚೌಕ, ಎರಡು ವೃತ್ತಾಕಾರದ ಪಟ್ಟಿಕೆಗಳಿದ್ದು ಅವುಗಳ ಮಧ್ಯ ಅನೇಕ ಕಿರುಮುಖಗಳ ಉದ್ದನೆಯ ಪಟ್ಟಿಕೆಯುಳ್ಳ ದುಂಡುಭಾಗವಿದೆ. ಮೇಲಿನ ಬೋದಿಗೆಗೆ ನಾಲ್ಕು ಕಡೆಗಳಲ್ಲಿ ಇಳಿಬಿದ್ದ ಬಾಳೆಯ ಹೂಗೊಂಚಲುಗಳಿವೆ. ಛತ್ತು ನಾಲ್ಕು ಭಾಗದಲ್ಲೂ ಇಳಿಜಾರಾಗಿದೆ.



ದೇವರ ತಿಮ್ಮಲಾಪುರ, ಮಹಾದ್ವಾರ



ದೇವರ ತಿಮ್ಮಲಾಪುರ, ವೆಂಕಟೇಶ

**ಮಹಾದ್ವಾರ:** ಈ ದೇವಾಲಯದ ಮಹಾದ್ವಾರಕ್ಕೆ ಎತ್ತರವಾದ ಮೂರು ಅಂತಸ್ತು ಗೋಪುರವಿದ್ದು ಅದನ್ನು ಇಟ್ಟಿಗೆ ಮತ್ತು ಗಾರೆಯಿಂದ ಇತ್ತೀಚೆಗೆ ಕಟ್ಟಲಾಗಿದೆ. ಎರಡನೆಯ ಅಂತಸ್ತಿನ ಭಿತ್ತಿಯಲ್ಲಿ ಶಿಖರ ಹೊತ್ತ ಅರ್ಧ ಕಂಬಗಳ ಅಲಂಕರಣಗಳಿವೆ. ಇನ್ನುಳಿದ ಅಂತಸ್ತಿನ ಭಿತ್ತಿಯಲ್ಲಿ ವೈಷ್ಣವ ಧರ್ಮದ ಗಾರೆಯ ಮೂರ್ತಿಗಳೇ ಅಧಿಕ (ಚಿತ್ರ 51).

ದೇವಾಲಯದಲ್ಲಿಯ ಮೂಲದೇವರ ಹೆಸರು ವೆಂಕಟೇಶ. ಆತನನ್ನು ತಿಮ್ಮಪ್ಪನೆಂದೂ ಕರೆಯುವರು. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ತೆರೆದ ಸಭಾಮಂಟಪಗಳಿವೆ. ಚೌಕಾಕಾರದ ಗರ್ಭಗೃಹದಲ್ಲಿ ವೆಂಕಟೇಶ್ವರ ಮತ್ತು ಲಕ್ಷ್ಮಿಯ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹಗಳ ಸುತ್ತಲು ಲೋಹದ ಮಕರ ತೋರಣದ ಪ್ರಭಾವಳಿಗಳಿವೆ.

ಸಮಭಂಗಿಯಲ್ಲಿ ನಿಂತಿರುವ ವೆಂಕಟೇಶನಿಗೆ ನಾಲ್ಕು ಕೈಗಳಿವೆ. ಕೆಳಗಿನ ಬಲಗೈ ವರದ ಮುದ್ರೆಯಲ್ಲಿದ್ದರೆ ಎಡಗೈ ಕಟ್ಯಾವಲಂಬಿತದಲ್ಲಿದೆ. ಮೇಲಿನ ಬಲಗೈಯಲ್ಲಿ ಚಕ್ರ ಮತ್ತು ಎಡಗೈಯಲ್ಲಿ ಶಂಖಗಳಿವೆ. ಉದ್ದನೆಯ ದಪ್ಪ ಕಿರೀಟಮುಕುಟ, ಮಣಿ, ಮುತ್ತಿನ ಕುಂಡಲ, ಸರ, ಬಳೆ, ಪಟ್ಟಿ, ವೈಜಯಂತಿ, ವಸ್ತ್ರ, ಕಡಗ ಮುಂತಾದ ವಸ್ತ್ರಾಭರಣಗಳನ್ನೂ ಧರಿಸಿರುವನು. ಬದಿಗಳಲ್ಲಿ ಅರ್ಧಕಂಬಗಳುಳ್ಳ ಮಕರತೋರಣವಿದೆ. ಮಕರಗಳ ಬಾಯಿಯಿಂದ ಹೊರಬಂದ ವೃತ್ತಾಕಾರದ ಹೂ–ಬಳ್ಳಿಗಳು ಮೇಲಿನ ಕೀರ್ತಿಮುಖದ ಬಾಯಿಯಲ್ಲಿ ಸೇರಿವೆ. ಪೀಠದಲ್ಲಿ ಗರುಡನಿರುವನು (ಚಿತ್ರ 52). ಲಕ್ಷ್ಮಿಯೂ ಸಹ ಸಮಭಂಗದಲ್ಲಿದ್ದು ದ್ವಿಭುಜಧಾರಿಯಾಗಿದ್ದಾಳೆ. ಬಲಗೈಯಲ್ಲಿ ಕಮಲವನ್ನು ಹಿಡಿದಿದ್ದು ಎಡಗೈಯನ್ನು ಕೆಳಗೆ ಇಳಿಬಿಟ್ಟಿರುವಳು. ಕಿರೀಟಮುಕುಟ, ಕುಂಡಲ, ಸರ, ಸ್ತನಪಟ್ಟಿ, ವೈಜಯಂತಿ (ಹಾರ), ವಸ್ತ್ರ, ಬಳೆ, ಕಡಗ ಮುಂತಾದ ವಸ್ತ್ರಾಭರಣಗಳನ್ನು ಧರಿಸಿರುವಳು. ಈಕೆಗೂ ಮಕರ ತೋರಣದ ಅಲಂಕರಣವಿದೆ.

ಆಯತಾಕಾರದ ಅಂತರಾಳದಲ್ಲಿ ಬಲಗಡೆಯ ಕಟ್ಟೆಯ ಮೇಲೆ ಲಕ್ಷ್ಮೀವರಾಹ ಮತ್ತು ಇಬ್ಬರು ಆಳ್ವಾರರ ಶಿಲ್ಪಗಳಿವೆ. ಪ್ರಾಣಿಯ ಮುಖವುಳ್ಳ ಈ ವರಾಹ ಸ್ವಾಮಿಯು ಏಳು ಹೆಡೆಯ ನಾಗ ಸರ್ಪದ ಮೇಲೆ ಕುಳಿತಿದ್ದು, ಲಕ್ಷ್ಮಿಯು ಆತನ ಎಡತೊಡೆಯ ಮೇಲೆ ಕುಳಿತಿರುವಳು. ವರಾಹದ ಬಾಯಿಯಲ್ಲಿ ಕೋರೆಹಲ್ಲುಗಳನ್ನು ತೋರಿಸಿದೆ. ಪೀಠದಲ್ಲಿ ಮಾನವ ರೂಪದ ಗರುಡನ ಶಿಲ್ಪವಿದೆ. ಚತುರ್ಭುಜಧಾರಿಯಾದ ವರಾಹನ ಕೆಳಗಿನ ಬಲಗೈ ಅಭಯ ಮತ್ತು ಎಡಗೈ ವರದ ಮುದ್ರೆಯಲ್ಲಿವೆ. ಮೇಲಿನ ಕೈಗಳಲ್ಲಿ ಅಲಂಕೃತ ಚಕ್ರ ಮತ್ತು ಶಂಖಗಳಿವೆ. ಸ್ತಂಭಗಳ ಮೇಲಿನ ಅರ್ಧ ವೃತ್ತಾಕಾರದ ತೋರಣದ ತುದಿಯಲ್ಲಿ ಕೀರ್ತಿ ಮುಖವಿದೆ. ಕಿರೀಟಮುಕುಟ, ಸರ, ಬಳೆ, ಪಂಚೆ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವನು. ಲಕ್ಷ್ಮಿಯು ಬಲಗೈಯಲ್ಲಿ ಕಮಲವನ್ನು ಹಿಡಿದು ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಮುಖ, ಮುಕುಟ, ಸ್ತಂಭ ತೋರಣ ಮುಂತಾದ ಲಕ್ಷಣಗಳಿಂದ ಈ ಶಿಲ್ಪವು ಇಪ್ಪತ್ತನೆಯ ಶತಮಾನದ್ದೆಂದು ತಿಳಿಯುತ್ತದೆ (ಚಿತ್ರ 53).


ಆಳ್ವಾರರ ಎರಡು ದುಂಡು ಶಿಲ್ಪಗಳು ಒಂದರ ಪಕ್ಕ ಇನ್ನೊಂದಿದ್ದು, ವಿಭಿನ್ನ ಲಕ್ಷಣ ಹೊಂದಿವೆ. ಪದ್ಮಾಸನದಲ್ಲಿ ಕುಳಿತ ರಾಮಾನುಜಾಚಾರ್ಯರ (?) ಕೈಗಳು ಅಂಜಲಿ ಮುದ್ರೆಯಲ್ಲಿವೆ. ತಲೆ ಬೋಳಾಗಿದೆ. ಉದ್ದ ಕಿವಿಗಳಲ್ಲಿ ವೃತ್ತಕಾರದ ಸರಳ ಕುಂಡಲಗಳಿವೆ. ಕೊರಳಲ್ಲಿ ತುಳಸಿ ಮಣಿಗಳ ಜೋಡು ಹಾರಗಳಿವೆ. ಬಲ ಹೆಗಲ ಮೇಲೆ ಧ್ವಜದ ಕೋಲಿದೆ. ಬಳೆ, ಕಡಗ, ವಸ್ತ್ರಗಳನ್ನು ಧರಿಸಿದ್ದಾನೆ (ಚಿತ್ರ 54). ಇನ್ನೊಂದರಲ್ಲಿ ಪದ್ಮಾಸನದಲ್ಲಿ ಕುಳಿತ ಯತಿಯ ಬಲಗೈ ವ್ಯಾಖ್ಯಾನ ಮುದ್ರೆಯಲ್ಲಿ ಮತ್ತು ಎಡಗೈ ಯೋಗಮುದ್ರೆಯಲ್ಲಿವೆ. ತಲೆಯ ಮೇಲೆ ಉದ್ದ ಮತ್ತು ದಪ್ಪನೆಯ ತುರುಬನ್ನು ಓರೆಯಾಗಿ ಕಟ್ಟಿರುವನು. ಕುಂಡಲ ಸರ, ವಸ್ತ್ರ, ಬಳೆ, ಮುಂತಾದ ಆಭರಣಗಳನ್ನು ಧರಿಸಿರುವನು.

ಅಂತರಾಳ ದ್ವಾರಕ್ಕೆ ಲೋಹದ ಪಟ್ಟಿಗಳಿವೆ. ಮುಂದೆ (ಸಭಾಮಂಟಪದಲ್ಲಿ) ಎರಡು ಪ್ರತ್ಯೇಕ ದ್ವಾರಪಾಲಕರ ಶಿಲ್ಪಗಳಿವೆ (ಚಿತ್ರ 55). ಚತುರ್ಭುಜಧಾರಿಗಳಾದ ಇವರು ತ್ರಿಭಂಗಿಯಲ್ಲಿ ಕತ್ತರಿಗಾಲಲ್ಲಿ ನಿಂತು, ಕೈಗಳಲ್ಲಿ ಶಂಖ, ಚಕ್ರ ಮತ್ತು ಗದೆಗಳನ್ನು ಹಿಡಿದು, ಮತ್ತೊಂದು ಕೈ ಕಟ್ಯಾವಲಂಬಿತವಾಗಿದೆ. ಒಂದು ಶಿಲ್ಪದ ಪ್ರಭಾವಳಿಯ ಮೇಲ್ಭಾಗ ಶಿಥಿಲಗೊಂಡಿದೆ.


ಸಭಾಮಂಟಪದಲ್ಲಿ ಆರು ಸ್ತಂಭಗಳನ್ನು ಎರಡು ಸಾಲಿನಲ್ಲಿ ನಿಲ್ಲಿಸಲಾಗಿದೆ. ಪ್ರತಿಯೊಂದು ಕಂಬದ ಕಾಂಡ ಭಾಗಗಳಲ್ಲಿ ಮೂರು ಚೌಕಾಕಾರದ ಭಾಗಗಳಿದ್ದು ಪ್ರತಿಯೊಂದು ಭಾಗದಲ್ಲಿ ಶಿಲ್ಪಗಳಿವೆ (ಚಿತ್ರ 56). ಮೊದಲನೆಯ ಕಂಬದ ಮೊದಲನೇ ಮುಖದಲ್ಲಿ ಕೈಮುಗಿದು ನಿಂತಿರುವ ಗರುಡ ಮತ್ತು ಕಾಳಿಂಗಮರ್ಧನ ಕೃಷ್ಣ ಇದ್ದಾರೆ. ಎರಡನೇ ಮುಖದಲ್ಲಿ ಕುಂಭ, ಸಿಂಹಗಳಿವೆ. ಮೂರನೆಯ ಮುಖದಲ್ಲಿ ಕೈಮುಗಿದು ನಿಂತ ವಾಲಿ, ಕುಳಿತ ವಾಲಿ ಮತ್ತು ಸುಗ್ರೀವ ಇದ್ದಾರೆ. ಎರಡನೆಯ ಕಂಬದ ಮೊದಲನೇ ಮುಖದಲ್ಲಿ ಕುಂಭ, ನೃತ್ಯಗಾರ್ತಿಯ ಮೇಲೆ ಹೂ–ಬಳ್ಳಿ ಪಟ್ಟಿಕೆಯಿದೆ. ಎರಡನೆಯ ಮುಖದಲ್ಲಿ ಕೊಡವನ್ನು ಹಿಡಿದ ವ್ಯಕ್ತಿಯಿದ್ದಾನೆ. ಮೂರು ಮತ್ತು ನಾಲ್ಕನೇ ಮುಖಗಳಲ್ಲಿ ಹೂ–ಬಳ್ಳಿಯ ಅಲಂಕರಣವಿದೆ. ಮೂರನೇ ಕಂಬದ ಮೊದಲನೇ ಮುಖದಲ್ಲಿ ಮಾರುತಿ ಮತ್ತು ಕೈಮುಗಿದು ನಿಂತ ಗರುಡ ಇದ್ದಾರೆ. ಎರಡನೆಯ ಮುಖದಲ್ಲಿ ಚತುರ್ಭುಜಧಾರಿ ವಿಷ್ಣು ಮತ್ತು ಬೆಣ್ಣೆ ಕೃಷ್ಣರಿರುವರು. ವಿಷ್ಣುವಿನ ಕೈಗಳಲ್ಲಿ ಅಭಯ, ಚಕ್ರ, ಶಂಖ ಮತ್ತು ಕಟ್ಯಾವಲಂಬಿತದಲ್ಲಿವೆ. ಮೂರನೇ ಮುಖದಲ್ಲಿ ಹೂ–ಬಳ್ಳಿ ಅಲಂಕರಣ, ನಾಲ್ಕರಲ್ಲಿ ಪಂಜರ ಮಾದರಿ, ರತ್ನಪಟ್ಟಿ, ಮಾರುತಿ ಮತ್ತು ಹೂಬಳ್ಳಿ ಅಲಂಕರಣಗಳಿವೆ. ನಾಲ್ಕನೆಯ



ದೇವರ ತಿಮ್ಮಲಾಪುರ, ಲಕ್ಷ್ಮೀ–ವರಾಹ




ದೇವರ ತಿಮ್ಮಲಾಪುರ, ರಾಮಾನುಜಾಚಾರ್ಯ(?)



ದೇವರ ತಿಮ್ಮಲಾಪುರ, ದ್ವಾರಪಾಲಕ



ದೇವರ ತಿಮ್ಮಲಾಪುರ, ಕಂಬಗಳು



ದೇವರ ತಿಮ್ಮಲಾಪುರ, ಶಾಸನ–ಶಿಲ್ಪ



ಅರಸೀಕೆರೆ, ಕೋಲಶಾಂತೇಶ ಮಠ

ಕಂಬದ ಮೊದಲನೇ ಮುಖದಲ್ಲಿ ಕೈಮುಗಿದು ನಿಂತ ಗರುಡ, ಕಾಳಿಂಗಮರ್ಧನ ಕೃಷ್ಣ ಮತ್ತು ಹೂ–ಬಳ್ಳಿ ಪಟ್ಟಿಕೆಯಿದೆ. ಎರಡನೇ ಮುಖದಲ್ಲಿ ಕೊಳಲನ್ನೂದುತ್ತ ನಿಂತ ವಿಷ್ಣು, ಹೂಬಳ್ಳಿ ಮತ್ತು ಕಾಳಿಂಗಮರ್ಧನ ಶಿಲ್ಪಗಳಿವೆ. ಮೂರನೇ ಮುಖದಲ್ಲಿ ಕುಂಭದ ಮೇಲೆ ಹೂಬಳ್ಳಿಯ ಪಟ್ಟಿಕೆಯಿದೆ. ನಾಲ್ಕನೆಯದರಲ್ಲಿ ಹೂಬಳ್ಳಿ ಚಿತ್ರಗಳಿವೆ. ಐದನೆಯ ಕಂಬದ ಮೊದಲ ಮುಖದಲ್ಲಿ ಈಟಿ ಹಿಡಿದ ಕುದುರೆ ಸವಾರ, ಆನೆ ಮತ್ತು ಹನುಮ ಇದ್ದಾರೆ. ಎರಡನೆಯ ಮುಖದಲ್ಲಿ ಕುಂಭ, ಅರ್ಧಗಂಬದ ಮೇಲೆ ಹಣ್ಣನ್ನು ತಿನ್ನುತ್ತ ಕುಳಿತ ಮಂಗ ಇವೆ. ಮೂರನೆಯದರಲ್ಲಿ ಕುಳಿತ ಮಂಗ, ಕೈಮುಗಿದು ಕುಳಿತ ಭಕ್ತ ಮತ್ತು ಚಕ್ರದ ಚಿಹ್ನೆಗಳಿವೆ. ನಾಲ್ಕನೆಯದರಲ್ಲಿ ಕೈಮುಗಿದು ನಿಂತ ಭಕ್ತ ಮತ್ತು ಮಾರುತಿ ಮತ್ತು ಕುಳಿತ ಭಕ್ತರಿದ್ದಾರೆ. ಆರನೆಯ ಕಂಬದ ಮೊದಲನೆಯ ಮುಖದಲ್ಲಿ ಆನೆಯ ಸವಾರ, ಉದ್ದ ಜಡೆಯುಳ್ಳ ಯತಿ ಮತ್ತು ನಿಂತ ಹನುಮರಿರುವರು. ಎರಡನೆಯದರಲ್ಲಿ ಕುಂಭ, ಉದ್ದನೆಯ ಹೂಬಳ್ಳಿ ಪಟ್ಟಿ ಮೇಲೆ ಒಬ್ಬ ವ್ಯಕ್ತಿಯ ಶಿಲ್ಪವಿದೆ. ಮೂರನೆಯ ಮುಖದಲ್ಲಿ ಮತ್ಸ್ಯಾವತಾರ ವಿಷ್ಣುಚಕ್ರ ಮತ್ತು ಕೈಮುಗಿದು ಕುಳಿತ ಭಕ್ತರಿದ್ದಾರೆ. ನಾಲ್ಕನೆಯದರಲ್ಲಿ ನಿಂತ ಭಕ್ತನ ಬದಿಗೆ ಶಂಖ ಮತ್ತು ಚಕ್ರಗಳು ಮತ್ತು ಮಾರುತಿಯ ಚಿತ್ರಗಳಿವೆ.


ಈ ದೇವಾಲಯದ ಎದುರಿನಲ್ಲಿ ದಾದಯ್ಯ ಮತ್ತು ರಂಗಯ್ಯರ ಕಿರು ದೇವಾಲಯಗಳಿವೆ. ಅವು ಏಕಕೂಟ ಮಾದರಿಯಲ್ಲಿದ್ದು ಅವುಗಳಲ್ಲಿ ಅವರ ಮತ್ತು ಅವರ ರಾಣಿಯರ ವಿಗ್ರಹಗಳಿವೆ. ಈ ದಾದಯ್ಯ ಸ್ಥಳೀಯ ಐತಿಹ್ಯದ ಪ್ರಕಾರ ಹರಪನಹಳ್ಳಿ ಪಾಳೆಗಾರ ಮನೆತನದ ಮೊದಲ ಅರಸನಾಗಿದ್ದು ಅವನು ದಾದನಾಯಕನೆಂದು ಕರೆಸಿಕೊಂಡಿರುವನು. ಅವನ ಪುತ್ರ ರಂಗನಾಯಕನೇ ಈ ರಂಗಯ್ಯನಾಗಿದ್ದಾನೆ. ದಾದನಾಯಕನು ಚಿತ್ರದುರ್ಗದ ತಿಮ್ಮಣ್ಣನಾಯಕನ ಪುತ್ರಿಯಾದ ಹೊನ್ನ ನಾಗತಿಯನ್ನು ಮದುವೆಯಾಗಿ ಈ ಪ್ರದೇಶದ ಉಚ್ಚಂಗಿದುರ್ಗವನ್ನು ವರದಕ್ಷಿಣೆಯಾಗಿ ಪಡೆದನಂತೆ. ಅವನು ಮತ್ತು ಅವನ ಮಗ ರಂಗಯ್ಯನಾಯಕನು ಈ ಮೇಲೆ ವಿವರಿಸಿದ ದೇವಾಲಯವನ್ನು ಕಟ್ಟಿಸಿದರೆಂಬ ಪ್ರತೀತಿಯಿದೆ. ಅಲ್ಲಿಯ ವೆಂಕಟೇಶ್ವರ ವಿಗ್ರಹವನ್ನು ಬಂಡಿಯಲ್ಲಿ ಮೈದೂರಿನಿಂದ ಹರಪನಹಳ್ಳಿಗೆ ತರುವಾಗ ಅದರ ಅಚ್ಚು ಮುರಿಯಿತು. ಕೊನೆಗೆ ಅರಸ ತಾನು ಕಂಡ ಸ್ವಪ್ನದ ಪ್ರಾಕಾರ ಆ ವಿಗ್ರಹವನ್ನು ಅಲ್ಲೇ ಸ್ಥಾಪಿಸಿದನು. ಈ ರೀತಿಯ ಕಥೆಗಳು ಹೆಣೆದುಕೊಂಡಿವೆ.

ದಾದಯ್ಯ ನಾಯಕನ ಗುಡಿಯಲ್ಲಿ ಆತನ ಇಬ್ಬರು ರಾಣಿಯರ ಶಿಲ್ಪಗಳಿವೆ. ಶಿಲ್ಪದಲ್ಲಿ ದಾದಯ್ಯನು ಕೈಮುಗಿದು ವೆಂಕಟೇಶ್ವರ ಸ್ವಾಮಿಗೆ ಎದುರು ಮುಖ ಮಾಡಿ ನಿಂತಿದ್ದಾನೆ. ತನ್ನ ಎಡಗೈಯಲ್ಲಿ ಕಠಾರಿಯನ್ನು ಜೋತುಹಾಕಿಕೊಂಡಿದ್ದಾನೆ. ಈತನ ಸುತ್ತಲೂ ಇರುವ ಪ್ರಭಾವಳಿಯ ಮಕರ ತೋರಣದ ಮೇಲೆ ಕೀರ್ತಿಮುಖವಿದೆ. ಪೀಠದ ಮೇಲೂ ಹೂವಿನ ಅಲಂಕರಣವಿದೆ. ಈತನು ತುರುಬು, ಕುಂಡಲ, ಹಾರ, ಬಳೆ, ವಸ್ತ್ರ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ್ದಾನೆ. ಈತನ ಶಿಲ್ಪದ ಬದಿಗಳಲ್ಲಿ ಎರಡು ಮತ್ತು ಪಕ್ಕದ ಗೋಡೆಗೆ ಒಂದು – ಒಟ್ಟು ಮೂವರು ಸ್ತ್ರೀಯರ ಶಿಲ್ಪಗಳು ಮತ್ತು ಹನುಮಾನ ಶಿಲ್ಪ ಇವೆ. ಇಲ್ಲಿಯ ಸ್ತ್ರೀಯರೆಲ್ಲ ಕೈಮುಗಿದು ನಿಂತಿದ್ದಾನೆ. ದಾದಯ್ಯನ ಶಿಲ್ಪದ ಎಡಗಡೆಯ ರಾಣಿಯ ಶಿಲ್ಪದ ಪ್ರಭಾವಳಿಯಲ್ಲಿ ಮಕರ ತೋರಣವಿದೆ. ಒಂದು ಬದಿಯ ಮಕರವನ್ನು ಪಕ್ಷಿಯಂತೆ ಚಿತ್ರಿಸಿರುವದು ಗಮನೀಯ. ಎರಡನೆಯ ಶಿಲ್ಪವು ಇದೇ ರೀತಿಯಿದೆ. ಈ ಗುಡಿಯ ಉತ್ತರ ಗೋಡೆಯ ಪಕ್ಕದಲ್ಲಿರುವ ಶಿಲ್ಪದಲ್ಲಿ ಇಬ್ಬರು ಮಹಿಳೆಯರು ಕೈಮುಗಿದು ನಿಂತಿದ್ದಾರೆ. ಇವರಲ್ಲಿ ಒಬ್ಬರನ್ನು ಸಾಮಾನ್ಯ ರೀತಿಯಲ್ಲಿ ಮತ್ತೊಬ್ಬರನ್ನು ಸೊಂಟದಷ್ಟು ಎತ್ತರ ತೋರಿಸಿರುವುದರಿಂದ ಇವರು ತಾಯಿ ಮಗಳು ಇರಬಹುದು. ಹನುಮನು ಎಡಗೈಯಲ್ಲಿ ಗದೆ ಮತ್ತು ಬಲಗೈಯನ್ನು ಮೇಲಕ್ಕೆತ್ತಿ ಹಿಡಿದಿದ್ದಾನೆ. ಉದ್ದ ಬಾಲವು ತೊಡೆಗಳ ಮುಂಭಾಗದಿಂದ ಎಡಭುಜದವರೆಗೆ ಸುತ್ತಿಕೊಂಡಿದೆ.

ರಂಗಯ್ಯನ ಗುಡಿಯಲ್ಲಿ ಮೂವರು ಸ್ತ್ರೀಯರ ವಿಗ್ರಹಗಳಿವೆ. ಒಂದರಲ್ಲಿ ಒಬ್ಬ ರಾಣಿ ಮತ್ತು ಅವಳ ಮಗಳನ್ನು, ಇನ್ನೊಂದರಲ್ಲಿ ಒಬ್ಬ ರಾಣಿಯನ್ನು ಮಾತ್ರ ತೋರಿಸಲಾಗಿದೆ. ಶಿಲ್ಪದಲ್ಲಿ ರಂಗಯ್ಯನೂ ವೀರನವೇಶದಿಂದ ಭಕ್ತಿಪೂರ್ವಕವಾಗಿ ಕೈಮುಗಿದು ವೆಂಕಟೇಶ್ವರ ಸ್ವಾಮಿಗೆ ಎದುರಾಗಿ ನಿಂತಕೊಂಡಿದ್ದಾನೆ. ಎಡ ಭುಜದಲ್ಲಿ ತನ್ನ ಉದ್ದನೆಯ ಬಿಲ್ಲನ್ನು ಹೊತ್ತಿರುವನು. ಸೊಂಟಕ್ಕೆ ಕಟ್ಟಿದ ಗುರಾಣಿಯು ತನ್ನ ಬಲತೊಡೆಯ ಮೇಲೆ ಇಳಿಬಿದ್ದಿದೆ. ತುರುಬು, ಕುಂಡಲ, ಹಾರ, ವಸ್ತ್ರ, ಬಳೆ, ಕಡಗ ಇತ್ಯಾದಿ ಆಭರಣಗಳನ್ನು ಧರಿಸಿದ್ದಾನೆ. ಪೀಠದಲ್ಲಿ ಹೂವಿನ ಅಲಂಕರಣ, ಸುತ್ತಲು ಮಕರ ತೋರಣದ ಪ್ರಭಾವಳಿಯ ಮೇಲೆ ಕೀರ್ತಿಮುಖವಿದೆ. ಅಲಂಕರಣ ವಿಭಿನ್ನ ರೀತಿಯಲ್ಲಿದೆ.

ರಂಗಯ್ಯನ ಶಿಲ್ಪದ ಬಲಗಡೆಯ ಶಿಲ್ಪದಲ್ಲಿ ಇಬ್ಬರು ಸ್ತ್ರೀಯರನ್ನು ಚಿತ್ರಿಸಲಾಗಿದೆ. ಇವರು ಕೈಮುಗಿದುಕೊಂಡು ನಿಂತಿದ್ದಾರೆ. ಸೀರೆಯನ್ನು ಪಾದದವರೆಗೆ ಇಳಿಬಿಟ್ಟು ಉಟ್ಟಿದ್ದಾರೆ. ಒಬ್ಬಳಿಗೆ ಮಾತ್ರ ತುರುಬಿದ್ದು, ಇಬ್ಬರೂ ಪದಕವುಳ್ಳ ಸರಮಾಲೆಯನ್ನು ತಲೆ ಸುತ್ತ ಧರಿಸಿರುವರು. ಇದಲ್ಲದೆ ಕುಂಡಲ ಸರ, ಬಳೆ, ಕಡಗ, ಇತ್ಯಾದಿ ಆಭರಣಗಳನ್ನು ಧರಿಸಿರುವರು. ಇವರಲ್ಲಿ ಒಬ್ಬಳು ಇನ್ನೊಬ್ಬಳ ಸೊಂಟದಷ್ಟು ಎತ್ತರವಿರುವುದರಿಂದ ಒಬ್ಬಳು ರಾಣಿ ಮತ್ತೊಬ್ಬಳು ಅವಳ ಮಗಳೆಂದು ಗುರುತಿಸಬಹುದು. ಆತನ ಎಡಗಡೆಯ ಶಿಲ್ಪದಲ್ಲಿ ಒಬ್ಬ ರಾಣಿಯ ಚಿತ್ರವಿದೆ. ಇತರ ರಾಣಿಯರಂತೆ ವೇಷಭೂಷಣವುಳ್ಳ ಆಕೆಯೂ ಕೈಮುಗಿದು ನಿಂತಿದ್ದಾಳೆ.

ವೆಂಕಟೇಶ್ವರ ದೇವಾಲಯದ ಬದಿಗೆ ಈ ಶತಮಾನದ ಮಂಟಪವಿದೆ. ಅದನ್ನು ಸ್ಥಳೀಕರು ಕಣ್ಣುಕೊಟ್ಟಪ್ಪನೆನ್ನುವರು. ಅದರಲ್ಲಿರುವ ಒಂದು ಶಿಲೆಯ ಮೇಲೆ ಶಂಖ, ನಾಮ, ಮತ್ತು ಚಕ್ರ ಚಿಹ್ನೆಗಳಿವೆ. ಅದರ ಗೋಡೆಯಲ್ಲಿ ಗಣೇಶನ ವಿಗ್ರಹವಿದೆ. ಕುಳಿತ ಭಂಗಿಯಲ್ಲಿರುವ ಚತುರ್ಭುಜಧಾರಿ ಗಣೇಶನ ಕೈಗಳಲ್ಲಿ ದಂತ, ಪಾಶ, ಅಂಕುಶ ಮತ್ತು ಬಟ್ಟಲಲ್ಲಿ ಮೋದಕಗಳಿವೆ. ಪೀಠದ ಮೇಲೆ ಆತನ ವಾಹನ ಮೂಷಕವಿದೆ.



ಯರಬಳ್ಳಿ, ಶಿವಲಿಂಗ



ಯರಬಳ್ಳಿ, ಭೈರವ

**ಬಾವಿ:** ಈ ದೇವಾಲಯದ ಪೂರ್ವಕ್ಕೆ ಸ್ವಲ್ಪ ದೂರದಲ್ಲಿ ಒಂದು ವಿಶಾಲವಾದ ಬಾವಿಯಿದೆ. ಸುಮಾರು 60 ಚದರ ಅಡಿ ವಿಸ್ತೀರ್ಣವಿದ್ದು 80 ಮೆಟ್ಟಿಲುಗಳಿವೆ. ಈ ಬಾವಿಯನ್ನು ಶಕ 1773, ಅಂದರೆ ಕ್ರಿ.ಶ. 1851ರಲ್ಲಿ ಕಟ್ಟಲಾಯಿತೆಂದು ಅಲ್ಲಿಯ ಶಾಸನದಿಂದ ತಿಳಿಯುತ್ತದೆ. ಶಾಸನದ ಮೇಲೆ ಗರುಡ ಮತ್ತು ಆಂಜನೇಯರ ಶಿಲ್ಪಗಳಿವೆ. ಇಬ್ಬರು ಕೈಮುಗಿದು ನಿಂತಿದ್ದಾರೆ. ಮಧ್ಯದಲ್ಲಿ ಕಂಬದ ಮೇಲೆ ಚಕ್ರ, ನಾಮ ಮತ್ತು ಶಂಖಗಳ ಚಿಹ್ನೆಗಳನ್ನು ಕೆತ್ತಲಾಗಿದೆ (ಚಿತ್ರ 57).

ಈ ಸ್ಥಳದ ವೆಂಕಟೇಶ ದೇವಾಲಯ, ಅದರಲ್ಲಿರುವ ವೆಂಕಟೇಶ, ಲಕ್ಷ್ಮಿ, ಆಳ್ವಾರರ ಶಿಲ್ಪವೆನಿಸಿದ ರಾಮಾನುಜಾಚಾರ್ಯ ಮತ್ತು ಭಕ್ತ, ಗಣೇಶ, ಆಂಜನೇಯ, ಮಹಾದ್ವಾರ, ದೀಪಸ್ತಂಭ, ಮತ್ತು ಮಂಟಪ ಇವುಗಳ ಕಲಾಶೈಲಿಯು ಕ್ರಿ.ಶ. 16ನೇ ಶತಮಾನದ್ದಾಗಿದೆ. ಈ ಕಾಲದಲ್ಲಿ ಈ ಸ್ಥಳವು ಒಂದು ವೈಷ್ಣವ ಪರಂಪರೆಯ (ತಿಮ್ಮಪ್ಪನ) ಸ್ಥಾನವಾಗಿ ಉಗಮವಾಗಿದೆ. ಈ ಪ್ರದೇಶದಲ್ಲಿ ತಿಮ್ಮಪ್ಪನ ಅನೇಕ ದೇವಾಲಯಗಳಿವೆ ಮತ್ತು ತಿಮ್ಮಪ್ಪನ ಭಕ್ತರೂ ಸಹ ಇದ್ದಾರೆ. ಮಹಾದ್ವಾರದ ಗೋಪುರವನ್ನು ಶತಮಾನದ ಆದಿಯಲ್ಲಿ ಕಟ್ಟಿಸಲಾಗಿದೆ ಎಂದು ಹೇಳಿದ್ದರೂ ಈ ದೇವಾಲಯದ ಸಂಕೀರ್ಣವನ್ನು ಪರಿಶೀಲಿಸಿದಾಗ ಅದನ್ನು ಮತ್ತು ಬಹುತೇಕ ಬಿದ್ದುಹೋದ ಮೂಲ ಮಹಾದ್ವಾರ ಗೋಪುರವನ್ನು ಪುನರ್ ಸ್ಥಾಪಿಸಿದುದರ ಸಾಧ್ಯತೆ ಹೆಚ್ಚು. ಈ ದೇವಾಲಯದ ಎದುರಿನ ದಾದಯ್ಯ ಮತ್ತು ರಂಗಯ್ಯರ ಮತ್ತು ಅವರಿಬ್ಬರ ರಾಣಿಯರ ಶಿಲ್ಪಗಳು ಎರಡನೆಯ ಹಂತದಲ್ಲಿ ಸೇರಿವೆ. ಅಂದರೆ ಅವುಗಳ ಕಾಲ ಸುಮಾರು 17ನೇ ಶತಮಾನದ ಆದಿಭಾಗವಾಗಿರವ ಸಾಧ್ಯತೆ ಹೆಚ್ಚು. ಅಲ್ಲಿಯ ವರಾಹಲಕ್ಷ್ಮಿ ವಿಗ್ರಹವು ಈ ಶತಮಾನದ ಆದಿಭಾಗಕ್ಕೆ ಸೇರಿದೆ. ಹರಪನಹಳ್ಳಿ ಪಾಳೆಗಾರರ ಮನೆತನದ ಮೂಲ ಸ್ಥಾಪಕನೆನಿಸಿದ ಈ ದಾದಯ್ಯ ನಾಯಕನ ಮಗನೇ ರಂಗಯ್ಯನಾಗಿದ್ದಾನೆ. ಈ ಪಾಳೆಗಾರರು ಪ್ರಾರಂಭದಲ್ಲಿ ವೈಷ್ಣವ ಧರ್ಮದ ಅನುಯಾಯಿಗಳಾಗಿರಬಹುದೆಂದು ತರ್ಕಿಸಬಹುದು.

**ಅರಸೀಕೆರೆ:**

ಅರಸೀಕೆರೆ ಗ್ರಾಮದ ಪ್ರಾಚೀನ ದೇವಾಲಯ ಹರಿಹರೇಶ್ವರವಾಗಿದ್ದು ಅದು ಈ ಗ್ರಾಮದ ಮಧ್ಯದಲ್ಲಿದೆ. ಹರಿಹರೇಶ್ವರ ದೇವಾಲಯದಲ್ಲಿ ಗರ್ಭಗೃಹ ಅಂತರಾಳ ಮತ್ತು ಕಕ್ಷಾಸನವುಳ್ಳ ಸಭಾಮಂಟಪಗಳಿವೆ. ಮೇಲೆ ಕದಂಬ ನಾಗರ ಶಿಖರವನ್ನು ಹೊಂದಿದೆ. ಇದರ ಕಾಲ ಸು. ಕ್ರಿ.ಶ. 14ನೇ ಶತಮಾನ. ಪಂಚಗಣಾಧೀಶ್ವರರಲ್ಲೊಬ್ಬರೆನಿಸಿದ ಕೋಲಾಶಾಂತೇಶ್ವರನ ಮಠ ಅಲ್ಲಿ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಈ ಗಣಾಧೀಶ್ವರನ ಮುಖವಾಡವುಳ್ಳ ಮೂರ್ತಿಯನ್ನು ಗ್ರಾಮದಲ್ಲಿರಿಸಿ ಆರಾಧಿಸಿದರೆ ಅದರ ಮೂಲ ಮಠವು ಊರ ಹೊರಗಡೆಯಿದೆ. ಪೂರ್ವಕ್ಕೆ ಮುಖ ಮಾಡಿದ ಈ ಮಠದಲ್ಲಿ ಗರ್ಭಗೃಹ, ತೆರೆದ ಸಭಾಮಂಟಪ ಮತ್ತು ಮಹಾಮಂಟಪಗಳಿವೆ. ಒಳ ಆವರಣದಲ್ಲಿ ಕೆಲವು ಗದ್ದುಗೆಗಳುಳ್ಳ ಗುಡಿಗಳಿವೆ. ಈ ಕಟ್ಟಡಗಳು ಅಲ್ಲಲ್ಲಿ ಶಿಥಿಲಗೊಂಡಿವೆ. ಗರ್ಭಗೃಹದ ದ್ವಾರಕ್ಕೆ ಶೈವ ದ್ವಾರಪಾಲಕರಿದ್ದಾರೆ. ಸಭಾಮಂಟಪ ಗೋಡೆಯಲ್ಲಿ ಗಿರಿಜಾಕಲ್ಯಾಣದ ಕಥಾನಕ ದೃಶ್ಯವಿದೆ. ಮುಂಭಾಗದ ಕೈಪಿಡಿಗೋಡೆಯಲ್ಲಿ ಆರು ಗೂಡುಗಳಿವೆ. ಕೈಪಿಡಿಗೋಡೆಯ ಮೇಲ್ಭಾಗದಲ್ಲಿ ತೆನೆಗಳು ಮತ್ತು ಮೂಲೆಗಳಲ್ಲಿ ಮುಖ ಮತ್ತು ಒಂದು ದೇಹವುಳ್ಳ ನಂದಿಗಳಿವೆ (ಚಿತ್ರ 58). ಈ ಮಠದ ಹೊರ ಭಿತ್ತಿಯ ಮೇಲೆ ಉದ್ದವಾದ ನಾಗರ ಹಾವು, ಶಿವಲಿಂಗದ ಶಿಲ್ಪಗಳಿವೆ. ಮಹಾದ್ವಾರದ ಬಾಗಿಲಿನಲ್ಲಿ ಮೂರು ಅಲಂಕೃತ ಶಾಖೆಗಳಿವೆ. ಲಲಾಟದಲ್ಲಿ ಶಿವ–ಪಾರ್ವತಿಯರ ಶಿಲ್ಪವಿದೆ. ಇದರ ಕೆಲವು ಭಾಗಗಳು ಹರಪನಹಳ್ಳಿಯ ಹತ್ತಿರದ ಗುಡ್ಡ ಮಠದ ಕಟ್ಟಡಗಳನ್ನು ಹೆಚ್ಚಾಗಿ ಹೋಲುತ್ತವೆ. ಅಲ್ಲಿಯ ಈ ಕಟ್ಟಡಗಳ ಕಾಲ ಸು. ಕ್ರಿ.ಶ. 17ನೇ ಶತಮಾನದ ಆದಿಭಾಗವಿರಬೇಕು ಮತ್ತು ಹರಪನಹಳ್ಳಿ ಪಾಳೆಗಾರರ ಪ್ರೋತ್ಸಾಹದಲ್ಲಿ ಈ ಮಠವು ನಿರ್ಮಾಣಗೊಂಡಿರಬೇಕೆಂದು ಸ್ಥಳೀಕರ ಅಭಿಪ್ರಾಯವೂ ಆಗಿದೆ. ಇದರಿಂದ ಅವರು ವೀರಶೈವ ಮಠಗಳ ಬೆಳವಣಿಗೆಗೂ ಆಶ್ರಯದಾತರಾಗಿದ್ದರೆಂಬ ಮಾತನ್ನು ಈ ಸಂದರ್ಭದಲ್ಲಿ ಒಪ್ಪಿಕೊಳ್ಳಬಹುದು.

**ಯರಬಳ್ಳಿ:**

ಯರಬಳ್ಳಿ ಗ್ರಾಮ ಒಂದು ಕುಗ್ರಾಮವಾಗಿ ಕಾಣುತ್ತಿದ್ದರೂ ಅದರ ಸಮೀಪವಿರುವ ಗುಡ್ಡ ಪ್ರದೇಶವು ಪ್ರಾಚೀನ ಸಾಂಸ್ಕೃತಿಕ ಕೇಂದ್ರವಾಗಿತ್ತು. ಅದರ ಮೇಲೆ ಕೋಟೆ, ಬಾವಿ, ಜನವಸತಿ ನೆಲೆ, ಸಮಾಧಿ ಅವಶೇಷಗಳು ದಾರಿಯುದ್ದಕ್ಕೂ ಇವೆ. ಇದು ಶಾಸನ, ಶಿಲ್ಪ ಮತ್ತು ದೇವಾಲಯಗಳ ಆಗರವೆನಿಸಿದೆ. ಈ ಸ್ಥಳದ ಪ್ರಾಚೀನತೆ ಬೃಹತ್ ಶಿಲಾ ಸಂಸ್ಕೃತಿಯ ಕಾಲದಷ್ಟು ಹಿಂದಕ್ಕೆ ಹೋಗುತ್ತದೆ. ಈ ಕಾಲದ ಹಾಳಾದ ಸಮಾಧಿಗಳ ಅವಶೇಷಗಳು ಗುಡ್ಡದ ಬುಡದಲ್ಲಿ ಹರಡಿವೆ. ಕ್ರಿ.ಶ. 5ನೇ ಶತಮಾನದ ಶಿವಲಿಂಗ ಇಲ್ಲಿಯ ಒಂದು ನೈಸರ್ಗಿಕ ಗುಹೆಯ ಮುಂದೆ ಇರುವುದು (ಚಿತ್ರ 59). ಇದರ ಪೀಠ ವೃತ್ತಾಕಾರದಲ್ಲಿದೆ. ಆದಿ ಕದಂಬರ ಕಾಲದ ಕುರುಹುಗಳಿಲ್ಲ. ಆದರೆ ಈ ಕಾಲದಲ್ಲಿ ನೆರೆಯ ಉಚ್ಚಂಗಿಯು ಅವರ ಮತ್ತೊಂದು ರಾಜಧಾನಿಯಾಗಿದ್ದಿತು. ತದನಂತರ ಬಾದಾಮಿ ಚಾಲುಕ್ಯರ ಕಾಲದಲ್ಲಿ ಜೈನಯತಿಗಳ ಕೇಂದ್ರವಾಗಿ ಕಾಣಿಸಿಕೊಂಡಿದೆ. ಸತ್ಯಾಶ್ರಯ ಪೃಥ್ವೀವಲ್ಲಭ ಬಿರುದುಳ್ಳ ಇಮ್ಮಡಿ ಪುಲಕೇಶಿಯ ಶಾಸನದಲ್ಲಿ ಅಜಿತಸೇನಾಚಾರ್ಯ, ಥಣಿ ಆಚಾರ್ಯ ಹೆಸರುಗಳಿವೆ. ಜೈನ ಮುನಿಗಳ ಸಲ್ಲೇಖನದ ವಿವರಗಳಿವೆ. ಈ ಕಾಲದ ಇನ್ನಿತರ ಅವಶೇಷಗಳು ಅಲ್ಲಲ್ಲಿ ಹರಡಿವೆ. ಮುಂದೆ ವಿಜಯನಗರ ಮತ್ತು ನಾಯಕರ ಕಾಲದಲ್ಲಿ ಇದು ಒಂದು ಪ್ರಮುಖ ಕೇಂದ್ರವೆನಿಸಿತ್ತು. ಯೋಗನರಸಿಂಹ ಮತ್ತು ಭೈರವ ಈ ಕಾಲದ ಮುಖ್ಯ ಶಿಲ್ಪಗಳು. ಗುಡ್ಡದ ಮೇಲಿರುವ ಕೋಟೆಗೆ ಹೋಗಲು ದಾರಿಯುದ್ದಕ್ಕೂ ಅಲ್ಲಲ್ಲಿ ದ್ವಾರಗಳನ್ನು ನಿರ್ಮಿಸಿದ್ದಾರೆ. ಈ ದ್ವಾರಗಳು ಮತ್ತು ಇನ್ನುಳಿದ ಸ್ಮಾರಕಗಳು ನಾಯಕರ ಕಾಲದವಾಗಿವೆ.

ಪ್ರಸ್ತುತ ಅಧ್ಯಯನಕ್ಕೆ ಸೀಮಿತವಾಗಿರುವ ಪುರಾತತ್ವ ಅವಶೇಷಗಳ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ. ಈ ಗುಡ್ಡ ಪ್ರದೇಶವನ್ನು "ಗಿರಿ" ಎಂದು ಮತ್ತು ನರಸಿಂಹನ ದೇವಾಲಯದ ಶಿಖರ ಸ್ಥಾಪನೆ ವಿಷಯ ಇಲ್ಲಿಯ ಒಂದು ಶಾಸನದಲ್ಲಿ ಉಲ್ಲೇಖಿಗೊಂಡಿದೆ. ನೈಸರ್ಗಿಕ ಗುಹೆಯನ್ನು ನರಸಿಂಹ ದೇವಾಲಯವನ್ನಾಗಿ ಪರಿವರ್ತಿಸಲಾಗಿದೆ. ದೇವಾಲಯದ ಮೇಲೆ ಇಟ್ಟಿಗೆಯಿಂದ ಕಟ್ಟಿದ ಶಿಖರವಿದೆ. ಅದರ ಅಲ್ಪ ಭಾಗ ಮಾತ್ರ ಈಗ ಉಳಿದಿದೆ. ಪೂರ್ವಕ್ಕೆ ಮುಖಮಾಡಿದ ಈ ದೇವಾಲಯದ ಎದುರಿಗೆ ದೀಪಸ್ತಂಭವಿದೆ. ವಿಶಾಲವಾದ ಒಳ ಆವರಣದಲ್ಲಿ ಕಂಬಗಳಿಲ್ಲ. ಅದರ ಹಿಂಬದಿಯ ಕಟ್ಟೆಯ ಮೇಲೆ ಕೆಲವು ಶಿಲ್ಪಗಳಿವೆ. ಅವುಗಳಲ್ಲಿ ಪ್ರಮುಖ ದೇವತೆಯಾದ ನರಸಿಂಹನು ತನ್ನ ಕಾಲುಗಳನ್ನು ಕೆಳಗೆ ಇಳಿಬಿಟ್ಟು ಪ್ರಲಂಬಾಸನದಲ್ಲಿ ಕುಳಿತಿದ್ದಾನೆ. ಚತುರ್ಭುಜಧಾರಿಯಾಗಿ ಕೆಳಗಿನ ಕೈಗಳಲ್ಲಿ ಅಭಯ (ಹಸ್ತ) ಮತ್ತು ಫಲಗಳಿದ್ದು ಮೇಲಿನ ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಸಿಂಹದ ಮುಖ ಮತ್ತು ಮನುಷ್ಯನ ದೇಹವುಳ್ಳ ಈತನು ಕಿರೀಟ, ಕುಂಡಲ, ಸರ, ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿದ್ದಾನೆ. ಪೀಠದಲ್ಲಿ ಗರುಡನಿದ್ದಾನೆ. ಮುಖಕ್ಕೆ ಗಡ್ಡದ ಲಕ್ಷಣವಿದೆ. ಈತನು ಕೇವಲ ನರಸಿಂಹನಾಗಿದ್ದಾನೆ. ಈತನ ಬದಿಯಲ್ಲಿ ಆಂಜನೆಯ ಮತ್ತು ಶಿವಲಿಂಗಗಳಿವೆ. ಎದುರಿನ ಎತ್ತರದ ದೀಪಸ್ತಂಭದ ಕಾಂಡಭಾಗವು ಚೌಕ, ಅಷ್ಟಭುಜ ಮತ್ತು ವೃತ್ತಾಕಾರದಲ್ಲಿದೆ. ಈ ದೇವಾಲಯದ ಹತ್ತಿರ ಶಿಲಾಬಂಡೆಯ ಮೇಲೆ ಒಂದು ಶಾಸನವಿದೆ. ಇದರಲ್ಲಿ ಶಾಲಿವಾಹನ ಶಕ 1432 ಶುಭನಾಮಸಂವತ್ಸರ ವೈಶಾಖ ಶುದ್ಧ 15ರಂದು ಅಂದರೆ ಕ್ರಿ.ಶ. 1510 ಮಾರ್ಚ್ 27ರಂದು ಅಲ್ಲಿಯ ನರಸಿಂಹ ದೇವಾಲಯದ ಶಿಖರವನ್ನು ಕಟ್ಟಿಸಿದ ವಿವರವಿದೆ. ಇದರ ಪಾಠ ಹೀಗಿದೆ.

1 ಶ್ರೀ ಶಾಲಿವಾಹನ ಶ. 1432 ನೆಯ ಷುಭಾ
2 ನು ಸಂವತ್ಸರದ ವೈಶಾಖದ ಶು 15 ಶ
3 ಲೂ ದೇವರಸ ಗಂಗೆ ಉದರವಿ
4 ಭಾವದಿ ಜನಿಸಿದ [ರಾಮ . . .]
5 ಮ ಗಿರಿದೇವನು [. .] ನೃಸಿಂಹ
6 ನ [ದೇ] ವಾಲ್ಯದ [ಸಿಖರ . . . . .]
7 ಬಾ . ಮ ಶ್ರೀ.

**ಭೈರವ:** ಭೈರವನು ಬೆತ್ತಲೆಯಾಗಿ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಚತುರ್ಭುಜಧಾರಿಯಾಗಿ ಕೈಗಳಲ್ಲಿ ಖಡ್ಗ, ತ್ರಿಶೂಲ, ಡಮರು(?) ಮತ್ತು ಕಪಾಲಗಳನ್ನು ಹಿಡಿದಿದ್ದಾನೆ. ಕಪಾಲದೊಂದಿಗೆ ಹಿಡಿದ ಕತ್ತರಿಸಿದ ರುಂಡದಿಂದ ಬೀಳುತ್ತಿರುವ ರಕ್ತವನ್ನು ಒಂದು ನಾಯಿಯು ಮೇಲಕ್ಕೆ ಹಾರಿ ಹೀರುತ್ತಿದೆ. ಭೈರವನ ಬಲಕ್ಕೆ ಪ್ರೇತಗಳಿವೆ. ಭೈರವ ಜಟಾಮುಕುಟ, ಕುಂಡಲ, ಸರ, ಬಳೆ, ರುಂಡಮಾಲೆ, ಕಡಗಗಳನ್ನು ಧರಿಸಿದ್ದಾನೆ. ಪ್ರಭಾವಳಿಯಲ್ಲಿ ಮಕರತೋರಣದ ಅಲಂಕರಣವಿದೆ. ಪೀಠದಲ್ಲಿ ಚೇಳಿನ ಶಿಲ್ಪವಿದೆ (ಚಿತ್ರ 60).

ಗುಡ್ಡದಲ್ಲಿ ಅಲ್ಲಲ್ಲಿ ಇರುವ ಬಾಗಿಲುಗಳನ್ನು ಶಿಲಾಬಂಡೆಗಳಿಗೆ ಹೊಂದಿಸಿ ನಿರ್ಮಿಸಲಾಗಿದೆ. ಗುಡ್ಡದ ಮೇಲ್ಭಾಗದ ಅಂಚಿನ ಸುತ್ತಲೂ ಕೋಟೆಯ ಗೋಡೆಯನ್ನು ಮತ್ತು ಕೊತ್ತಳಗಳನ್ನು ಕಟ್ಟಲಾಗಿದೆ. ಕೋಟೆಯಲ್ಲಿಯ ವಿವಿಧ ಕಟ್ಟಡಗಳಲ್ಲಿ ಪುಷ್ಕರಣಿ [ಬಾವಿ] ಸ್ವಲ್ಪ ಸುಸ್ಥಿತಿಯಲ್ಲಿದೆ. ಇಲ್ಲಿಯ ಕೆಲವು ಕಟ್ಟಡಗಳನ್ನು ಇಟ್ಟಿಗೆ, ಗಾರೆಯಿಂದ ನಿರ್ಮಿಸಲಾಗಿದೆ. ಇವುಗಳ ಲಕ್ಷಣಗಳಿಂದ ಇವುಗಳ ಕಾಲ ಸು. ಕ್ರಿ.ಶ. 17ನೇ ಶತಮಾನದ ಆದಿಭಾಗವೆಂದು ತರ್ಕಿಸಬಹುದು.

ಒಟ್ಟಾರೆ ಈ ಅಧ್ಯಯನದಿಂದ ಈ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ದೇವರ ತಿಮ್ಮಲಾಪುರ ಮತ್ತು ಯರಬಳ್ಳಿಯಲ್ಲಿ ವೈಷ್ಣವ ಕೇಂದ್ರದ ವೆಂಕಟೇಶ್ವರ, ನರಸಿಂಹ, ಇನ್ನಿತರ ದೇವದೇವತೆಗಳ ಮತ್ತು ಅರಸೀಕೆರೆಯ ವೀರಶೈವ ಮಠದ ವಾಸ್ತುಶಿಲ್ಪ ಮಾಹಿತಿಗಳು ಲಭ್ಯವಾಗುತ್ತವೆ. ಹಾಗೂ ಕೆಲವು ವಿಜಯನಗರೋತ್ತರದಲ್ಲಿ ಅಸ್ತಿತ್ವದಲ್ಲಿದ್ದ ಹರಪನಹಳ್ಳಿ ಪಾಳೆಯಗಾರರಾದ ದಾದಯ್ಯನಾಯಕ, ಆತನ ಮಗ ರಂಗಯ್ಯರ ಮತ್ತು ಅವರ ರಾಣಿಯರು ಶಿಲ್ಪಗಳ ಮೂಲಕ ಕಾಣಿಸಿಕೊಂಡಿರುವುದು ಗಮನೀಯ.

**ಕೃತಜ್ಞತೆ:**

ಈ ಅಧ್ಯಯನದ ಕ್ಷೇತ್ರಕಾರ್ಯಕ್ಕಾಗಿ ಅಲ್ಲಿಗೆ ಹೋಗಲು ನೆರವಾದ ಶ್ರೀ ಟಿ.ಎಂ. ವಿಶ್ವನಾಥ್ ಮತ್ತು ಯರಬಳ್ಳಿಯ ಶ್ರೀ ಭೀಮಪ್ಪ ಶಿಕ್ಷಕರಿಗೆ ಕೃತಜ್ಞತೆಗಳು.

# 10. ಬೈಲುವದ್ದಿಗೇರಿಯ ಇಮ್ಮಡಿ ದೇವರಾಯನ ಶಾಸನ

**– ಗೋವಿಂದ**

ಹಂಪೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ವೈಭವದಿಂದ ಮೆರೆದಿತ್ತು ಎಂದು ಪ್ರವಾಸಿಗರ ಬರಹ, ಶಾಸನಗಳಿಂದ ಹಾಗೂ ಚರಿತ್ರೆ, ಜನಪದ ಮೌಖಿಕ ಕಾವ್ಯಗಳಿಂದಲೂ ತಿಳಿದುಬರುತ್ತದೆ. ಇಲ್ಲಿ ಆಳಿದ ಸಂಗಮ, ಸಾಳುವ, ತುಳುವ ಮತ್ತು ಅರವೀಡು ವಂಶದ ರಾಜರುಗಳು ತಮ್ಮದೇ ಆದ ಖ್ಯಾತಿಗೆ ಅರ್ಹರಾಗಿದ್ದಾರೆ. ಅದರಲ್ಲೂ ಇಮ್ಮಡಿ ದೇವರಾಯ ಮತ್ತು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವಿಜಯನಗರವು ತುಂಬಾ ಪ್ರಸಿದ್ಧಿಯನ್ನು ಪಡೆದು ಕಿರೀಟಪ್ರಾಯವಾಗಿತ್ತೆಂದು ತಿಳಿಯುತ್ತದೆ. ಇವರುಗಳ ಆಡಳಿತ ವೈಖರಿ, ಧರ್ಮಕ್ಕೆ ನೀಡಿದ ಪ್ರೋತ್ಸಾಹ, ಇವರ ಅಧೀನದಲ್ಲಿದ್ದ ಸಣ್ಣ-ಪುಟ್ಟ ಪಾಳೆಯಗಾರರ ಬಗ್ಗೆ ಶಾಸನಗಳೇ ಪ್ರಮುಖ ಆಕರಗಳಾಗಿ ನಿಲ್ಲುತ್ತವೆ. ಇಂತಹ ಹಲವು ಶಾಸನಗಳು ಈಗಾಗಲೇ ಬೆಳಕಿಗೆ ಬಂದು ಪ್ರಕಟವಾಗಿವೆ. ಇನ್ನೂ ಹಲವಾರು ಅಪ್ರಕಟಿತ ಶಾಸನಗಳು ಈಗಲೂ ಕಂಡು ಬರುತ್ತಿವೆ. ಅಂತಹವುಗಳಲ್ಲಿ ಈಚೆಗೆ ನನ್ನ ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡು ಬಂದಿರುವ ಬೈಲುವದ್ದಿಗೇರಿಯ ಶಾಸನವೂ ಒಂದು.

**ಶಾಸನದ ವಿವರ:** ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಬೈಲುವದ್ದಿಗೇರಿ ಚಿಕ್ಕ ಗ್ರಾಮ. ಈ ಗ್ರಾಮದಲ್ಲಿ ದಕ್ಷಿಣಾಭಿಮುಖವಾಗಿರುವ ಆಂಜನೇಯ ದೇವಸ್ಥಾನದ ಬಲಭಾಗಕ್ಕೆ ಶಾಸನವೊಂದಿದೆ. ಇದನ್ನು ಗ್ರಾನೈಟ್ ಕಲ್ಲಿನಲ್ಲಿ ಬರೆಯಲಾಗಿದೆ. ಐದು ಅಡಿ ಎತ್ತರ ಹಾಗೂ ಮೂರು ಅಡಿ ಅಗಲವಿದ್ದು, ಏಳು ಸಾಲುಗಳನ್ನೊಳಗೊಂಡಿದೆ. ಶಿಲ್ಪದ ಮೇಲಿನ ಭಾಗದಲ್ಲಿ ಶಿವಲಿಂಗವಿರುವುದರಿಂದ ಇದು ಶೈವಧರ್ಮಕ್ಕೆ ಸಂಬಂಧಿಸಿದುದಾಗಿದೆ. ಇದರ ಲಿಪಿಯು 15ನೇ ಶತಮಾನದ ಕನ್ನಡವನ್ನು ಹೋಲುತ್ತದೆ.

**ಶಾಸನ ಕಾಲ–ಅರಸ:** ಈ ಶಾಸನದಲ್ಲಿ ಸಂಗಮ ವಂಶದ ಇಮ್ಮಡಿ ದೇವರಾಯನ ಅರ್ಧಾಂಗಿ ಅಂಣಲದೇವಿಯ ನೆನಪಿಗಾಗಿ ಅಂಣಲಾಪುರವನ್ನು ಹಿತ್ತಿಲ ಬಾಗಿಲ ಮಲ್ಲರಾಜಗಳು ಕಟ್ಟಿಸಿದರೆಂದು ನಮೂದಿತವಾಗಿದೆ. ಶಾಸನದ ಏಳು ಸಾಲುಗಳಲ್ಲಿ ಎಲ್ಲಿಯೂ ಕಾಲದ ಪ್ರಸ್ತಾಪವಿಲ್ಲ. ಆದರೆ ಒಂದರಿಂದ ಮೂರನೇ ಸಾಲುಗಳಲ್ಲಿ ಆ ಕಾಲದ ರಾಜನ ಹೆಸರು ಹಾಗೂ ಬಿರುದಾವಳಿ ಪ್ರಸ್ತಾಪಿತವಾಗಿವೆ. ಅದು ಈ ರೀತಿಯಾಗಿದೆ. "ಶ್ರೀಮನುಮಹಾರಾಜಾದಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ದೇವರಾಯ" ಎಂದಿದೆ. ಇದರಿಂದ ಇದು ಸ್ಪಷ್ಟವಾಗಿ ವಿಜಯನಗರದ ದೊರೆ ಇಮ್ಮಡಿ ದೇವರಾಯನಿಗೆ ಸಂಬಂಧಿಸಿದುದು ಎಂದು ತಿಳಿಯುತ್ತದೆ. ಇಲ್ಲಿ ಕಾಲದ ಪ್ರಸ್ತಾಪವಿಲ್ಲದ್ದರಿಂದ ಈ ರಾಜನ ಕಾಲಾವಧಿಯನ್ನೇ ಪ್ರಮುಖವಾಗಿಟ್ಟುಕೊಂಡು ಬಹುಶಃ ಕ್ರಿ.ಶ. 1430ರ ಸರಿಸುಮಾರಿನಲ್ಲಿ ಈ ಶಾಸನವು ರಚಿಸಲ್ಪಟ್ಟಿರಬೇಕೆನಿಸುತ್ತದೆ.

**ಶಾಸನದ ವಿಷಯ:** ಈಗಿರುವ ಬೈಲುವದ್ದಿಗೇರಿ ಎಂಬ ಊರನ್ನೇ ವಿಜಯನಗರ ಸಾಮ್ರಾಜ್ಯದ ಅರಸರ ಆಳ್ವಿಕೆಯಲ್ಲಿ ಅಂಣಲಾಪುರ ಎಂದು ಕರೆಯುತ್ತಿರಬೇಕೆಂದು ಶಾಸನ ಪಾಠದಿಂದ ತಿಳಿದು ಬರುತ್ತದೆ. ಹೇಗೆಂದರೆ ಶಾಸನದಲ್ಲಿ ಉಕ್ತವಾಗಿರುವಂತೆ ಅಂಣಲಾಪುರ ಎಂಬ ಗ್ರಾಮವನ್ನು ಹಿತ್ತಿಲಬಾಗಿಲ ಮಲ್ಲರಾಜಗಳು ಇಮ್ಮಡಿದೇವರಾಯನ ಪತ್ನಿ ಅಂಣಲಾದೇವಿಯ ಹೆಸರಿನಲ್ಲಿ ಕಟ್ಟಿಸಿದ ಬಗ್ಗೆ ಉಲ್ಲೇಖವಿದೆ.

**ಶಾಸನದ ಮಹತ್ವ:** ಶಾಸನದಲ್ಲಿ ನಮೂದಿತವಾಗಿರುವ ಅಂಣಲಾಪುರವು ಈಗಿರುವ ಬೈಲುವದ್ದಿಗೇರಿಯ ಆಸುಪಾಸಿನಲ್ಲಿ ಇಲ್ಲದಿರುವುದು ಬೆಳಕಿಗೆ ಬಂದಿರುವುದರಿಂದಲೂ ಹಾಗೂ ಈ ಶಾಸನವೂ ಇದೇ ಊರಿನ ಚಾವಡಿಯ ಹತ್ತಿರ ಮೊದಲು ಇತ್ತೆಂದು ಇಲ್ಲಿಯ ಹಿರಿಯರು ತಿಳಿಸಿದ್ದರಿಂದ ಈಗಿನ ಬೈಲುವದ್ದಿಗೇರಿಯನ್ನೇ ಅಂಣಲಾಪುರವೆಂದು ಕರೆಯುತ್ತಿದ್ದರೆಂಬುದು ಸ್ಪಷ್ಟ. ಈ ಊರು ಅಂದು ತುಂಬಾ ಪ್ರಸಿದ್ಧಿಯನ್ನು ಪಡೆದಿರಬೇಕೆನಿಸುತ್ತದೆ. ಏಕೆಂದರೆ ಈ ಶಾಸನದ ಅನತಿ ದೂರದಲ್ಲಿ ಬೃಹದಾಕಾರದ ವೀರಗಲ್ಲುಗಳು ಹಾಗೂ ಬಾವಿ ಕಟ್ಟೆಗೆ ಹಾಸಿದ ಕಲ್ಲಿಗೆ ಅಸ್ಪಷ್ಟವಾಗಿರುವ ಶಾಸನವೊಂದು ಇರುವುದು ಕಂಡುಬಂದಿದೆ. ಅಲ್ಲದೆ ಇದೇ ಊರಿನ ಕೆರೆಯ ಏರಿಯ ಮೇಲೆ ಹಾಸಿರುವ ಕೃಷ್ಣದೇವರಾಯನಿಗೆ ಸಂಬಂಧಿಸಿದ ತೆಲುಗು ಶಾಸನವೊಂದು ಬೆಳಕಿಗೆ ಬಂದಿದೆ. ಇದಲ್ಲದೆ ಅನೇಕ ನಂದಿ ಹಾಗೂ ನಾಗ ಶಿಲ್ಪಗಳು, ಸಣ್ಣಪುಟ್ಟ ಶಿಲಾಮೂರ್ತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತವೆ.


ಇಮ್ಮಡಿ ದೇವರಾಯನಿಗೆ ಪೊನ್ನಲಾದೇವಿ ಹಾಗೂ ಭೀಮಾದೇವಿ ಎಂಬ ಇಬ್ಬರು ಪತ್ನಿಯರಿದ್ದರೆಂದು ಇತಿಹಾಸದಿಂದ ತಿಳಿದು ಬರುತ್ತದೆ. ಅಂತೆಯೇ ಈ ಶಾಸನದಲ್ಲಿರುವ ಅಂಣಲಾದೇವಿಯ ಬಗ್ಗೆ ಎಲ್ಲಿಯೂ ಪ್ರಸ್ತಾಪವಿಲ್ಲ.* ಆದರೆ ಪೊನ್ನಲಾದೇವಿಯನ್ನೇ ಅಂಣಲಾದೇವಿಯೆಂದು

---

* ಹಂಪಿಯ ಹಜಾರರಾಮ (ರಾಮಚಂದ್ರ) ದೇವರಿಗೆ ಅಂಣಲದೇವಿ ದಾನ ನೀಡಿದ್ದನ್ನು ಆ ದೇವಾಲಯದಲ್ಲಿಯ ಒಂದು ಶಾಸನ ಉಲ್ಲೇಖಿಸುತ್ತದೆ. *SII.*, IV, No. 251 (ಸಂಪಾದಕರು).

ಕರೆಯುತ್ತಿದ್ದರೆಂಬ ಊಹೆಯಿದೆ. ಇಲ್ಲದಿದ್ದರೆ 'ರಾಜಬಹುವಲ್ಲಭಪ್ರಿಯ' ಎನ್ನುವಂತೆ ತನ್ನ ಆಸ್ಥಾನದಲ್ಲಿರುವ ಹಲವಾರು ಪತ್ನಿಗಳಲ್ಲಿ ಇವಳು ಒಬ್ಬಳಾಗಿದ್ದಳೆಂದು ಎನ್ನಿಸುತ್ತದೆ. ಇದಲ್ಲದೆ ಈ ಶಾಸನದಿಂದ ಇಮ್ಮಡಿ ದೇವರಾಯನಿಗೆ ಪರಮೇಶ್ವರ ಹಾಗೂ ವೀರಪ್ರತಾಪ ಎಂಬ ಬಿರುದುಗಳಿದ್ದವೆಂದು ತಿಳಿದು ಬರುತ್ತದೆ.

**ಶಾಸನದ ಪಾಠ:** ಶ್ರೀ ಮನುಮಹಾರಾ
ಜಾದಿರಾಜ ಪರಮೇಶ್ವ
ರ ಶ್ರೀ ವೀರಪ್ರತಾಪ ದೇವರಾ
ಯರ ಅರ್ಧಾಂಗಿ ಅಂಣ
ಲದೇವಿಯರ ಹೆಸರಲು
ಹಿತ್ತಿಲ ಬಾಗಿಲ ಮಲ್ಲರಾಜ
ಗಳು ಕಟ್ಟಿಸಿದ ಅಂಣಲಾಪುರ ಶ್ರೀ.



ಬೈಲುವದ್ದಿಗೇರಿ ಶಾಸನ

# 11. ಹೊರರಾಷ್ಟ್ರದಲ್ಲಿರುವ ಒಂದು ಜಿನಬಿಂಬ ಶಾಸನ

– ಶ್ರೀನಿವಾಸ ವಿ. ಪಾಡಿಗಾರ

ಪಾಶ್ಚಾತ್ಯರ ಕಲಾಭಿರುಚಿಯಿಂದಾಗಿಯೊ, ಭಾರತೀಯರ ಅಸಡ್ಡೆಯಿಂದಾಗಿಯೊ ಅಥವಾ ಮತ್ತಿತರ ಕಾರಣಗಳಿಗಾಗಿಯೋ ಭಾರತೀಯ ಅಪೂರ್ವ ಶಿಲ್ಪಕಲಾ ಬಳುವಳಿಯಲ್ಲಿ ಪರಿಗಣಿಸಬೇಕಾದ ಹಲವು ಶಿಲ್ಪಗಳು ಪಾಶ್ಚಾತ್ಯ ರಾಷ್ಟ್ರಗಳ ಸಂಗ್ರಹಾಲಯಗಳಲ್ಲಿ ಸೇರಿಕೊಂಡಿವೆ ಎಂಬುದು ಸರ್ವವಿದಿತ. ಕರ್ನಾಟಕದ ಕೆಲವು ಶಿಲ್ಪಗಳು ಕೂಡ ಹೊರನಾಡುಗಳನ್ನು ಕಂಡಿವೆ. ಅಂತಹ ಕೆಲವು ಶಿಲ್ಪಗಳ ಪಾದಪೀಠದ ಮೇಲೆ ಕನ್ನಡ ಶಾಸನಗಳೂ ಇವೆ. ನ್ಯೂಯಾರ್ಕಿನ ಮೆಟ್ರೋಪಾಲಿಟನ್ ಕಲಾ ಸಂಗ್ರಹಾಲಯದಲ್ಲಿರುವ ಹೊಯ್ಸಳ ಕಾಲೀನ ಕೇಶವ ಶಿಲ್ಪಕ್ಕೆ "ಸರಸ್ವತೀಗಣದಾಸಿ ಬಳ್ಳಿಗಾವೆಯ ದಾಸೋಜನ ಬೆಸ" ಎಂಬ ಶಾಸನವಿರುವುದು ಪ್ರಸಿದ್ಧವೇ ಇದೆ.[1] ಹಾಗೆಯೆ ಲಂಡನ್ನಿನ ವಿಕ್ಟೋರಿಯ ಅಲ್ಬರ್ಟ್ ಸಂಗ್ರಹಾಲಯದಲ್ಲಿರುವ ಪಾರ್ಶ್ವಜಿನ ಬಿಂಬದ ಪೀಠದ ಮೇಲೆ ಕೂಡ ಕನ್ನಡ ಶಾಸನವಿದೆ; ಇದು ಯಲಬುರ್ಗದ ಶಿಲ್ಪ.[2] ಅದರಂತೆ ಕೆಲವು ಕಂಚಿನ ವಿಗ್ರಹಗಳು ಸಹ ಹೊರನಾಡಿಗೆ ಹೋಗಿವೆ. ಇತ್ತೀಚೆಗೆ ಕ್ಯಾಲಿಫೋರ್ನಿಯದ ಪಸಡೇನದಲ್ಲಿರುವ ಸಂಗ್ರಹಾಲಯದಲ್ಲಿರುವ ಕಂಚಿನ ಜಿನಬಿಂಬದ ಮೇಲಿನ ಶಾಸನವೊಂದು ನನ್ನ ಪರಿಶೀಲನೆಗೆ ಬಂದಿತ್ತು. ಈ ಕನ್ನಡ ಶಾಸನ ಚಿಕ್ಕದಾಗಿದ್ದರೂ ಕುತೂಲಹಕಾರಿಯಾಗಿದೆ.

ಶಾಸನವನ್ನು ಸುಮಾರು 15ನೇ ಶತಮಾನದ ಸ್ಪಷ್ಟ ಕನ್ನಡಾಕ್ಷರಗಳಲ್ಲಿ, ಕನ್ನಡ ಭಾಷೆಯಲ್ಲಿ ಕಂಚಿನ ತೀರ್ಥಂಕರ ವಿಗ್ರಹದ ಪಾದಪೀಠದ ಮೂರು ಪಾರ್ಶ್ವಗಳಲ್ಲಿ ಬರೆದಿದೆ. ಒಟ್ಟು 7 ಸಾಲುಗಳಿದ್ದು, 5 ಸಾಲು ಮುಂಭಾಗದಲ್ಲಿ, ಇನ್ನುಳಿದ 2 ಸಾಲುಗಳು ಒಂದೊಂದು ಪಾರ್ಶ್ವದಲ್ಲಿ ಬರೆಯಲ್ಪಟ್ಟಿವೆ.

'ಸ್ವಸ್ತಿ' ಎಂಬ ಮಂಗಲ ಪದದೊಂದಿಗೆ ಆರಂಭಗೊಂಡು ಶಾಸನ ಖರ ಸಂವತ್ಸರ ಮಾಘ ಶುದ್ಧ 5 (ಪಂಚಮಿ) ಎಂಬುದಾಗಿ ಮಾತ್ರ ಕಾಲನಿರ್ದೇಶನ ನೀಡುತ್ತದೆ. ಶಕ ವರ್ಷದ ಉಲ್ಲೇಖವಿಲ್ಲ. ಬೆಳುಗುಳಕ್ಕೆ ತೀರ್ತ್ಥವಂದನೆಗೆ ಹೋದಂತಹ ಗೆರಸೊಪ್ಪೆಯ ಹಲರು, ಕೋಲಬಳಿ, ಸ್ರಾವಕ್ತಿರು ಮುಂತಾದ ಸಮಸ್ತರು ಗೋಷ್ಠಿಯನ್ನು ಮಾಡಿ ಹಿರಿಯ ಬಸ್ತಿಯ ಪಾರಿಶ ತೀರ್ತ್ಥಂಕರರ ಸನ್ನಿಧಿಯಲ್ಲಿ ತಮಗೆ ಪುಣ್ಯವಾಗಲೆಂದು ಮಾಡಿಸಿಕೊಟ್ಟ ಅನಂತ ತೀರ್ಥಂಕರ ವಿಗ್ರಹ ಎಂಬುದನ್ನು ತಿಳಿಸುವುದು ಶಾಸನದ ಉದ್ದೇಶ. ಶಕವರ್ಷದ ಉಲ್ಲೇಖವಿಲ್ಲದಿರುವುದರಿಂದ ನಿರ್ದಿಷ್ಟವಾಗಿ ಇದರ ಕಾಲವನ್ನು ನಿಗದಿಪಡಿಸುವುದು ಸಾಧ್ಯವಾಗದು. ಆದರೆ 15ನೇ ಶತಮಾನದಲ್ಲಿ ಖರ ಸಂವತ್ಸರವು ಕ್ರಿ.ಶ. 1412ಕ್ಕೆ (ಸೋಮವಾರ, 18ನೇ ಜನವರಿ) ಹಾಗು ಕ್ರಿ.ಶ. 1472ಕ್ಕೆ (ಬುಧವಾರ, 15ನೇ ಜನವರಿ) ಸರಿಯಾಗುತ್ತದೆ. ಇವೆರಡರಲ್ಲಿ ಒಂದು ಉದ್ದೇಶಿತ ಕಾಲನಿರ್ದೇಶನವಿರಬಹುದು.

ತೀರ್ಥವಂದನೆಗೆ ಹೋದಂಥ ಗೆರಸೊಪ್ಪೆಯ ಹಲರು, ಕೋಲಬಳಿ, ಶ್ರಾವಕ್ತಿರು ಮುಂತಾದ 'ಸಮಸ್ತರು' ಜೈನ ಸಮಾಜಕ್ಕೆ ಸೇರಿದವರೆಂಬುದು ಸ್ಪಷ್ಟವೇ ಇದೆ. 'ಹಲರು' ಎಂಬ ಪದ ಶ್ರೇಷ್ಠಿಗಳ ಒಂದು ಶ್ರೇಣಿ ಎಂಬರ್ಥದಲ್ಲಿ ಕರಾವಳಿ–ಮಲೆನಾಡು ಪ್ರದೇಶದ ಶಾಸನಗಳಲ್ಲಿ ಆಗಾಗ್ಗೆ ಮರುಕಣಿಸಿದೆ. ಬಹುಶಃ ವಿವಿಧ ರೀತಿಯ ವಸ್ತುಗಳ ವ್ಯಾಪಾರ ಮಾಡುತ್ತಿದ್ದವರ ಶ್ರೇಣಿ ಇದಾಗಿರಬೇಕು.

'ಕೋಲಬಳಿ' ಒಂದು ಪ್ರಕಾರದ ಸೈನ್ಯದ ದಂಡು.[3] ಈ ಪದ ಕೂಡ ಮಲೆನಾಡು–ಕರಾವಳಿಯ ಶಾಸನಗಳಲ್ಲಿಯೇ ಹೆಚ್ಚಾಗಿ ಕಂಡಿದೆ. ವ್ಯಾಪಾರಿ ವರ್ಗದವರು ಹಾಗು ಸಣ್ಣಪುಟ್ಟ 'ಒಡೆಯ' ಮನೆತನದವರು ಆತ್ಮರಕ್ಷಣೆಗಾಗಿ ಇರಿಸಿಕೊಂಡಿದ್ದ ಭಟರನ್ನು 'ಕೋಲಬಳಿ' ಎಂಬುದಾಗಿ ಕರೆದ ಹಾಗಿದೆ.

'ಸ್ರಾವಕ್ತಿರು' ಎಂಬ ಪದ ನನಗೆ ತಿಳಿದ ಮಟ್ಟಿಗೆ ಹೊಸದು. ಇದು ಶ್ರಾವಕರು ಎಂಬುದಕ್ಕೆ ಪರ್ಯಾಯ ಪದವಾಗಿಯೊ ತಪ್ಪಾಗಿಯೋ ಬರೆದದ್ದಾಗಿರಬಹುದು. ಇದು ನಿಜವಿದ್ದರೆ ಜೈನಾನುಯಾಯಿ ಗೃಹಸ್ಥರನ್ನು ಅದು ಸೂಚಿಸುತ್ತದೆ. ಒಂದು ವೇಳೆ 'ಶ್ರಾವಕಿತಿ' – 'ಶ್ರಾವಕಿ' ಎಂಬರ್ಥದಲ್ಲಿ ಅದಿಲ್ಲಿ ಬಳಕೆಯಾಗಿದ್ದರೆ ಜೈನ ಮತಾನುಯಾಯಿ ಸ್ತ್ರೀಯರನ್ನು ಅದು ಸೂಚಿಸುತ್ತದೆ.[4] ಈ ಬಗ್ಗೆ ಸ್ಪಷ್ಟಾಭಿಪ್ರಾಯಕ್ಕೆ ಬರುವದು ಕಷ್ಟ.

'ಸಮಸ್ತರು' ಎಂಬ ಪದ ಬಹುಶಃ 'ಎಲ್ಲರೂ' ಎಂಬರ್ಥದಲ್ಲಿ ಬಳಕೆಯಾಗಿದ್ದರೂ, ವಿವಿಧ ವ್ಯಾಪಾರೀ ಶ್ರೇಣಿಗಳ ಪ್ರತಿನಿಧಿಗಳ ಸಮುದಾಯವನ್ನು ಸೂಚಿಸುವಂತಿದೆ.

ಈ ಶಾಸನದಲ್ಲಿ ಇನ್ನೊಂದು ಗಮನೀಯ ವಿಷಯ ಹಿರಿಯ ಬಸ್ತಿಯ ಉಲ್ಲೇಖ. ಈ ಬಸದಿಯ ಮುಖ್ಯ ವಿಗ್ರಹ ಪಾರ್ಶ್ವನಾಥನದಾಗಿತ್ತೆಂದು ಶಾಸನವೇ ತಿಳುಹುತ್ತದೆ. 'ಹಿರಿಯ ಬಸ್ತಿ' ಎಲ್ಲಿತ್ತು ಎಂಬುದು ಪ್ರಶ್ನೆ. ಮೇಲ್ನೋಟಕ್ಕೆ ಅದು

ಶ್ರವಣಬೆಳ್ಗೊಳದಲ್ಲಿದ್ದಿರಬೇಕೆಂದು ಅನಿಸುತ್ತದೆ. ಆದರೆ ಶ್ರವಣಬೆಳ್ಗೊಳದ ಸಮಕಾಲೀನ ಶಾಸನಗಳಲ್ಲಿ ಹಿರಿಯ ಬಸ್ತಿಯ ಉಲ್ಲೇಖವಿಲ್ಲ. ಮಾಂಗಾಯಿ ಬಸದಿಯಲ್ಲಿ ಗೆರಸೊಪ್ಪೆಯಿಂದ ಬಂದ ಭಕ್ತರ ಚಟುವಟಿಕೆಗಳ ಉಲ್ಲೇಖ ಕಾಣುತ್ತದೆ.[5] ಆದರೆ, ಆ ಶಾಸನಗಳಲ್ಲಿ 'ಮಾಂಗಾಯಿ ಬಸದಿ' ಎಂದೇ ಉಲ್ಲೇಖವಿದೆಯೆ ಹೊರತು 'ಹಿರಿಯ ಬಸದಿ' ಎಂದಿಲ್ಲ. ಇನ್ನು ಗೆರಸೊಪ್ಪೆಯಲ್ಲಿ ಕೂಡ 'ಹಿರಿಯ ಬಸದಿ'ಯ ಇರವು ನನಗೆ ಕಂಡುಬಂದಿಲ್ಲ. ಆದರೆ ಕುತೂಹಲಕಾರಿ ವಿಷಯವೆಂದರೆ ಭಟ್ಕಳದ ಪಾರ್ಶ್ವನಾಥ ಬಸದಿಯಲ್ಲಿರುವ ಕ್ರಿ.ಶ. 1545ರ ಒಂದು ಶಾಸನದಲ್ಲಿ ಹಿರೇಬಸದಿಯ ಉಲ್ಲೇಖವಿರುವದು. ಸದಾಶಿವರಾಯನ ಆಳ್ವಿಕೆಯನ್ನು ತಿಳಿಸುವ ಈ ಶಾಸನ ಹಾಡುವಳ್ಳಿಯ ಒಡೆಯರಿಗೆ ಸಂಬಂಧಿಸಿದ್ದು. ಅಂಬಲದ ಅಂಗಡಿಗಳನ್ನು ಹಿಂದೆ ದೇವರಸ ಒಡೆಯನ ಹೆಸರಿನಲ್ಲಿ ಹಲರು, ಸೆಟ್ಟಿಕಾರ ಸಮಸ್ತರು ಹಿರೇಬಸದಿಯ ಪಾರ್ಶ್ವನಾಥದೇವರಿಗೆ ನೀಡಿದ್ದರೆಂಬುದನ್ನು ಇದರಲ್ಲಿ ದಾಖಲಿಸಿದೆ.[6] ಈ ದೇವರಸನು ಹಾಡುವಳ್ಳಿಯ ಮೊದಲನೇ ದೇವರಸ (1520-27) ಇಲ್ಲವೆ ಎರಡನೇ ದೇವರಸ (1532-1540) ಆಗಿರಬೇಕು. ಈ ಉಲ್ಲೇಖ ಪ್ರಸ್ತುತ ಪರಿಗಣಿಸಲಾಗಿರುವ ಜಿನಬಿಂಬ ಶಾಸನದ ಕಾಲಕ್ಕೆ ಹತ್ತಿರವಾದುದಾದ್ದರಿಂದ, ಈ ಅನಂತನಾಥ ಜಿನಬಿಂಬವು ಭಟ್ಕಳದ ಪಾರ್ಶ್ವನಾಥ ಬಸದಿಗೆ ಸಂಬಂಧಿಸಿರುವ ಸಾಧ್ಯತೆಯಿದೆ.

ಪ್ರಸ್ತುತ ಶಾಸನದಲ್ಲಿ ಉಲ್ಲಿಖಿತ 'ಬೆಳುಗುಳ' ಜೈನರ ಪ್ರಸಿದ್ಧ ಕ್ಷೇತ್ರವಾಗಿರುವ ಶ್ರವಣಬೆಳ್ಗೊಳವೇ ಆಗಿದೆ. ಗೆರಸೊಪ್ಪೆ, ಹೊನ್ನಾವರ ತಾಲೂಕು, ಉತ್ತರ ಕನ್ನಡ ಜಿಲ್ಲೆಯಲ್ಲಿದೆ.

### ಶಾಸನದ ಪಾಠ[7]

**ಮುಮ್ಮುಖ**

1 ಸ್ವಸ್ತಿ [||*] ಶ್ರೀ ಖರಸಂವತ್ಸರದ ಮಾಗ ಶು ೫ ಲು ಬೆಳು–

2 ಗುಳಕೆ ತೀರ್ತ್ಥವಂದನೆಗೆ ಹೋದಂತಾ ಗೆರಸೊ–

3 ಪ್ಪೆಯ ಹಲರು ಕೋಲಬಳಿ ಸ್ರಾವಕ್ತಿರು ಮುಂ–

4 ತಾದ ಸಮಸ್ತರು ಗೊಷ್ಟಿಯ ಮಾಡಿ ಹಿಯಬ–

5 ಸ್ತಿಯ ಪಾರಿಶತೀರ್ಥಕರ ಸಂನಿಧಿಯಲ್ಲಿ ತಮಗೆ ಪುಂಣ್ಯಾ–

**ಎರಡನೇ ಪಾರ್ಶ್ವ**

6 ರ್ಥವಾಗಿ ಮಾಡಿಸಿಕೊಟ್ಟ ಅನಂತತೀ–

**ಮೂರನೇ ಪಾರ್ಶ್ವ**

7 ರ್ಥಕರು[8] [||*] ಶ್ರೀ [||*]

## ಟಿಪ್ಪಣಿಗಳು

1. Zimmer H., 1955, *The Art of Indian Asia* (New York: Pantheon Books), pl. 388.
2. Pal P., 1995, *The Peaceful Liberators: Jaina Art from India* (New York: Thames and Hudson and Los Angeles Country Museum of Art), pl. 52A; ಪಾಟೀಲ ಚನ್ನಬಸಪ್ಪ ಎಸ್., 1998, "ಮುಮ್ಮಡಿ ಸಿಂಗನ ಮೇಲೆ ಮತ್ತಷ್ಟು ಬೆಳಕು," *ವಿಜಯನಗರ ಅಧ್ಯಯನ,* ಸಂ. 3, (ಸಂ.) ಎಂ.ಎಲ್. ಶಿವಶಂಕರ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಪು. 94-96.
3. *Karnatak Inscriptions,* Vol. I, No. 61 (1471 A.D.); *Ibid*., Vol. III, Pt. i, No. 28 (1530 A.D.).
4. ಈ ಅರ್ಥವನ್ನು ಸೂಚಿಸಿದವರು ಡಾ. ಹಂ.ಪ. ನಾಗರಾಜಯ್ಯ ಅವರು, ಅವರಿಗೆ ಲೇಖಕನು ಋಣಿ.
5. *Epigraphia Carnatica*, II, No. 473 ಮತ್ತು 474. ಗೆರಸೊಪ್ಪೆಯ ಹಿರಿಯ ಅಯ್ಯ ಮತ್ತು ಶ್ರೀಮತಿ ಅವ್ವೆಯವರ ಉಲ್ಲೇಖವಿದೆ.
6. *Karnatak Inscriptions,* Vol. III, No. 77.
7. ಛಾಯಾಚಿತ್ರದ ಸಹಾಯದಿಂದ ಓದಿದ ಪಾಠ.
8. 'ತೀರ್ಥಕರರು' ಎಂದಾಗಬೇಕು.

# 12. ಕುರುವಗಡ್ಡೆಯ ವಿಜಯನಗರ ಶಾಸನ ಮತ್ತು ಕೆಳದಿ ಸದಾಶಿವನಾಯಕನ ಕಾಲ ನಿರ್ಣಯ

– ಜಯದೇವಪ್ಪ ಜೈನಕೇರಿ

ನೂತನ ದಾವಣಗೆರೆ ಜಿಲ್ಲೆಗೆ ಸೇರಿದ ಹೊನ್ನಾಳಿ ತಾಲ್ಲೂಕು ಕೇಂದ್ರದಿಂದ 10 ಕಿ.ಮೀ. ದೂರದಲ್ಲಿದೆ ಐತಿಹಾಸಿಕ ಕುರುವ ಗ್ರಾಮ. ತುಂಗಭದ್ರಾ ನದಿಯ ಎಡದಂಡೆಯ ಮೇಲಿರುವ ಈ ಗ್ರಾಮದ ಬಳಿ ಇರುವ ಕುರುವಗಡ್ಡೆ ಒಂದು ದ್ವೀಪ, ತುಂಗಭದ್ರಾ ನದಿಯಿಂದ ಸುತ್ತುವರಿದಿದೆ. ಈ ದ್ವೀಪದಲ್ಲಿ ಚಾಳುಕ್ಯರ ಕಾಲದ ರಾಮೇಶ್ವರ ದೇವಾಲಯವಿದೆ. ಕ್ರಿ.ಶ. 1556ರಲ್ಲಿ[1] ವಿದ್ಯಾನಗರ (ವಿಜಯನಗರ) ರಾಜಧಾನಿಯಲ್ಲಿ ಆಳುತ್ತಿದ್ದ ಶ್ರೀ ವೀರಪ್ರತಾಪ ಶ್ರೀ ವೀರ ಸದಾಶಿವರಾಯರು, ಕೆಳದಿಯ ಅರಸರಿಗೆ ಅಮರಮಾಗಣಿಯಾಗಿ ಕೊಟ್ಟ ಹೊನ್ನಾಳಿ ಸೀಮೆಯೊಳಗಣ ಕುರುವದ ರಾಮೇಶ್ವರ ದೇವರಿಗೆ ನಾಲ್ಕು ಗ್ರಾಮಗಳನ್ನು ದಾನ ನೀಡಿ. ಬರೆಸಿದ ಶಾಸನವೊಂದು ಕುರುವ ಗಡ್ಡೆ ರಾಮೇಶ್ವರ ದೇವಾಲಯದ ದಕ್ಷಿಣ ಮಹಾದ್ವಾರದ ಮಂಟಪದ ಬಳಿ ಇದೆ. 43 ಸಾಲುಗಳಿರುವ ಈ ಶಿಲಾಶಾಸನವನ್ನು[2] ಶಾ.ಶ. 1479ನೇ ನಳ ಸಂವತ್ಸರ ಮಾಘ ಸು 14 ಗುರುವಾರದಂದು ದೇವ ಬ್ರಾಹ್ಮಣರಿಗೆ ಸುಧರ್ಮಯುಕ್ತರಾಗಿ ಹೊನ್ನಾಳಿ ಸೀಮೆಯ ತುಂಗಭದ್ರಾ ನದಿ ಮಧ್ಯದಲ್ಲಿರುವ ಕುರುವಗಡ್ಡೆ ರಾಮೇಶ್ವರ ದೇವರ ಪೂಜೆಗಾಗಿ ಮಹಾ ಅರಸುಗಳು ಸೂರ್ಯಗ್ರಹಣ ಪುಣ್ಯ ಕಾಲದಲ್ಲಿ ಬ್ರಾಹ್ಮಣ ಪೂಜೆ, ಅಭಿಷೇಕ, ನೈವೇದ್ಯ, ನಂದಾದೀಪಕ್ಕಾಗಿ, ಕುರುವ ಗ್ರಾಮ, ಮೊರಸಗೊಂಡನಹಳ್ಳಿ, ಅರಗದ ವೇಂಠೆಯಕೆ ಸಲ್ಲುವ ಸಿರಿಗೆರೆ ನಾಡಿನ ಹಾರನಹಳ್ಳಿ ಸಮೀಪದ ಎಡೆಕೊಪ್ಪ ಮತ್ತು ಸಿರಿಗೆರೆಪುರ, ಈ ಪ್ರಕಾರ ನಾಲ್ಕು ಗ್ರಾಮಗಳನ್ನು ಸರ್ವಮಾನ್ಯವಾಗಿ ಸಮರ್ಪಿಸಿದ್ದಾರೆ.

ಈ ಶಾಸನದ ಕಾಲಮಾನವು ಕ್ರಿ.ಶ. 1556 ಆಗಿದ್ದು, ವಿಜಯನಗರ ಸಾಮ್ರಾಜ್ಯವನ್ನು ತುಳುವ ವಂಶದ ವೀರಪ್ರತಾಪ ಶ್ರೀ ವೀರ ಸದಾಶಿವರಾಯರು ಆಳುತ್ತಿದ್ದ ಉಲ್ಲೇಖ ಕಂಡುಬರುತ್ತದೆ. ಈ ಶಾಸನದಲ್ಲಿ ಮುಂದುವರಿದು ಕೆಳದಿ ಅರಸು ಸದಾಶಿವರಾಯ ನಾಯಕರಿಗೆ ಅಮರ ಮಾಗಣಿಯಾಗಿ ಕೊಟ್ಟ ಉಲ್ಲೇಖವಿದೆ. ಆದರೆ ಕೆಳದಿ ನೃಪವಿಜಯ ಗ್ರಂಥದಲ್ಲಿ ಉಲ್ಲೇಖವಾಗಿರುವಂತೆ ಕೆಳದಿ ಸದಾಶಿವನಾಯಕರ ಕಾಲಮಾನ ಶಾ.ಶ. 1436ರಿಂದ ಶಾ.ಶ. 1468 (ಕ್ರಿ.ಶ. 1514-1546) ಆಗಿರುತ್ತದೆ. ಈತನ ನಂತರ ಪಟ್ಟಕ್ಕೆ ಬಂದವರು ದೊಡ್ಡ ಸಂಕಣ್ಣನಾಯಕ, ಶಾ.ಶ. 1468ರಿಂದ ಪಟ್ಟಕ್ಕೆ ಬಂದರು. ಆದರೆ ಈತನನ್ನು ವಿಜಯನಗರ ಅರಸರು ತಮ್ಮ ರಾಜಧಾನಿಗೆ ಕರೆಸಿಕೊಂಡರೆಂಬ ಕಾರಣಕ್ಕಾಗಿ ಈತನು ತನ್ನ ತಮ್ಮ ಚಿಕ್ಕ ಸಂಕಣ್ಣ ನಾಯಕನಿಗೆ ರಾಜ್ಯಭಾರ ವಹಿಸಿದನೆಂದೂ ತಿಳಿಯುತ್ತದೆ. ಈ ಚಿಕ್ಕ ಸಂಕಣ್ಣನಾಯಕನೇ ಕೆಳದಿಯ ಇಮ್ಮಡಿ ಸದಾಶಿವರಾಯ ನಾಯಕ ಇರಬಹುದೇ ? ಆದರೆ ಕೆಳದಿ ನೃಪವಿಜಯದ ಪ್ರಕಾರ ಚಿಕ್ಕ ಸಂಕಣ್ಣನಾಯಕನ ಪಟ್ಟ ಶಾ.ಶ. 1481ರಲ್ಲಿ ಆಯಿತು ಎಂಬ ಉಲ್ಲೇಖವಿದೆ.[3] ಇದರಿಂದಾಗಿ ಚಿಕ್ಕ ಸಂಕಣ್ಣನಾಯಕನು ತನ್ನ ಅಣ್ಣನ ಹೆಸರಿನಲ್ಲಿ ಕ್ರಿ.ಶ. 1546 ರಿಂದ 1570ರವರೆಗೆ ರಾಜ್ಯಭಾರ ಮಾಡುತ್ತಿರುವಾಗ ಈ ಮೇಲಿನ ಶಾಸನದಲ್ಲಿ ದಾನ ನೀಡಿದ ವಿವರಗಳಿರುವಂತೆ ಕಾಲಮಾನ ಇಮ್ಮಡಿ ಸದಾಶಿವರಾಯ ನಾಯಕ (ಚಿಕ್ಕ ಸಂಕಣ್ಣನಾಯಕನೆ) ಎಂಬ ಅನುಮಾನಕ್ಕೆ ಎಡೆಕೊಡುತ್ತದೆ. ಕೆ.ಎನ್. ಚಿಟ್ನೀಸ್‌ರವರು ತಮ್ಮ "ಕೆಳದಿ ಪಾಲಿಟಿ"[4] ಗ್ರಂಥದಲ್ಲಿ ಕೆಳದಿ ಚೌಡಪ್ಪನಾಯಕನ ಪುತ್ರ ಸದಾಶಿವನಾಯಕ ಕ್ರಿ.ಶ. 1513ರಿಂದ 1563ರವರೆಗೆ ಆಳಿದನೆಂದೂ ತಿಳಿಸುತ್ತಾರೆ. ಈತನ ಕಾಲದಲ್ಲಿ ವಿಜಯನಗರ ಅರಸರು ಚಂದ್ರಗುತ್ತಿ, ಬಾರಕೂರು, ಮಂಗಳೂರು ಪ್ರಾಂತ್ಯಗಳ ಆಡಳಿತವನ್ನು ಕೆಳದಿ ಅರಸು ಸದಾಶಿವನಾಯಕನಿಗೆ ವಹಿಸಿದ್ದರೆಂದೂ ಉಲ್ಲೇಖವಾಗಿದೆ. ಹಾಗಾದರೆ ಮೇಲ್ಕಂಡ ದಾನ ಶಾಸನವನ್ನು ನೀಡಿದಾಗ ಕೆಳದಿಯಲ್ಲಿದ್ದ ಸದಾಶಿವನಾಯಕ ಯಾರು? ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕ ಸಂಪಿಗೆಕೋಟೆಯ ಶಂಭುಲಿಂಗ ದೇವಸ್ಥಾನದ ಅಂಗಳದಲ್ಲಿರುವ ಶಿಲಾಶಾಸನ (ಕ್ರಿ.ಶ. 1566)ದಲ್ಲಿ ಆರಗದ ರಾಜ್ಯವನು ಮಾಗಣಿಯಾಗಿ ಯೀಮಾಡಿ ಸದಾಶಿವರಾಯ ನಾಯಕರು ಅಳುತಿಹ ಕಾಲದಲ್ಲಿ ಎಂಬುದಾಗಿ ಉಲ್ಲೇಖವಿರುವುದನ್ನು ಗಮನಿಸಬಹುದಾಗಿದೆ.[5] ಶಿವತತ್ವ ರತ್ನಾಕರದಲ್ಲಿ ಕೆಳದಿ ಅರಸು ಸದಾಶಿವನಾಯಕನ ನಂತರ ಆತನ ತಮ್ಮ ಭದ್ರಪ್ಪನಾಯಕನು ಇಮ್ಮಡಿ ಸದಾಶಿವ ನಾಯಕ ಎಂಬ ಹೆಸರಿನಿಂದ ರಾಜ್ಯವಾಳಿದನು ಎಂಬ ಉಲ್ಲೇಖ ಕಂಡು ಬರುತ್ತಿದೆ.[6]

ವಿಜಯನಗರವನ್ನು ಕ್ರಿ.ಶ. 1542ರಿಂದ 1568ರವರೆಗೆ ನಾಮ ಮಾತ್ರ ರಾಜನಾಗಿ ಸದಾಶಿವರಾಯನು ಆಳಿದನು. ಎಲ್ಲ ಅಧಿಕಾರ ರಾಮರಾಯ ಮತ್ತು ಅವನ ಇಬ್ಬರು ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿಯವರ ಕೈಯಲ್ಲಿತ್ತು. ಆದರೆ 1548ರಿಂದ 1568ರವರೆಗಿನ ಹೆಚ್ಚು ಶಾಸನಗಳಲ್ಲಿ ಸದಾಶಿವರಾಯನೇ ನಿಜವಾದ ಸಾರ್ವಭೌಮ ಚಕ್ರವರ್ತಿ ಎಂಬುದಾಗಿ ಉಲ್ಲೇಖವಾಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಹೊನ್ನಾಳಿ ಸೀಮೆಯನ್ನು ಅಮರ ಮಾಗಣಿಯಾಗಿ ಕೆಳದಿ ಅರಸರಿಗೆ ನೀಡಿದ ಮೇಲೂ ವಿಜಯನಗರ ಅರಸರು ತಮ್ಮ ಹೆಸರಿನಲ್ಲಿಯೇ ಕೆಳದಿ ಅರಸರ ಆಳ್ವಿಕೆಗೆ ಒಳಪಟ್ಟ ಪ್ರದೇಶದಲ್ಲಿ ದಾನದತ್ತಿ ನೀಡಿ, ಶಿಲಾಶಾಸನ ನೆಡಿಸಿರುವುದನ್ನು ಗಮನಿಸಿದರೆ, ಕೆಳದಿ ಅರಸರಿಗೂ, ವಿಜಯನಗರ ಅರಸರಿಗೂ ಇದ್ದ ಸೌಹಾರ್ದ ಬಾಂಧವ್ಯವನ್ನು ಅರಿಯಬಹುದಾಗಿದೆ. ಬಿ.ಆರ್. ಗೋಪಾಲ್‌ರವರು ಸಹ ಕೆಳದಿ ಸದಾಶಿವನಾಯಕನ ಆಳ್ವಿಕೆ ಕ್ರಿ.ಶ. 1563ರವರೆಗೂ ಇತ್ತು ಎಂಬುದಾಗಿ ದಾಖಲಿಸಿರುವುದೂ ಸಹ ಗಮನಿಸಬಹುದಾಗಿದೆ.[7] ಕೆಳದಿ ನೃಪವಿಜಯ ಗ್ರಂಥವು ಕೆಳದಿ ರಾಜ್ಯದ

ಪತನಾನಂತರ ಲಿಂಗಣ್ಣ ಕವಿಯಿಂದ ರಚಿತವಾಗಿದ್ದು ಸದಾಶಿವರಾಯನ ಆಳ್ವಿಕೆಯ ಕಾಲಾವಧಿ ಕ್ರಿ.ಶ. 1514 ರಿಂದ 1546 ಎಂಬ ಸಂಗತಿಯಿದೆ. ಸದಾಶಿವನಾಯಕನ ಆಳ್ವಿಕೆಯ ಅವಧಿ ಕ್ರಿ.ಶ. 1556 ಎಂದು ಶಾಸನದಲ್ಲಿ ಉಲ್ಲೇಖವಾಗಿದೆ. ಅದುದರಿಂದ ಕೆಳದಿ ಸದಾಶಿವನಾಯಕನ ಆಳ್ವಿಕೆಯ ಕಾಲ ಕ್ರಿ.ಶ. 1563 ರವರೆಗೆ ಮುಂದುವರಿದಿತ್ತು ಎಂಬ ತೀರ್ಮಾನಕ್ಕೆ ಬರಬಹುದಾಗಿದೆ.

## ಟಿಪ್ಪಣಿಗಳು

1. *ಎಪಿಗ್ರಾಫಿಯ ಕರ್ನಾಟಿಕ,* ಸಂ. 7, ಹೊನ್ನಾಳಿ 9.
2. ಕೆಳದಿ ವೆಂಕಟೇಶ್, 1991, *ಕೆಳದಿ ಅರಸರ ಶಾಸನ ಸಂಪುಟ,* ಶಾಸನ ಸಂಖ್ಯೆ 9.
3. *ಕೆಳದಿ ನೃಪವಿಜಯ,* ಪು. 103.
4. ಕೆ.ಎನ್. ಚಿಟ್ನೀಸ್, *ಕೆಳದಿ ಪಾಲಿಟಿ,* ಪು. 12.
5. ಕೆಳದಿ ವೆಂಕಟೇಶ್, *ಪೂರ್ವೋಕ್ತ,* ಶಾಸನ ಸಂ. 23.
6. ಮಲ್ಲೇಪುರಂ ಜಿ. ವೆಂಕಟೇಶ್, 1999, *ಶಿವತತ್ವ ರತ್ನಾಕರ,* ಪು. 265.
7. ಡಾ. ಬಿ.ಆರ್. ಗೋಪಾಲ್, *ಕೆಳದಿ ಚರಿತ್ರೆ.*

# 13. ಪಾಂಡಿಚೆರಿ ವಸ್ತುಸಂಗ್ರಹಾಲಯದಲ್ಲಿರುವ ವಿಜಯನಗರ ತಾಮ್ರಶಾಸನ

– ಕೆಳದಿ ಗುಂಡಾಜೋಯಿಸ್

ಕೆಳದಿ ವಸ್ತುಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾಲಯದಲ್ಲಿರುವ ಪ್ರಾಚೀನ ತಿಗಳಾರಿ ಲಿಪಿ ಹಸ್ತಪ್ರತಿ ಗ್ರಂಥಗಳ ಕ್ಯಾಟಲಾಗ್ (ಸೂಚಿ) ಸಿದ್ಧಪಡಿಸುವ ದಿಸೆಯಲ್ಲಿ ಪಾಂಡಿಚೆರಿಯಲ್ಲಿರುವ ಇನ್‌ಸ್ಟಿಟ್ಯೂಟ್ ಫ್ರಾಂಚೈಸ್ ಡಿ ಇಂಡಾಲಜಿ (Institute Francais De Indologie)ಗೆ ದಿನಾಂಕ 27-9-1989 ರಂದು ಸಂಶೋಧನೆ ಕೈಗೊಳ್ಳಲು ಭೇಟಿಯಿತ್ತಿದ್ದೆನು. ಈ ಸಂದರ್ಭದಲ್ಲಿ ಪಾಂಡಿಚೆರಿ ಸರಕಾರಿ ವಸ್ತುಸಂಗ್ರಹಾಲಯವನ್ನೂ ಸಂದರ್ಶಿಸುವ ಅವಕಾಶ ಲಭಿಸಿತು. ಕ್ಯೂರೇಟರ್ ಶ್ರೀ ರಾಜಾರಾಮ್‌ರವರು ನನ್ನನ್ನು ಆದರದಿಂದ ಬರಮಾಡಿಕೊಂಡು ಪುರಾತತ್ವ ವಸ್ತುಗಳನ್ನು ಪರಿಚಯಿಸುವುದರೊಂದಿಗೆ ಅಪೂರ್ವವಾದ ವಿಜಯನಗರ ಶ್ರೀರಂಗರಾಯನ ತಾಮ್ರ ಶಾಸನಗಳನ್ನು ತೋರಿಸಿದ್ದು, ಇದು ನನಗೆ ವಿಶೇಷ ಗಮನ ಹರಿಸಿತು. ಇದನ್ನು ಆಸಕ್ತಿಯಿಂದ ಪರಿಶೀಲಿಸುತ್ತಿದ್ದಂತೆಯೇ ಪುಸ್ತಕವೊಂದನ್ನು ನನ್ನ ಕೈಗಿತ್ತರು. 1983ರಲ್ಲಿ ಪಾಂಡಿಚೆರಿ ವಸ್ತು ಸಂಗ್ರಹಾಲಯದ ಉದ್ಘಾಟನಾ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಖ್ಯಾತ ವಿದ್ವಾಂಸರೂ, ಪಾಂಡಿಚೆರಿಯ ಫ್ರೆಂಚ್ ಸಂಶೋಧನಾ ಕೇಂದ್ರ ಸ್ಥಾಪಕರರೂ ಆದ ಜೀನ್ ಫಿಲಿಯೋಜಾರವರ ಸ್ಮರಣಾರ್ಥವಾಗಿ ವಸುಂಧರಾ ಮತ್ತು ಪೀರ್ರೆ ಸಿಲ್ವೆಯಿನ್ ಫಿಲಿಯೋಜಾರವರು ಇದನ್ನು ಸಂಶೋಧಿಸಿದ್ದು ಪಾಂಡಿಚೆರಿ ಸರಕಾರವು 1986ರಲ್ಲಿ ಪ್ರಕಟಿಸಿದೆ.

**ತಾಮ್ರ ಶಾಸನದ ವಿವರ:**

ಶಾಸನವು ವಿಜಯನಗರದ ಮೊದಲನೆಯ ಶ್ರೀರಂಗರಾಯನಿಗೆ ಸೇರಿದ್ದು ಐದು ತಾಮ್ರ ಪಟಗಳನ್ನೊಳಗೊಂಡಿದೆ. ಬಿಬ್ಲಿಯೋಥೀಕ್ ಪಬ್ಲಿಕ್ (Bibliotheque Publique) ಪ್ರಕಾರ ಪಾಂಡಿಚೆರಿ ವಸ್ತುಸಂಗ್ರಹಾಲಯದಲ್ಲಿರುವ ತಾಮ್ರ ಪಟಗಳು 24 x 18 ಸೆ.ಮೀ. ಪ್ರಮಾಣವಿದ್ದು 3 ಕೆ.ಜಿ. 638 ಗ್ರಾಂ ತೂಕ ಇವೆ. ಭದ್ರಪಡಿಸಿದ ಉಂಗುರದಲ್ಲಿ ರಾಜಲಾಂಛನದಿಂದ ಕೂಡಿ ನಂದಿನಾಗರಿ ಲಿಪಿಯಲ್ಲಿ ಉಲ್ಲೇಖನಗೊಂಡಿವೆ. ಅಂತ್ಯದಲ್ಲಿ "ಶ್ರೀ ವಿರೂಪಾಕ್ಷ" ಎಂಬುದಾಗಿ ಕನ್ನಡ ಲಿಪಿಯಲ್ಲಿದೆ. ಭಾರತ ಸರಕಾರದ ಶಾಸನತಜ್ಞ ನೆಲಮಂಗಲ ಲಕ್ಷ್ಮೀನಾರಾಯಣರಾಯರು ಪಾಂಡಿಚೆರಿಯಲ್ಲಿ ಕಾರ್ಯದರ್ಶಿಗಳಾಗಿದ್ದ ಪಿ.ಜಡ್. ಪಟ್ಟಾಭಿರಾಮನ್‌ರವರಿಂದ ವರದಿ ಪಡೆದುಕೊಂಡು ARIE, 1949-50ರಲ್ಲಿ ನಂ. 54, ಪು. 16ರ ಮೇರೆಗೆ ಸ್ಥೂಲವಾಗಿ ಪ್ರಸ್ತಾಪಿಸಿರುವುದು ಕಂಡು ಬರುತ್ತದೆ. ಉಳಿದ ವಿವರಗಳನ್ನು ವಸುಂಧರಾ ಫಿಲಿಯೋಜಾರವರು ತುಲನಾತ್ಮಕವಾಗಿ ಚರ್ಚಿಸಿದ್ದು, ಬಾ.ರಾ. ಗೋಪಾಲ್‌ರವರ ವಿಜಯನಗರ ಶಾಸನ ಸಂಪುಟಗಳಿಗೆ ಇದು ಮುಂದಿನ ಆಕರಕ್ಕೆ ಸೇರಲರ್ಹವಾಗಿದ್ದರಿಂದ ಈಚಿನ ಸಂಶೋಧನಾ ಬೆಳವಣಿಗೆಯೊಂದಿಗೆ ಪರಿಚಯಿಸಲಾಗಿದೆ.[1]

**ಶ್ರೀರಂಗರಾಯನ ಶಾಸನಗಳು:**

ಕ್ರಿ.ಶ. 1572 ರಿಂದ 1586ರವರೆಗೆ ಆಳಿದ ಶ್ರೀರಂಗರಾಯನ ವಿಜಯನಗರ ರಾಜ್ಯಭಾರದ ಕಾಲದಲ್ಲಿ ಈವರೆಗಿನ ಸಂಶೋಧನೆಯಲ್ಲಿ ಸುಮಾರು 57 ರಿಂದ 60 ಶಾಸನಗಳು ಕಂಡು ಬರುತ್ತವೆ. ರಾಬರ್ಟ್ ಸೀವೆಲ್‌ರವರ List of Inscriptions and Sketch of the Dynasties of Southern India ಕೃತಿ ಮೇರೆಗೆ ಸೂಮಾರು 77 ಶಾಸನಗಳು ಸಂಶೋಧನೆಯಲ್ಲಿ ಗಮನಕ್ಕೆ ಬಂದಂತೆ ಕಂಡುಬರುವುದಿಲ್ಲವೆಂದು ಹೇಳಬಹುದು. ಈವರೆಗಿನ ಬಾ.ರಾ.ಗೋಪಾಲ್‌ರವರ ವಿಜಯನಗರ ಶಾಸನ ಸಂಪುಟಗಳಲ್ಲಂತೂ ಕಂಡುಬಂದಿಲ್ಲ.[2]

ಪ್ರಕಟಿತ ಶಾಸನ ಸಾಹಿತ್ಯ ಕುರಿತಂತೆ ಶ್ರೀರಂಗರಾಯನ ಕ್ರಿ.ಶ. 1572 ರಿಂದ 1586ರವರೆಗೆ ಈ ಕೆಳಕಂಡಂತಿವೆ.

ಶಿಲಾಶಾಸನ 54

ತಾಮ್ರ ಶಾಸನ 7[3]

ಕನ್ನಡದಲ್ಲಿರುವ ಶಿಲಾಶಾಸನಗಳು 28

ನಾಗರೀಲಿಪಿ ಶಿಲಾಶಾಸನಗಳು 2

ನಾಗರೀಲಿಪಿ ತಾಮ್ರ ಶಾಸನಗಳು 2

ನಂದಿನಾಗರೀ ಲಿಪಿಯ ತಾಮ್ರ ಶಾಸನಗಳು 2

ತೆಲುಗು ಲಿಪಿಯ ಶಿಲಾಶಾಸನಗಳು 4

ತೆಲುಗು ಲಿಪಿಯ ತಾಮ್ರ ಶಾಸನಗಳು 3

ಕನ್ನಡ ಮತ್ತು ನಾಗರೀ ಲಿಪಿಯ ಶಾಸನಗಳು 1

ತೆಲುಗು ಮತ್ತು ನಾಗರೀ ಲಿಪಿಯ ಶಾಸನಗಳು 1

ರಾಬರ್ಟ್ ಸೀವೆಲ್‌ರವರ ಹಿಂದೆ ಹೇಳಿದಂತೆ 77 ಶಾಸನಗಳು ಹೊರತುಪಟ್ಟಲ್ಲಿ 9-7-1573ರ ಚಿಕ್ಕಮಗಳೂರು ಜಿಲ್ಲಾ ಹರಿಹರಪುರದ ಶಿಲಾಶಾಸನವು ಮೊದಲನೆಯದಾಗಿದ್ದು, 11-2-1598ರ ಅದೇ ಚಿಕ್ಕಮಗಳೂರು ಜಿಲ್ಲಾ ಕೊಡತಾಳು ಶಿಲಾಶಾಸನವು ಶ್ರೀರಂಗರಾಯನ ಹೆಸರಿನಲ್ಲಿ ಅಂತ್ಯ ಶಾಸನವೆಂದು ಪರಿಗಣಿಸಬಹುದಾಗಿದೆ.[4] ಜೀವಿತಕಾಲದ ಪರಿಗಣನೆಯಲ್ಲಿ 29-11-1585 ರಂದು ಕೋಲಾರ ಜಿಲ್ಲೆಯ ಮಾಲೂರು ಶಿಲಾಶಾಸನವು ಶ್ರೀರಂಗರಾಯನ ಕೊನೆಯ ಶಾಸನವಾಗುತ್ತದೆ. ಈಗ ಸಾದರಪಡಿಸುತ್ತಿರುವ ಶ್ರೀರಂಗರಾಯನ ತಾಮ್ರ ಶಾಸನ ನೀಡಿದ ಕಾಲ 10-9-1585. ಇದರಿಂದ ಪಾಂಡಿಚೆರಿ ಶಾಸನಕ್ಕೂ ಕೋಲಾರ ಜಿಲ್ಲೆಯಲ್ಲಿ ನೀಡಿದ ಶಾಸನಕ್ಕೂ ಕೇವಲ 2 ತಿಂಗಳು 19 ದಿನಗಳ ಅಂತರವಿದ್ದು ಗಮನಾರ್ಹವಾಗಿದೆ.[5] 1585ರಲ್ಲಿ ಶ್ರೀರಂಗರಾಯ(I)ನು ನೀಡಿದ ಶಾಸನಗಳು ಈ ಕೆಳ ಕಂಡಂತಿವೆ.

| | | | | |
|---|---|---|---|---|
| 1. | 22-3-1585 | ಶಿಲಾಶಾಸನ | ಕನ್ನಡ | ಮಂಡ್ಯಜಿಲ್ಲೆ |
| 2. | 4-5-1585 | -"- | -"- | ಮೈಸೂರು ಜಿಲ್ಲೆ |
| 3. | 17-10-1985 | -"- | ಕನ್ನಡ + ನಾಗರಿ | ಮಂಡ್ಯ |
| 4. | 29-11-1585 | -"- | ತೆಲುಗು | ಕೋಲಾರ |
| 5. | 1585 | ? | ? | ಗೋರಂಟ್ಲ, ಕರ್ನೂಲ್ ಜಿಲ್ಲೆ[6] |

**ಪಾಂಡಿಚೆರಿಯಲ್ಲಿರುವ ವಿಜಯನಗರ ಶಾಸನ ಪಾಠ**

**1ನೇ ಪಟ (ಚಿತ್ರ 62)**

1 ಶ್ರೀ ಗಣಾಧಿಪತೆಯೆ ನಮಃ । ನಮಸ್ತುಂಗ ಶಿರಶ್ಚುಂಬಿಚಂದ್ರ

2 ಚಾಮರಚಾರವೆ । ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭ

3 ವೆ ॥ ಹರೇರ್ಲಿಲಾವರಾಹಸ್ಯ ದಂಷ್ಟ್ರಾಯ ದಂಡಸ್ಪಪಾತುವಃ ಹೇಮಾದ್ರಿಕಲ

4 ಶಾಯತ್ರ ಧಾತ್ರಿ ಚ್ಛತ್ರಶ್ರೀಯಂದಧೌ ॥ ಕಲ್ಯಾಣಾಯಾಸ್ತು ತದ್ಧಾಮ ಪ್ರತ್ಯು

5 ಹತಿಮಿರಾಪಹಂ । ಯದ್ಗಜೋಪಿ ಅಗಜೋದ್ಭುತಂ ಪಂಚಾಸೀನಾಪಿ ಲಾ

6 ಲಿತಂ ॥ ಜಯತಿ ಕ್ಷೀರಜಲಧರಜಾತಂ ಸರ್ವೇಕ್ಷಣಂ ಹರೇಃ ಆಲಂಬನಂ

7 ಕಕೋರಾಣಾಂ ಅಮರಾಯುಷ್ಕರಂ ಮಹಃ ॥ ಪೌತ್ರಾಸ್ತಸ್ಯ ಪುರೂರವ ಬುಧಾಸು

8 ತಸ್ತಸ್ಯಾಯುರಸ್ಯಾತ್ಮಜಃ ಸಂಜಜ್ಞೆ ನಹುಷೋ ಯಯಾತಿರಭವತ್ ತಸ್ಮಾ

9 ಶ್ಚ ಪೂರುಸ್ತತಃ ತದ್ವಂಶೆ ಭರತೂ ಬಭೂವ ನೃಪತಿಸ್ತತ್ಸಂತತೌ ಶಂತನು

10 ಸ್ತತ್ತುರ್ಯೋ ವಿಜಯೋಭಿಮನ್ಯುರುದಭುತ್ ತಸ್ಮಾತ್ ಪರಿಕ್ಷಿತ್‌ತತಃ ॥ ನಂದಸ್ತಸ್ಯಷ್ಟಮೋ

11 ಭೂತ್ ಸಮಜನಿ ನವಮಸ್ತಸ್ಯ ರಾಜ್ಞಾಶ್ಚಲಿಕ್ಕಕ್ಷ್ಮಾಪಸ್ತತ್ಸಪ್ತಮಹ ಶ್ರೀ

12 ಪತಿರುಕಿರಭವದ್ರಾಜ ಪೂರ್ವೊ ನರೇಂದ್ರಃ ತಸ್ಯಾಸಿದ್ಬಿಜಲೇಂದ್ರೊ ದ

13 ಶಮ ಇಹ ನೃಪೊ ವೀರಹೆಮ್ಮಾಲಿರಾಯಾಸ್ತಾರ್ತಿಯಿಕೋ ಮುರಾರೌ ಕೃತನತಿ

14 ರ್ ಉದಭೂತ್ ತಸ್ಯ ಮಾಯಾಪುರೀಶಃ ತತ್ತುರ್ಯೋಜನಿ ತಾತಪಿಮ್ಮಮಹೀಪಾಲೊ ನಿ

15 ಜಲೋಕನತ್ರಸ್ತಾಮಿತ್ರಗಣಸ್ತತೋಜನಿಹರನ್ ದುರ್ಗಾಣಿ ಸಪ್ತಾಹಿತಾ

16 ತ್ ಅನ್ವೈಕೇನ ಸಸೋಮಿದೇವನೃಪತಿಸ್ತಸ್ಯೈವ ಜಜ್ಞೆಸುತೊ ವೀರೋ ರಾಘು

17 ವಡೆವರಾಡ್ ಇತಿ ತತಃ ಶ್ರೀಪಿಂನಮೊ ಭೂನೃಪಃ ಆರವೀಟೀನಗರೀ

18 ವಿಭೊರಭೂದ್ ಅಕ್ಕ ಬುಕ್ಕಧರಣೀಪತಿಸ್ಸುತಃ ಯೇನ ಸಾಳುವ ನೃಸಿಂ

19 ಹ ರಾಜ್ಯಮಪಿ ಯೆಧಮಾನಮಹಸಾಸ್ಥಿರೀ ಕೃತಂ ಸ್ವಕ್ಸಾಮಿನಿ ಸ್ವತ

20 ನುಕಾಂಭಿರ್ ಅಕ್ಷಿಪಂತಿಂ ಬುಕ್ಕಾವಣೀಪತಿಲಕೋ ಬುಧಾಕಲ್ಪಶಾಖಿ

21 ಕಲ್ಯಾಣಿನೀಂ ಕಮಲನಾಭೈವಾಬ್ಧಿಕನ್ಯಾಂ ಬಲ್ಲಾಂಬಿಕಾಂ ಉದವ

22 ಹದ ಬಹುಮಾನ್ಯಶೀಲಂ ಸುತೇವ ಕಲಶಾಂಬುಧೇಃ ಸುರಭಿಳಾಸುಗಂ ಮಾಧ

23 ವತ್ ಕುಮಾರಮ್ಯೆವ ಶಂಕರಾತ್ ಕುಲಮಹೀಭೃತಃ ಕಾಮ್ಯಕಾ ಜಯಂತಂ ಅಮರ ಪ್ರಭೋರಪಿ ಸಚಿವ

24 ಬುಕ್ಕಾಧಿಪಾಚ್ಛೃತಂ ಜಗತಿ ಬಲ್ಲಮಾ

**2ನೇ ಪಟ (ಚಿತ್ರ 63)**

1 ಲಭತ ರಾಮರಾಜಂ ಸುತಂ ॥ ಸಹಸ್ರೈ ಸಪ್ತಸ್ಯ ಸಹಿತ

2 ಂ ಅಪಿಯಸ್ಸಿಂಧು ಜನುಷಾಂ ಸಪಾದಸ್ಯಾನೀಕಂ ಸಮಿತಿ ಭು

3 ಜಶೌರ್ಯೇನ ಮಹತಾ ವಿಜಿತ್ಯಾದತ್ತೆ ಸ್ಮಾದವನಿಗಿರಿದು

4 ರ್ಗಂ ವಿಭುತಯಾ ವಿಭೂತೇಂದ್ರಃ ಕಾಸಪ್ಪುಡಯಂ ಅಪಿ ವಿದ್ರಾವ್ಯ

5 ಸಹಸಾ ॥ ಕಂದನವೊಲಿದುರ್ಗಂ ಉರುಕಂದಲದಭ್ಯುದಯೋ ಬಾಹು

6 ಬಲೇನ ಯೋ ಬಹುತರೇಣ ವಿಜಿತ್ಯ ಹರೇಃ ಸನ್ನಿಹಿತಸ್ಯ ತತ್ರ

7 ಚರಣಾಂಬುಷು ಭಕ್ತತಯಾ ಜ್ಞಾತಿಭಿರಾರ್ಪಿತಂ ಸುಧಯತಿ ಸ್ಮ

8 ನಿಸೇವ್ಯ ವಿಷಂ ಶ್ರೀರಾಮರಾಜಕ್ಷಿತಿಪಸ್ಯ ತಸ್ಯ ಚಿಂತಾಮಣೀರ

9 ರ್ಥಿಕದಂಬಕಾನಾಂ ಲಕ್ಷ್ಮೀರಿವಂಭೋರುಹಲೋಚನಸ್ಯ ಲಕ್ಕಾಂಬಿಕಾ

10 ಮುಷ್ಯ ಮಹಿಷಿ ಅಲಾಸೀತ್ತಸ್ಯಾಧಿಕೈಸ್ಸಮಭವತ್ತನಯಸ್ತಪೋಭಿಃ


11 ಶ್ರೀರಂಗರಾಜನೃಪತಿಶ್ಶಶಿವಂಶಾಧಿಪಃ ಸಮುಲ್ಲಸತಿ ಧಾಮ

12 ನಿ ಯಸ್ಯ ಚಿತ್ರಂ ನೆತ್ರಾಣ್ಣೆ ವೈರಿಸದೃಶಂ ಚ ನಿರಂಜನಾನಿ ಸತೀಂ ತಿ


13 ರುಮಲಾಂಬಿಕಾಂ ಚರಿತ ಲೀಲಯರುಂಧತೀಪ್ರದಾಂ ಅಪಿ ತಿತಿಕ್ಷಯ

14 ವಸುಮತಿಯಶೋರುಂಧತೀಂ ಹಿಮಾಂಶುರಿವ ರೋಹಿಣೀ ಹೃದಯಹಾರಿ

15 ಣೀಂ ಸದ್ಗುಣೈರಮೋದತ ಸಧರ್ಮಿಣೀಂ ಅಯಂ ಅವಾಪ್ಯ ವೀರಾಗ್ರಣೀಃ ರ



ಪಾಂಡಿಚೆರಿ ತಾಮ್ರಶಾಸನ, ಪಟ 1



ಪಾಂಡಿಚೆರಿ ತಾಮ್ರಶಾಸನ, ಪಟ 2

16 ಚಿತ ನಯವಿಚಾರಂ ರಾಮರಾಜಂ ಚ ಧೀರಂ ವರತಿರುಮಳರಾಯಂ ವೆಂಕ

17 ಟಾದ್ರಿಕ್ಷಿತೀಶಂ ಅಜನಯತ ಸಯೆತಾನಾನುಪೂರ್ವ್ಯ ಕುಮಾರಾನ್ ಇಹ

18 ತಿರುಮಲದೇವ್ಯಾಂ ಏವ ರಾಜಾಮಹೌಜಾಹ ಸಕಲ ಭುವನ ಕಂಟಕಾನ್ ಅ

19 ರಾತಿನ್ ಸಮಿತಿ ನಿಹತ್ಯ ಸ ರಾಮರಾಜವೀರಃ ಭರತಮುನುಭಾಗೀ

20 ರಥಾದಿರಾಜಪ್ರತಿತಾಯಶಾಹ ಪ್ರಶಾಶಾಸ ಚಕ್ರಂ ಉರ್ವ್ಯಾಃ ವಿತರ

21 ಣ ಪರಿಪಾಟೀಂ ಯಸ್ಯ ವಿದ್ಯಾಧುರೀಣಂ ನಖರ ಮುಖಾರ ವೀಣಾನಾ

22 ದಗೀತಾಂ ನಿಷಮ್ಯ । ಅನುಕಲಂ ಅಯಂ ಆವಾಲಾಂಬುಬಿಂಬಾಪ

23 ದೇಶಾದ್ ಅಮಯಿಹ ನೃಪೊ ವೀರಹೆಮ್ಮಾಳಿರಾಯಾಸ್ತಾರ್ತಿಯಿಕೋ ರಣಗರ ಶಾಖಿ ಲಜ್ಜಯಾ ಮಜ್ಜತೀವ ॥ 18 ವ್ಯರಾ

**2ನೇ ಪಟ ಹಿಂಭಾಗ (ಚಿತ್ರ 64)**

1 ಜತ ಶ್ರೀವರವೆಂಕಟಾದ್ರಿರಾಜಕ್ಷಿತೌ ಲಕ್ಷ್ಮಣಚಾರುಮೂರ್ತಿಃ

2 ಜ್ಯಾಘೋಷಾದೂರಿಕೃತ ಮೇಘನಾದಃ ಕುರ್ವನ್ ಸುಮಿತ್ರಾಶಯ ಹರ್ಷಪೋ

3 ಷಂತ್ರಿಷು ಶ್ರೀರಂಗಕ್ಷ್ಮಾಪರಿಬೃಢಕುಮಾರೇಷ್ವಧಿರಣಂ ವಿಜಿತ್ಯಾ

4 ರಿಕ್ಷ್ಮಾಪಂಸ್ತಿರುಮಲ ಮಹಾರಾಯನೃಪತಿಃ ಮಹೌಜಾ ಸ್ವಾಮ್ರಾಜ್ಯೆ ಸು

5 ಮತಿರಭಿಷಿಕ್ತೋ ನಿರುಪಮೆ ಪ್ರಶಸ್ತಿ ಉರ್ವಿಂ ಸರ್ವಂ ಅಪಿ ತಿಸ್ರು

6 ಷು ಮೂರ್ತಿಸ್ವಿವ ಹರಿಃ ಯಶಸ್ವಿನಾಂ ಅಗ್ರಸರಸ್ಯ ಯಸ್ಯ ಪಟ್ಟಾಭಿ

7 ಷೇಕೇ ಸತಿ ಪಾರ್ಥಿವೆಂದೊಹ ದಾನಾಂಬುಪೂರಾಯಿರಭಿಷಿಚ್ಯಮಾನಾ ದೆವೀ

8 ಪದಂ ಭೂಮಿರೀಯಂ ದಧಾತಿ ಯಸ್ಯಾತಿ ಪ್ರೌಢ ತೇಜಸ್ಸವಿತಾರವಿ

9 ಮತಧ್ವಾಂತ ಭೇದಿನಿಯುದಿತೆ ಕೀರ್ತಿಕ್ಷೀರಾರ್ಣವಾಂತ ಸ್ಫುಟಿತರಿವಿ

10 ಕಸತ್ಪುಂಡರೀಕೋಪಮಸ್ಯ ಶ್ವೇತಚ್ಛತ್ರಸ್ಯ ಮಧ್ಯೆ ಕನಕಕಲಶಿಕಾ

11 ಭಾಷತೆ ಕರ್ಣಿಕಾಭಾತಸ್ಯೋಪಂತೆ ಮರಾಳದ್ವಯಂ ಇವ ವಿಕಲಶ್ಚಾ

12 ಮರದ್ವಂದ್ವಂ ಅಸ್ತೇ ಭೋಗಿತ್ವೆ ವಿದಿತೆಪಿ ಜೀಹ್ಮಗ ಇತಿ ವ್ಯಾಲಾಧಿರಾ

13 ಜಂಲಸದ್ವೃತ್ತತ್ವೆ(ಪಿ) ಜಲಾಶ್ರಯೀತಿ ಕಮಟಂ ದಾನೇಪಿ ಮಂದಾ ಇತಿ ದಿಂ


14 ನಾಗಾಂಭೃಶಂ ಉನ್ನತೌಚ ಕಠಿನಾತ್ಯೇವ ಹಿತ್ವಾ ಗಿರೀಂಸ್ತತತ್ಸ

15 ದ್ಗುಣಸಂಪದೆಕಸ ಶರಣಮ್ ಭೂರ್ಯೇತಿ ಹರ್ಷೇಣಯಂಸ್ಥೈರಂ ಸಂಘೃತಕಂ


16 ಟಕೊತ ಸುಕೃತೊತ್ಪಷ್ಟಂ ವಿಧಾಯಾಖಿಲಂ ಕ್ಷ್ಮಾಕೇದಾರಂ ಉದಾರದಾನ

17 ಸಲಿಲಾಸಾರೈಸ್ಸಮಾಪೂರ್ಯಕ ಸಂವರ್ಧ್ಯಾನಘಕೀರ್ತಿಸಸ್ಯ ನಿವಹಮ್

18 ತತ್ಪಾಲಿಕಾಂ ವಿಕ್ರಮ ಶ್ರೀಕಾಂತಂ ಭೂಭುಜಕಾಯ ಮಾನ ಶಿಖರೆ ಧತ್ತೆ



ಪಾಂಡಿಚೆರಿ ತಾಮ್ರಶಾಸನ, ಪಟ 2, ಹಿಂಭಾಗ



ಪಾಂಡಿಚೆರಿ ತಾಮ್ರ ಶಾಸನ, ಪಟ 3

19 ಹಿಯಸ್ತೇಜಸಾ ॥ ಜಿಷ್ಣುತ್ವಂ ಶುಕಿತಾಂ ಪ್ರಜಾಸು ಸಮತಾವಾವೃತ್ತಿತ್ವಂ ಅ

20 ಪಿ ಅಶ್ರಿತೋ ವೃತ್ತಿಂ ಪುಣ್ಯ ಜನಪ್ರಿಯಾಮಧಿಗತಃ ಖ್ಯಾತಃ ಪ್ರಚೇತಾ

21 ಯಿತಿ ಪ್ರಾಪ್ತರ್ಸ್ಪ (ಸ್ಪರ್ಶ) ವಾಬಿ(ವಿ) ಭ್ರಾಮೊ ಧನಪತಿಸ್ಸರ್ವಜ್ಞಾಭವಂಚಿತಃ

22 ಪ್ರಾಯೋ ಯಃ ಪ್ರಕತಿಕರೋತು ಭುವನೆ ತತ್ತದ್ದಿಗೀಶಾಂಶತ(ತಾ)ಂ ॥ ಹು

23 ತ್ವಾ ಮಂತ್ರಪುರಸ್ಸರಂ ರಿಪುಯಶೋಲಾಜಾನ್ ಪ್ರತಾಪಾನಲೆ ಸಂ

**3ನೇ ಪಟ (ಚಿತ್ರ 65)**

1 ಪ್ರಾಪ್ಯ ಪದಾನಿ ಸಪ್ತ ಭುನೇಶ್ವರೋಪ್ಯಮೆ ರೂಪಲಂ ॥ ಪ್ರೀತಃ

2 ಕೀರ್ತಿಮಯೀಂ ವಧೂನ್ ಪರಿಣಯನ್ ಸತ್ಕೌತುಕೋಲ್ಲಾಸಿನೀಂ ಯಸ್ಸಿಂ

3 ಹಾಸನಂ ಆಶ್ರಿತೋ ವಿಜಯತೆಗೃಹ್ಣನ್ ದ್ವಿಜೇಂದ್ರಾಶಿಷಃ ॥ ಅಶ್ರಾಂತ

4 ವಿಶ್ರಾಣ(ನ) ಕೀರ್ತಿಸಾಮ್ಯಂ ಸುರದ್ರುಮಾಯಸ್ಯ ತುಲಬ್ಧುಕಾಮಃ ತತೆ ತ

5 ಪಸ್ಯಂತಿವಿಯತ್ತತಿನ್ಯಃ ಪ್ರವಾಳಕಾಷಾಯಪತಾ ಜಟಾಪ್ತಃ ॥27॥ ಕಾಂ

6 ಚಿ ಶ್ರೀರಂಗ ಶೇಷಾಚಲಕನಕಸಭಾಹೊಬಳಾದ್ರೀ ಶಮುಕ್ತ್ಯೇಷ್ವಾವೃ

7 ತ್ಯಾವೃತ್ಯ ಸರ್ವೇಶ್ವಧಿರಣಂ ವಿಜಿತ್ಯಾರಿಕ್ಷ್ಮಾಪಾಂ ತಿರುಮಲಮ

8 ಹಾರಾಯನೃಪತಿಃ ॥28॥ ಅನಂತರಂ ತತ್ತನಯಃ ಪ್ರತೀತಶ್ಚಕಾಸ್ತಿಹ

9 ಸ್ತಾಪಜಿತದ್ಯುಶಾಖೀ ಶ್ರೀವೆಂಗಳಾಂಬಾಚಿರಪುಣ್ಯರಾಶಿಃ ಶ್ರೀರಂ

10 ಗರಾಯಃ ಶ್ರೀತಾಭಾಗದೇಯಃ ॥29॥ ಉದ್ದಗಿರೌಸ್ಥಿತಃ ಪರಿವಿಜಿತ್ಯ

11 ಚ ದುರ್ಗಜಯಾನ್ ದುರ್ಗಮ ಕೊಂಡವೀಡು(ವಿ)ನಿಕೊಂಡಪುರಪ್ರಮುಖಾನ್ ॥ ಭೂವ

12 ಲಯೈಕರತ್ನಪೆನುಗುಂಡಪುರೆ ನಿವಾಸನ್ ರಾಜತಿ ಯಸ್ಸಮಗ್ರಮಕರಾ

13 ದಿಮಲಾಂಛ್ಚನತಃ ॥30॥ ಶ್ರೀಧರಣೀರಿ(ಣಿಯಿ)ವ ಶೌರೇಃ ಶಿಶಿರ ಕರಶ್ಯೆ(ಸ್ಯೆ)ವ ರೊ

14 ಹಿಣೀಚಿತ್ರೆ । ದೈವ್ಯೌತೆ ವಿಜಯತೆ ತಿರುಮಲದೇವೀಚ ಯಸ್ಯ ಕೃಷ್ಣಾ(ಂ)

15 ಬಾ ॥31॥ ಯಥಾವಿಧಿ ಮಹೀಸುರೋತ್ತಮ ಕೃತಾಭಿಷೇಕೋತ್ಸವೆ । ಯದೀಯ್ಯ

16 ಕರವಾರಿದೆ ಕನಕವೃಷ್ಟಿದೆ ಸರ್ವತಃ । ಯಶೋಮಯ ತರಂಗಿಣೀ

17 ದಶಾದಿಗಂತರೆ ಜೃಂಭತೆ ಸತಾಂ ಪ್ರಶಮಿತೋ ಭವತ್ ಕೃಪಣತೊರು


18 ದಾವಾನಲಃ ॥32॥ ಧಾತ್ರೀಭಾರಂ ಅಶೇಷಂ ಅಪಿ ಅವಿಕಲಂ ಭರ್ತುಂ ಭುಜಂ ವ್ಯಾ

19 ತನೊದ್ ಆಶಾದಂತಿ ಕುಲಾಚಲೇಂದ್ರ ಫಣಿರಾಡಂ ಶೈಸ್ಸರೋಜಾಸನಃ ।


20 ವೀರ ಶ್ರೀರಮಣಸ್ಯ ಯಸ್ಯ ಪರತಾ ವಿಕ್ರಾಂತಿ ಮಾನ್ ಏಷ ಕಿಂ ದಾನಂ

21 ಭಃ ಕಟಕಂ ಚ ಕಾಂಚನಮಯಂ ಧತ್ತೇ ಸದಾ ಭೋಗಿತಂ ॥33॥ ವಾರಾಶಿ

22 ಗಾಭೀರ್ಯ್ಯ ವಿಶೇಷ ಧುರ್ಯಾಶ್ಶೌರಾಶಿದುರ್ಗ್ಯೆ ಕವಿಭಾಳವರ್ಯಃ



ಪಾಂಡಿಚೆರಿ ತಾಮ್ರ ಶಾಸನ, ಪಟ 3, ಹಿಂಭಾಗ



ಪಾಂಡಿಚೆರಿ ತಾಮ್ರ ಶಾಸನ, ಪಟ 4

**3ನೇ ಪಟ ಹಿಂಭಾಗ (ಚಿತ್ರ 66)**

1 ಪರಾಪ್ಪದಿಗ್ರಾಯಮಾನಃ ಪ್ರಕಾಮಭಯಂಕರಶ್ಮಾರ್ಜಗಧರಾಂತರಂ

2 ಗಃ ||34|| ಹತರಿಪುರನಿಮೇಷಾನೊಕಹೊ ಯಾಚಕಾನಾಂ ಹೊಸ ಬಿರುದಾರಗಂಡೊ

3 ರಾಯರಾಹುತ್ತಮಿಂಡಃ ಮಹಿತ ಚರಿತಧಾನ್ಯೋ ಮನ್ನಿಯಾಂಸಾಮುಲಾದಿ

4 ಪ್ರಕಟಿತ ಬಿರುದ ಶ್ರೀಃ ಪಾಟಿತಾರಾತಿಲೋಕಃ ||35|| ಉಭಯದಳ ಪಿತಾ

5 ಮಹೋನತಾನಾಂ ಅಭಯ ಪದಾರ್ಪಣ ತತ್ಪರೋರಿಪೂನಾಂ ಅಯಂ ಅವ

6 ಹಾಳುರಾಯಮಾನಮಾರ್ದಿತಿ ಅಖಿಲಜನ್ಯೈರಭಿಧೀಯ್ಯಮಾನಧಾಮಾ ||36||

7 ತಾಂಡಾವಿತೋದಯೋ ಬಿರುದಮಾನ್ಯರಗಂಡತಯೋದ್ದಂಡ ಬಲೋತ್ಕಲೇಂದ್ರ

8 ಜಯಪಂಡಿತವೀರಾಯುತಃ ಚಂಡಿಮಶಾಲಿಬಾಹು ಬಲದಂಡಿತ

9 ವೈರಿಗಣೋಗಂಡರಗೂಳಿಮಾನ್ಯ ಪುಲಿಮಾನ್ಯಮಹಾ ಬಿರುಟಿಸ್ಯ(ರುದಹ) ||37||

10 ಸಾರವೀರರಮಯಾ ಸಮುಲ್ಲಾಸಂ ಆರವೀಟಿಪುರ ಹಾರನಾಯಕಃ |

11 ಕುಂಡಲೀಶ್ವರ ಮಹಾಭುಜಾಶ್ರಯನ್ ಮಾಂಡಲೀಕ ಧರಣೇಶ್ವರಾಹ

12 ತಾಂ ||38|| ವ್ಯಂಗ ತ್ರಿಭುವನೀಮಲ್ಲಃ ಸಾಂಖ್ಯಕ್ಷಿತಿ ಕಲಾರ್ಜುನಃ ಉರಿಗೊ

13 ಲಸುರಸುರತ್ರಾಣೊ ಹರಿಗೋಚರಮಾನಸಃ | ರಾಜ್ಞಂ ವರೊ ರಣಮು

14 ಖರಾಮಭದ್ರಯ ಇತಿ ಶ್ರುತಃ ||39|| ವರ್ಣಿತ ಬಿರುದೋ ನಾನಾವರ್ಣ ಶ್ರೀಮಂಡಲೀ

15 ಕಗಂಡ ಇತಿ | ಆತ್ರೇಯ ಗೋತ್ರಜನಾಂ ಅಗ್ರಸರೊಭೂಭುಜಂ ಉದಾರಯಶಾಃ ||40|| ಅ

16 ತಿಬಿರುದ ತುರಗಧತ್ತೊ ಮತಿಗುರುಣರಟ್ಟಮಗಧ ಮಾನ್ಯಪಾದಃ ಶಲ್ಯಾರಿ

17 ನೀತಿಶಾಲಿ ಕಲ್ಯಾಣಪುರಾಧಿಪಃ ಕಲಾಚತುರಃ ||41|| ಚಾಲಿಕ್ಕ ಚಕ್ರವರ್ತಿ ಮಾ

18 ಣಿಕ್ಯಮಹಾಕಿರೀಟಮಹನೀಯ್ಯಃ | ಯೇಬಿರುದಾರಾಯರಾಹುತವೆಕ್ಕೈಕ ಭುಜಂಗ ಬಿರುದಾರಾಮಣೀಯಃ ||42||

19 ಕೂಲಂಕಶಕೊನರಾನಿಕೊಟಲಕೊಂಗಜಯ ಬಿರುದ ಭರಿತಶ್ರೀಃ | ರಮ್ಯತರ

20 ಕೀರ್ತಿರ್ ಒಡ್ಡಿಯರಾಯದಿಶಾಪಟ್ಟ ಬಿರುದಘೋಷಣ ||43|| ಓಷಧಿಪತ್ಯುಪಮಾಯಿ

21 ತಗಂಡಸ್ತೊಷಣರೂಪಾಜಿತಾ (ಸಮ) ಕಂಡಃ | ಭಾಷಗೆ ತಪ್ಪುವರಾಯರಗಂಡಃ ಪೊಷಣ

22 ನಿರ್ಭರಭೂನವಖಂಡಃ ||44|| ರಾಜಾಧಿರಾಜಸ್ತೇಜಸ್ವಿ (ಶ್ರೀ) ರಾಜಪರಮೆಶ್ವರಃ | ಮೂರುರಾ

**4ನೇ ಪಟ (ಚಿತ್ರ 67)**


1 ಯರಗಂಡಾಂಕೊ ಮೇಕುಲಂಘಿಯಶೋಭರಃ | ಪರದಾರೇಷು ವಿಮುಖಃ ಪ

2 ರರಾಯರಭ(ಯಭ)ಯಂಕರಃ ಶಿಷ್ಟ ಸಂರಕ್ಷಣ ಪರೊ ದುಷ್ಟಶಾರ್ದೂಲ ಮರ್ದನಃ

3 ಅರಿಭಗಂಡಭೇರುಂಡೋ ಹರಿಭಕ್ತಿ ಸುಧಾನಿಧಿಃ ||46|| ಇತ್ಯಾದಿ ಬಿರುದೈರ್ವಂದಿ



ಪಾಂಡಿಚೆರಿ ತಾಮ್ರ ಶಾಸನ, ಪಟ 4, ಹಿಂಭಾಗ



ಪಾಂಡಿಚೆರಿ ತಾಮ್ರ ಶಾಸನ, ಪಟ 5

4 ತತ್ಯಾ ನಿತ್ಯಂ ಅಭಿಸ್ತುತಃ । ಜಯಜೀವೇತಿ ವಾದಿನ್ಯಾ ಜನಿತಾಂಜಲಿಬಂಧ್ಧ

5 ಯಾ ॥47॥ ಕಾಂಭೋಜ ಭೋಜ ಕಳಿಂಗ ಕರಹಾಟಾದಿ ಪಾರ್ಥಿವೈಃ ಪ್ರತೀಹಾರ ಪದಂ ಪ್ರಾಪ್ತೈಃ

6 ಪ್ರಸ್ತುತಸ್ತುತಿಘೋಷನಃ ॥48॥ ಸೋಯಂ ಶ್ರೀರಂಗರಾಯ ಕ್ಷಿತಿಪತಿತಿಲಕೋ ರತ್ನಸಿಂಹಾ

7 ಸನಸ್ಥಃ ಕೀರ್ತ್ಯಾ ನಿತ್ಯಾ ನಿರಸ್ಯ ನೃಗನಲನಹುಷಾನ್ ಅಪಿ ಅವನ್ಯಾಂ ಅಥಾನ್ಯಾ

8 ನ್ । ಆಸೇತೋರಾ ಸುಮೇರೋರಾವನಿಸುರನುತಃ ಸ್ವೈರಮಾಚೋದವಾದ್ರೆರಾ ಪಶ್ಚಾ

9 ತ್ಯಾಚಲಾಂತದಾಖಿಲಹೃದಯಂ ಆವರ್ಜ್ಯ ರಾಜ್ಯಂ ಪ್ರಶಾಸ್ತಿ ॥49॥ ಮುನಿಬಿಂದುಸು

10 ಬಾನೆಂದುಗಣಿತೆ ಶಕವತ್ಸರೆ । ವತ್ಸರೆ ಪಾರ್ಥಿವಾಭಿಖ್ಯೆ ಮಾಶಿಸಿ ಭಾದ್ರಪ

11 ದಾಹ್ವಯೆ ॥50॥ ಕೃಷ್ಣಪಕ್ಷೆ ಚ ಪುಣ್ಯಮಯಂ ದ್ವಾದಶಸ್ಯಾಂ ಚ ಮಹಾತಿಥೌ ಶ್ರೀರಾಮಚಂ

12 ದ್ರದೇವಸ್ಯ ಸನ್ನಿಧೌ ಶ್ರೇಯಸಾಂನಿಧೌ ॥51॥ ಶ್ರೀವತ್ಸಗೋತ್ರದುಗ್ಧಾಬ್ಧಿ ಶೀತಲದ್ವಿ

13 ತಿಮೂರ್ತಯೆ ವಾದಿವಾರಣ ಸಿಂಹಾಯ ವರಾಪಸ್ತಂಬಸೂತ್ರಿನೆ ॥52॥ ಯಶಸ್ವಿನೆ

14 ಯಜುಶ್ಯಾಖಾಧ್ಯಾಯಿನೆ ಚನ್ನದಾಯಿನೆ ವೇದಶಾಸ್ತ್ರವಿಶೇಷಾರ್ಥವೇದಿನೆ ಬ್ರ

15 ಹ್ಮವಾದಿನೆ ॥53॥ ಪದವಾಕ್ಯಪ್ರಮಾಣೇಷು ಪ್ರತಿಬಿಂಬಾಯ ವೇಧಸಃ ಸಂಗೀತಸಾಹಿ

16 ತಿಪೂರ್ವ(ಸರ್ವ) ವಿದ್ಯೈಕ ಬಂಧವೆ ॥54॥ ಕಾವ್ಯೆ ಶ್ರಾವ್ಯೆನ(ವ)ರಸೋದ್ಘಾಟಕೆ ನಾಟಕೇಪಿಚ

17 ಗದ್ಯಪದ್ಯ ಪ್ರಬಂಧೇಷು ಗಾಢಾಂ ಪ್ರೌಢಿಂ ಉಪೇಯುಷೇ ॥55॥ ಸವಿಸ್ತರಾಶುಮಾಧುರ್ಯ

18 ಚಿತ್ರಸಂಧಾನಬಂಧುರೆ । ಕವನೆ ನಿತ್ಯವೈಯಾತ್ಯಭವನೆ ಪ್ರೌಢಶೂಕ್ತಯೆ ॥56॥

19 ಯಜನಾದಿಮಷಟ್ಕರ್ಮರಚನಾ ಪಾವನಾತ್ಮನೆ । ಬೊಲ್ಲಾಪಿನ್ನಿಮಹಾವಂಶ

20 ಮೌಕ್ತಿಕಾಯ ಮಹೌಜಸೇ ॥57॥ ಲಕ್ಷ್ಮೀಕಾಂತ ಮುಖಿಶ್ರೇಷ್ಟತಾ ಪೌತ್ರಾಯ ಪ್ರತಿಭಾ

21 ಜುಷೆ । ನರಸಿಂಹಾಧ್ವರಿಂದ್ರಸ್ಯ ನಂದನಾಯ ಸಚಿತ್ವಿಷೆ ॥58॥ ಪದ್ಮನಾಭ

22 ಪದಾಂಭೋಜಧ್ಯಾನ ಕೀಲಿತ ಚೇತಸೆ ಯಾಚಕಾಮರಸಾಲಾ

23 ಯ ಪೊಚನಾಯ ಮನೀಷಿಣೆ ॥59॥ ಜಗತ್ಖ್ಯಾತ ಜಯಂಕೊಂಡ ಚೋಲಮಂಡಲವಾ

**4ನೇ ಪಟ ಹಿಂಭಾಗ (ಚಿತ್ರ 68)**

1 ಸಿನಂ ಪಡವೀಡು ಮಹಾರಾಜ್ಯೆ ಪಲ್ಲುಗ್ನಕೊಟ್ಟಕೆಸ್ಥಿತಂ ॥60॥ ಶ್ರೀ

2 ಮನ್ಮಂಡೆಗೋಲಖ್ಯಾತನಾಡುಕೆ ಚಾಪಿವಿಶ್ರುತಂ ಮುರುಂಗಮಂಗ

3 ಲಾಭಿಖ್ಯ ಪತ್ತುಕೆ ಪರಿಕೀರ್ತಿತಂ ॥61॥ ಪ್ರತ್ತಿವಾದು ಮಹಾಗ್ರಾಮಾತ್ ಪ್ರಾಚಿ

4 ಂ ಆಶಂ ಉಪಾಸ್ರಿತಂ ಕಾಮಂಬಟ್ಟುಮಹಾಗ್ರಾಮಾದ್ದಕ್ಷಿಣಸ್ಯಾಂ ದಿಶಿ ಸ್ಥಿ

5 ತಂ ॥62॥ ಪ್ರತ್ಯಗ್ದಿಶಂ ಅಲಂಕಾರ ಮಂಗಲಾತ್ ಸಮುಪೇಯುಶಂ ಆಶ್ರಿತಂ ಗಂ

6 ಗಾನೆಲ್ಲೂರು ಶ್ರೀಲಾಡವರಸಂಜ್ಞೇಯೋಃ ॥63॥ ಗ್ರಾಮಯೊರುಭಯರೊಯ್ಯುಕ್ತಸೀಮಂ

7 ತಾದ್ ಉತ್ತರಾಂ ದಿಶಂ ಶ್ರೀರಂಗರಾಯ ದೇವೇಂದ್ರ ಸಮುದ್ರಾಪರನಾಮಕಂ ||64|| ಅ

8 ಣಿಯಾಲಮಹಾಗ್ರಾಮಂ ಊರ್ಜಿತರಾಮ ಶೋಭಿತಂ ಸರ್ವಮಾನ್ಯಂ

9 ಚತುಸ್ಸೀಮಾ ಸಂಯುತಂ ಚ ಸಮಂತತಃ ||65|| ನಿಧಿನಿಕ್ಷೇಪಪಾ

10 ಷಾಣಸಿದ್ಧಸಾಧ್ಯಜಲಾನ್ವಿತಂ । ಅಕ್ಷಿಣ್ಯಾಗಾಮಿಸಂಯು

11 ಕ್ತಂ ಏಕಭೋಗ್ಯಂ ಸಭೂರುಹಾಂ ||66|| ವಾಪಿಕೂಪತಟಾಕ್ಯಾಶ್ಚ ಕಶ್ಚಾರಾ

12 ಮೈಶ್ಚ ಸಂಯುತಂ ಪುತ್ರ ಪೌತ್ರಾದಿಭಿರ್ಭೋಗ್ಯಂ ಕ್ರಮಾದಾ ಚಂದ್ರತಾರ

13 ಕಾಂ ||67|| ದಾನಾಧಮನ ವಿಕ್ರಿತಿಯೋಗ್ಯಂ ವಿನಿಮಯೋಚಿತಂ । ಪರೀ

14 ತಹ ಪ್ರಯತ್ನೈಃ ಸ್ನಿಗ್ಧೈಃ ಪುರೋಹಿತ ಪುರೋಗಾಮ್ಯೈಃ ||68|| ವಿವಿಧೈರ್ವಿವಿ

15 ಧೈಃ ಶ್ರೌತಪಥಿಕ್ಯೆ ರಥಿಕ್ಯೆರ್ಗಿರಾ ಶ್ರೀರಂಗಭೂಪಾಲೋ ಮಾ

16 ನನೀಯೋ ಮನಸ್ವಿನಾಂ । ಸಹಿರಣ್ಯಪಯೋಧಾರಾ ಪೂರ್ವಕಂ

17 ದತ್ತವಾನ್ ಮುದಾ ||69|| ಶ್ರೀ ||

**5ನೇ ಪಟ (ಚಿತ್ರ 69)**

1 ತದೀಯಂ ನಯಧುರ್ಯಸ್ಯ ಪ್ರತಿತ ಶ್ರೀರಂಗರಾಯವರ್ಯಸ್ಯ

2 ಶಾಸನಂ ಅತಿಬಲಶಾಸನತರುಕರದಾನಸ್ಯ ಗುಣ ನಿದಾನಸ್ಯ ||70||

3 ಶ್ರೀರಂಗರಾಯನೃಪತೆ ಶಾಸನತಸ್ತಾಮ್ರಶಾಸನ ಶ್ಲೋಕಾನ್ ಕವಿಶಾ

4 ಸನ ಸ್ವಯಂಭೂಸ್ಸರಸಂ ಅಭಾಣೀತ್ ಸಭಾಪತೆ ಸ್ಸುನೂಃ ||71|| ಶ್ರೀರಂಗರಾಯಭೂಪಾ

5 ಲಶಾಸನಾದ್ ವೀರನಾತ್ಮಜಃ ಶ್ರೀಮದ್ಗಣಪಯಾಚಾರ್ಯೋಽವ್ಯಲಿಖತ್ ತಾ

6 ಮ್ರಶಾಸನಂ ||72|| ದಾನಪಾಲನಯೋಮಧ್ಯೇ ದಾನಾಶ್ರೇಯೋನುಪಾಲನಂ ದಾನಾತ್ಸ್ವ

7 ರ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ||73|| ಸ್ವದತ್ತಾದ್ವಿಗುಣಂ ಪುಣ್ಯಂ ಪರ

8 ದತ್ತಾನುಪಾಲನಂ । ಪರದತ್ತಾಪಹಾರೇಣ ಸ್ವದತ್ತಂ ನಿಷ್ಫಲಂ ಭವೇ

9 ತ್ ||74|| ಸ್ವದತ್ತಂ ಪರದತ್ತಂ ವಾಯೋ ಹರೇತ ವಸುಧರಾಂ ಷಷ್ಟಿರ್ವರ್ಷಸಹ

10 ಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ||75|| ಏಕೈವ ಭಗಿನೀ ಲೋಕೇ ಸರ್ವೇಷಾ

11 ಂ ಏವ ಭೂಭುಜಂ । ನ ಭೋಜ್ಯ ನ ಕರಗ್ರಾಹ್ಯ ವಿಪ್ರದತ್ತಾ ವಸುಂಧರಾ ||76|| ಸಾ

12 ಮಾನ್ಯೋಽಯಂ ಧರ್ಮಸೇತುನೃಪಾಣಾಂ ಕಾಲೇ ಕಾಲೇ ಪಾಲನಿಯೋ ಭವದ್ಭಿ

13 ಸ್ಸರ್ವಾನ್ ಏತಾನ್ ಭಾವಿನಃ ಪಾರ್ಥಿವೇಂದ್ರಾನ್ ಭೂಯೋ ಭೂಯೋ ಯಾಚತೇ ರಾಮ

14 ಚಂದ್ರಃ ||77|| ಶ್ರೀ । = ||

ಶ್ರೀ ವಿರೂಪಾಕ್ಷ

**ಸಾರಾಂಶ:**

ಪ್ರತಿಯೊಂದು ತಾಮ್ರಪಟದಲ್ಲಿಯೂ ಪುಟ ಸಂಖ್ಯೆಯ ನಿರೂಪಣೆಯಿದ್ದು ನಾಗರೀ ಲಿಪಿಯಲ್ಲಿರುವ ಈ ತಾಮ್ರಪಟದ ಕಾಲ 10-9-1585. ಉತ್ತರ ಆರ್ಕಾಟ್ ಜಿಲ್ಲೆಯ ಹಳ್ಳಿಯೊಂದರಲ್ಲಿ ನೀಡಿದ ಈ ಶಾಸನದ ನಂತರ ಕೋಲಾರ ಜಿಲ್ಲೆಯ ಮಾಲೂರಿನಲ್ಲಿ 29-11-1585ರಂದು ಶ್ರೀರಂಗರಾಯನು ತಾಮ್ರಶಾಸನವಿತ್ತುದು ವ್ಯಕ್ತಪಡುತ್ತದೆ. ಮಾಲೂರು ಶಾಸನವು ಶಿಲಾಶಾಸನವಾಗಿದ್ದು ಉತ್ತರ ಆರ್ಕಾಟ್‌ನ ಸಂಚಾರದಲ್ಲಿ ಚಕ್ರವರ್ತಿಯು ನೀಡಿದ ಕೊನೆಯ ಶಾಸನವಿದಾಗಿರಬಹುದೇ? ಎಂಬ ಸಂದೇಹ ತಲೆದೋರುತ್ತದೆ. ಒಟ್ಟಿನಲ್ಲಿ ಮುಂದಿನ ಸಂಶೋಧನೆಯಲ್ಲಿ ಆಕರ ಲಭಿಸುವವರೆಗೂ ಇದು ಅಂತ್ಯ ಶಾಸನವೆಂದು ಪರಿಗಣಿಸಬಹುದಾಗಿದೆ. ಪಾಂಡಿಚೆರಿ ವಸ್ತು ಸಂಗ್ರಹಾಲಯದದಲ್ಲಿರುವ ತಾಮ್ರಪಟಗಳು ಉತ್ತರ ಆರ್ಕಾಟಿನಿಂದ ಹೇಗೆ ಸಂಗ್ರಹಿಸಿದ್ದೆಂಬುದೂ ಕುತೂಹಲಕರವಾಗಿದೆ. ಕೋಲಾರ ಜಿಲ್ಲೆಯ ಮಾಲೂರು ಉತ್ತರ ಅರ್ಕಾಟಿನ ಸಮೀಪವಿರುವುದರಿಂದ ಶಾಸನದತ್ತ ಸಂಗತಿಗೆ ಪುಷ್ಟೀಕರಣವೀಯಲು ಸಾಧ್ಯವಿದೆ. ಅನಂತಪುರ ಜಿಲ್ಲಾ ಪೆನುಗೊಂಡ ತಾಲ್ಲೂಕು ಬುಕ್ಕಾಪಟ್ಟಣದ 1581ನೆಯ ಶಾಸನವೊಂದು ಶ್ರೀರಂಗರಾಯನಿಗೆ ಮೇಗಟಿ ತಿಮ್ಮನಾಯುಡು ಎಂಬ ಕಾರ್ಯಕರ್ತ ಹಾಗೂ ಸಚಿವನೊಬ್ಬನು ಇರುವುದನ್ನು ಉಲ್ಲೇಖಿಸಿದೆ.[7] ಇದರಿಂದ ಆ ಪ್ರಾಂತದಲ್ಲಿ ಚಕ್ರವರ್ತಿಯು ಸಂಚರಿಸಿದ್ದನ್ನು ಗಮನಿಸಬಹುದು.

ಮೊದಲನೆಯ ಶ್ರೀರಂಗರಾಯನ ಶಾಸನ ಸೂಚೀಮೇರೆಗೆ 54 ಶಿಲಾಶಾಸನ 6 ತಾಮ್ರ ಶಾಸನಗಳು ನೀಡಿದ್ದು ಉಲ್ಲೇಖವಿದೆ. ತಾಮ್ರ ಶಾಸನಗಳ ವಿವರಗಳು ಈ ಕೆಳಕಂಡಂತಿವೆ.

| ಕಾಲ | ಊರು | ಜಿಲ್ಲಾ | ವಿವರಗಳು |
|---|---|---|---|
| 1. 19-6-1575 | ನಂಜನಗೂಡು | ಮೈಸೂರು | 3 ತಾಮ್ರ ಪಟಗಳು ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿದೆ (ನಾಗರಿ) |
| 2. 28-1-1576 | -"- | -"- | ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿದ್ದು ಪಟ ಸಂಖ್ಯೆ ತಿಳಿದುಬಂದಿಲ್ಲ. ತೆಲುಗು + ನಾಗರಿ |
| 3. 14-3-1578 | ಹಂಪಿ | ಬಳ್ಳಾರಿ | ಪುರಾತತ್ವ ವಸ್ತುಸಂಗ್ರಹಾಲಯದಲ್ಲಿದ್ದು ಪಟ ಸಂಖ್ಯೆ ತಿಳಿದುಬಂದಿಲ್ಲ, ತೆಲುಗು. |
| 4. 7-11-1584 | ದೇವನಹಳ್ಳಿ | ಬೆಂಗಳೂರು | 5 ತಾಮ್ರ ಪಟಗಳು ಗೋಪಾಲಸ್ವಾಮಿ ದೇವಾಲಯದ ಅರ್ಚಕ ರಂಗಾಚಾರ್ಯರಲ್ಲಿರುವುದು, ನಾಗರಿ. |
| 5. ? | ? | ? | 5 ತಾಮ್ರಪಟಗಳು ನಂದಿನಾಗರಿ, ಕೃಷ್ಣಸ್ವಾಮಿ ಅಯ್ಯಂಗಾರರದ್ದು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. |
| 6. ? | ? | ? | ನಂದಿ ನಾಗರಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ, KN. 1802, VI (BRG). |

ಕಾಲಂ ನಂ 4 ಮತ್ತು 5ರಲ್ಲಿ ಕಂಡುಬಂದಂತೆ ದೇವನಹಳ್ಳಿ ಹಾಗೂ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಕೃಷ್ಣಸ್ವಾಮಿ ಅಯ್ಯಂಗಾರರ ಶಾಸನಗಳು ಐದು ಪಟಗಳಿಂದ ಕೂಡಿದ್ದು ನಾಗರಿ ಹಾಗೂ ನಂದಿನಾಗರಿ ಲಿಪಿಗಳಲ್ಲಿವೆ. ಪಾಂಡಿಚೆರಿ ವಸ್ತುಸಂಗ್ರಹಾಲಯದ ತಾಮ್ರ ಪಟಗಳು ಶ್ರೀವತ್ಸಗೋತ್ರದ ವರಾಪಸ್ತಂಭ ಸೂತ್ರದ ಯಜುಶ್ಶಾಖೆಯ ಬೊಲ್ಲಾಪಿನ್ನಿ ಮಹಾವಂಶದ ಲಕ್ಷ್ಮೀಕಾಂತ ಮಖಿ ಶ್ರೇಷ್ಠನ ಮೊಮ್ಮಗ ನರಸಿಂಹಾಧ್ವರೀಂದ್ರನ ಮಗ ಪೋಚನನಿಗೆ ಪೊಲಾರ್ ತಾಲ್ಲೂಕು ಅನಿಯಾಲ್ಯ ಗ್ರಾಮವನ್ನು ಸರ್ವಮಾನ್ಯವಾಗಿ ನೀಡಿದ್ದಾಗಿದೆ. ಇದು ಉತ್ತರ ಆರ್ಕಾಟ್ ಜಿಲ್ಲೆಯಲ್ಲಿದೆ. ಶಾ.ಶ. 1507ನೆಯ ಪಾರ್ಥಿವ ಸಂವತ್ಸರದ ಭಾದ್ರಪದ ಬ 12ರಂದು ನೀಡಿದ ಈ ಶಾಸನದಲ್ಲಿ ಜಗತ್‌ಖ್ಯಾತ ಜಯಕೊಂಡ ಚೋಲಮಂಡಲವಾಸಿ ಪದವೀಡು ಮಹಾರಾಜ್ಯದಲ್ಲಿ ಫಲ್ಲುನಕೊಟ್ಟಕದಲ್ಲಿ ನೆಲೆನಿಂತ ಮಂಡೆಗೋಲಖ್ಯಾತ ನಾಡಿನಲ್ಲಿ ಪ್ರಸಿದ್ಧವಾದ ಮುರುಂಗಮಂಗಲವೆಂಬ ಪಟ್ಟಣದಲ್ಲಿರುವ ಪ್ರತ್ರಿವಾಡು ಮಹಾಗ್ರಾಮದಿಂದ ಕಾಮಂಬಟ್ಟು ಗ್ರಾಮದ ದಕ್ಷಿಣ ಗಂಗಾನಲ್ಲೂರು ಶ್ರೀ ಲಾಡವರ ಹೆಸರಿನ ಗ್ರಾಮಗಳ ಮಧ್ಯೆ ಶ್ರೀರಂಗರಾಯನಿಂದ ಶಾಸನವು ನೀಡಲ್ಪಟ್ಟಿದೆ. ಈ ಶಾಸನದಲ್ಲಿ ಅರ್ನಿ ವಿಭಾಗದ ಮುರುಗಮಂಗಲಂ, ಮಂಡಕೊಲತ್ತೂರ್, ಪಲಂಕೊಟ್ಟೈ, ಕಾಮಂಬಟ್ಟು (ಕಂಬಟ್ಟು), ಪಟ್ಟಿವಾಡು (ಪಟ್ಯವಾಡಿ), ಅಲಂಕಾರಮಂಗಲಂ, ಗಂಗನಲ್ಲೂರು, ಶ್ರೀ ಲಾಡವಾರಂ (ಇವುಗಳೆಲ್ಲವೂ ಪೋಲೂರು ತಾಲ್ಲೂಕಿನಲ್ಲಿವೆ), ರಂಗಸಮುದ್ರಂ (ಹಿಂದಿನ ಸ್ಥಳನಾಮ ಅನಿಲಾಯ) ಮುಂತಾದ ಸ್ಥಳನಾಮಗಳು ಗಮನಾರ್ಹವಾಗಿವೆ.

ಕ್ರಿ.ಶ. 1583ರಂದು ಶ್ರೀರಂಗರಾಯನು ನೀಡಿದ ಶಿಲಾಶಾಸನಗಳು ಉತ್ತರ ಆರ್ಕಾಟ್ ಜಿಲ್ಲೆಯ ದುಸಿ ಹಾಗೂ ದಕ್ಷಿಣ ಆರ್ಕಾಟ್ ಜಿಲ್ಲೆಯ ಶ್ರೀ ಮುಷ್ಣಂನಲ್ಲಿಯೂ ಕಂಡುಬಂದಿವೆ.[8]

ಪಂಡಿತ ಜವಾಹರ್‌ಲಾಲ್ ನೆಹರೂರವರು ಡಿಸ್ಕವರಿ ಆಫ್ ಇಂಡಿಯಾದಲ್ಲಿ ವಿಜಯನಗರವನ್ನು ಕುರಿತು –

"In earlier periods, as can be seen from classical literature and paintings, there was refinement enough and for those times, a high and complicated standard of living. Even when Babar came to north India, Vijayangar in the south had been spoken of by many European travellers as representing a very high standard of art and culture, refinement and luxury."

ಈ ರೀತಿ ಶ್ಲಾಘಿಸಿದ್ದಾರೆ.[9] ಈ ದೃಷ್ಟಿಯಲ್ಲಿ ವಿಜಯನಗರ ಮಹತ್ವದ ಸ್ಥಾನ ಪಡೆದಿದೆ. ಸಾಮಾನ್ಯವಾಗಿ ವಸ್ತುಸಂಗ್ರಹಾಲಯದಲ್ಲಿರುವ ಪುರಾತತ್ವ ಸಾಮಗ್ರಿಗಳ ಮೂಲವನ್ನು ಗುರ್ತಿಸಲು ಪುರಾವೆಗಳ ಹಾಗೂ ದಾಖಲೆಗಳ ಕೊರತೆ ಸಂಶೋಧನೆಯ ಸತ್ಯಾಸತ್ಯತೆಗೆ ತೊಡಕುಂಟು ಮಾಡುತ್ತವೆ. ಇದಕ್ಕೆ ಪಾಂಡಿಚೆರಿಯ ಶಾಸನವೂ ಹೊರತಾಗಿಲ್ಲ. ಈಗಿನ ಕಂಪ್ಯೂಟರ್ ಯುಗದಲ್ಲಿ ಮುಂದಿನ ವಿದ್ವಾಂಸರಿಗೆ ಸುಲಭಗ್ರಾಹ್ಯವಾಗಲು ಪ್ರಕಟಿತ ಹಾಗೂ ಅಪ್ರಕಟಿತ ವಿಜಯಗರ ಶಾಸನ ಸೂಚೀ (catalogue) ಸಿದ್ಧಪಡಿಸಿ ಪ್ರಕಟಿಸುವುದು ಅಗತ್ಯ ಕರ್ತವ್ಯಗಳಲ್ಲೊಂದಾಗಿದೆ.

## ಕೃತಜ್ಞತೆಗಳು

ಮಾಹಿತಿ ನೀಡಿದ ಪಾಂಡಿಚೆರಿ ವಸ್ತುಸಂಗ್ರಹಾಲಯದ ಕ್ಯೂರೇಟರ್‌ರವರಿಗೆ, ಶಾಸನದ ಸಂಸ್ಕೃತ ಭಾಗದ ವಿವರ ನೀಡಿದ ಡಾ. ಕೆ.ಎಸ್.ಎನ್. ಉಡುಪ, ಕುಕ್ಕೆ ಸುಬ್ರಹ್ಮಣ್ಯರವರಿಗೂ ಕೃತಜ್ಞತೆಗಳು.

## ಟಿಪ್ಪಣಿಗಳು

1. *ವಿಜಯನಗರ ಅಧ್ಯಯನ*, ಸಂ. 1 ರಲ್ಲಿಯೂ ಇದು ಪ್ರಮಾದವಶಾತ್ ಕೈಬಿಟ್ಟುಹೋಗಿದೆ. ಪು. 55, 56 ನೋಡಿ.
2. ಗೋಪಾಲ್‌ರಾವ್‌ರವರೂ ಇದನ್ನು ನನಗೆ ತಿಳಿಸಿದ್ದಾರೆ.
3. ಇದು ಕೇವಲ ಶಾಸನ ಸಂಖ್ಯೆ ಮಾತ್ರವಾಗಿದ್ದು ಪಟಗಳಲ್ಲವೆಂಬುದನ್ನು ಗಮನಿಸಲು ವಿನಂತಿ.
4. ಶ್ರೀರಂಗರಾಯನ ಜೀವಿತಕಾಲ 1586ರವರೆಗೆ ಇದೆ. ಈ ಶಾಸನವು ಈತನ ಹೆಸರಿನಲ್ಲಿ ನೀಡಿದ್ದಾಗಿರಬಹುದು.
5. ಶ್ರೀರಂಗರಾಯನ ಶಾಸನ ಕುರಿತು ವಿವರವಾದ ಪಟ್ಟಿಗೆ ಅನುಬಂಧ ನೋಡಿ.
6. ಇದು ಶೋಧನೆಯಾಗಬೇಕಾಗಿದೆ. – LISDSI.
7. *Madras Epigraphical Report*, No. 178; 1913, p. 21, ಬುಕ್ಕಪಟ್ಟಣಂ.
8. Arch Survey of India, Vol. II, *List of Inscriptions and Sketch of the Dynasties of Southern India*, p. 75, 76, 77.
9. Jawaharlal Nehru, *The Discovery of India*, p. 258.

# ವಿಜಯನಗರ ಶ್ರೀರಂಗರಾಯನ ಶಾಸನ ಸೂಚಿ

| ನಂ. | ಕಾಲ | ಶಿಲಾ/ತಾಮ್ರ | ಭಾಷೆ | ಉಲ್ಲೇಖ |
|---|---|---|---|---|
| 1 | 9-7-1573 | ಶಿಲಾ | ಕನ್ನಡ | M.A.R., 1932, No. 40 |
| 2 | 6-10-1573 | -"- | -"- | EC., XII, Ck. 8. |
| 3 | 10-2-1575 | -"- | -"- | EC., X, Ct. 65 |
| 4 | 19-4-1575 | -"- | -"- | EC., X; XVII, Kl. 146 |
| 5 | 19-6-1575 | 3 ತಾಮ್ರಪಟ | ನಾಗರಿ | EC., III (Rev. 1974) Nj. 111, MAR., 1944, No. 21 |
| 6 | 24-6-1575 | ಶಿಲಾ | ಕನ್ನಡ | EC., X, CB. 27. |
| 7 | 9-9-1575 | -"- | -"- | EC., X, CB. 28 |
| 8 | 13-11-1575 | -"- | -"- | ARIE., 1978-79, No. 117 |
| 9 | 28-1-1576 | ತಾಮ್ರ | ತೆಲುಗುಲಿಪಿ ಸಂಸ್ಕೃತ ಭಾಷೆ | EC., III (Rev 1974) Nj. 112; MAR., 1944, No. 22 |
| 10 | 1576 | ಶಿಲಾ | ? | Arch. Survey of India, Vol. II, List of Inscriptions and Sketch of the Dynasties of Southern India, No. 1-230, (ಅಪ್ರಕಟಿತ). |
| 11 | 2-1-1577 | ಶಿಲಾ | ಕನ್ನಡ | EC., V (Rev 1976), KN. 104, IV (I edn) Yd. 59 |
| 12 | 14-3-1578 | ತಾಮ್ರ | ತೆಲುಗು | ARIE., 1972-73, No. A4 |
| 13 | 6-7-1578 | ಶಿಲಾ | ಕನ್ನಡ | EC., V, Bl. 1; IX (Rev) Bl. 109 |
| [illegible] | 14-11-1578 | -"- | -"- | EC., X; XVII, Mr. 41 |
| 15 | 20-2-1579 | -"- | -"- | EC., IX, NI. 49 |
| 16 | 24-6-1580 | ಶಿಲಾ | -"- | EC., X, Kl. 153 |
| 17 | 11-7-1580 | -"- | -"- | ARSIE., 1901, No. 170; SII., VII, No. 375 |
| 18 | 21-11-1580 | -"- | -"- | EC., V, Bl. 12; IX Rev. Bl. 66 |
| 19 | 19-1-1581 | -"- | -"- | ARSIE., 1957-58, No. 301 (4) Summaries 1949-50, No. 22, KI. V, No. 8, VI, No. 72, QJMS., LV, pp. 92-98 |
| 20 | 7-5-1581 | -"- | -"- | EC., VII, Mi, 37. |
| 21 | 6-7-1581 | -"- | -"- | EC., VI (Rev 1977), pp. 50; IV (1 edn.), Kr. 15 |
| 22 | 2-2-1582 | ಶಿಲಾ | ಕನ್ನಡ | EC., IV (Rev 1975), Yl. 182; XIV (1 edn.), Yl. 89 |

| | | | | |
|---|---|---|---|---|
| 23 | 5-2-1582 | -"- | ತೆಲುಗು | EC., X, Sd. 100 |
| 24 | 31-12-1583 | -"- | ಕನ್ನಡ | EC., V, Bl. 212 |
| 25 | 14-5-1584 | -"- | -"- | EC., VI (Rev 1977), pp. 234; 111, XIV (1 edn.), Sr. 47 |
| 26 | 5-11-1584 | -"- | -"- | EC., X, Gd. 25 |
| 27 | 7-11-1584 | 5 ತಾಮ್ರಪಟ | ನಾಗರಿ | EC., IX, Dv. 82 |
| 28 | 22-3-1585 | ಶಿಲಾ | ಕನ್ನಡ | EC., VI (Rev. 1977), pp. 223; 111 (1 edn.), Sr. 40 |
| 29 | 4-5-1585 | -"- | -"- | EC., IV Rev 1975, Ko. 40 |
| 30 | 17-10-1585 | -"- | -"- | EC., VI (Rev 1977), pp. 140; XIV (1 edn.), Sr. 269 |
| 31 | 17-10-1585 | -"- | ಕನ್ನಡ + ಸಂಸ್ಕೃತ | EC., VI (Rev 1977), pp. 139; XIV (1 edn.), Sr. 268. |
| 32 | 29-11-1585 | ಶಿಲಾ | ತೆಲುಗು | EC., X, Sd. 51 |
| 33 | 13-1-1588 | ಶಿಲಾ | ಕನ್ನಡ | EC., V, Mj. 63 |
| 34 | 11-2-1598 | ಶಿಲಾ | ಕನ್ನಡ + ನಾಗರಿ | MAR. 1925, No. 54 |
| 35 | ? | 5 ತಾಮ್ರ ಪಟ | ನಂದಿನಾಗರಿ | MAR. 1932, No. 3 |
| 36 | ? | ಶಿಲಾ | ತೆಲುಗು | EC., XVII, Bg. 90 |
| 37 | ವ್ಯಯ ಆಶ್ವೀಜ ಶು 12 | -"- | -"- | EC., X, Mb. 139 |
| 38 | ? | -"- | ಕನ್ನಡ | MAR. 1927, No. 28 |
| 39 | ? | 5 ತಾಮ್ರ ಪಟ | ನಂದಿನಾಗರಿ | DAM ನಲ್ಲಿದೆ, KN. 1802, B.R. Gopal, VI. |

## Arch. Survey of India, Vol. II, List of Inscriptions and Sketch of the Dynasties of Southern India ಪ್ರಕಾರ ಹೊರನಾಡಿನ ಶಾಸನಗಳು

| | | | | |
|---|---|---|---|---|
| 40 | 1572 | ಶಿಲಾ | ? | ASI., Vol II, LISDSI, 1-183 |
| 41 | 1573 | -"- | -"- | 1-85 |
| 42 | 1574 | ಶಿಲಾ | ? | 1-183 ಮತ್ತು 1-185 |
| 43 | 1577 | -"- | -"- | -"- 1-99 |
| 44 | 1578 | -"- | -"- | -"- 1-100 |
| 45 | 1578 | -"- | -"- | -"- 1-127 |
| 46 | 1578 | -"- | -"- | -"- 1-310 |
| 47 | 1579 | -"- | -"- | -"- 1-137 |

| | | | | |
|---|---|---|---|---|
| 48 | 1579 | -"- | -"- | -"- 1-216 |
| 49 | 1580 | -"- | -"- | -"- 1-120 |
| 50 | 1581 | -"- | -"- | -"- 1-87 |
| 51 | -"- | -"- | -"- | -"- 1-89 |
| 52 | 1582 | -"- | -"- | -"- 1-183 |
| 53 | 1583 | -"- | -"- | -"- 1-166 |
| 54 | 1583 | -"- | -"- | -"- 1-180 |
| 55 | -"- | -"- | -"- | -"- 1-213 |
| 56 | 1584 | -"- | -"- | -"- 1-101 |
| 57 | -"- | -"- | -"- | -"- 1-102 |
| 58 | 1584 | ಶಿಲಾ | ? | -"- 1-183 |
| 59 | -"- | -"- | -"- | -"- 1-182 |
| 60 | 1585 | -"- | -"- | -"- 1-92 |

# 14. ಮ್ಯಾಸಬ್ಯಾಡ್ಕಿ ನಾಯಕತನಕ್ಕೆ ಸಂಬಂಧಿಸಿದ ತಾಮ್ರ ಶಾಸನ ಶೋಧನೆ

– ವಿರೂಪಾಕ್ಷಿ ಪೂಜಾರಹಳ್ಳಿ

ನಾನು ಕರ್ನಾಟಕದಲ್ಲಿ 'ಬೇಡ ಜನಾಂಗದ ಚಾರಿತ್ರಿಕ ಹಿನ್ನೆಲೆ' ಕುರಿತು ಸಂಶೋಧನೆ ಮಾಡಲು ಕ್ಷೇತ್ರಕಾರ್ಯ ಕೈಗೊಂಡಾಗ, ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಕಮಲಾಪುರ ಪಟ್ಟಣದ ಬಂಡೆಕೆರೆ ನಾಯಕ ಜನಾಂಗದ ಗುರಿಕಾರ ಕಾಟಯ್ಯನ ಬಳಿ ತಾಮ್ರ ಶಾಸನ ದೊರಕಿತು.[1] ಈ ತಾಮ್ರ ಶಾಸನವು ಒಂದು ಅಡಿ ಉದ್ದ, ಅರ್ಧ ಅಡಿ ಅಗಲ, ಸುಮಾರು ಕಾಲು ಇಂಚು ದಪ್ಪವಿದ್ದು, 2 ಕಿಲೊ ತೂಕವಿದೆ. ಎಡಭಾಗಕ್ಕೆ ಸೂರ್ಯ, ಬಲಭಾಗಕ್ಕೆ ಚಂದ್ರನನ್ನು ಬಿಡಿಸಲಾಗಿದೆ. ಅಕ್ಷರಗಳು ಸ್ಪಷ್ಟವಾಗಿದ್ದು, ಶಾಸನವು ತೀರಾ ಹಳೆಯದಂತೆ ಮಾಸಲಾಗಿದೆ. ಇದರಲ್ಲಿನ ಸಾರಾಂಶವೆಂದರೆ: ಶಕ ವರ್ಷ 1614ನೇ ನಳ ಸಂವತ್ಸರದಲ್ಲಿ ಮಂದಯ್ಯ ಚಿತ್ತಯ್ಯಗೆ 'ಮ್ಯಾಸಬ್ಯಾಡ್ಕಿ ನಾಯಕತನಾ'ವನ್ನು ಆನೆಗೊಂದಿ ಅರಸರು ಕೊಟ್ಟ ಸಂಗತಿಯಿದೆ. ಆದರೂ ಶಾಸನದ ಪಾಠವನ್ನು ಗಮನಿಸುವುದು ಸೂಕ್ತವೆನಿಸುತ್ತದೆ:

ಶ್ರೀ ರಾಮಾ<br>
ರಣಮಂಡ್ಲದ ಮಂ<br>
ದಯ್ಯ ಚಿತ್ತಯ್ಯಗೆ<br>
ಮ್ಯಾಸಬ್ಯಾಡ್ಕಿ ನಾಯ<br>
ಕತನಾ ಕೊಟ್ಟ ಶಾಸನಾ<br>
ಶಕ ೧೬೧೪ ಮಾಘ ಶು ೧<br>
ನಳ ಸ ||

ಎಂದಿರುವುದನ್ನು ಶಾಸನದ ಒಂದೇ ಮುಖದಲ್ಲಿ ನೋಡಬಹುದು. ಹಿಂಭಾಗದಲ್ಲಿ ಶಾಸನವಿಲ್ಲ.

ಈವರೆಗೆ ಪ್ರಕಟಗೊಂಡ ವಿಜಯನಗರ ಮತ್ತು ಆ ತರುವಾಯದ ಶಾಸನಗಳ ಪೈಕಿ 'ಮ್ಯಾಸಬ್ಯಾಡ್ಕಿ ನಾಯಕತನಾ'ದ ಉಲ್ಲೇಖ ಪ್ರಯೋಗವಾಗಿಲ್ಲ. ಮೊದಲ ಬಾರಿಗೆ ಈ ತಾಮ್ರ ಶಾಸನದಲ್ಲಿ ಕಂಡುಬರುವುದು ಅಪೂರ್ವ ಸಂಗತಿಯಾಗಿದೆ. ರಣಮಂಡಲ ಮತ್ತು ಮ್ಯಾಸಬ್ಯಾಡ್ಕಿ ನಾಯಕತನಾ ಹಾಗೂ ವಿಜಯನಗರೋತ್ತರ ಬೇಡ ಜನಾಂಗದ ಸಾಂಸ್ಕೃತಿಕ ಸಂಗತಿಗಳನ್ನು ಇಲ್ಲಿ ಚರ್ಚಿಸಿ ವಿವೇಚಿಸಲಾಗುವುದು.

ಶಾಸನದ ಕಾಲಮಾನವು ಕ್ರಿ.ಶ. 1692 ನವೆಂಬರ್ 1 ಎಂದು ತಿಳಿದುಬರುತ್ತದೆ. ಈ ಸಂದರ್ಭಕ್ಕೆ ಅರವೀಡು ವಂಶದ ವೆಂಕಟಪತಿರಾಯ (1586-1614)ನ ಆಳ್ವಿಕೆ ಮುಗಿದಿತ್ತು. ಚಿತ್ರದುರ್ಗದಲ್ಲಿ ಬರ್ಮಪ್ಪನಾಯಕ (1689-1721) ಆಳ್ವಿಕೆ ನಡೆಸುತ್ತಿದ್ದ. ಬಳ್ಳಾರಿ ಪ್ರದೇಶದಲ್ಲಿ ಮರಾಠರು, ಹರಪನಹಳ್ಳಿ, ಗುಡಿಕೋಟೆ ಮತ್ತು ಜರಿಮಲೆ ಪಾಳೆಯಗಾರರು ಆಳ್ವಿಕೆ ನಡೆಸುತ್ತಿದ್ದರು. ಆನೆಗೊಂದಿಯಲ್ಲಿ ರಾಜಪರಂಪರೆ ಮುಂದುವರೆದಿತ್ತು. 1991ರ ಕಂಪ್ಲಿ ಶಾಸನದಲ್ಲಿ ವೀರಪ್ರತಾಪ ವೆಂಕಟಪತಿರಾಯರಯ್ಯರನ್ನೂ ಉಲ್ಲೇಖಿಸಲಾಗಿದೆ.

ಈ ತಾಮ್ರ ಶಾಸನದಲ್ಲಿ ಶ್ರೀರಾಮ ಎಂದು ಆರಂಭವಾಗಿರುವ ಸಾಲುಗಳ ಪೈಕಿ 'ರಣಮಂಡ್ಲದ' ಎಂಬ ಪದವಿದೆ. ಇದನ್ನು ಬೇಡರ ಒಂದು ಬೆಡಗಿನ ಹೆಸರೆಂದು ಈವರೆಗೆ ತಿಳಿಯಲಾಗಿತ್ತು. ಆದರೆ ಈ ಬೆಡಗಿನ ಜನರ ಸುಳಿವು ಸಿಗದ ಕಾರಣ ಮೇಲಿನ ಅಭಿಪ್ರಾಯವನ್ನು ಬದಲಿಸಿ ಕೊಳ್ಳಲಾಯಿತು. 'ರಣಮಂಡಲ' ಎಂದರೆ ಕಾಳಗ ಮಾಡುವ ಸ್ಥಳ, ಯುದ್ಧ ರಂಗಭೂಮಿ ಎನ್ನಲಾಗುವುದಲ್ಲದೆ; ರಾಜವಂಶದವರಿಗೆ ವಿದ್ಯೆಯನ್ನು ಕಲಿಸುವ ಸ್ಥಳವೂ ಆಗಿತ್ತೆನ್ನಬಹುದು.[2] ಮಂದಯ್ಯ–ಚಿತ್ತಯ್ಯ ಎಂಬುವರು ಮೊದಲು ಕಾಳಗದಲ್ಲಿ ಸಹಕರಿಸಿದ್ದಕ್ಕಾಗಿ ಇಂಥಾ ಅಸಮಾನ್ಯ ಕಾರ್ಯ ತೋರಿದ್ದಕ್ಕಾಗಿ ರಾಜನು ಅವರಿಗೆ 'ಮ್ಯಾಸಬ್ಯಾಡ್ಕಿ ನಾಯಕತನಾ'ವನ್ನು ಕೊಟ್ಟಿರಬೇಕು.

'ಮ್ಯಾಸಬ್ಯಾಡ್ಕಿ ನಾಯಕತನಾ' ಎಂದರೇನು ? ಎಂಬುದನ್ನು ವಿಶ್ಲೇಷಿಸುವುದು ಜಟಿಲವಾದ ಕೆಲಸ. ಇದರಲ್ಲಿ ಯಾವ ಅರಸ, ಎಲ್ಲಿ ಇದನ್ನು ಕೊಟ್ಟನೆಂಬ ಉಲ್ಲೇಖವಿಲ್ಲ. ಪ್ರಸ್ತುತ ಶಾಸನವನ್ನು ಹೊಂದಿರುವ ಗುರಿಕಾರ ಕಾಟಯ್ಯನು ಆನೆಗುಂದಿಯ ನರಪತಿ ದೊರೆಗಳು ತಮ್ಮ ತಾತನವರಿಗೆ ಕೊಟ್ಟಿದ್ದರೆಂದು ತಿಳಿಸುತ್ತಾನೆ.[3]

ಬೇಡರು ವಿಜಯನಗರ ಸಾಮ್ರಾಜ್ಯದಲ್ಲಿ ಮೀಸಲುಪಡೆಯಲ್ಲಿದ್ದರು. ಜೊತೆಗೆ ಸೈನಿಕರಾಗಿ, ದಂಡನಾಯಕರಾಗಿ, ನಾಡತಳವಾರರಾಗಿ ವೃತ್ತಿಯಲ್ಲಿ ನಿರತರಾಗಿದ್ದರು. ಇನ್ನು ಕೆಲವು ಬೇಡ ಕುಟುಂಬಗಳು ಬೇಟೆ, ಪಶುಪಾಲನೆ ಮತ್ತು ಕೃಷಿಗಳಲ್ಲಿ ಜೀವನ ನಡೆಸುತ್ತಿದ್ದವು. ಹೀಗಿದ್ದರೂ ಯುದ್ಧಕ್ಕಾಗಿಯೇ ಮೀಸಲಾಗಿದ್ದ ಒಂದು ಪಂಗಡಕ್ಕೆ 'ಮೀಸಲುಪಡೆ' ಎಂದು ಕರೆಯಲಾಯಿತು. ಈ ಮೀಸಲುಪಡೆಯ ಒಡೆಯ ಅಥವಾ ನಾಯಕನಿಗೆ 'ಮ್ಯಾಸಬ್ಯಾಡ್ಕಿ' ನಾಯಕತನವೆಂಬ ಜವಾಬ್ದಾರಿ ಹುದ್ದೆಯನ್ನು ನಿಭಾಯಿಸಲು ಕೊಟ್ಟಿರಬೇಕು.

ಮೀಸಲು ಪಡೆಯಂತೆ 'ಬೇಡರಪಡೆ' ಮಹಾಭಾರತದ ಕಾಲದಿಂದಲೂ ಇತ್ತೆಂಬುದು ಗಮನಾರ್ಹ ಸಂಗತಿ. ಕನ್ನಡ ಕಾವ್ಯಗಳಲ್ಲಿಯೂ ಮೇಲಿನ ಸಂಗತಿ ಉಲ್ಲೇಖಗೊಂಡಿದೆ. ಪಂಪಭಾರತ, ಹರಿಶ್ಚಂದ್ರ ಕಾವ್ಯ ಮತ್ತು ಗಿರಿಜಾ ಕಲ್ಯಾಣಗಳಲ್ಲಿ ಬೇಡರ ದಂಡು, ಶಬರಬಲ, ಬೇಡರಪಡೆ (ಖಾಸ), ಕಿರಾತಪಡೆ ಮೊದಲಾದವುಗಳ ಪ್ರಸ್ತಾಪವಿದೆ. ಅದೇ ರೀತಿ ಷಡಕ್ಷರದೇವನ ಶಬರಶಂಕರ ವಿಳಾಸದಲ್ಲಿ ಬೇಡಪಡೆ, ದೇವಪಡೆಗಳ ಉಲ್ಲೇಖವಿದ್ದರೆ, ಕನಕದಾಸರ ಮೋಹನ ತರಂಗಿಣಿಯಲ್ಲಿಯೂ ಸಹಾ ಬೇಡ, ಪುಳಿಂದ, ಶಬರ ಪಡೆಗಳ ವರ್ಣನೆಯಿದೆ. ಈ ಎಲ್ಲಾ ಹಿನ್ನೆಲೆಗಳಿಂದ ನೋಡಿದಾಗ 'ಮ್ಯಾಸಬ್ಯಾಡ್ಕಿ ನಾಯಕತನಾ' ಎಂಬುದು ಸಾಹಿತ್ಯದಲ್ಲಿಯೂ ಕಂಡುಬರುವುದಿಲ್ಲ. ಇದೊಂದು 'ಲೋಕಸೃಷ್ಟಿ'ಯ ಹುದ್ದೆ ಎಂದೇ ಖಚಿತಪಡಿಸಬಹುದು.

'ಮ್ಯಾಸಬ್ಯಾಡ್ಕಿ ನಾಯಕತನಾ'ವೂ ಒಂದು ಅಧಿಕಾರಯುಕ್ತ ಗೌರವಾನ್ವಿತ ಪದವಿ. ಮ್ಯಾಸಬೇಡರ (ಸಂಸ್ಕೃತಿ) ಬುಡಕಟ್ಟು ವೀರನಿಗೆ ಮುಖಂಡತ್ವ ವಹಿಸಿ 'ನಾಯಕ'ನಾಗಿ ನೇಮಿಸುವ ಪರಿ ಬೆಳೆದು ಬಂದಂತಿದೆ. ಇದು ಕ್ರಮೇಣ ಮ್ಯಾಸಬೇಡರ ಗುರಿಕಾರರ ಕುಟುಂಬಕ್ಕೆ ಸೀಮಿತವಾಗಿರುವಂತೆ ಕಾಣಬರುತ್ತದೆ. ಆದರೂ ಬೇಡಪಡೆ ಯುದ್ಧಕ್ಕಾಗಿ ಅಲ್ಲದೆ, ನಾನಾ ರೀತಿಯ ಸಾಹಸಗಳನ್ನು ಮಾಡಿದ್ದು ಗಮನಾರ್ಹ. ಮ್ಯಾಸಬ್ಯಾಡ್ಕಿ ನಾಯಕತನಾವು ರಿಸರ್ವ್ ಪೋಲಿಸ್ ಪಡೆಯಂತೆ ಇದ್ದಿರಬೇಕು. ಕಾಲ ಕ್ರಮೇಣ ಬದಲಾಗಿ ಜಾತಿಸಂಘಟನೆ, ಕಲಹ ನಿವಾರಣೆ, ನ್ಯಾಯಪಂಚಾಯಿತಿ, ಬೇಡರ ಗುಡಿಕಟ್ಟೆ ಮತ್ತು ಕಟ್ಟೆಮನೆಗಳ ಕೆಲಸ ಕಾರ್ಯಗಳನ್ನು ನಿರ್ವಹಿಸಲಿಕ್ಕೆ ಮೀಸಲಾಗಿತ್ತೆನ್ನಬಹುದು.

'ಮ್ಯಾಸಪಡೆ' ಮತ್ತು 'ಖಾಸಬೇಡರ ಪಡೆ'ಗಳು ವೀರ ಯೋಧರಾಗಿ, ರಾಜ್ಯ ರಕ್ಷಣೆಯಲ್ಲಿ ಸಾಹಸ ಪ್ರದರ್ಶಿಸಿರುವುದು ಗಮನಾರ್ಹ. ಇವರು ವಿಜಯನಗರ ಸಂದರ್ಭದಲ್ಲಿ ಗೆರಿಲ್ಲಾ ಮಾದರಿಯ ಯುದ್ಧ ನೀತಿಯನ್ನು ಅನುಸರಿಸಿದ್ದರು. ಉದಾ: ವರ್ಷಕ್ಕೊಮ್ಮೆ ನಡೆಯುವ ಹಂಪಿ ಉತ್ಸವದಲ್ಲಿ ಖಾಸಬೇಡರಪಡೆ ಪ್ರದರ್ಶನಗೊಳಿಸುವುದನ್ನು (1996) ಗಮನಿಸಬಹುದು.

ಬೇಡರನ್ನು ವಿಜಯನಗರ ಕಾಲದಲ್ಲಿ ಭದ್ರತೆಯ ದೃಷ್ಟಿಯಿಂದಲೋ ಏನೋ ಹೆಚ್ಚಾಗಿ ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿದ್ದರು. ಹಾಗೆಯೇ ಇವರ ಶೌರ್ಯ, ಪರಾಕ್ರಮಗಳಿಂದ ಯುದ್ಧಗಳಲ್ಲಿ ಜಯವನ್ನು ಕಾಣುತ್ತಿದ್ದರು. ವಿಜಯನಗರದ ತರುವಾಯ ಇಂಥಾ ಸೈನಿಕ ಮುಖಂಡರು, ದಂಡನಾಯಕರುಗಳು ಪಾಳೆಯಗಾರರಾಗಿದ್ದುದು ಸ್ಪಷ್ಟ. ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ಇವರು ಮೇಲಿನಂತೆ ಸ್ಥಾನಗಳನ್ನು ಪಡೆದುಕೊಂಡಿದ್ದರೂ, ಮೃಗಗಳನ್ನು ಬೇಟೆಯಾಡಿ ಜೀವಿಸುತ್ತಿದ್ದು, ರಾಜ ಮನ್ನಣೆಗೂ ಪ್ರಿಯರಾಗಿದ್ದರು. ಇಂದಿಗೂ ಆಗಿನ ಕುರುಹಾಗಿ ಹಂಪೆಯ ಪರಿಸರದಲ್ಲಿ 'ಬೇಟೆಕಾರರ ಹೆಬ್ಬಾಗಿಲು' ಕಂಡುಬರುತ್ತದೆ. ಸಾಂಸ್ಕೃತಿಕವಾಗಿ ಬೇಡರು ಮಿಶ್ರಪ್ರವೃತ್ತಿಗಳಲ್ಲಿದ್ದುದು ವಿಜಯನಗರ ಕಾಲದ ವಿಶೇಷತೆಗಳಲ್ಲೊಂದು. ನಾಡತಳವಾರ, ಸೇನಾಪತಿ, ನೀರಗಂಟಿ, ಅಮರನಾಯಕ ಹೀಗೆ ವೃತ್ತಿ ಮತ್ತು ವರ್ಗಗಳಲ್ಲಿದ್ದ ಬಗೆಯು ಮಹತ್ವವಾದುದು.

ವಿಜಯನಗರದ ನಂತರ ಬೇಡರಲ್ಲಿ ಎರಡು ಪಂಗಡಗಳಾಗಿ ಏರ್ಪಟ್ಟಿತ್ತು. ನಾಗರೀಕತೆಗೆ ಹತ್ತಿರವಾಗಿರುವವರು ಊರು ಬೇಡರಾದರೆ, ಕಾಡಿನಲ್ಲಿದ್ದು ನಾಗರೀಕತೆಯ ಸುಳಿವು ಕಾಣದವರು ಮ್ಯಾಸಬೇಡರೆಂದು ಕರೆಸಿಕೊಂಡರು. ಇವರು ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡುಬರುವುದುಂಟು. ಮೊಂಡಬೇಡರು, ಸಾಧುಬೇಡರು, ಮುಂಜಿ ಮ್ಯಾಸರು, ಗುಡಿಸಲು ಬೇಡರೆಂದು ಇವರಲ್ಲಿ ಉಪಪಂಗಡಗಳಿವೆ. ಪ್ರಸ್ತುತ ತಾಮ್ರಶಾಸನವು ಈ ಮ್ಯಾಸಬೇಡರ ಮಂದಲ ಮತ್ತು ಮಲ್ಲಿನಾಯಕ ಗೋತ್ರಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಇವರನ್ನು ಕರ್ನಾಟಕದಲ್ಲಿ ಬೇಡ, ನಾಯಕ, ವಾಲ್ಮೀಕಿ, ತಳವಾರ, ಪರಿವಾರ ಎಂದು ಕರೆದರೆ; ಆಂಧ್ರದಲ್ಲಿ ಬೊಯಾ, ಚೆಂಚುಲು; ತಮಿಳಿನಲ್ಲಿ ವೇಡನ್; ಕೇರಳದಲ್ಲಿ ನಾಯನರ್; ಮಹಾರಾಷ್ಟ್ರದಲ್ಲಿ ರಾಮೋಶಿ; ಮಧ್ಯಪ್ರದೇಶದಲ್ಲಿ ಭಿಲ್ಲರೆಂದು ಕರೆಯಲಾಗುತ್ತದೆ. ಆಂಧ್ರದಲ್ಲಿ ಇಂದಿಗೂ ಕಣ್ಣಪ್ಪ, ಏಕಲವ್ಯನ ವಂಶದವರಿದ್ದಾರೆನ್ನಲಾಗುತ್ತಿದೆ. ಕರ್ನಾಟಕದಲ್ಲಿ ದೊರೆಕುಲ, ಕಣ್ಣಪ್ಪನ ಮಕ್ಕಳು, ನಾಯಕ, ವಾಲ್ಮೀಕಿ, ತಳವಾರ, ಗುರಿಕಾರರೆಂದು ಕರೆದರೂ, ಹಂಪಿ ಪರಿಸರದಲ್ಲಿ ಮ್ಯಾಸಬೇಡ(ನಾಯಕ)ರೆಂದು ಕರೆಯಲಾಗುತ್ತದೆ. ಇವರು ಪ್ರಾಚೀನ ಕಾಲದಿಂದಲೂ ಶೈವ ಮತ್ತು ವೈಷ್ಣವ ಪಂಥಗಳಲ್ಲಿ ಗುರುತಿಸಿಕೊಂಡಿರುವರು.

ಆನೆಗೊಂದಿಯು ಮ್ಯಾಸಬೇಡರಿಗೆ ಮೂಲ ನೆಲೆಯಾಗಿದೆ. ಇಂದಿಗೂ ಇವರು ರಾಜಕೀಯವಾಗಿಯೂ, ಸಾಂಸ್ಕೃತಿಕವಾಗಿಯೂ ಆನೆಗೊಂದಿಯನ್ನು ಅವಲಂಬಿಸಿದ್ದಾರೆ. ಇಲ್ಲಿನ ಅರಮನೆ ಮತ್ತು ಗುರುಮನೆಗಳು ಬೇಡರಿಗೆ ನ್ಯಾಯ ಪಂಚಾಯ್ತಿ, ಇತರ ವ್ಯಾಜ್ಯಗಳಿಗೆ ಕೇಂದ್ರಸ್ಥಾನಗಳಾಗಿದ್ದವು. ಒಟ್ಟಾರೆ ಬೇಡರಿಗೆ ಇದು ಅವಿನಾಭಾವ ಸಂಬಂಧಹೊಂದಿತ್ತು.

ಶಾಸನದಲ್ಲಿ ಉಲ್ಲೇಖಿತವಾದಂತೆ, ಈಗ ಜನಸಾಮಾನ್ಯರು ರೂಢಿಸಿಕೊಂಡು ಬಂದಿರುವ 'ಮ್ಯಾಸಬ್ಯಾಡ್ಕಿ ನಾಯಕತನಾ'ವು ಜವಾಬ್ದಾರಿಯುತ ಹುದ್ದೆಯಾಗಿತ್ತೆನ್ನಬಹುದು.

ಈ ಬಗ್ಗೆ ಕೆಲವು ಸಾಂಸ್ಕೃತಿಕ ಲಕ್ಷಣಗಳನ್ನು ಅವಲೋಕಿಸಲಾಗಿದೆ:

1. ರಾಜ್ಯ-ಸಂಸ್ಥಾನಗಳ ರಕ್ಷಣೆಯಲ್ಲಿ ಮ್ಯಾಸಬೇಡರ ಪಾತ್ರ ಹಿರಿದು.
2. ಆದಿ ಕಾಲದಿಂದ ಇವರು ವ್ಯಾಸ (ಅಡವಿ) ಕುಲದವರೆಂದು ಕರೆದುಕೊಂಡಿದ್ದಾರೆ.

3. ವ್ಯಾಸ>ಮ್ಯಾಸ ಆಗಿ, ಮ್ಯಾಸಬೇಡರಾಗಿರಬೇಕು.

4. ವಿಜಯನಗರದ ಕಾಲದಲ್ಲಿ ತಾವು ಮೀಸಲುಪಡೆಯ ನಾಯಕರಾಗಿದ್ದರಿಂದ, ಮೀಸಲು ನಾಯಕರು, ಮ್ಯಾಸ ನಾಯಕರಾಗಿರಬೇಕೆಂಬುದುಂಟು. ದೇವರಿಗೆ ಆಗತಾನೆ ಕರೆದ ಹಾಲು, ಹೆಪ್ಪು–ಮೊಸರನ್ನು ನೈವೇದ್ಯ ಮಾಡುತ್ತಿದ್ದವರಿಗೆ ಮೀಸಲಾರು ಎಂದು, ಮೀಸಲು ಕೊಡುವುದು ಒಂದು ಪದ್ಧತಿ ಎನ್ನುತ್ತಾರೆ. ಮೀಸಲಾರು ಎಂಬ ಬೆಡಗು ಸಹಾ ಬೇಡರಲ್ಲಿದೆ. ದನಗಳನ್ನು ಮೇಯಿಸುವುದರಿಂದ 'ಪಶು ಪಾಲನೆ' ಬೆಳೆದು ಬಂದಂತೆ; ಮೇಷಗಳನ್ನು ಕಾಯುವವರು (ಮೇಷ ಎಂದರೆ ಕುರಿ) ಮ್ಯಾಸರಾಗಿರುವ ಶಕ್ಯತೆ ಬಗ್ಗೆ ಚರ್ಚೆ ಆಗಬೇಕಿದೆ. ಮೇಯಿಸುವವರು> ಮೇಸುವವರು>ಮ್ಯಾಸರು ಆಗಿರಬೇಕು. ಮೀಸಲಾರು ನಾಯಕನಿಗೆ ಮೀಸೆ ಬರಲಿಲ್ಲವಾದ್ದರಿಂದ ದೇವರಿಗೆ ಬಂಗಾರದ ಮೀಸೆಯನ್ನು ಮಾಡಿಸಿಕೊಟ್ಟರೆಂಬ ಪ್ರತೀತಿಯಿದೆ.

5. ಸಂಸ್ಕೃತದಲ್ಲಿನ 'ಮೀವರ'ಕ್ಕೆ ಪೂಜ್ಯ, ಮಾನ್ಯ–ಗೌರವಾರ್ಥವಿದೆ. ಮೀಸರ ಎಂಬ ಪದದಂತೆ ಕುಮಾರರಾಮನ ಸಾಂಗತ್ಯದಲ್ಲಿ 'ಮೀಸರಗಂಡ' ಎಂಬ ಉಲ್ಲೇಖವಿದೆ. ಹೀಗೆಂದರೆ ಪರಾಕ್ರಮಿ. ಕುಮಾರರಾಮನ ಅಧೀನದಲ್ಲಿದ್ದವರು ಅಥವಾ ಕುಮಾರರಾಮ ಅವರನ್ನು ಜಯಿಸಿದ ಕಾರಣ ಮೇಲಿನಂತೆ ಕರೆದಿರಬೇಕು.[4]

6. ಕೀಸರ>ಕ್ಯಾಸರ, ಬೀಸರ>ಬ್ಯಾಸರ ಆದಂತೆ ಮೀಸರ>ಮ್ಯಾಸರು ಆಗಿರಬೇಕು.

7. ಬೇಡರಿಗೆ 'ನಾಯಕ' ಎನ್ನುವ ಬಿರುದು ರಾಷ್ಟ್ರಕೂಟರ ಕಾಲದಲ್ಲಿಯೇ ಬಂದಿರುವುದರಿಂದ ಈ ಶಾಸನದಲ್ಲಿ ಉಲ್ಲೇಖಿತಗೊಂಡ ನಾಯಕತನ ಎಂಬುದು ಜಾತಿಯಾಗಿ ಮತ್ತು ಹುದ್ದೆಯಾಗಿ ಬಹುತ್ವರೂಪಕ್ಕೆ ಮಾರ್ಪಾಟಾದ ಸಂದರ್ಭವನ್ನು ಸೂಚಿಸುತ್ತದೆ.

8. ಕ್ರಿ.ಶ. 13ನೇ ಶತಮಾನಕ್ಕೆ ಶ್ರೀ ಮನ್ಮಹಾನಾಯಂಕಾಚಾರ್ಯ, ಅಖಿಲಾಂಡಕೋಟಿ ಬ್ರಹ್ಮಾಂಡ ನಾಯಕ ಎಂಬ ಬಿರುದುಗಳನ್ನು ಬೇಡ-ಅರಸರು ಹೊಂದಿದ್ದರು. ಇದು ಅಂದಿನ ಕಾಲಕ್ಕೆ ಬಹು ದೊಡ್ಡ ಗೌರವ ಸೂಚಕ ಪದವಾಗಿರುವಂತಿದೆ.

9. ಕ್ರಿ.ಶ. 1275 (1237 ?)ರಲ್ಲಿ ನಿಡಗಲ್ಲು ಬೆಟ್ಟದ ಮೇಲೆ ಇರುಂಗೋಳಚೋಳನೆಂಬ ಬೇಡ ದೊರೆ ದೇವಾಲಯ ಮತ್ತು ಕೋಟೆ ಕಟ್ಟಿಸುತ್ತಾನೆ. ಇವನು ವ್ಯಾಸ ಬೇಡನೇ ಇರಬೇಕೆಂದು ಹಂಪ ನಾಗರಾಜಯ್ಯ ಅವರು ವಿಚಾರ ಸಂಕಿರಣದ ಚರ್ಚೆಯ ಸಂದರ್ಭದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

10. ಈವರೆಗೆ ನಂಬಿಕೊಂಡು ಬಂದಿರುವಂತೆ: ವ್ಯಾಸ ಮಹರ್ಷಿಯಿಂದ ಮ್ಯಾಸರು ಬಂದಿರಬೇಕೆಂಬುದು, ನ್ಯಾಸದಿಂದ ಮ್ಯಾಸ ಹುಟ್ಟಿದೆಂಬುದಕ್ಕೆ ನಿಖರ ಆಧಾರಗಳಿಲ್ಲ.

11. 1415 ರಲ್ಲಿ ಭಾರತೀಯ ಶಬರ ಜನಾಂಗದಿಂದ ಮ್ಯಾಸ ಮಂಡಳಿಯು ಬೇರ್ಪಡೆಯಾಯಿತೆನ್ನುವ ಅಭಿಪ್ರಾಯವಿದೆ. ಇದಕ್ಕೆ ಪೂರಕವಾದ ಆಧಾರಗಳಿಲ್ಲದ ಕಾರಣ ಗಟ್ಟಿನಿಲುವು ತಳೆಯುವುದು ಕಷ್ಟವೆನಿಸುತ್ತದೆ.

12. ತಳವಾರ ಆರಕ್ಷಕನಾಗಿ, ಪರಿವಾರ ರಾಜನ ಅಂತರಂಗದ ಸೇವಕನಾಗಿದ್ದರೆ, ಮ್ಯಾಸಬೇಡನು ಮೂರು ರೀತಿಯಲ್ಲಿದ್ದ ಬಗೆಯನ್ನು ತಿಳಿಯಬಹುದು:

    (1) ಆಹಾರ ಸಂಗ್ರಹಣೆ ಹಂತದಲ್ಲಿ ಗಡ್ಡೆ ಗೆಣಸುಗಳನ್ನು ಸೇವಿಸಿ ತನ್ನ ನಾಲಿಗೆ ರುಚಿಗೆ ಬೇಟೆಯನ್ನು ಅವಲಂಬಿಸಿದ. ಬೇಟೆಯೊಂದಿಗೆ ಗೋವು ಮತ್ತು ಕುರಿಗಳಿಗೆ ಮಂದೆ ನಿರ್ಮಿಸಿಕೊಂಡು ಕಾಡಿನಲ್ಲಿ ನೆಲೆಸಿರುವುದನ್ನು ಗುರುತಿಸಲಾಗಿದೆ.

    (2) 'ಮ್ಯಾಸ ಪಡೆ' ಮೂಲಕ ಯುದ್ಧದಲ್ಲಿ ಭಾಗವಹಿಸುವುದು, ರಾಜನಿಗೆ ಪ್ರಿಯನಾಗಿ ಶಾಂತಿ ಸುವ್ಯವಸ್ಥೆ ಕಾಪಾಡಿಕೊಂಡು ರಾಜ್ಯದ ಸಂಪತ್ತನ್ನು ವೃದ್ಧಿಸುವುದಾಗಿತ್ತು.

    (3) 'ಮ್ಯಾಸಬ್ಯಾಡ್ಕಿ ನಾಯಕತನಾ'ವು ಇಡೀ ಜನಾಂಗದ ಹಿರಿಯ ವ್ಯಕ್ತಿಯಾಗಿರುವವನಿಗೆ ಮೀಸಲಾಗಿತ್ತು. ಅವನು ಗುರಿಕಾರನೂ, ಶೂರನೂ, ಪರಾಕ್ರಮಿಯೂ ಆಗಿರುತ್ತಿದ್ದ. ಆ ನಾಯಕನು ಬೆಡಗು, ಬುಡಕಟ್ಟು, ಗುಡಿಕಟ್ಟೆ, ಕಟ್ಟೇಮನೆಗಳಲ್ಲದೆ, ಆಯಾ ದೇವರು ಮತ್ತು ದೇವಾಲಯಗಳಿಗೂ ಒಡೆಯನಾಗಿ ತನ್ನ ಪೋಷಿತ ರಾಜನಿಗೆ ಇಂತಿಷ್ಟು ಕಪ್ಪ ಕಾಣಿಕೆ ಸಲ್ಲಿಸುತ್ತಿದ್ದ. ಇದು ಒಂದು ರೀತಿಯಲ್ಲಿ ಸಾಂಸ್ಕೃತಿಕ ಜವಾಬ್ದಾರಿಯ ಹುದ್ದೆಯಾಗಿತ್ತು. ರಾಜಕೀಯೇತರ ಸಂಗತಿಗಳ ಬಗ್ಗೆಯೂ ನಾಯಕನೂ ಜಾಗೃತನಾಗಿರಬೇಕಿತ್ತೆಂಬುದು ಸ್ಪಷ್ಟ.

13. ಮೇಲಿನ ಸಂಗತಿಗಳಿಂದ ಮ್ಯಾಸಬೇಡರು ಸ್ಥಳೀಯರಂತೆ ಗೋಚರವಾಗುತ್ತದೆ. ಆದರೂ ಆಂಧ್ರದ ಕರಿಮಲೆ, ಕೊಮ್ಮಮಲೆಗಳಿಂದ ಶ್ರೀಶೈಲ ಪರ್ವತದ ಪೂರ್ವಕ್ಕೆ ದಕ್ಷಿಣಾಭಿಮುಖವಾಗಿ ಕಾಟೇಮಲ್ಲನಾಯಕ ಕರ್ನಾಟಕಕ್ಕೆ ಬರುತ್ತಾನೆಂಬ ದಂತ ಕಥೆಗಳಿವೆ. ಇವನು ನಾಯಕನಹಟ್ಟಿ

ಸಮೀಪ ವಾಸ್ತವ್ಯ ಹೂಡಿದಾಗ ವಿಜಯನಗರದ ಅರಸರು 1200 ಜನಿಗೆ ಆಕಳುಗಳನ್ನು ಅರಣ್ಯದಲ್ಲಿ ಮೇಯಿಸಿ ಕೊಳ್ಳಲು ಅವಕಾಶ ಕೊಟ್ಟ ಸಂಗತಿ ನಾಯಕನಹಟ್ಟಿ ಬಖೈರುನಿಂದ ತಿಳಿದು ಬರುತ್ತದೆ.

14. ಬೇಡರು ರಾಜನ ಪಡೆಯಲ್ಲಿಯೂ ಉನ್ನತ ಮಟ್ಟದ ಸೈನಿಕರಾಗಿದ್ದರು (ಉದಾ: ಪೆರಿಯ ಓಬ್ಬಳ್ಳ ನಾಯಕರ್). ಇವರು ಇಂದಿಗೂ ತಾವು ವಿಜಯನಗರದ ಅರಸರ ಹತ್ತಿರ ಇದ್ದ ಬೇಡಪಡೆಯವರು; ಮುಸಲ್ಮಾನರ ವಿರುದ್ಧ ಹೋರಾಡಲು ರಾಜ ತಮ್ಮನ್ನು ಹೆಚ್ಚಾಗಿ ಬಳಸಿಕೊಂಡಿದ್ದ, ವಿಜಯನಗರ ಹಾಳಾದ ಮೇಲೆ ತಾವು ಚದುರಿ ಹೋದರು ಎನ್ನುತ್ತಾರೆ.[5]

15. ಇಂದು ಬೇಡರಿಗೆ 'ಬೇಡ' ಎಂಬ ಜಾತಿಸೂಚಕ ಶಬ್ದದಿಂದ ಕರೆಯುವುದರ ಬದಲಾಗಿ ನಾಯಕ, ವಾಲ್ಮೀಕಿ, ದೊರೆ, ದಳವಾಯಿ, ತಳವಾರ ಎನ್ನಲಾಗುತ್ತದೆ. ಈ ವ್ಯವಸ್ಥೆ ಅವರ ಹೆಗ್ಗಳಿಕೆಗೆ ಮಾನ್ಯವಾಗಿದೆ.

ಒಟ್ಟಾರೆ ಇಲ್ಲಿ ಕಂಡುಬರುವ ಸಂಗತಿಯೆಂದರೆ, ವಿಜಯನಗರದ ಸಂಸ್ಕೃತಿಯೊಂದಿಗೆ ಬೇಡರ ನಂಟು ಬೆಳೆದಿತ್ತು. 'ಮ್ಯಾಸಬ್ಯಾಡ್ಕಿ ನಾಯಕತನಾ' ಎಂಬುದು ಬೇಡರ ಮುಖಂಡನಿಗೆ 'ನರಪತಿ ದೊರೆಗಳು'[6] ನಾಯಕ(leader)ನೆಂದು ನೇಮಿಸುತ್ತಿದ್ದುದಾಗಿತ್ತು. ಇದು ಆಯಾ ಗ್ರಾಮ, ಗಡಿಗಳಿಗಷ್ಟೇ ಸೀಮಿತವಾಗಿತ್ತು. ಹೀಗೆ ವಿಜಯನಗರ ಪೂರ್ವದಲ್ಲಿ ಇದ್ದಂತಿಲ್ಲ. ವಿಜಯನಗರೋತ್ತರ ಸಂದರ್ಭದಲ್ಲಿ ಪಾಳೆಯಗಾರಿಕೆ ಇದ್ದರೂ ಸಹಾ ಮ್ಯಾಸಬ್ಯಾಡ್ಕಿ ನಾಯಕತನಾವು ಹುದ್ದೆಯಾಗಿ ಮುಂದುವರೆದಿತ್ತು. ಪಾಳೆಯಗಾರಿಕೆ ಕೈತಪ್ಪಿದರೂ ಕೆಲವು ರಾಜ ಸಂಸ್ಥಾನಿಕರೂ ಈ ಮುಖಂಡತ್ವವನ್ನು ವಹಿಸಿಕೊಂಡಿದ್ದರು. ಅವರನ್ನು ಕಟ್ಟೇಮನೆಗಳ ದೊರೆಗಳೆಂದು ಕರೆಯಲಾಗುತ್ತಿತ್ತು.

ಇಂದಿಗೂ ಮ್ಯಾಸಬೇಡರಿಗೆ ಗುರುಮನೆ ಆನೆಗೊಂದಿಯಾಗಿದೆ. ಅರಮನೆ ರಾಜನಿಗೆ ಸೇರಿದ್ದು. ಕಮಲಾಪುರದ ಬೇಡರು ಬೇಟೆಗೆ (ಯುಗಾದಿ) ಹೋಗುವಾಗ ಆನೆಗೊಂದಿ ರಾಜನು ಉಪಸ್ಥಿತನಿದ್ದು, ಅನುಮತಿ ನೀಡಬೇಕಿತ್ತು. ಅಲ್ಲದೆ, ಹಂಪಿಯ ವಿರೂಪಾಕ್ಷ ಸ್ವಾಮಿಯ ರಥವನ್ನು ಎಳೆಯುವ ಹಕ್ಕು ಸೇರಿದಂತೆ ಇತರ ಕೆಲವು ಹಕ್ಕುಗಳು ಬೇಡರಿಗೆ ಮೀಸಲಾಗಿದ್ದವು. ಆನೆಗೊಂದಿಯ ಗುರುಮನೆಗೆ ಸೇರಿದ ಪೆದ್ದ (ದೊಡ್ಡ) ರಾಮಣ್ಣನವರು ಇಂದಿಗೂ ಈ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ.[7] ಈ ಹುದ್ದೆಗೆ ಇಂದು ತನ್ನ ಸ್ವರೂಪವನ್ನು ಬದಲಿಸಿಕೊಂಡು ಜಾತಿ–ಕಟ್ಟುಪಾಡುಗಳ ಹಿನ್ನೆಲೆಯಲ್ಲಿ ದೊರೆ, ಪೂಜಾರಿ, ಗೊಂಚಿಕಾರ, ಹಿರಿಯ (ಪೆದ್ದ) ಎಂದೆಲ್ಲ ಕರೆದು ಕೊಳ್ಳುತ್ತಾರೆ. ಮ್ಯಾಸಬ್ಯಾಡ್ಕಿ ನಾಯಕತನವು ಉನ್ನತ ಹುದ್ದೆಯಾಗಿದ್ದು, ಕಾಲಾಂತರದಲ್ಲಿ ಒಂದು ಜಾತಿಯ–ಕಟ್ಟುಪಾಡುಗಳಿಗಷ್ಟೇ ಮೀಸಲಾಗಿರುವಂತಿದೆ.

## ಟಿಪ್ಪಣಿಗಳು

1. ಕಮಲಾಪುರದಲ್ಲಿ ನಡೆದ ವಾಲ್ಮೀಕಿ ಜಯಂತಿಯ (29-11-96) ಪೂರ್ವಭಾವಿ ಸಭೆಯಲ್ಲಿ ಇತಿಹಾಸದ ಬಗ್ಗೆ ಮಾತನಾಡಿದಾಗ ದಿವಂಗತ ಗುರಿಕಾರ ಕಾಟಯ್ಯ, 80 ಬಂಡೆಕೆರೆ, ಕಮಲಾಪುರ, ಹೊಸಪೇಟೆ ತಾ||, ಬಳ್ಳಾರಿ ಜಿಲ್ಲೆ – ಇವರು ಪ್ರೀತಿಯಿಂದ ಈ ಶಾಸನವನ್ನು ಕೊಟ್ಟು ಸಹಕರಿಸಿರುವುದಕ್ಕೆ ಋಣಿಯಾಗಿರುವೆ.

2. ಕನ್ನಡ ನಿಘಂಟು, 7ನೇ ಸಂಪುಟ, ಪು. 7609.

3. ಆನೆಗೊಂದಿ ಸಂಸ್ಥಾನಕ್ಕೆ ಸೇರಿದ (ಅರವೀಡು ವಂಶ) ಅಚ್ಯುತ ದೇವರಾಯರು ಮೊದಲು ಅರಮನೆ ಗುರು ಮನೆಗಳಿರಲಿಲ್ಲ. ಇತ್ತೀಚಿಗೆ ತಾನೇ ಆ ರೀತಿ ಮಾಡಿಕೊಳ್ಳಲಾಗಿದೆ. ನಾವು ನಾಯಕರಿಗೆ ಈ ರೀತಿಯ ಬಿರುದುಗಳನ್ನು ಕೊಡುತ್ತಾ ಬಂದಿದ್ದೇವೆ ಎಂದರು (4-11-1999).

4. ಮ್ಯಾಸಬೇಡರು ಪರಾಕ್ರಮಿ ಬೇಡರು ಆಗಿರಬೇಕೆಂಬ ಊಹೆಯನ್ನು ಕೃಷ್ಣಮೂರ್ತಿ ಹನೂರು ತಮ್ಮ ಮ್ಯಾಸಬೇಡರ ಸಂಸ್ಕೃತಿ (ಪು. 52) ಕೃತಿಯಲ್ಲಿ ಹೇಳಿದ್ದಾರೆ.

5. ಸುಮಾರು 40,000 ಬೇಡರಪಡೆ ರಕ್ಕಸಗಿ–ತಂಗಡಗಿ ಯುದ್ಧದಲ್ಲಿ (1565) ಹತವಾಯಿತೆನ್ನಲಾಗುತ್ತಿದ್ದು, ಇವರ ಮಡದಿಯರು, ಮಕ್ಕಳು ದಿಕ್ಕಪಾಲಾಗಿ ಛಿದ್ರಗೊಂಡು ತೀರಾ ಹೀನಾಯವಾದ ಬದುಕನ್ನು ಸಾಗಿಸುತ್ತಿದ್ದರೆಂದು (ದಿವಂಗತ ಅಲ್ಲೀಪುರದ ಜಿ. ಹನುಮಂತಪ್ಪ, 80, ಬಳ್ಳಾರಿ) ಹೇಳಲಾಗುತ್ತಿದೆ. ಹಂಪಿ ಪರಿಸರದಲ್ಲಿ ಕಂಡುಬರುವ ಮೀಸರಗಂಡನ ಕೊತ್ತಳವು 'ಮ್ಯಾಸಬ್ಯಾಡ್ಕಿ ನಾಯಕತನ'ಕ್ಕೆ ಸಂಬಂಧಿಸಿರಬೇಕೆಂಬುದನ್ನು ಪರಿಶೀಲಿಸಬೇಕಾಗಿದೆ.

6. ಆನೆಗೊಂದಿ ಪ್ರದೇಶದ ಆಳ್ವಿಕೆ ಅಳಿಯ ರಾಮರಾಯನ ಮಗ ನಾಲ್ವಡಿ ರಂಗರಾಜನ ವಂಶೀಯರ ಒಂದು ಸಣ್ಣ ಸಂಸ್ಥಾನದ ಕೇಂದ್ರವಾಗಿ ಮುಂದುವರೆದು 'ನರಪತಿ ಸಂಸ್ಥಾನ'ವೆಂಬ ಪರ್ಯಾಯ ನಾಮದೊಂದಿಗೆ ಪ್ರಸಿದ್ಧಿ ಪಡೆಯಿತು. (ನೋಡಿ: ಪಿ.ವಿ. ಕೃಷ್ಣಮೂರ್ತಿ: ಆನೆಗೊಂದಿ

ಪ್ರಭುಗಳ ಇತಿಹಾಸ–ಶಾಸನ ಮತ್ತು ಇತರ ಆಕರಗಳ ಹಿನ್ನೆಲೆಯಲ್ಲಿ: ಒಂದು ಪರಿಶೀಲನೆ, ಸೂರ್ಯಕೀರ್ತಿ, ಸೂರ್ಯನಾಥ ಕಾಮತರ ಅಭಿನಂದನ ಗ್ರಂಥ, 2000, ಪು. 243). ನಂತರ ಕ್ರಿ.ಶ. 1657ರಲ್ಲಿ ಶಿವಾಜಿ ಮಹಾರಾಜ ತಿರುಮಲರಾಯನಿಗೆ ರಜತ ಶಾಸನ ನೀಡಿ, ಆನೆಗೊಂದಿ ಸಂಸ್ಥಾನವೆಂಬ ಚಿಕ್ಕರಾಜ್ಯಕ್ಕೆ ನಾಂದಿ ಹಾಡಿದ.

7. ದಿನಾಂಕ 1-1-1898 ರಂದು ಆನೆಗೊಂದಿ ಸಂಸ್ಥಾನದ ರಾಣಿ ಕುಪ್ಪಮ್ಮನವರು ಉರ್ದು ಭಾಷೆಯಲ್ಲಿ ಹೊರಡಿಸಿದ ಶಾಸನದ ಕನ್ನಡ ವಿವರ ಹೀಗಿದೆ: ರಾಣಿ ವಿಜ್ಜಮ್ಮ ಕುಪ್ಪಮ್ಮ ನಾವಿಬ್ಬರು ಕೃಷ್ಣ ದೇವರಾಯರ ಮಡದಿಯರಿದ್ದು, ವಿಜಮ್ಮ ರಾಣಿ ಇವರಿಗೆ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಕ್ಕೆ ಸೇರಿದ ಹಂಪೆಯಲ್ಲಿ ಸಂಸ್ಥಾನದ ಹಿರಿಯರುಗಳಿದ್ದು (ಹಿಡಿದಿಗಳಿದ್ದು), ವಿಜ್ಜಮ್ಮ ರಾಣಿ ಇವರ ಸ್ವಾಧೀನಕ್ಕೆ ಕೊಟ್ಟಿರುತ್ತೇನೆ. ಹಂಪಿ ದೇವಸ್ಥಾನದಲ್ಲಿ ನಮ್ಮ ಈರ್ವರಿಗೂ ಸರಿಸಮಾನ ಮಾರ್ಯಾದೆಗಳಿವೆ.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕ ಕಮಲಾಪುರ ಗ್ರಾಮದಲ್ಲಿರುವ ವಾಲ್ಮೀಕಿ ಜನಾಂಗದ "ಗುರುತ್ವಾವನ್ನು" (ನಾಯಕತ್ವ) ವಿಜ್ಜಮ್ಮ ರಾಣಿ ಇವರ ತಮ್ಮನಾದ ನಂದ್ಯಾಲ ನಾರಾಯಣ ರಾಜು ಇವರಿಗೆ ವಹಿಸಿಕೊಟ್ಟಿರುತ್ತೇನೆ. ಅಲ್ಲದೆ ಬಳ್ಳಾರಿ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಮತ್ತು ಧಾರವಾಡ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ಹಾಗೂ ಶಿವಮೊಗ್ಗ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ, ಚಿತ್ರದುರ್ಗ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ ವಾಲ್ಮೀಕಿ ಜನಾಂಗದ ಕೆಲವು ಗುರುತ್ವಾವನ್ನು ಮತ್ತು ರಾಯಚೂರು ಜಿಲ್ಲೆಯ ಕನಕಗಿರಿ ಗ್ರಾಮದ ಹೊ(ಗೊ)ಲ್ಲರ ಗುರುತ್ವವನ್ನು ಹಾಗೂ ಮಾನ್ವಿ ತಾಲೂಕ ಗೊಲ್ಲರ ಗುರುತ್ವವನ್ನು, ಕೊಪ್ಪಳ ತಾಲೂಕದಲ್ಲಿ ಹಾಗೂ ಆಂಧ್ರಪ್ರದೇಶ ಗುಂತಕಲ್ಲು ಹತ್ತಿರದ ಕಸಾಪೂರು ಗ್ರಾಮದಲ್ಲಿ ಹರಿಜನ ಗುರುತ್ವಾವನ್ನು ಇವರಿಗೆ ವಹಿಸಿಕೊಟ್ಟಿರುತ್ತೇನೆ.

ಸೂರ್ಯ ಚಂದ್ರಾದಿಗಳು ಇರುವವರೆಗೂ ಇವರ ವಂಶಸ್ಥರೇ ಇದಕ್ಕೆ ಅಧಿಕಾರಸ್ಥರಿರುತ್ತಾರೆ. ಮೇಲ್ಕಾಣಿಸಿದ ಜನಾಂಗದ ಯಾವತ್ತೂ ಸಿಕಾಯಿತಿಗಳು ಇಲ್ಲದಂತೆ ನೋಡಿಕೊಳ್ಳತಕ್ಕದ್ದು.

ಸಂಸ್ಥಾನ ಆನೇಗುಂದಿ
ರಾಣಿ ಕುಪ್ಪಮ್ಮ ಇವರ ರುಜು.

ಹೀಗೆ ಇತರ ಅನೇಕ ದಾಖಲೆಗಳು ನಾಯಕತ್ವದ ಬಗ್ಗೆ ಬೆಳಕು ಚೆಲ್ಲುತ್ತವೆ.

**ಕೃತಜ್ಞತೆಗಳು:** ಪ್ರಬಂಧಕ್ಕೆ ಮಾಹಿತಿ ಒದಗಿಸಿದ ಬಂಡೆಕೆರೆ ಗುರಿಕಾರ ಕಾಟಯ್ಯ, ವಾಲ್ಮೀಕಿ ನಾಯಕ ಸಂಘ ಕಮಲಾಪುರ, ಶ್ರೀ ಅಚ್ಯುತದೇವರಾಯ ಆನೆಗೊಂದಿ, ಡಾ. ಎಂ.ಎಂ. ಕಲಬುರ್ಗಿ, ಪ್ರೊ. ಲಕ್ಷ್ಮಣ್ ತೆಲಗಾವಿ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ನೆರವಾದವರೆಲ್ಲರಿಗೂ ಕೃತಜ್ಞತೆಗಳು.

# 15. ಒಂದನೇ ಹರಿಹರನ ಐದು ಅಪ್ರಕಟಿತ ಚಿನ್ನದ ನಾಣ್ಯಗಳು

**– ಆರ್. ಗೋಪಾಲ್**

ದಕ್ಷಿಣ ಭಾರತದ ಇತಿಹಾಸದಲ್ಲಿ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ದ ಕೀರ್ತಿ ವಿಜಯನಗರ ಅರಸರಿಗೆ ಸಲ್ಲುತ್ತದೆ. ಹೊಯ್ಸಳರ ಅಧೀನ ಸಾಮಂತರಾಗಿದ್ದ ಹರಿಹರ ಮತ್ತು ಬುಕ್ಕರು ಹೊಯ್ಸಳ ರಾಜ ಮುಮ್ಮಡಿ ವೀರಬಲ್ಲಾಳನ ಪತನಾನಂತರ ವಿದ್ಯಾರಣ್ಯ ಮುನಿಯ ಸಹಾಯದಿಂದ ಸ್ವತಂತ್ರ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.[1] ವಿಜಯನಗರದ ರಾಜರು ಹೊರಡಿಸಿದ ನಾಣ್ಯಗಳಲ್ಲಿ "ಹಿಂದೂ ಧರ್ಮಕ್ಕೆ ಸಂಬಂಧವಿಲ್ಲದ ಒಂದು ನಾಣ್ಯವೂ ಕಾಣಬರುವುದಿಲ್ಲ. ಹಾಗೆಯೇ ಧಾರ್ಮಿಕ ಚಿಹ್ನೆಯಿಲ್ಲದ ವಿಜಯನಗರದ ಒಂದು ನಾಣ್ಯವೂ ಕಾಣಬರುವುದಿಲ್ಲ" ಎಂದು ಎ.ವಿ. ನರಸಿಂಹಮೂರ್ತಿ ಅಭಿಪ್ರಾಯ ಪಟ್ಟಿದ್ದಾರೆ.[2] ವಿಜಯನಗರ ಸಾಮ್ರಾಜ್ಯವು ಹಿಂದೂ ಧರ್ಮವನ್ನು ಉಳಿಸಿ ಬೆಳೆಸಿತು ಎಂಬುದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ.

ದಕ್ಷಿಣ ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವು 'ಸುವರ್ಣಯುಗ'ವಾಗಿತ್ತು. ಚಿನ್ನ, ಮುತ್ತು, ರತ್ನ, ಪಚ್ಚೆ ಮತ್ತು ವಜ್ರ ವೈಡೂರ್ಯಗಳನ್ನು ರಸ್ತೆಯ ಬದಿಗಳಲ್ಲಿ ಅಳೆದು ಮಾರುತ್ತಿದ್ದರು ಎಂದು ಅಬ್ದುರ್ ರಜಾಕನ ಬರವಣಿಗೆಯಿಂದ ತಿಳಿದು ಬರುತ್ತದೆ.[3] ವಿಜಯನಗರದ ಕಾಲದಲ್ಲಿ ಮುದ್ರಿತವಾದಷ್ಟು ಚಿನ್ನ ಮತ್ತು ತಾಮ್ರದ ನಾಣ್ಯಗಳು ಕರ್ನಾಟಕದಲ್ಲಿ ಮತ್ತಾವ ರಾಜರ ಕಾಲದಲ್ಲಿ ಮುದ್ರಿತವಾಗಿಲ್ಲ. ಇದಕ್ಕೆ ಪ್ರಮುಖ ಕಾರಣಗಳೆಂದರೆ ಚಿನ್ನ ಯಥೇಚ್ಛವಾಗಿ ದೊರೆಯುತ್ತಿದ್ದುದು ಒಂದು ಕಾರಣವಾದರೆ, ಒಂದನೇ ಹರಿಹರನು ತೆರಿಗೆಯನ್ನು ಮತ್ತು ಟಂಕಸಾಲೆಗಳನ್ನು ಸುಧಾರಿಸಿದುದರಿಂದ ಹಾಗೂ ತೆರಿಗೆಯನ್ನು ಹಣದ ರೂಪದಲ್ಲಿ ನೀಡಬೇಕಾಗಿದ್ದುದರಿಂದ ಹೊಸ ಹೊಸ ನಮೂನೆಯ ನಾಣ್ಯಗಳು ಚಲಾವಣೆಗೆ ಬರಲು ಕಾರಣವಾಯಿತು. ಹೀಗಾಗಿ ವಿಜಯನಗರದ ಕಾಲದಲ್ಲಿ ನಾಣ್ಯಗಳನ್ನು ಟಂಕಿಸುವುದು ಮತ್ತು ಚಲಾವಣೆ ಮಾಡುವುದು ಯಥೇಚ್ಛವಾಗಿತ್ತು. ನಾಣ್ಯದ ಒಂದು ಭಾಗದಲ್ಲಿ ಚಿತ್ರಗಳನ್ನು ಮತ್ತೊಂದು ಭಾಗದಲ್ಲಿ ರಾಜರ ಹೆಸರುಗಳನ್ನು ಟಂಕಿಸುತ್ತಿದ್ದುದರಿಂದ, ಸಂಬಂಧಪಟ್ಟ ವಿಜಯನಗರದ ರಾಜರ ನಾಣ್ಯಗಳನ್ನು ಗುರುತಿಸಲು ಕಷ್ಟವಾಗುವುದಿಲ್ಲ.

ವಿಜಯನಗರ ಸಾಮ್ರಾಜ್ಯದ ಸಂಸ್ಥಾಪಕನಾದ ಒಂದನೇ ಹರಿಹರನ (ಕ್ರಿ.ಶ. 1335-1356) ನಾಣ್ಯಗಳು ದೊರೆಯುವುದು ತುಂಬಾ ಅಪರೂಪ. ನಮಗೆ ಲಭ್ಯವಿರುವ ನಾಣ್ಯದ ಮಾದರಿಯಲ್ಲಿ ಮುಂಭಾಗದಲ್ಲಿ ಬಲಭಾಗಕ್ಕೆ ಮುಖಮಾಡಿ ವೀರಾಸನದಲ್ಲಿ ನಿಂತಿರುವ ಹನುಮಾನನ ಚಿತ್ರವಿದ್ದರೆ, ಹಿಂಭಾಗದಲ್ಲಿ ಮೂರು ಸಾಲಿನ ಶ್ರೀ ವೀರ ಹರಿಹರ ಎಂಬ ಬರಹವಿದೆ. ಅಂದರೆ ಇದುವರೆಗೆ ಪ್ರಕಟವಾಗಿರುವ ನಾಣ್ಯದ ಮಾದರಿಯೆಂದರೆ ಹನುಮಾನನ ಚಿತ್ರವಿರುವ ನಾಣ್ಯ ಮಾತ್ರ. ಈ ಲೇಖನದಲ್ಲಿ ಐದು ಹೊಸ ಮಾದರಿಯ ಚಿನ್ನದ ನಾಣ್ಯಗಳಿದ್ದು, ಅವುಗಳ ವಿವರ ಕೆಳಕಂಡಂತೆ ಇದೆ[5] (ಚಿತ್ರ 70-71).

**ನಾಣ್ಯ 1:** ಲೋಹ: ಚಿನ್ನ, ಆಕಾರ: ದುಂಡಾಗಿದೆ, ತೂಕ: 340 ಮಿಲಿ ಗ್ರಾಂ, ಅಗಲ: 0.6 ಸೆ.ಮೀ.

ಮುಂಭಾಗ: ಎಡಗಡೆ ಮುಖಮಾಡಿ ಪೀಠದ ಮೇಲೆ ನಿಂತಿರುವ ಸಿಂಹದ ಚಿತ್ರವಿದೆ. ದಪ್ಪನೆಯ ಮುಖವಿದ್ದು, ಎಡಗಾಲನ್ನು ಮೇಲಕ್ಕೆ ಎತ್ತಿ ನಿಂತಿದೆ. ಬಾಲವನ್ನು ನೀಳವಾಗಿ ಸುರುಳಿಯಾಗಿ ಸುತ್ತಿರುವಂತೆ ಚಿತ್ರಿಸಲಾಗಿದೆ.

ಹಿಂಭಾಗ: ಎರಡು ಸಾಲಿನಲ್ಲಿ ಹರಿ ಹರ ಎಂಬ ಕನ್ನಡ ಅಕ್ಷರಗಳಿವೆ.

**ನಾಣ್ಯ 2 :** ಲೋಹ: ಚಿನ್ನ, ಆಕಾರ: ದುಂಡಾಗಿದೆ, ತೂಕ: 340 ಮಿಲಿ ಗ್ರಾಂ, ಅಗಲ: 0.6 ಸೆ.ಮೀ.


ಮುಂಭಾಗ: ಬಲಗಡೆ ಮುಖ ಮಾಡಿ ನಿಂತಿರುವ ಸಿಂಹದ ಚಿತ್ರವಿದೆ. ನೀಳವಾದ ತಲೆ ಇದ್ದು, ಬಲಗಾಲನ್ನು ಮೇಲೆಕ್ಕೆ ಎತ್ತಿ ನಿಂತಿದೆ. ಬಾಲ ಸಹ ನೀಳವಾಗಿದ್ದು ಮೇಲ್ಭಾಗಕ್ಕೆ ಸುರುಳಿಯಾಗಿ ಸುತ್ತಿಕೊಂಡಿದೆ.

ಹಿಂಭಾಗ: ಎರಡು ಸಾಲಿನಲ್ಲಿ ಹರಿ ಹರ ಎಂಬ ಕನ್ನಡ ಅಕ್ಷರಗಳಿವೆ.

**ನಾಣ್ಯ 3:** ಲೋಹ: ಚಿನ್ನ, ಆಕಾರ: ದುಂಡಾಗಿದೆ, ತೂಕ: 340 ಮಿಲಿ ಗ್ರಾಂ, ಅಗಲ: 0.6 ಸೆ.ಮೀ.

ಮುಂಭಾಗ: ಎಡಗಡೆ ಮುಖ ಮಾಡಿ ನಿಂತಿರುವ ಸಿಂಹದ ಚಿತ್ರವಿದೆ. ಮುಖ ಹಾಗೂ ದೇಹ ನೀಳವಾಗಿದೆ. ಬಾಲ ಸಹ ನೀಳವಾಗಿ ಮೇಲ್ಭಾಗದಲ್ಲಿ ಸುರುಳಿಯಾಗಿಸುತ್ತಿದೆ. ಸಿಂಹದ ಚಿತ್ರವು ಸುಂದರವಾಗಿ ಚಿತ್ರಿತವಾಗಿದೆ.

ಹಿಂಭಾಗ: ಎರಡು ಸಾಲಿನಲ್ಲಿ ಹರಿ ಹರ ಎಂಬ ಕನ್ನಡ ಅಕ್ಷರಗಳಿವೆ.



ಒಂದನೇ ಹರಿಹರನ ನಾಣ್ಯಗಳು, ಮುಂಭಾಗ



ಒಂದನೇ ಹರಿಹರನ ನಾಣ್ಯಗಳು, ಹಿಂಭಾಗ

ನಾಣ್ಯ 4: ಲೋಹ: ಚಿನ್ನ, ಆಕಾರ: ದುಂಡಾಗಿದೆ, ತೂಕ: 340 ಮಿಲಿ ಗ್ರಾಂ, ಅಗಲ: 0.6 ಸೆ.ಮೀ.

ಮುಂಭಾಗ: ಬಲಭಾಗಕ್ಕೆ ಮುಖ ಮಾಡಿ ಕುಳಿತಿರುವ ನಂದಿಯ ಚಿತ್ರವಿದೆ.[6] ನಂದಿಯು ವೈಭವಯುತವಾಗಿ ಚಿತ್ರಿತವಾಗಿದೆ. ಅದರ ಡುಬ್ಬದ ಹಿಂದೆ ಅರ್ಧ ಚಂದ್ರವಿದೆ.

ಹಿಂಭಾಗ: ಎರಡು ಸಾಲಿನಲ್ಲಿ ಹರಿ ಹರ ಎಂಬ ಕನ್ನಡ ಅಕ್ಷರಗಳಿವೆ.

**ನಾಣ್ಯ 5:** ಲೋಹ: ಚಿನ್ನ, ಆಕಾರ: ದುಂಡಾಗಿದೆ, ತೂಕ: 340 ಮಿಲಿ ಗ್ರಾಂ, ಅಗಲ: 0.7 ಸೆ.ಮೀ.

ಮುಂಭಾಗ: ನಾಲ್ಕನೇ ನಾಣ್ಯದ ಮಾದರಿಯಂತೆ ಇದೆ.

ಹಿಂಭಾಗ: ಹರಿ ಹರ ಎಂಬ ಅಲೇಖವಿರದೆ, ಗಂಗರ ನಾಣ್ಯಗಳಲ್ಲಿ ಕಾಣಬರುವ ಬಳ್ಳಿಯ ಚಿತ್ರವನ್ನು ಕಾಣಬಹುದಾಗಿದೆ. ನಾಲ್ಕನೇ ನಾಣ್ಯದ ಮುಂಭಾಗದಲ್ಲಿರುವ ನಂದಿಯ ಹಾಗೂ ಹಿಂಭಾಗದ ಅಲೇಖದ ಆಧಾರದ ಮೇಲೆ ಇದು ಒಂದನೇ ಹರಿಹರನ ನಾಣ್ಯ ಎಂದು ಗುರುತಿಸಲಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಒಂದನೇ ಹರಿಹರ ಹಾಗೂ ಎರಡನೇ ಹರಿಹರ ಎಂಬ ಇಬ್ಬರು ರಾಜರು ಇದ್ದು, ಒಂದನೇ ಹರಿಹರನ ನಾಣ್ಯಗಳ ಹಿಂಭಾಗದಲ್ಲಿ ಹರಿಹರ ಮತ್ತು ವೀರ ಹರಿಹರ ಎಂಬ ಅಲೇಖಗಳನ್ನು ಕಾಣುತ್ತೇವೆ. ಎರಡನೇ ಹರಿಹರನ ನಾಣ್ಯಗಳ ಹಿಂಭಾಗದಲ್ಲಿ ಶ್ರೀ ಪ್ರತಾಪ ಹರಿಹರ ಎಂಬ ಅಲೇಖವನ್ನು ಕಾಣುತ್ತೇವೆ. ಪ್ರತಾಪ ಎಂಬ ಬಿರುದಾಂಕಿತ ನಾಣ್ಯಗಳನ್ನು ಎರಡನೇ ಹರಿಹರನ ನಂತರದ ಎಲ್ಲಾ ನಾಣ್ಯಗಳಲ್ಲಿ ಕಾಣುವುದು ಸರ್ವಸಾಮಾನ್ಯ. ಹೀಗಾಗಿ ಒಂದನೇ ಮತ್ತು ಎರಡನೇ ಹರಿಹರನ ನಾಣ್ಯಗಳನ್ನು ವಿಂಗಡಿಸುವುದು ಸುಲಭ. ಆದ್ದರಿಂದ ಮೇಲೆ ವಿವರಿಸಿರುವ ಎಲ್ಲಾ ನಾಣ್ಯಗಳೂ ಒಂದನೇ ಹರಿಹರನ ನಾಣ್ಯಗಳು ಎಂದು ಹೇಳಬಹುದಾಗಿದೆ.

ಹಲವಾರು ವಿದ್ವಾಂಸರು ಒಂದನೇ ಹರಿಹರನು ಸಹ ಹೊಯ್ಸಳರ ನಾಣ್ಯಗಳ ಸಂಪ್ರಾದಾಯವನ್ನೇ ಮುಂದುವರಿಸಿದ ಎಂದು ಹೇಳುತ್ತಾರೆ.[7] ಇದುವರೆಗೆ ದೊರೆತಿರುವ ಒಂದನೇ ಹರಿಹರನ ನಾಣ್ಯದಲ್ಲಿ ಮುಂಭಾಗದಲ್ಲಿ ಹನುಮಾನ್‌ನ ಚಿತ್ರ ಮತ್ತು ಹಿಂಭಾಗದಲ್ಲಿ ತೆಲುಗು–ಕನ್ನಡ ಲಿಪಿಯನ್ನು ಕಾಣುತ್ತೇವೆ. ಆದರೆ ಹೊಯ್ಸಳರ ನಾಣ್ಯಗಳಲ್ಲಿ ಹನುಮಾನ್‌ನ ಚಿತ್ರವಾಗಲೀ ಅಥವಾ ತೆಲುಗು–ಕನ್ನಡ ಅಕ್ಷರಗಳಾಗಲೀ ಕಾಣಬರುವುದಿಲ್ಲ. ಬದಲಿಗೆ ಮುಂಭಾಗದಲ್ಲಿ ದುರ್ಗೆಯು ಸಿಂಹದ ಮೇಲೆ ಕುಳಿತ್ತಿದ್ದರೆ, ಹಿಂಭಾಗದಲ್ಲಿ ಕನ್ನಡ ಅಲೇಖವನ್ನು ಕಾಣುತ್ತೇವೆ. ಆದರೆ ಒಂದನೇ ಹರಿಹರನು ತನ್ನ ನಾಣ್ಯಗಳಲ್ಲಿ ಹೊಯ್ಸಳ ಸಂಪ್ರದಾಯವನ್ನು ಮುಂದುವರಿಸಿದ ಎನ್ನುವುದಕ್ಕೆ ಸಿಂಹದ ಮಾದರಿ ಮತ್ತು ಕನ್ನಡದ ಅಲೇಖಗಳು ಇರುವ ಈ ನಾಣ್ಯಗಳು ಹೆಚ್ಚು ಒತ್ತನ್ನು ನೀಡುತ್ತವೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಹಳೆಯ ಸಂಪ್ರದಾಯವನ್ನು ಬಿಟ್ಟು ಕೇವಲ ಹೊಸ ಪರಂಪರೆಯತ್ತ ಗಮನಹರಿಸಿದರೆ ಚಲಾವಣೆಯ ಸಂದರ್ಭಗಳಲ್ಲಿ ತೊಂದರೆ ಉಂಟಾಗುವ ಸಂಭವ ಇರುತ್ತದೆ. ಆದ್ದರಿಂದ, ಇತರ ರಾಜರುಗಳಂತೆ ವಿಜಯನಗರದ ರಾಜರುಗಳು ಸಹ ಹೊಯ್ಸಳರ ನಾಣ್ಯದ ಸಂಪ್ರದಾಯವನ್ನು ಮುಂದುವರಿಸಿದರು. ಜೊತೆಗೆ ಹೊಸ ಹೊಸ ನಾಣ್ಯಗಳನ್ನು ಸಹ ಹೊರತಂದರು ಎಂದು ಹೇಳಬಹುದಾಗಿದೆ.

ಮೇಲಿನ ಐದು ನಾಣ್ಯಗಳಲ್ಲಿ ಮೂರು ಸಿಂಹದ ಚಿತ್ರವಿರುವ ನಾಣ್ಯಗಳಾಗಿದ್ದರೆ ಉಳಿದ ಎರಡು ನಂದಿಯ ಚಿತ್ರವಿರುವ ನಾಣ್ಯಗಳಾಗಿವೆ. ಐದೂ ನಾಣ್ಯಗಳು ಬೇರೆ ಬೇರೆ ಡೈಗಳಿಂದ ಅಥವಾ ವಿವಿಧ ಟಂಕಸಾಲೆಗಳಿಂದ ತಯಾರಾದ ನಾಣ್ಯಗಳಿರಬಹುದು. ವಿಜಯನಗರ ಕಾಲದಲ್ಲಿ ಬಾರಕೂರು, ಮಂಗಳೂರು, ಗಂಡೀಕೋಟೆ, ಪೆನುಗೊಂಡ, ತಿರುಪತಿ, ಗುತ್ತಿ, ಆದೋನಿ, ತಾಡಪತ್ರಿ, ದೇವನೂರು, ನೆಲ್ಲೂರು ಮುಂತಾದ ಸ್ಥಳಗಳಲ್ಲಿ ಪ್ರಮುಖ ಟಂಕಸಾಲೆಗಳು ಇದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ. ನಾಣ್ಯಗಳ ಮೇಲೆ ಟಂಕಸಾಲೆಗಳ ಹೆಸರುಗಳನ್ನು ನಮೂದಿಸದೆ ಇರುವುದರಿಂದ ನಿರ್ದಿಷ್ಟವಾಗಿ ಇಂತಹ ಟಂಕಸಾಲೆಯಿಂದ ತಯಾರಾದ ನಾಣ್ಯ ಎಂದು ಹೇಳುವುದು ತುಂಬಾ ಕಷ್ಟದ ಮಾತಾಗಿದೆ. ವಿಜಯನಗರದ ಕಾಲದಲ್ಲಿ ಸಿಂಹ ಮತ್ತು ನಂದಿ ಚಿತ್ರಗಳ ಜೊತೆಗೆ, ಆನೆ, ವರಾಹ (ಹಂದಿ) ಮುಂತಾದ ಪ್ರಾಣಿಗಳನ್ನು ನಾಣ್ಯಗಳ ಮುಂಭಾಗದಲ್ಲಿ ಕಾಣಬಹುದಾಗಿದೆ.

ಕೊನೆಯದಾಗಿ, ಈ ನಾಣ್ಯದ ತೂಕ 340 ಮಿಲಿಗ್ರಾಂ ಇದ್ದರೆ, ಅಗಲ 0.6 ಸೆ.ಮೀ. ಇದೆ. ಇದು ಕಡಿಮೆ ಮೌಲ್ಯದ ನಾಣ್ಯವಾಗಿದ್ದು, ಇದನ್ನು ಪಣಮ್ ಎಂದು ಕರೆಯಲಾಗುತ್ತಿದ್ದು, ಪಣಮ್ ನಾಣ್ಯವು ವರಹದ ಹತ್ತನೇ ಒಂದು ಭಾಗವಾಗಿದೆ (ಒಂದು ವರಹದ ತೂಕ 3.4 ಗ್ರಾಂ.). ವಿಜಯನಗರದ ಕಾಲದಲ್ಲಿ ಕಡಿಮೆ ಮೌಲ್ಯದ ಹತ್ತಾರು ನಾಣ್ಯಗಳು ಚಲಾವಣೆಯಲ್ಲಿದ್ದು, ಅವುಗಳಿಗೆ ವಿಶಿಷ್ಟವಾದ ಹೆಸರುಗಳು ಇವೆ. ಅವುಗಳನ್ನು ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

ದೊಡ್ಡ ವರಹ = ದೊಡ್ಡ ಗದ್ಯಾಣ = 2 ವರಹ =120 ಗ್ರೇನ್

1 ಗದ್ಯಾಣ = 1 ವರಹ = 1 ಪೊನ್ = 1 ಪಗೋಡ = 52 ಗ್ರೇನ್

1 ಪ್ರತಾಪ = 2 ಕಾಟಿ = ½ ವರಹ = 26 ಗ್ರೇನ್

1 ಕಾಟಿ = ¼ ವರಹ = 13 ಗ್ರೇನ್

1 ವರಹ = 10 ಪಣಂ = 5-6 ಗ್ರೇನ್

1 ಚಿನ್ನ = 1/8 ವರಹ = 6.5 ಗ್ರೇನ್

1 ಪಣಂ = 4 ಹಾಗ = 5-6 ಗ್ರೇನ್

1 ಹಾಗ = 2 ಬೇಳೆ = 1.5 ಗ್ರೇನ್

1 ಬೇಳೆ = 0.75 ಗ್ರೇನ್

ಈ ರೀತಿಯಲ್ಲಿ ಸಣ್ಣ ಮೌಲ್ಯಗಳುಳ್ಳ ನಾಣ್ಯಗಳು ಯಥೇಚ್ಛವಾಗಿದ್ದುದರಿಂದ ವಿಜಯನಗರದ ಕಾಲದಲ್ಲಿ ಸಣ್ಣ ಪ್ರಮಾಣದ ವಸ್ತುಗಳನ್ನು ಕೊಳ್ಳಲು ಹಾಗೂ ಸಣ್ಣ ಮೌಲ್ಯದ ತೆರಿಗೆಗಳನ್ನು ಪಾವತಿಸಲು ಅನುಕೂಲಕರವಾಗಿತ್ತು. ಒಟ್ಟಿನಲ್ಲಿ ಸಿಂಹ ಹಾಗೂ ನಂದಿ ಚಿತ್ರಗಳುಳ್ಳ ಒಂದನೇ ಹರಿಹರನ ನಾಣ್ಯಗಳು ಕರ್ನಾಟಕ ನಾಣ್ಯ ಸಂಪತ್ತಿಗೆ ಹೊಸ ಸೇರ್ಪಡೆಯಾಗಿವೆ.

## ಟಿಪ್ಪಣಿಗಳು

1. ಪಿ.ಬಿ. ದೇಸಾಯಿ, *ಎ ಹಿಸ್ಟರಿ ಆಫ್ ಕರ್ನಾಟಕ,* ಪುಟ 306.

2. ಎ.ವಿ. ನರಸಿಂಹಮೂರ್ತಿ, *ವಿಜಯನಗರದ ನಾಣ್ಯ ಸಂಪತ್ತು,* ಪುಟ 2.

3. ಆರ್.ಎಚ್. ಮೇಜರ್, *ಇಂಡಿಯ ಇನ್ ದಿ ಫಿಫ್ಟೀನ್ತ್ ಸೆಂಚುರಿ,* ಪುಟ 26.

4. ಕೆ. ಗಣೇಶ್ ಮತ್ತು ಗಿರಿಜಾಪತಿ, *ದಿ ಕಾಯಿನ್ಸ್ ಆಫ್ ದಿ ವಿಜಯನಗರ್ ಎಂಪೈರ್,* ಪುಟ 29; ಎ.ವಿ. ನರಸಿಂಹಮೂರ್ತಿ, *ವಿಜಯನಗರ ನಾಣ್ಯ ಸಂಪತ್ತು,* ಪುಟ 61-62.

5. ಚಿತ್ರದಲ್ಲಿ 1, 2, 3 ಮತ್ತು 5ನೇ ನಾಣ್ಯಗಳನ್ನು ನೀಡಿ ಈ ಲೇಖನಕ್ಕೆ ಸಹಕರಿಸಿದ ಶ್ರೀ. ಎಂ. ಮಾದೇಶ್, ನಿಮಿಶಾಂಬ ಜ್ಯೂವೆಲರ್ಸ್, ಕೊಳ್ಳೇಗಾಲ ಇವರಿಗೆ ಅಭಾರಿಯಾಗಿದ್ದೇನೆ.

6. ಈ ಲೇಖನವನ್ನು ಸಿದ್ಧಪಡಿಸುವ ವೇಳೆಗೆ ತಮ್ಮಲ್ಲಿದ್ದ ಒಂದು ಹೊಸ ಮಾದರಿಯ ನಾಣ್ಯವನ್ನು ನೀಡಿ ನನ್ನ ಲೇಖನವು ವಿಸ್ತಾರಗೊಳ್ಳಲು ಸಹಾಯ ಮಾಡಿದ (ಚಿತ್ರದಲ್ಲಿ 4ನೇ ನಾಣ್ಯ) ಶ್ರೀ. ಎಸ್. ಮಂಜುನಾಥ್, ನಾಣ್ಯ ಸಂಗ್ರಹಕಾರರು, ಬೆಂಗಳೂರು, ಇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

7. *ಸ್ಟಡೀಸ್ ಇನ್ ಸೌತ್ ಇಂಡಿಯನ್ ಕಾಯಿನ್ಸ್,* ಸಂಪುಟ 7, ಪುಟ 87.

# 16. ವಿಜಯನಗರ ನಾಣ್ಯಗಳಿಂದ ವ್ಯಕ್ತವಾಗುವ ಧಾರ್ಮಿಕ ಸ್ಥಿತಿ

– ಎನ್. ಹವಳಯ್ಯ

ಪ್ರಾಚೀನ ನಾಣ್ಯಗಳು ರಾಜಕೀಯ ಇತಿಹಾಸಕ್ಕೆ ಎಷ್ಟರಮಟ್ಟಿಗೆ ಸಹಾಯಕವಾಗಿವೆಯೋ ಅದಕ್ಕಿಂತ ಹೆಚ್ಚಿಗೆ ಆ ಕಾಲದ ಧಾರ್ಮಿಕ ಸ್ಥಿತಿಗತಿಗಳನ್ನು ತಿಳಿಯುವುದಕ್ಕೆ ಸಹಾಯಕವಾಗಿವೆ ಎನ್ನುವ ಅಂಶ ತಿಳಿದೇ ಇದೆ. ಆದರೆ ನಾಣ್ಯಗಳನ್ನು ಹಿನ್ನೆಲೆಯಾಗಿ ಇಟ್ಟುಕೊಂಡು ಒಂದು ರಾಜವಂಶದ ಇಲ್ಲವೆ ಒಂದು ರಾಜ್ಯದ ಧಾರ್ಮಿಕ ಇತಿಹಾಸವನ್ನು ರಚಿಸುವ ಕಾರ್ಯವನ್ನು ಸಮರ್ಪಕವಾಗಿ ಯಾರೂ ಮಾಡಿಲ್ಲವೆಂದರೆ ತಪ್ಪಾಗಲಾರದು. ಅಲ್ಲಲ್ಲಿ ಈ ವಿಷಯದಲ್ಲಿ ಟಿಪ್ಪಣಿಗಳನ್ನು ಕಾಣುತ್ತೇವೆ. ಆದರೆ ವ್ಯವಸ್ಥಿತ ಅಧ್ಯಯನ ಇನ್ನೂ ಆಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ನಾಣ್ಯಗಳು ಆ ಕಾಲದ ಧಾರ್ಮಿಕ ಸ್ಥಿತಿಗತಿಗಳನ್ನು ಯಾವ ರೀತಿ ಪ್ರತಿಬಿಂಬಿಸುತ್ತವೆ ಎಂದು ನೋಡುವುದೇ ಈ ಪ್ರಬಂಧದ ಮುಖ್ಯ ಉದ್ದೇಶ. ಇಲ್ಲಿ ನಾಣ್ಯಗಳ ಮೇಲಿರುವ ದೇವ ದೇವತೆಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ ಅದರ ಮೂಲಕ ಧಾರ್ಮಿಕ ಸ್ಥಿತಿಯನ್ನು ತಿಳಿಯುವುದಕ್ಕೆ ಪ್ರಯತ್ನಿಸಲಾಗಿದೆ.[1]

**1. ಹನುಮಾನ್:**

ಈ ದೇವತೆ ಮೊಟ್ಟ ಮೊದಲಿಗೆ ನಾಣ್ಯಗಳ ಮೇಲೆ ಮುದ್ರಿಸಲ್ಪಟ್ಟಿದ್ದು ಮೊದಲನೆ ಹರಿಹರನಿಂದ.[2] ಇವನ ತಾಮ್ರದ ನಾಣ್ಯಗಳ ಮೇಲೆ ಬಲಭಾಗಕ್ಕೆ ಮಂಡಿಗಳನ್ನೂರಿದ ಹನುಮನನ್ನು ಕಾಣಬಹುದು. ಎಡಗೈ ಎಡಮಂಡಿಯ ಮೇಲೆ ಊರಿದ್ದು ಬಲಗೈಯನ್ನು ಮೇಲೆ ಎತ್ತಲಾಗಿದೆ. ಬಾಲವು ಎತ್ತಲ್ಪಟ್ಟು ಮುಖವು ಮುನ್ನೋಡುತ್ತಿದೆ. ಒಂದನೇ ಬುಕ್ಕನ ನಾಣ್ಯಗಳ ಮೇಲೆ ಇಂತಹದೇ ಚಿತ್ರವನ್ನು ಕಾಣಬಹುದು.[3] ಎರಡನೇ ವೆಂಕಟಪತಿರಾಯನ ತಾಮ್ರದ ನಾಣ್ಯಗಳ ಮೇಲೆ ಎಡಗೈ ಮಂಡಿಗಳನ್ನೂರಿ ನಿಂತ ಹನುಮಾನ್‌ನ ಚಿತ್ರವನ್ನೂ ಕಾಣಬಹುದು.[4] ಬಲಗೈ ಮೇಲಕ್ಕೆ ಎತ್ತಲ್ಪಟ್ಟು ಬಾಲ ಕಮಾನಿನಂತೆ ಹಿಂದಕ್ಕೆ ಎತ್ತಲ್ಪಟ್ಟಿದೆ.

**2. ಶ್ರೀರಾಮ:**

ರಾಮ ಮತ್ತು ಸೀತೆಯರ ಕಥೆಗಳು ಬಹಳ ಜನಪ್ರಿಯವಾಗಿದ್ದು, ಕಲ್ಲಿನ ಮೇಲೆ (ಅನೇಕ) ದೊಡ್ಡ ಸಂಖ್ಯೆಯಲ್ಲಿ ಅವರ ಶಿಲ್ಪಗಳನ್ನು ಕೆತ್ತಿಸಿದ್ದರೂ, ನಾಣ್ಯಗಳ ಮೇಲಿನ ಅವರ ಚಿತ್ರಣವು ಅಷ್ಟಾಗಿ ಜನಪ್ರಿಯವಾಗಲಿಲ್ಲ. ರಾಮ ಮತ್ತು ಸೀತೆಯನ್ನು ಹೊಂದಿರುವ ಒಂದು ನಿರ್ದಿಷ್ಟ ನಾಣ್ಯವನ್ನು ಹೊರಡಿಸಿದವನು ವಿಜಯನಗರದ ಅರಸನಾದ ಮೊದಲನೆಯ ತಿರುಮಲರಾಯ.[5] ಅವನು ತನ್ನ ರಾಜಧಾನಿಯನ್ನು ಪೆನುಗೊಂಡಕ್ಕೆ ಬದಲಾಯಿಸಿ ಶ್ರೀರಾಮನ ನಾಣ್ಯಗಳ ಸಂಪ್ರದಾಯವನ್ನು ಪ್ರಾರಂಭಿಸಿದನು. ಅವನ ಸುವರ್ಣ ವರಹಗಳ ಮೇಲೆ ಕುಳಿತ ರಾಮ ಮತ್ತು ಸೀತೆ, ಅವರ ಹಿಂದೆ ಭಕ್ತಿ ಭಾವದಲ್ಲಿ, ಬಲ ಭುಜದ ಮೇಲೆ ಬಿಲ್ಲನ್ನು ಹಿಡಿದು ನಿಂತಿರುವ ಲಕ್ಷ್ಮಣನನ್ನು ಕಾಣಬಹುದು. ಶ್ರೀರಾಮನು ಎತ್ತರವಾದ ಕಿರೀಟವನ್ನು ತೊಟ್ಟಿದ್ದಾನೆ ಮತ್ತು ಅವನ ಬಲಗೈ ಅಭಯ ಮುದ್ರೆಯಲ್ಲಿದೆ. ಮೊದಲನೆ ತಿರುಮಲ ರಾಯನನ್ನು "ರಾಮ ಟಂಕ ವರಹ"ಗಳ ಉದ್ಘಾಟಕನೆಂದು ಪರಿಗಣಿಸಬಹುದು. ಇವು ಮಧ್ಯಯುಗೀನ ಕಾಲದಲ್ಲಿ ಬಹಳ ಜನಪ್ರಿಯವಾದವು.

**3. ಶಿವ:**

ನಾಣ್ಯಗಳ ಮೇಲೆ ಶಿವನನ್ನು ಚಿತ್ರಿಸಿದ ಮೊಟ್ಟ ಮೊದಲ ರಾಜ ಎರಡನೇ ಹರಿಹರ.[6] ಇವನು ಸ್ವತಃ ಶೈವ ಮತಸ್ಥನಾದರೂ ವೈಷ್ಣವ ಮತದ ಪ್ರೋತ್ಸಾಹಕನಾಗಿದ್ದನು. ಇವನ ಅರ್ಧ ವರಹ ಚಿನ್ನದ ನಾಣ್ಯಗಳ ಮುಮ್ಮುಖದಲ್ಲಿ ಎತ್ತರವಾದ ಪೀಠದ ಮೇಲೆ ಕುಳಿತಿರುವ ಶಿವ ಮತ್ತು ಪಾರ್ವತಿಯನ್ನು ಕಾಣಬಹುದು. ಇವರೀರ್ವರಿಗೂ ಕಿರೀಟವಿದೆ. ಶಿವನನ್ನು ಅನುಕ್ರಮವಾಗಿ ಎಡ ಮತ್ತು ಬಲ ಕೈಗಳಲ್ಲಿ ತ್ರಿಶೂಲ ಮತ್ತು ಡಮರುವನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಶಿವನ ತಲೆಯ ಮೇಲೆ ಸೂರ್ಯ ಮತ್ತು ಚಂದ್ರರನ್ನು ಕಾಣಬಹುದು. ಈ ಅರಸನ ಇದೇ ರೀತಿಯ ಇನ್ನೊಂದು ನಾಣ್ಯದ ಮೇಲೆ ಶಿವನು ಡಮರುವಿನ ಬದಲು ಪರಶುವನ್ನು ತನ್ನ ಕೈಯ್ಯಲ್ಲಿ ಹಿಡಿದಿದ್ದಾನೆ.

ಒಂದನೇ ದೇವರಾಯನು[7] ಸಹ ಶಿವ ಪಾರ್ವತಿಯರನ್ನು ತನ್ನ ನಾಣ್ಯಗಳ ಮೇಲೆ ಮುದ್ರಿಸಿದ್ದಾನೆ. ಇವನ ಪೂರ್ಣ ವರಹ ನಾಣ್ಯಗಳಲ್ಲಿ ಎರಡು ದೇವತೆಗಳಿವೆ. ಮುಮ್ಮುಖದಲ್ಲಿ ಶಿವ ಪಾರ್ವತಿಯರು ಎತ್ತರವಾದ ಆಸನದಲ್ಲಿ ಕುಳಿತಿದ್ದಾರೆ. ಇಬ್ಬರು ಕಿರೀಟ ಧರಿಸಿದ್ದು, ಆಭರಣ ಭೂಷಿತರಾಗಿದ್ದಾರೆ. ಶಿವನ ನಾಲ್ಕು ಕೈಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಎಡಕ್ಕೆ ಒಂದು ಕೈ ತ್ರಿಶೂಲವನ್ನು ಹಿಡಿದಿದ್ದು, ಇನ್ನೊಂದು ಕೈ ಪಾರ್ವತಿಯನ್ನು ಬಳಸಿದೆ. ಬಲಕ್ಕೆ ಒಂದು ಕೈ ಅಭಯ ಮುದ್ರೆಯನ್ನು ಹಾಗೂ ಇನ್ನೊಂದು ಕೈ ಡಮರುವನ್ನು ಹಿಡಿದಿದೆ. ಸೂರ್ಯ ಮತ್ತು ಚಂದ್ರರು ಶಿವನ ತಲೆಯ ಬಳಿ ಇದ್ದಾರೆ. ಇವನ ಮತ್ತೊಂದು ಮಾದರಿಯ ಚಿನ್ನದ ವರಹದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಶಿವನು ತನ್ನ ಕೈಯ್ಯಲ್ಲಿ ಡಮರುವಿನ ಬದಲು ಪರಶುವನ್ನು ಮತ್ತು ಒಂದು ಮೃಗ ಅಥವಾ ಜಿಂಕೆಯನ್ನು ತನ್ನ ಎಡಗೈಯ್ಯಲ್ಲಿ ಹಿಡಿದಿದ್ದಾನೆ. ಎರಡನೇ ದೇವರಾಯನು[8] ಹೆಚ್ಚು ಸಂಖ್ಯೆಯಲ್ಲಿ ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಹೊರಡಿಸಿದ್ದಾನೆಂಬುದು ಅಬ್ದುರ್ ರಝಾಕ್‌ನ ಬರವಣಿಗೆಯಿಂದ

ಸ್ಪಷ್ಟವಾಗುತ್ತದೆ. ಆದರೆ ಅವನ ತಾಮ್ರದ ನಾಣ್ಯ ಮಾತ್ರ ಶಿವ ಮತ್ತು ಪಾರ್ವತಿಯ ಚಿತ್ರವನ್ನು ಹೊಂದಿದೆ. ಇದೊಂದು ಚಿಕ್ಕ ನಾಣ್ಯ. ಆದ್ದರಿಂದ ಇದು ಯಾವುದೇ ಆಭರಣವಿಲ್ಲದೆ ಶಿವ ಪಾರ್ವತಿ ಚಿತ್ರವನ್ನು ಹೊಂದಿವೆ ಮತ್ತು ಅವರ ಗುಣಲಕ್ಷಣವನ್ನು ಸಹ ಸರಿಯಾಗಿ ತೋರಿಸಲಾಗಿಲ್ಲ. ಕೃಷ್ಣದೇವರಾಯನ[9] ಚಿನ್ನದ ವರಹಗಳಲ್ಲೂ ಸಹ ಶಿವ ಪಾರ್ವತಿಯರನ್ನು ಕಾಣಬಹುದು. ಪಾರ್ವತಿಯನ್ನು ಎಡ ತೊಡೆಯ ಮೇಲೆ ಕೂರಿಸಿಕೊಂಡು ಕುಳಿತಿರುವ ಶಿವನ ಚಿತ್ರವಿದೆ. ಶಿವನು ಬಲಗೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡು, ಇನ್ನೊಂದು ಕೈಯಿಂದ ಪಾರ್ವತಿಯನ್ನು ಬಳಸಿದ್ದು, ಇನ್ನಿತರ ವಿವರಗಳು ಸ್ಪಷ್ಟವಾಗಿಲ್ಲ. ಸದಾಶಿವರಾಯನು[10] ಇದೇ ರೀತಿಯ ನಾಣ್ಯಗಳ ಬಳಕೆಯನ್ನು ಮುಂದುವರೆಸಿದನು. ಸುಮಾರು 60 ಗ್ರೇನ್ ತೂಕದ ಇವನ ಚಿನ್ನದ ವರಹ ನಾಣ್ಯಗಳಲ್ಲಿ ಅಲಂಕರಿಸಿದ ಪೀಠದ ಮೇಲೆ ಶಿವ ಮತ್ತು ಪಾರ್ವತಿಯರು ಕುಳಿತಿದ್ದಾರೆ. ಇವರ ಕಿರೀಟಗಳು, ಡಮರು ಮತ್ತು ಪರಶು, ಸ್ಪಷ್ಟವಾಗಿ ಕಂಡುಬರುತ್ತದೆ. ಶಿವ ಪಾರ್ವತಿಯರ ಈ ಚಿತ್ರವು ಎಷ್ಟು ಜನಪ್ರಿಯವಾಯಿತೆಂದರೆ ವಿಜಯನಗರ ಸಾಮ್ರಾಜ್ಯದ ಅನಂತರದ ಅರಸರು ಕೂಡ, ಹೈದರಾಲಿಯನ್ನೂ ಸೇರಿದಂತೆ, ಇದನ್ನೇ ಅನುಸರಿಸಿದರು.

### 4. ವಿಷ್ಣು ಮತ್ತು ಲಕ್ಷ್ಮಿ:

ವಿಜಯನಗರದ ಅರಸನಾದ ಒಂದನೇ ದೇವರಾಯನ[11] ಚಿನ್ನದ ವರಹ ಮತ್ತು ಅರ್ಧ ವರಹಗಳ ಮೇಲೆ ವಿಷ್ಣು ಮತ್ತು ಲಕ್ಷ್ಮಿಯ ಚಿತ್ರವನ್ನು ಕಾಣಬಹುದು. ವರಹ ನಾಣ್ಯಗಳಲ್ಲಿ ಕಮಲದ ಮೇಲೆ ಕುಳಿತ ಲಕ್ಷ್ಮಿ ಮತ್ತು ವಿಷ್ಣುವಿನ ಚಿತ್ರವಿದೆ. ವಿಷ್ಣು ತನ್ನ ಎರಡೂ ಕೈಗಳಲ್ಲಿ ಮೂರು ಸಾಂಪ್ರದಾಯಿಕ ಜ್ವಾಲೆಗಳಿರುವ ಸುದರ್ಶನ ಚಕ್ರ ಮತ್ತು ಒಂದು ಶಂಖವನ್ನು ಹಿಡಿದಿದ್ದಾನೆ. ಎರಡನೇ ಹರಿಹರನ ಚಿನ್ನದ ನಾಣ್ಯದ ಮೇಲೆ ಈ ಎರಡೂ ದೇವತೆಗಳನ್ನು ಇದೇ ರೀತಿಯಾಗಿ ಮುದ್ರಿಸಲಾಗಿದೆ. ಇದರ ಜೊತೆಗೆ ವಿಷ್ಣುವಿನ ಮತ್ತೊಂದು ಕೈ ಲಕ್ಷ್ಮಿಯನ್ನು ಬಳಸಿದ್ದು, ಉಳಿದ ಕೈಯನ್ನು ಅಭಯ ಮುದ್ರೆಯಲ್ಲಿ ತೋರಿಸಲಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಇದೇ ರೀತಿಯ ನಾಣ್ಯಗಳನ್ನು ಹೊರಡಿಸಿದ ಮುಂದಿನ ರಾಜ ಸದಾಶಿವರಾಯ.[12] ಇವನ ಚಿನ್ನದ ವರಹಗಳ ಮೇಲೆ ನಾವು ಲಕ್ಷ್ಮೀ ಮತ್ತು ವಿಷ್ಣು ಕಿರೀಟಧಾರಿಗಳಾಗಿ ಮತ್ತು ಇತರ ಆಭರಣಗಳನ್ನು ಧರಿಸಿ ಎತ್ತರದ ಪೀಠದ ಮೇಲೆ ಕುಳಿತಿರುವುದನ್ನು ಕಾಣುತ್ತೇವೆ. ವಿಷ್ಣು ತನ್ನ ಕೈಗಳಲ್ಲಿ ಶಂಖ ಮತ್ತು ಚಕ್ರಗಳನ್ನು ಹಿಡಿದಿದ್ದಾನೆ.

### 5. ಗರುಡ:

ಗರುಡ ವಿಶೇಷವಾಗಿ ವಿಜಯನಗರ ಅರಸರ ನಾಣ್ಯಗಳಲ್ಲಿರುವ ಜನಪ್ರಿಯ ದೇವತೆ. ಮೊದಲನೆ ಹರಿಹರನು[13] ಮೊಟ್ಟ ಮೊದಲಿಗೆ ಈ ದೇವತೆಯನ್ನು ನಾಣ್ಯಗಳ ಮೇಲೆ ಚಿತ್ರಿಸಿದ್ದಾನೆ. ಅವನ ತಾಮ್ರದ ನಾಣ್ಯಗಳ ಮೇಲೆ ಬಲಭಾಗಕ್ಕೆ ನಿಂತಿರುವ, ಮುಖ ಹಿಂದಕ್ಕೆ ತಿರುಗಿಸಿ ನೋಡುತ್ತಿರುವ, ಉದ್ದ ಕೊಕ್ಕಿನ ಗರುಡನನ್ನು ಕಾಣುತ್ತೇವೆ. ಇದು ಎಷ್ಟು ಜನಪ್ರಿಯವಾಯಿತೆಂದರೆ ಹೆಚ್ಚಿನ ವಿಜಯನಗರದ ಅರಸರೆಲ್ಲರೂ ಇದನ್ನು ಅನುಕರಿಸಿದರು. ಗರುಡನನ್ನು ನಾಣ್ಯಗಳ ಮೇಲೆ ಮುದ್ರಿಸಿದ ಮತ್ತೊಬ್ಬ ಅರಸ ಕೃಷ್ಣದೇವರಾಯ.[14] ಇವನ ತಾಮ್ರದ ನಾಣ್ಯಗಳ ಮುಮ್ಮುಖದ ಮೇಲೆ ಚುಕ್ಕಿಗಳ ವೃತ್ತದ ಒಳಗೆ ಗರುಡನನ್ನು ಕಾಣಬಹುದು. ಇವನು ಎತ್ತರವಾದ ಕಿರೀಟವನ್ನು ಧರಿಸಿ ಭಕ್ತಿಪೂರ್ವಕವಾದ ಭಂಗಿಯಲ್ಲಿ ಕೈಗಳನ್ನು ಜೋಡಿಸಿದ್ದಾನೆ. ಇವನು ತನ್ನ ಎಡಮಂಡಿಯೂರಿ ವೀರಾಸನ ಭಂಗಿಯಲ್ಲಿದ್ದಾನೆ. ಇವನ ರೆಕ್ಕೆಗಳು ಸ್ಪಷ್ಟವಾಗಿವೆ. ನಾಣ್ಯದ ಮೇಲೆ ಗರುಡನ ತಲೆಯ ಭಾಗದಲ್ಲಿ ಶಂಖ ಮತ್ತು ಚಕ್ರ ಕಂಡುಬರುತ್ತವೆ. ಸದಾಶಿವರಾಯನು[15] ಇದೇ ರೀತಿಯ ನಾಣ್ಯಗಳನ್ನು ಹೊರಡಿಸಿದನು. ವೆಂಕಟಪತಿರಾಯನ[16] ನಾಣ್ಯಗಳ ಮೇಲೆ ಕಿರೀಟವಿಲ್ಲದ ಮಂಡಿಯೂರಿ ನಿಂತ ಗರುಡನನ್ನು ಕಾಣಬಹುದು. ಅವನ ಎಡ ಭಾಗಕ್ಕೆ ಒರೆಯೊಳಗಿರುವ ಖಡ್ಗವನ್ನು ಕಾಣಬಹುದು. ಇವನ ನಾಣ್ಯಗಳಲ್ಲಿ ಚಿತ್ರಿತವಾಗಿರುವ ಗರುಡ ಅನೇಕ ವ್ಯತ್ಯಾಸಗಳಿಂದ ಕೂಡಿದೆ.

### 6. ವೆಂಕಟೇಶ್ವರ:

ತಿರುಪತಿಯ ವೆಂಕಟೇಶ್ವರ ಹಿಂದೆ ಮತ್ತು ಈಗಲೂ ಸಹಾ ದಕ್ಷಿಣ ಭಾರತದಲ್ಲೇ ಅಲ್ಲದೆ ದೇಶಾದ್ಯಂತ ಒಬ್ಬ ಜನಪ್ರಿಯ ದೇವರಾಗಿದ್ದಾನೆ. ಈ ದೇವರು ಅನೇಕ ರಾಜರನ್ನು ತನ್ನ ಭಕ್ತರನ್ನಾಗಿ ಹೊಂದಿದ್ದನು. ಇವರಲ್ಲಿ ವಿಜಯನಗರದ ಅರಸರು ಪ್ರಮುಖರು. ವಿಜಯನಗರದ ಅರಸರು ತಿರುಪತಿಯ ಈ ದೇವಾಲಯಕ್ಕೆ ಅತ್ಯಂತ ಉದಾರವಾದ ದೇಣಿಗೆಯನ್ನು ಕೊಡುತ್ತಿದ್ದರು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ. ವೆಂಕಟೇಶ್ವರನಿಗೆ ಗೌರವ ತೋರಿಸುವ ಭಂಗಿಯಲ್ಲಿರುವ ಕೃಷ್ಣದೇವರಾಯನ[17] ಮೂರ್ತಿ ಶಿಲ್ಪವನ್ನು ತಿರುಪತಿಯ ದೇವಸ್ಥಾನದಲ್ಲಿ ಇಡಲಾಗಿದೆ. ಮುಮ್ಮುಖದಲ್ಲಿ ಈ ದೇವರ ಚಿತ್ರವಿರುವ ನಾಣ್ಯಗಳನ್ನು ಹೊರಡಿಸುವ ಪರಿಪಾಠವನ್ನು ಕೃಷ್ಣದೇವರಾಯನು ಪ್ರಾರಂಭಿಸಿದನು. ಈ ದೇವರ ಬಗ್ಗೆ ಕೃಷ್ಣದೇವರಾಯನಿಗೆ ವಿಶೇಷವಾದ ಪ್ರೀತಿಯಿತ್ತೆಂಬುದು ಜನಜನಿತವಾಗಿದೆ. ಒರಿಸ್ಸಾದ ಮೇಲಿನ ತನ್ನ ದಿಗ್ವಿಜಯದ ನಂತರ ವಿಶೇಷವಾಗಿ ಈ ದೇವರಿಗೆ ಕನಕಾಭಿಷೇಕವನ್ನು ಮಾಡಿಸಿದ್ದನು. ಈ ಉದ್ದೇಶಕ್ಕಾಗಿ ಈ ನಾಣ್ಯಗಳನ್ನು ಟಂಕಿಸಿದನು. ಈ ನಾಣ್ಯಗಳ ತೂಕ ವರಹದ ಎರಡರಷ್ಟಾಗಿದ್ದ 117 ಗ್ರೇನ್ ತೂಕವಿದ್ದು ಅವುಗಳು ವಿಶೇಷವಾಗಿ ಹೊರಡಿಸಿದ್ದ ನಾಣ್ಯಗಳಾಗಿದ್ದವೆಂಬುದನ್ನು ದೃಢಪಡಿಸುತ್ತದೆ. ಏಕೆಂದರೆ ಈ ದೇವರ ಚಿತ್ರವನ್ನು ಸ್ಪಷ್ಟವಾಗಿ ನಿರೂಪಿಸುವ ಸಲುವಾಗಿ ಈ ನಾಣ್ಯಗಳ ವ್ಯಾಸವು ಸಹಾ ದೊಡ್ಡದಾಗಿದೆ. ಈ ನಾಣ್ಯದ ಮುಮ್ಮುಖದಲ್ಲಿ ಕಮಲದ ಮೇಲೆ ಎತ್ತರವಾದ ಕಿರೀಟ ಧರಿಸಿ ನಿಂತಿರುವ ವೆಂಕಟೇಶ್ವರನ ಚಿತ್ರವಿದ್ದು, ಇವನಿಗೆ ನಾಲ್ಕು ಕೈಗಳಿದ್ದು ಬಲಗೈ ಚಕ್ರವನ್ನು ಹಿಡಿದಿದ್ದರೆ ಎಡಗೈ ಶಂಖವನ್ನು ಹಿಡಿದಿದೆ. ಬಲಗಡೆಯ ಮುಂದಿನ ಕೈ ಅಭಯ ಮುದ್ರೆಯಲ್ಲಿದೆ. ಈ ಚಿತ್ರದ ಮೇಲ್ಭಾಗದಲ್ಲಿ ಒಂದು ಅಲಂಕೃತವಾದ ಕಮಾನಿದ್ದು, ಅದರ ನಡುವೆ ಒಂದು

ಸಿಂಹದ ಮುಖವಿದೆ. ಹೀಗಾಗಿ ಇಂದಿಗೂ ಈ ಮೂರ್ತಿಯ ಅಲಂಕಾರವಾಗಲಿ, ಮುಖಭಾವದಲ್ಲಾಗಲಿ ಯಾವ ಹೆಚ್ಚಿನ ಬದಲಾವಣೆಯಾಗಿಲ್ಲ ಎಂಬುದು ತಿಳಿದು ಬರುತ್ತದೆ.

ಶ್ರೀರಂಗರಾಯನು[18] ಈ ಪದ್ಧತಿಯನ್ನು ಬದಲಾಯಿಸಿ 52 ಗ್ರೇನ್ ತೂಕದ ನಾಣ್ಯದ ಮುಮ್ಮುಖದಲ್ಲಿ ವೆಂಕಟೇಶ್ವರನಿರುವ ವರಹಗಳನ್ನು ಹೊರಡಿಸಿದನು. ಈ ನಾಣ್ಯಗಳ ಮೇಲೆ ಕಂಡುಬರುವ ದೇವತೆಯ ಚಿತ್ರಣವು ಕೃಷ್ಣದೇವರಾಯನ ನಾಣ್ಯಗಳ ಮೇಲಿನ ದೇವತೆಯ ಚಿತ್ರಣದಂತೆಯೇ ಇದೆ. ಆದರೆ ಕೈಗಳಲ್ಲಿ ಒಂದು ಕೈಯ ಸ್ಥಾನ ಭಿನ್ನವಾಗಿದೆ. ಒಂದು ಕೈ ಧ್ಯಾನಮುದ್ರೆಯಲ್ಲಿದ್ದರೆ ಇನ್ನೊಂದು ಕೈ ಅವನ ಸೊಂಟದ ಮೇಲಿದೆ. ದೇವತೆಯ ಇಕ್ಕೆಲಗಳಲ್ಲಿ ಅಲಂಕೃತವಾದ ಕಂಬಗಳಿದ್ದು, ಮೇಲಿನ ಕಮಾನಿಗೆ ಆಧಾರವಾಗಿವೆ. ಎರಡನೇ ವೆಂಕಟರಾಯನು ಸಹಾ ಇದೇ ರೀತಿಯ ನಾಣ್ಯಗಳನ್ನು ಹೊರಡಿಸಿದನು.[19] ಮೂರನೇ ವೆಂಕಟರಾಯನು ಈ ನಾಣ್ಯದ ನಮೂನೆಯನ್ನು ಬದಲಾಯಿಸಿದನು. ಇಲ್ಲಿ ಈ ದೇವರು ಎಡ ಮತ್ತು ಬಲದಲ್ಲಿ ಶ್ರೀ ದೇವಿ ಮತ್ತು ಭೂದೇವಿಯರೊಡನೆ ಇದ್ದಾನೆ. ಎತ್ತರವಾದ ಕಿರೀಟ, ಶಂಖ ಮತ್ತು ಚಕ್ರ ಸ್ಪಷ್ಟವಾಗಿ ಕಂಡು ಬರುತ್ತವೆ. ಇದೇ ರೀತಿಯ ನಾಣ್ಯಗಳನ್ನು ಹೊರಡಿಸಿದ ವಿಜಯನಗರದ ಕೊನೆಯ ಅರಸ ನಾಲ್ಕನೇ ಶ್ರೀರಂಗರಾಯ. ಗಂಡಿಕೋಟ ವರಹಗಳೆಂದು ಕರೆಯಲ್ಪಡುವ ಈ ನಾಣ್ಯಗಳ ಮುಮ್ಮುಖದಲ್ಲಿ, ಕೃಷ್ಣದೇವರಾಯನ ನಾಣ್ಯದ ಮೇಲಿನ ವೆಂಕಟೇಶ್ವರನನ್ನು ಕಾಣಬಹುದು. ಈ ನಾಣ್ಯಗಳ ಹಿಮ್ಮುಖದಲ್ಲಿ ಮೂರು ಸಾಲಿನ ನಾಗರಿ ಬರಹ "ಶ್ರೀ ವೆಂಕಟೇಶಾಯ ನಮಃ" ಇರುವುದು ಒಂದು ಮುಖ್ಯವಾದ ಅಂಶವಾಗಿದೆ.

**7. ಬ್ರಹ್ಮ ಮತ್ತು ಸರಸ್ವತಿ:**

ವಿಜಯನಗರದ ಅರಸನಾದ ಎರಡನೇ ಹರಿಹರನು[21] ಬ್ರಹ್ಮ ಮತ್ತು ಸರಸ್ವತಿ ದೇವತೆಗಳ ಚಿತ್ರವನ್ನು ಹೊಂದಿರುವ ಒಂದು ಅಪೂರ್ವ ನಾಣ್ಯವನ್ನು ಹೊರಡಿಸಿದ್ದನು. ಈ ಅರ್ಧ ವರಹದ ನಾಣ್ಯದ ಮೇಲೆ ಬ್ರಹ್ಮ ಮತ್ತು ಸರಸ್ವತಿ ಪದ್ಮಾಸನದಲ್ಲಿ ಕುಳಿತಿರುವ ಚಿತ್ರ ಕಂಡು ಬರುತ್ತದೆ. ಬ್ರಹ್ಮನ ಒಂದು ಕೈ ಅಭಯ ಮುದ್ರೆಯಲ್ಲಿದ್ದು ಇನ್ನಿತರ ಕೈಗಳು ಸೌಟು, ಕಳಶ ಮತ್ತು ಪುಸ್ತಕವನ್ನು ಹಿಡಿದಿವೆ. ಸರಸ್ವತಿಯು ಕೈಗಳಲ್ಲಿ ವೀಣೆಯನ್ನು ಹಿಡಿದಿದ್ದಾಳೆ.

**8. ಲಕ್ಷ್ಮಿ ಮತ್ತು ನರಸಿಂಹ:**

ಎರಡನೇ ಹರಿಹರನ[22] ನಾಣ್ಯಗಳ ಮೇಲೆ ಲಕ್ಷ್ಮಿ ಮತ್ತು ನರಸಿಂಹ ಎತ್ತರವಾದ ಪೀಠದ ಮೇಲೆ ಕುಳಿತಿರುವುದು ಕಂಡುಬರುತ್ತದೆ.

**9. ಕೃಷ್ಣ:**

ವಿಜಯನಗರ ಅರಸರಿಗೆ ಕೃಷ್ಣನ ಬಗ್ಗೆ ವಿಶೇಷವಾದ ಆಕರ್ಷಣೆ ಇತ್ತು. ಕೃಷ್ಣದೇವರಾಯನು[23] ಉದಯಗಿರಿಯ ಮೇಲಿನ ತನ್ನ ದಿಗ್ವಿಜಯದ ನಂತರ ಕೃಷ್ಣನ ವಿಗ್ರಹವನ್ನು ತಂದು ಹಂಪೆಯಲ್ಲಿ ಸುಮಾರು 1514-15ರಲ್ಲಿ ಈ ದೇವತೆಗಾಗಿ ಒಂದು ದೇವಸ್ಥಾನವನ್ನು ಕಟ್ಟಿಸಿದನು. ಈ ಘಟನೆಯ ನೆನಪಿಗಾಗಿ ಬಾಲಕೃಷ್ಣ ಮಾದರಿಯ ಚಿನ್ನದ ನಾಣ್ಯವನ್ನು ಹೊರಡಿಸಿದನು. ಈ ನಾಣ್ಯದ ಮುಮ್ಮುಖದಲ್ಲಿ ಈ ದೇವತೆಯ ಚಿತ್ರವಿದೆ. ಈ ದೇವತೆಯ ನಿರೂಪಣೆಯಲ್ಲಿ ಹಲವು ಬದಲಾವಣೆಗಳನ್ನು ಸಹ ಕಾಣಬಹುದು. ಈ ನಾಣ್ಯಗಳು ಬಹಳ ಜನಪ್ರಿಯವಾಗಿದ್ದವೆಂದು ಕಂಡು ಬರುತ್ತದೆ. ಏಕೆಂದರೆ ಈ ನಾಣ್ಯಗಳನ್ನು ಪೂರ್ಣ ವರಹ, ಅರ್ಧ ವರಹ ಮತ್ತು ಕಾಲು ವರಹಗಳಾಗಿ ಟಂಕಿಸಲಾಗುತ್ತಿತ್ತು. ಬಾಲಕೃಷ್ಣನು ಪೀಠದ ಮೇಲೆ ಸಂಪೂರ್ಣವಾಗಿ ಎಡ ಮಂಡಿಯನ್ನೂರಿಕೊಂಡು ಎಡಗಾಲನ್ನು ಸ್ವಲ್ಪ ಮಡಚಿ ಕೆಳಗಿಟ್ಟುಕೊಂಡಿರುವ ಚಿತ್ರವು ಈ ನಾಣ್ಯಗಳ ಮೇಲೆ ಕಂಡುಬರುತ್ತದೆ. ಬಲಗೈಯ್ಯಲ್ಲಿ ಒಂದು ಮುದ್ದೆ ಬೆಣ್ಣೆಯನ್ನು ಹಿಡಿದು ಇನ್ನೊಂದು ಕೈಯನ್ನು ಮಂಡಿಯ ಮೇಲೆ ಇಡಲಾಗಿದೆ. ಕಿವಿಯಾಭರಣ, ತೋಳಾಭರಣ, ಮಣಿಕಟ್ಟಿನಾಭರಣ ಮತ್ತು ಕಾಲಿಗೆ ಗೆಜ್ಜೆಯನ್ನು ತೊಟ್ಟಿದ್ದಾನೆ. ಎಡಗೈಯಲ್ಲಿ ಒಂದು ಶಂಖವಿದ್ದು ಬಲಬದಿಯಲ್ಲಿ ಒಂದು ಚಕ್ರವಿದೆ. ಇನ್ನೊಂದು ನಾಣ್ಯದಲ್ಲಿ ಬಾಲಕೃಷ್ಣನು ಬಲಮಂಡಿಯನ್ನು ಸಂಪೂರ್ಣವಾಗಿ ಮಡಚಿ ಕುಳಿತುಕೊಂಡಿರುವಂತೆ ಚಿತ್ರಿಸಲಾಗಿದೆ. ಇನ್ನೊಂದು ಮಾದಿರಿ ಸ್ವಲ್ಪ ವ್ಯತ್ಯಾಸವಾಗಿದೆ. ಬಾಲಕೃಷ್ಣನು ಬಲ ಮಂಡಿಯನ್ನು ಮಡಚಿ ಪೀಠದ ಮೇಲೆ ಇಟ್ಟಿದ್ದಾನೆ ಮತ್ತು ಇನ್ನೊಂದು ಕಾಲನ್ನು ಮೇಲಕ್ಕೆತ್ತಿ ತೋಳಿಗೆ ಆಸರೆಯಾಗಿರುವಂತೆ ಚಿತ್ರಿಸಲಾಗಿದೆ. ಇನ್ನೊಂದು ಮಾದರಿಯಲ್ಲಿ ಎರಡೂ ಮಂಡಿಗಳನ್ನು ಸ್ವಲ್ಪ ಮಡಚಿ ಕಾಲುಗಳನ್ನು ಪೀಠದ ಮೇಲೆ ಇರಿಸಿದಂತಿದೆ. ಬಾಲಕೃಷ್ಣನ ತಲೆಯ ಸುತ್ತ ಚುಕ್ಕೆಗಳ ಒಂದು ವೃತ್ತವಿದ್ದು ಎಡ ಮತ್ತು ಬಲ ಭಾಗದಲ್ಲಿ ಶಂಖ, ಚಕ್ರಗಳಿವೆ. ಇನ್ನೊಂದು ಮಾದರಿ ನಾಣ್ಯದಲ್ಲಿ ಬಾಲಕೃಷ್ಣನಿಗೆ ನವಿಲುಗರಿಗಳಿಂದ ಅಲಂಕೃತವಾದ ಒಂದು ಕಿರೀಟವಿದೆ. ಇನ್ನೊಂದು ನಾಣ್ಯದಲ್ಲಿ ಬಾಲಕೃಷ್ಣನು ತನ್ನ ಸಾಮಾನ್ಯ ಆಭರಣಗಳೊಂದಿಗೆ, ಭುಜದ ಆಭರಣಗಳೊಂದಿಗೆ ಮತ್ತು ಕಂಠಿ ಹಾರಗಳನ್ನು ಸಹಾ ಧರಿಸಿದ್ದಾನೆ. ತಲೆಯ ತುಂಬ ಗುಂಗುರು ಕೂದಲಿದ್ದು ಅದರ ಮೇಲೊಂದು ಬಳ್ಳಿ ಇದೆ.

ಈ ಮೇಲಿನ ಅಧ್ಯಯನದಿಂದ ವ್ಯಕ್ತವಾಗುವ ಸಂಗತಿಗಳನ್ನು ಈ ರೀತಿ ಗುರುತಿಸಬಹುದು.

1. ಬೇರೆ ಬೇರೆ ಆಕರಗಳಿಂದ ತಿಳಿದು ಬಂದಿರುವಂತೆ ವಿಜಯನಗರ ರಾಜರು ಅನ್ಯಮತ ಸಹಿಷ್ಣುಗಳಾಗಿದ್ದರು. ತಮ್ಮ ಸ್ವಂತ ಧರ್ಮ ಏನೇ ಇರಲಿ, ಅವರು ನಾಣ್ಯಗಳ ಮೇಲೆ ಶೈವ ಮತ್ತು ವೈಷ್ಣವ ದೇವ ದೇವತೆಗಳ ಚಿತ್ರಣಗಳನ್ನು ಹಾಗೂ ಚಿಹ್ನೆಗಳನ್ನು ಹಾಕಿಸುವುದಕ್ಕೆ ಹಿಜರಿಯಲಿಲ್ಲ.

2. ಆಗಿನ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಪ್ರಚಲಿತವಾಗಿದ್ದ ಸ್ಮಾರ್ತ, ವೈಷ್ಣವ ಹಾಗೂ ಶ್ರೀವೈಷ್ಣವ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬಂದು ಅವುಗಳ ಚಿಹ್ನೆಗಳನ್ನು ನಾಣ್ಯಗಳ ಮೇಲೆ ಹಾಕಿಸಿದರು.

3. ತಿರುಪತಿಯ ವೆಂಕಟೇಶ್ವರನಲ್ಲಿ ಈ ರಾಜರಿಗೆ ಬಹಳ ಭಕ್ತಿ ಇದ್ದುದರಿಂದ, ಈ ದೇವರಿಗೆ ಸಾಕಷ್ಟು ದಾನ ದತ್ತಿಗಳನ್ನು ಕೊಡುವುದು ಮಾತ್ರವಲ್ಲದೆ, ದೇವರ ಚಿತ್ರವಿರುವ ಅಥವಾ "ಶ್ರೀ ವೆಂಕಟೇಶಾಯ ನಮಃ" ಎನ್ನುವ ಬರಹವಿರುವ ನಾಣ್ಯಗಳನ್ನು ಟಂಕಿಸಿದರು.

4. ಈ ಕಾಲದಲ್ಲಿ ಲಕ್ಷ್ಮೀ ಮತ್ತು ಪಾರ್ವತಿಯರಿಗಾಗಿ ಪ್ರತ್ಯೇಕ ದೇವಾಲಯಗಳು ನಿರ್ಮಾಣಗೊಂಡುದು ತಿಳಿದ ವಿಷಯವೇ ಆಗಿದೆ. ಇದೇ ಪ್ರಾಮುಖ್ಯತೆಯನ್ನು ನಾಣ್ಯಗಳಲ್ಲಿಯೂ ಕಾಣುತ್ತೇವೆ. ಲಕ್ಷ್ಮೀ ಮತ್ತು ಪಾರ್ವತಿಯರನ್ನು ಅವರು ತಮ್ಮ ನಾಣ್ಯಗಳಲ್ಲಿ ಅಳವಡಿಸಿದರು.

5. ಈ ಎಲ್ಲ ನಾಣ್ಯಗಳು ಎಷ್ಟೊಂದು ಜನರ ಮೆಚ್ಚುಗೆ ಗಳಿಸಿದುವೆಂದರೆ ಇವು ವಿಜಯನಗರದ ಪತನಾನಂತರವೂ ಇತರ ಪಾಳೆಯಗಾರರ ವಂಶಗಳು ಇವುಗಳನ್ನು ಅನುಕರಿಸಿದವು.

6. ಒಟ್ಟಿನಲ್ಲಿ ಹಿಂದೂ ಸಾಮ್ರಾಜ್ಯವನ್ನು ಕಟ್ಟಬೇಕೆಂದು ಬಯಸಿ, ಅದನ್ನು ನಿರ್ಮಿಸಿದ ವಿಜಯನಗರದ ಅರಸರು ತಮ್ಮ ನಾಣ್ಯಗಳ ಮೂಲಕ ಹಿಂದೂ ಧರ್ಮಕ್ಕೆ ಪೂರ್ಣ ಪ್ರಾಮುಖ್ಯತೆ ಕೊಟ್ಟರು. ಇದರಿಂದಾಗಿ ದಕ್ಷಿಣ ಭಾರತದಲ್ಲೇ ಒಂದು ಹೊಸ ಧಾರ್ಮಿಕ ಪರಿಸ್ಥಿತಿಯುಂಟಾಯಿತು.

## ಟಿಪ್ಪಣಿಗಳು

1. A.V. Narasimha Murthy, 1991, *Coins and Currency System in Vijayanagar Empire*, Varanasi.
2. *ಅದೇ,* ಪು. 48.
3. *ಅದೇ,* ಪು. 52.
4. *ಅದೇ,* ಪು. 73.
5. *ಅದೇ,* ಪು. 69.
6. *ಅದೇ,* ಪು. 51.
7. *ಅದೇ,* ಪು. 54.
8. *ಅದೇ,* ಪು. 60.
9. *ಅದೇ,* ಪು. 65.
10. *ಅದೇ,* ಪು. 68.
11. *ಅದೇ,* ಪು. 53.
12. *ಅದೇ,* ಪು. 67.
13. *ಅದೇ,* ಪು. 49.
14. *ಅದೇ,* ಪು. 65.
15. *ಅದೇ,* ಪು. 68.
16. *ಅದೇ,* ಪು. 73.
17. *ಅದೇ,* ಪು. 63.
18. *ಅದೇ,* ಪು. 72.
19. *ಅದೇ,* ಪು. 74.
20. *ಅದೇ,* ಪು. 74.
21. *ಅದೇ,* ಪು. 51.
22. *ಅದೇ,* ಪು. 52.
23. *ಅದೇ,* ಪು. 63, 64.

# 17. ಶೌರ್ಯ–ಪರಾಕ್ರಮಗಳ ಪ್ರತೀಕವಾಗಿ ವಿಜಯನಗರ ಕಾಲದ ಬಿರುದಾವಳಿಗಳು

– ಎಸ್.ವೈ. ಸೋಮಶೇಖರ್

ಶೌರ್ಯ, ಪರಾಕ್ರಮ ಮತ್ತು ಸಾಹಸ ಪ್ರವೃತ್ತಿಗಳು ಮಾನವನ ಸಹಜ ಗುಣಗಳು. ಮಾನವನ ಸ್ವಭಾವಗಳಲ್ಲಿ ಇತರರಿಗಿಂತ ತಾನು ಭಿನ್ನವೆಂಬುದು, ಇತರರು ಮಾಡಲಾರದ ಕಾರ್ಯಗಳಲ್ಲಿ ತೊಡಗಿ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಿದ್ದುದು ಪದ್ಧತಿ. ಈ ಪ್ರವೃತ್ತಿಯು ರಾಜಮಹಾರಾಜರಿಂದ ಹಿಡಿದು ಸಾಮಾನ್ಯ ಯೋಧನವರೆಗೂ ಭಿನ್ನವಾದ ನೆಲೆಗಳಲ್ಲಿ ವ್ಯಕ್ತಗೊಳ್ಳುತ್ತಿದ್ದಿತು. ವಿಜಯನಗರ ಸಾಮ್ರಾಜ್ಯಾವಧಿಯ ಅಸಂಖ್ಯಾತ ಶಾಸನಗಳು, ವೀರಗಲ್ಲುಗಳು, ಸಾಹಿತ್ಯ ಮತ್ತಿತರ ಆಕರಗಳಲ್ಲಿ ಈ ಬಗೆಯ ಶೌರ್ಯ ಪರಾಕ್ರಮಗಳನ್ನು ಪ್ರತಿಬಿಂಬಿಸುವ ಹಲವು ಬಿರುದಾವಳಿಗಳು ಉಲ್ಲೇಖವಾಗಿವೆ. ಶಾಸನಗಳಲ್ಲಿ ರಾಜ ಅಥವಾ ದಾನ ನೀಡಿದ ವ್ಯಕ್ತಿಯ ಹೆಸರಿನೊಂದಿಗೆ ಅವನು ಗಳಿಸಿದ ಬಿರುದುಗಳನ್ನು ವಿಶೇಷವಾಗಿ ಹೆಸರಿಸಲಾಗುತ್ತಿದ್ದಿತು. ಈ ಬಿರುದುಗಳನ್ನು ಸಾಮಾನ್ಯವಾಗಿ ಅರಸರು, ಮಾಂಡಲಿಕರು ಹೊಂದಿರುತ್ತಿದ್ದರು. ಇವರಲ್ಲದೆ ಸಾಮಾನ್ಯ ಯೋಧರು ಹಾಗೂ ಯೋಧ ಮುಖಂಡರು ಕೂಡ ರಾಜ್ಯ ರಕ್ಷಣೆಯ ಸಮಯದಲ್ಲಿ ಕೈಗೊಂಡ ಕಾರ್ಯವೈಖರಿಗಳ ಹಿನ್ನೆಲೆಯಲ್ಲಿ ಅರಸರು ಬಿರುದುಗಳನ್ನು ನೀಡಿ ಗೌರವಿಸುತ್ತಿದ್ದುದು ವಾಡಿಕೆ.

ಬಿರುದಾವಳಿಗಳು ಸಾಮಾನ್ಯವಾಗಿ ಅರಸರು, ಮಾಂಡಲಿಕರು, ಮತ್ತಿತರ ಅಧಿಕಾರಿಗಳ ಗುಣವಿಶೇಷತೆಗಳನ್ನು ವ್ಯಕ್ತಿತ್ವ–ಸಾಧನಗಳನ್ನು ಪ್ರತಿನಿಧಿಸುತ್ತವೆ. ಅಲ್ಲದೆ ಆಯಾ ಅರಸುಮನೆತನದ ಹಕ್ಕು, ಪರಮಾಧಿಕಾರ, ಸ್ಥಾನಮಾನಗಳನ್ನು ಸಾರುವುದರ ಜೊತೆಗೆ ಅರಸರ ಕೀರ್ತಿ ಪ್ರತಿಷ್ಠೆಗಳನ್ನು ಎಲ್ಲೆಡೆ ಹರಡುತ್ತಿದ್ದವು. ಆ ಮೂಲಕ ಪ್ರಜೆಗಳಲ್ಲಿ ಅರಸರ ಬಗೆಗೆ ವಿಧೇಯತೆ, ನಿಷ್ಠೆ, ಗೌರವ ಹಾಗೂ ಅಭಿಮಾನಗಳನ್ನು ಮೂಡಿಸಿ ರಾಜ ಪ್ರಭುತ್ವವನ್ನು ಸ್ಥಾಪಿಸುವ ಉದ್ದೇಶವೂ ಇವುಗಳದಾಗಿತ್ತು.

**ಅರಸರ ಬಿರುದಾವಳಿಗಳು:**

ವಿಜಯನಗರದ ಅರಸರು ತಮ್ಮ ಹಿಂದಿನ ಅರಸು ಮನೆತನಗಳಂತೆಯೇ ರಾಜ್ಯಾಡಳಿತದಲ್ಲಿ ಮಹತ್ವದ ಪಾತ್ರವಹಿಸಿದ್ದು, ತಮ್ಮ ಶೌರ್ಯ, ಪರಾಕ್ರಮಗಳಿಂದ ಅನೇಕ ಸಮಕಾಲೀನ ಅರಸರನ್ನು ಹತ್ತಿಕ್ಕಿ, ಸಾಮ್ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡುವಲ್ಲಿ ಯಶಸ್ವಿಯಾಗಿದ್ದರು. ಈ ಯಶಸ್ಸುಗಳನ್ನು ಅವರು ಧರಿಸಿದ ಬಿರುದುಗಳಲ್ಲಿ ಕಾಣಬಹುದು. ಈ ಬಿರುದುಗಳು ಆಯಾ ರಾಜರ ವ್ಯಕ್ತಿತ್ವಗಳನ್ನು ಪ್ರತಿಬಿಂಬಿಸುವುದರ ಜೊತೆಗೆ ಒಂದೊಂದು ಕೂಡ ಮಹತ್ವದ ಸಂಗತಿ ಅಥವಾ ಘಟನೆಗಳನ್ನು ಒಳಗೊಂಡಿವೆ. ವಿಜಯನಗರದ ಅರಸರು ಹೊಂದಿದ್ದ ಬಿರುದುಗಳಲ್ಲಿ ಸಾಮಾನ್ಯವಾಗಿ ಆರಂಭದ ಅರಸರು ಗಳಿಸಿದವುಗಳನ್ನೇ ನಂತರದವರೂ ಧರಿಸಿರುವುದನ್ನು ಕಾಣಬಹುದು. ಈ ಪದ್ಧತಿ ಪ್ರಾಚೀನ ಕಾಲದಿಂದಲೂ ಮುಂದುವರೆದುಕೊಂಡು ಬಂದಿದೆ. ಅವುಗಳ ಜೊತೆಗೆ ಪ್ರತಿಯೊಬ್ಬ ಅರಸನೂ ತನ್ನ ಅವಧಿಯ ಕಾರ್ಯ ಚಟುವಟಿಕೆಗಳಿಂದ ಹೊಸ ಹೊಸ ಬಿರುದುಗಳನ್ನು ಸೇರಿಸುತ್ತಾ ಹೋಗಿದ್ದಾನೆ.

ವಿಜಯನಗರ ಸಾಮ್ರಾಜ್ಯ ಸ್ಥಾಪಕನೂ, ಉತ್ತಮ ಯೋಧನೂ ಆದ ಒಂದನೆಯ ಹರಿಹರನು ಸಾಮ್ರಾಜ್ಯ ಕಟ್ಟುವಲ್ಲಿ ಶ್ರಮವಹಿಸಿರುವುದಂತೂ ನಿಜ. ಹರಿಹರನು ಕ್ರಿ.ಶ. 1336ರಿಂದ 56ರವರೆಗೆ ಆಳ್ವಿಕೆ ನಡೆಸಿದ್ದು, ಈ ಅವಧಿಯಲ್ಲಿ ವಿವಿಧ ಪ್ರದೇಶ ಹಾಗೂ ರಾಜ್ಯಗಳೊಂದಿಗೆ ಹೋರಾಡಿ ಸಾಮ್ರಾಜ್ಯವನ್ನು ವಿಸ್ತರಿಸಿದನು. ಹೊಯ್ಸಳರ ಅವಧಿಯಲ್ಲಿ ಮಹಾಮಂಡಲೇಶ್ವರನಾಗಿದ್ದ ಹರಿಹರನು ಮೂರನೆಯ ಬಲ್ಲಾಳನ ಅಂತಿಮ ಕಾಲದ ಹೊತ್ತಿಗೆ ಸ್ವತಂತ್ರವಾಗಿ ಆಳ್ವಿಕೆ ನಡೆಸಿದನು. ಅವನು ಸ್ವತಂತ್ರನಾದ ಮೇಲೂ "ಮಹಾಮಂಡಲೇಶ್ವರ"ನೆಂದೇ ಕರೆದುಕೊಂಡಿದ್ದಾನೆ.[1] ಈ ಮಹಾಮಂಡಲೇಶ್ವರನೆಂಬುದು ಪದವಿಯೂ ಹೌದು, ಬಿರುದೂ ಹೌದು. ಇದನ್ನು ಸದಾಶಿವರಾಯನವರೆಗೂ ಧರಿಸಿದ್ದುದನ್ನು ಶಾಸನಗಳಲ್ಲಿ ಕಾಣಬಹುದು. ಮಹಾಮಂಡಲೇಶ್ವರನಾಗಿದ್ದ ಹರಿಹರ ಸ್ವತಂತ್ರನಾಗಿ ಸಾಮ್ರಾಜ್ಯ ವಿಸ್ತರಿಸಿದ ವಿವರಗಳನ್ನು ಅವನ ಬಿರುದುಗಳಿಂದ ತಿಳಿದುಕೊಳ್ಳಬಹುದು. ಹರಿಹರನು ಹೊಂದಿದ್ದ ಬಿರುದುಗಳೆಂದರೆ "ಪೂರ್ವ ಪಶ್ಚಿಮ ಸಮುದ್ರಾಧಿಪತಿ", "ಭಾಷೆಗೆ ತಪ್ಪುವ ರಾಯರ ಗಂಡ", "ಅರಿರಾಯ ವಿಭಾಡ"ಗಳಲ್ಲದೆ ಮಹಾರಾಜಾಧಿರಾಜ, ರಾಜಪರಮೇಶ್ವರ, ವೀರಪ್ರತಾಪ ಮತ್ತು ಮಹಾರಾಯನೆನ್ನುವ ರಾಜತ್ವದ ಬಿರುದುಗಳೂ ಸೇರಿವೆ.[2] 'ಪೂರ್ವ ಪಶ್ಚಿಮ ಸಮುದ್ರಾಧಿಪತಿ'ಯು ಕರಾವಳಿ ಪ್ರದೇಶಗಳಾದ ಮಲಬಾರ ಮತ್ತು ಕೋರಮಂಡಲಗಳ ಮೇಲೆ ಹಿಡಿತ ಸಾಧಿಸಿದುದರ ಪ್ರತೀಕವಾಗಿದೆ. ಅಂತೆಯೇ ಭಾಷೆಗೆ 'ತಪ್ಪುವ ರಾಯರ ಗಂಡ'ನೆಂಬುದು ಸಮಕಾಲೀನ ಅರಸರು ಸಾಮಂತರನ್ನು ಹತ್ತಿಕ್ಕಿ ಸಾಮ್ರಾಜ್ಯ ವಿಸ್ತಾರಗೊಳಿಸಿದುದನ್ನು ದೃಢಪಡಿಸುವುದು. ಈ ಮೇಲಿನ ಅಂಶಗಳು ಹರಿಹರನಿಗೆ ಸಂಬಂಧಿಸಿದ್ದರೆ ಇವನ ನಂತರ ಬಂದ ಒಂದನೆಯ ಬುಕ್ಕರಾಯನು ಹರಿಹರನಿಗಿಂತ ಪ್ರಬಲ ಅರಸನಾಗಿದ್ದುದು ಅವನ ಬಿರುದುಗಳಿಂದ ಗೊತ್ತಾಗುತ್ತದೆ. ಬುಕ್ಕನು ತನ್ನ ಅಣ್ಣನ ಆಳ್ವಿಕೆಯಲ್ಲಿ ಪ್ರಾಂತ್ಯಾಧಿಕಾರಿಯಾಗಿ ಸ್ವತಃ ಯುದ್ಧಗಳಲ್ಲಿ ಭಾಗವಹಿಸಿದ್ದು, ಆಡಳಿತದಲ್ಲಿ ನೈಪುಣ್ಯತೆ ಪಡೆದಿದ್ದನು. ಇವನು ಈ ಹಿಂದೆ ತನ್ನ ಅಣ್ಣ ಧರಿಸಿದ್ದ "ಪೂರ್ವ ಪಶ್ಚಿಮ ಸಮುದ್ರಾಧಿಪತಿ", "ಭಾಷೆಗೆ ತಪ್ಪುವ ರಾಯರ ಗಂಡ", "ಅರಿರಾಯ ವಿಭಾಡ"ಗಳಲ್ಲದೆ ತನ್ನ ಪರಾಕ್ರಮದಿಂದ ಹೊಸ ಬಿರುದುಗಳನ್ನು ಸೇರಿಸಿಕೊಂಡಿದ್ದಾನೆ. ಅವುಗಳೆಂದರೆ "ಹಿಂದೂರಾಯಸುರತ್ರಾಣ",[3] "ಕರ್ನಾಟಕ ಕ್ಷಿತಿನಾಥ",[4] "ವೈದಿಕಮಾರ್ಗ ಪ್ರವರ್ತಕ",[5] "ಹೊನ್ನ ಕೊಟ್ಟು

ಕುದುರೆಯ ಕೊಂಬ ಮಾಂಡಲಿಕರ ಗಂಡ",[6] "ಚತುಸಮುದ್ರಾಧಿಪತಿ"[7]ಗಳು ಮುಖ್ಯವಾಗಿವೆ. ಇವುಗಳಲ್ಲಿ ಹಿಂದೂರಾಯಸುರತ್ರಾಣವು ಹಿಂದೂ ಧರ್ಮದ ರಕ್ಷಕನೆಂಬುದನ್ನು ಕುರಿತದ್ದಾದರೆ, ಕರ್ನಾಟಕ ಕ್ಷಿತಿನಾಥವು ಮಧ್ಯಯುಗದಲ್ಲಿ ಕರ್ನಾಟಕ ಪ್ರದೇಶವನ್ನು ಉಲ್ಲೇಖಿಸುವುದಲ್ಲದೆ, ಅದರ ಭೂಭಾಗದ ಒಡೆಯನಾಗಿದ್ದುದು ಸ್ಪಷ್ಟವಾಗುತ್ತದೆ. ಸಾಯಣ ಮತ್ತು ಮಾಧವರ ನೇತೃತ್ವದಲ್ಲಿ ವೇದಗಳಿಗೆ ಭಾಷ್ಯವನ್ನು ಬರೆಯಿಸಿದ ಕಾರಣ ಬುಕ್ಕನು ವೇದಮಾರ್ಗ ಪ್ರವರ್ತಕನಾಗಿದ್ದಾನೆ. ಇದು ಅವನು ಸಾಹಿತ್ಯಿಕ ಚಟುವಟಿಗೆಗಳಿಗೆ ನೀಡಿದ ಪ್ರೋತ್ಸಾಹದ ಪ್ರತೀಕ. ಹೊನ್ನ ಕೊಟ್ಟು ಕುದುರೆಯ ಕೊಂಬ ಮಾಂಡಲಿಕರ ಗಂಡನೆಂಬ ಶೌರ್ಯಯುತ ಬಿರುದಿನಿಂದ ಬುಕ್ಕರಾಯನು ಎಷ್ಟೊಂದು ಪ್ರಬಲ ಅರಸನಾಗಿದ್ದನೆಂಬುದರ ಅರಿವಾಗುತ್ತದೆ. ಇದರಲ್ಲಿ ಹೊನ್ನು ಅಂದಿನ ನಾಣ್ಯವಾದರೆ, ಈ ಹೊನ್ನನ್ನು ಅರಬ್ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ಕುದುರೆಗಳಿಗೆ ಪ್ರತಿಯಾಗಿ ನೀಡುತ್ತಿದ್ದರು. ಇಂತಹ ಕುದುರೆಗಳನ್ನು ಕೊಂಡು ಆಳ್ವಿಕೆ ನಡೆಸುತ್ತಿದ್ದ ಅನೇಕ ಮಾಂಡಲಿಕರನ್ನು ಬುಕ್ಕರಾಯನು ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದನೆಂಬುದು ದೃಢವಾಗುತ್ತದೆ. ಅಲ್ಲದೆ ಕುದುರೆಗಳನ್ನು ಒಳಗೊಂಡ ಅಶ್ವದಳವು ವಿಜಯನಗರದ ಸೈನ್ಯದ ಪ್ರಮುಖ ಅಂಗಗಳಲ್ಲಿ ಒಂದಾಗಿದ್ದುದನ್ನು ಕಾಣಬಹುದು. ಹರಿಹರನು ಪೂರ್ವ ಪಶ್ಚಿಮ ಸಮುದ್ರಾಧಿಪತಿಯಾಗಿದ್ದರೆ ಬುಕ್ಕರಾಯನು ಚತುಸಮುದ್ರಾಧಿಪತಿಯೆಂದು ಕರೆದುಕೊಂಡಿದ್ದಾನೆ.

ಬುಕ್ಕರಾಯನ ಬಳಿಕ ಅಧಿಕಾರ ವಹಿಸಿಕೊಂಡ ಅರಸ ಎರಡನೆಯ ಹರಿಹರ ಕ್ರಿ.ಶ. 1377ರಿಂದ 1404ರವರೆಗೆ ಆಳ್ವಿಕೆ ನಡೆಸಿದ್ದನು. ಇವನು ಸಹ ತಂದೆಯಂತೆ ಹಿಂದೆ ಇದ್ದ ಬಿರುದುಗಳ ಜೊತೆಗೆ "ವೈದಿಕ ಮಾರ್ಗ ಸ್ಥಾಪನಾಚಾರ್ಯ", "ಕರ್ನಾಟಕ ವಿದ್ಯಾವಿಲಾಸ" ಎಂಬಂತಹ ಸಾಹಿತ್ಯ ಪೋಷಕ ಹಾಗೂ ಅವನ ಜ್ಞಾನವನ್ನು ಬಿಂಬಿಸುವ ಬಿರುದುಗಳನ್ನು ಹೊಂದಿದ್ದನು. ಹರಿಹರನ ಪರಾಕ್ರಮವನ್ನು ಸಾರುವ "ತುರುಷ್ಕರಾಯ ಶಿರಾಹ ಕಂಡುಕ ಕ್ರೀಡಾ ವಿನೋದ", "ಚೋಳರಾಯ ಅಂಧಕಾರ ಧರ್ಮಕಿರಣ",[8] "ಏಕಾಂಗವೀರ", "ಕಠಾರಿತ್ರಿನೇತ್ರ"[9]ಗಳೂ ಪ್ರಮುಖವಾಗಿವೆ. ಬಹಮನಿಯವರೊಂದಿಗೆ ನಡೆದ ಯುದ್ಧದಲ್ಲಿ ಸೈನಿಕರ ತಲೆಗಳನ್ನು ಚೆಂಡಾಡಿದುದಲ್ಲದೆ, ಚೋಳರನ್ನು ಸೋಲಿಸಿದ ವಿವರವನ್ನು ಚೋಳ ಹೇಳಾಪಹರಣ ಬಾಳಲೋಚನವು ನೀಡುತ್ತದೆ.

ಹರಿಹರನಂತೆಯೇ ಒಂದನೆಯ ದೇವರಾಯ ಉತ್ತಮ ಆಡಳಿತಗಾರನೂ ಸಾಹಿತ್ಯ ಮತ್ತು ಸಂಗೀತ ಪ್ರಿಯನೂ ಆಗಿದ್ದನು. ಇವನು ಸಾಹಿತ್ಯ–ಸಂಗೀತದಲ್ಲಿ ಗಳಿಸಿದ್ದ ಪ್ರಾವೀಣ್ಯತೆಯನ್ನು "ಸಂಗೀತ ವಿದ್ಯಾಸಾಗರ", "ಸಾಹಿತ್ಯ ವಿದ್ಯಾಕಲಾ ವಿಶಾಲಾವತಾರ"ಗಳು ಪ್ರತಿನಿಧಿಸಿದರೆ, "ರಣಮುಖ ರಾಮ", "ಗಜಮುಖ ಭೀಮ", "ಮಗಧೆಯರಾಯ ಮದಮರ್ಧನ"[10]ಗಳು ಅವನ ಶೌರ್ಯವನ್ನು ಬಿಂಬಿಸುತ್ತವೆ.

ಒಂದನೆಯ ದೇವರಾಯನ ನಂತರ ಬಂದ ಪ್ರೌಢದೇವರಾಯನು ಸಂಗಮ ವಂಶದ ಪ್ರಸಿದ್ಧ ದೊರೆ. ಇವನನ್ನು "ವಿಜಯನಗರದ ಪುರವರಾಧೀಶ್ವರ"ನೆಂದು ಶಾಸನದಲ್ಲಿ ಬಣ್ಣಿಸಲಾಗಿದೆ.[11] ಸಿಂಹಳದ ಮೇಲೆ ನಡೆಸಿದ ದಂಡಯಾತ್ರೆಯ ಪರಿಣಾಮವಾಗಿ ಇವನನ್ನು "ದಕ್ಷಿಣ ಸಮುದ್ರಾಧೀಶ್ವರ"ನೆಂದು ಕರೆಯಲಾಗಿದೆ. ತೆಲುಗು ಕವಿ ಶ್ರೀನಾಥನು "ಕರ್ನಾಟಕ ಕ್ಷಿತಿಪಾಲ"ನೆಂದು ದೇವರಾಯನನ್ನು ಕರೆದಿದ್ದು, ವಿಜಯನಗರವನ್ನು "ಕನ್ನಡ ರಾಜ್ಯಲಕ್ಷ್ಮಿ"ಯೆಂದಿದ್ದಾನೆ. ಇವಲ್ಲದೆ ರಾಯನನ್ನು "ಅಶ್ವಪತಿ", "ನರಪತಿ", "ತುರುಕ ಮಹಾಹಯ ಪ್ರಬಲ ಸೈನ್ಯ ವಿದಾರಿ",[12] "ಗಜಬೇಟೆಕಾರ", "ಶರಣಾಗತರಾಯ ಸ್ಥಾಪನಾಚಾರ್ಯ"ನೆಂದೂ ವರ್ಣಿಸಲಾಗಿದೆ. ಇವುಗಳಲ್ಲಿ ಮುಖ್ಯವಾದುದು ತುರುಕ ಮಹಾಹಯ ಪ್ರಬಲ ಸೈನ್ಯ ವಿದಾರಿ. ಬಹಮನಿ ಸುಲ್ತಾನರು ಸಾಮಾನ್ಯವಾಗಿ ಅಶ್ವದಳದಲ್ಲಿ ಪ್ರಬಲತೆಯನ್ನು ಸಾಧಿಸಿದ್ದರು. ಅವರು ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಲು ಆರಂಭಿಸಿದಂದಿನಿಂದ ಆಶ್ವದಳವು ಸೈನ್ಯದಲ್ಲಿ ಮುಖ್ಯ ಪಾತ್ರವಹಿಸಿತೆನ್ನಬಹುದು. ಬಹಮನಿಯ ಇಂತಹ ಪ್ರಬಲ ಅಶ್ವಸೈನ್ಯವನ್ನು ದೇವರಾಯ ಹಿಮ್ಮೆಟ್ಟಿಸಿದುದನ್ನು ಸಾರುವುದೇ ಈ ಬಿರುದಿನ ಹಿಂದಿನ ಉದ್ದೇಶ. ಪ್ರೌಢದೇವರಾಯನು ಶತ್ರುಗಳನ್ನು ದಮನ ಮಾಡಿದುದು ಮಾತ್ರವಲ್ಲ, ಅವನು ಶರಣಾಗಿ ಬಂದವರನ್ನು ಮನ್ನಿಸುತ್ತಿದ್ದುದಕ್ಕೆ ಶರಣಾಗತರಾಯ ಸ್ಥಾಪನಾಚಾರ್ಯನೆಂದು ಕರೆದುಕೊಂಡಿದ್ದಾನೆ.

ಪ್ರೌಢದೇವರಾಯನ ನಂತರ ಬಂದ ಮೂರನೆಯ ವಿರೂಪಾಕ್ಷನು ಹಿಂದಿನವರಂತೆ ಸಮರ್ಥ ದೊರೆಯಾಗಿರಲಿಲ್ಲ. ಇವನ ದುರ್ಬಲ ಆಡಳಿತದಿಂದ ಬೇಸತ್ತ ಚಂದ್ರಗಿರಿಯ ಅಧಿಪತಿ ಸಾಳುವ ನರಸಿಂಹನು ಮುಂದೆ ಸಂಗಮ ಮನೆತನವನ್ನು ಮೂಲೆಗೆ ತಳ್ಳಿ ಸಾಳುವ ಮನೆತನದ ಸ್ಥಾಪಕನಾಗುತ್ತಾನೆ. ವಿರೂಪಾಕ್ಷನ ವೈಯಕ್ತಿಕ ಬಿರುದುಗಳಲ್ಲಿ "ಕರುಣೈಕ ಸಿಂಧು" ಮುಖ್ಯವಾಗಿದೆ. ಇದರಿಂದ ಹರಿಹರನು ಯಶಸ್ವಿ ದೊರೆಯಾಗಿರದೆ ಕರುಣಾಮಯಿಯಾಗಿದ್ದನೆಂದು ಹೇಳಬಹುದು. ಈ ಮೇಲಿನ ಬಿರುದುಗಳು ಸಂಗಮ ಮನೆತನದ ಅರಸರ ಸಾಧನೆ–ವ್ಯಕ್ತಿತ್ವಗಳನ್ನು ಕುರಿತವುಗಳಾದರೆ ಸಾಳುವ ಮನೆತನದ ನರಸಿಂಹನು "ಕಠಾರಿ ಸಾಳುವ"ನೆಂದೇ ಪ್ರಸಿದ್ಧಿಯಾಗಿದ್ದನು.[13] ಅಲ್ಲದೆ ಇವನು "ಮೇದಿನಿ ಮೀಸರ ಗಂಡ"ನೆಂದೂ ಕರೆದುಕೊಂಡಿದ್ದಾನೆ. ಇದರರ್ಥ ಭೂ ಒಡೆತನ ಹೊಂದಿದ ಮಾಂಡಲಿಕರ ಅಧಿಪತಿಯೆಂಬುದಾಗಿದೆ.

ಸಾಳುವ ನರಸಿಂಹನ ತರುವಾಯ ತುಳುವ ಮನೆತನವು ವಿಜಯನಗರದ ಸಾರಥ್ಯವನ್ನು ವಹಿಸುತ್ತದೆ. ಈ ಮನೆತನದ ಪ್ರಸಿದ್ಧ ದೊರೆ ಕೃಷ್ಣದೇವರಾಯನು ಹೊಂದಿದ ಬಿರುದಾವಳಿಗಳು ಅನೇಕ. ಇವನು ತನ್ನ ಶೌರ್ಯ, ಪರಾಕ್ರಮ ಮತ್ತು ಆಡಳಿತದ ಕಾರ್ಯವೈಖರಿಗಳಿಂದ ಗಳಿಸಿದ ಬಿರುದುಗಳು ಹಲವು. ಅವುಗಳಲ್ಲಿ "ಕಂಡ ನಾಡು ಕೊಂಡು ಕೊಂಡ ನಾಡು ಕೊಡದ ಪೂರ್ವದಕ್ಷಿಣ ಪಶ್ಚಿಮೋತ್ತರ ಚತುಸ್ಸಮುದ್ರಾಧಿಪತಿ",[14] "ಯವನ ರಾಜ್ಯ ಸ್ಥಾಪನಾಚಾರ್ಯ"ಗಳು ಮುಖ್ಯವಾಗಿವೆ. ಮೊದಲಿನದು ಅವನು ಎಷ್ಟು ಬಲಿಷ್ಠನಾಗಿದ್ದನೆಂದರೆ ಯಾವುದೇ ರಾಜ್ಯದ ಮೇಲೆ

ಕಣ್ಣಿಟ್ಟರೆ ಅದನ್ನು ಜಯಿಸಿಯೇ ತೀರುತ್ತಿದ್ದನೆಂಬುದು ಗೊತ್ತಾಗುತ್ತದೆ. ಇದು ಅವನಲ್ಲಿದ್ದ ಛಲವನ್ನು ವ್ಯಕ್ತಪಡಿಸುವುದು. ಬಿಜಾಪುರದ ಸುಲ್ತಾನನನ್ನು ಹಿಮ್ಮೆಟ್ಟಿಸಿದ ಕೃಷ್ಣದೇವರಾಯನು ಬಹಮನಿಯ ಸುಲ್ತಾನನನ್ನೇ ಪುನಃ ಅಧಿಕಾರಕ್ಕೆ ತಂದ ನೆನಪಿಗಾಗಿ ಧರಿಸಿದ ಬಿರುದು ಯವನ ರಾಜ್ಯ ಸ್ಥಾಪನಾಚಾರ್ಯ.[15] ಹಾಗೆಯೇ ಒರಿಸ್ಸಾದ ಗಜಪತಿಯನ್ನು ಸೋಲಿಸಿ "ಗಜಪತಿ ವಿಭಾಡ"ನಾದನು. ಇವುಗಳಲ್ಲದೆ "ದುಷ್ಟಶಾರ್ದೂಲಮರ್ದನ", "ಪರರಾಯ ಭಯಂಕರ", "ರೋಷಕೃತ ಪ್ರತಿ ಪಾರ್ಥಿವ"[16] ಎಂಬ ಬಿರುದುಗಳು ಕೃಷ್ಣದೇವರಾಯನ ನಡೆ, ನುಡಿ, ವ್ಯಕ್ತಿತ್ವಗಳನ್ನು ಅಭಿವ್ಯಕ್ತಿಸುತ್ತವೆ. ಈ ಮೇಲಿನವು ಅವನ ಪರಾಕ್ರಮ ಕುರಿತವುಗಳಾದರೆ "ಕನ್ನಡ ರಾಜ್ಯ ರಮಾರಮಣ", "ಕರ್ನಾಟ ರಾಜ್ಯ ರಕ್ಷಾಮಣಿ", "ಕರ್ನಾಟ ರಾಜ್ಯ ಲಕ್ಷ್ಮೀಮನೋಹರ"[17] ಎಂಬುವು ಮಧ್ಯಯುಗದ ಕನ್ನಡ ನಾಡು, ಕರ್ನಾಟಕವನ್ನು ನೆನಪಿಸುತ್ತವೆ. ಈ ಬಿರುದುಗಳಲ್ಲಿ ಸ್ಪಷ್ಟವಾಗಿ ಕರ್ನಾಟಕದ ಒಡೆಯನೆಂದು ಕರೆದಿರುವುದರಿಂದ ಕೃಷ್ಣದೇವರಾಯನೂ ಕನ್ನಡ ಮೂಲದವನೆಂದು ನಿಖರವಾಗಿ ಹೇಳಬಹುದು.

ಕೃಷ್ಣದೇವರಾಯನ ನಂತರ ಬಂದ ಅಚ್ಯುತರಾಯ ಹಾಗೂ ಸದಾಶಿವರಾಯರು ತಮ್ಮ ಪೂರ್ವಜರು ಹೊಂದಿದ್ದ ಬಿರುದುಗಳನ್ನೇ ಧರಿಸಿದ್ದರು. ಅಚ್ಯುತರಾಯನು "ಅಷ್ಟದಿಕ್ಕುರಾಯ", "ಅಕ್ಷವೀರರಾಯ ಮನೋಭಯಂಕರ"ನೆಂದು ಕರೆದುಕೊಂಡರೆ ಸದಾಶಿವರಾಯನನ್ನು "ಕೇತವರಂ ಭೂಪತಿ" ಯೆಂದು ಅವನು ಕೇತವರಂ ಮೇಲೆ ಸಾಧಿಸಿದ ವಿಜಯದ ನೆನಪಿಗಾಗಿ ಕರೆಯಲಾಗಿದೆ.

ಸದಾಶಿವರಾಯನ ಆಳ್ವಿಕೆಯಲ್ಲಿ ಮುಖ್ಯ ಪಾತ್ರವಹಿಸಿದ ಹಾಗೂ ರಕ್ಕಸತಂಗಡಿ ನಿರ್ಣಾಯಕ ಯುದ್ಧದ ರೂವಾರಿಯಾದ ರಾಮರಾಯನನ್ನು ಶಾಸನಗಳು "ಮಹಾಮಂಡಲೇಶ್ವರ"ನೆಂದೇ ಕರೆದಿವೆ. ಇದನ್ನು ಬಿಟ್ಟರೆ ಬೇರೆ ಅರಸರು ಧರಿಸಿದ ಯಾವುದೇ ಬಿರುದುಗಳನ್ನು ಇವನು ಹೊಂದಿದ್ದ ಉಲ್ಲೇಖಗಳಿಲ್ಲ.

ವಿಜಯನಗರ ಕಾಲದಲ್ಲಿ ಅರಸರಲ್ಲದೆ ಮಾಂಡಲಿಕರು, ಸೈನಿಕ ಮುಖಂಡರು, ಮತ್ತಿತರರೂ ವಿವಿಧ ಬಿರುದುಗಳನ್ನು ಅವರ ವ್ಯಕ್ತಿತ್ವ, ಶೌರ್ಯ, ಪರಾಕ್ರಮಗಳಿಂದ ಗಳಿಸಿದ್ದರು. ಅವರು ಯುದ್ಧಗಳಲ್ಲಿ ತೋರಿಸಿದ ಯಶಸ್ವಿ ಕಾರ್ಯಗಳಿಂದ ಬಿರುದುಗಳಿಗೆ ಪಾತ್ರರಾಗಿದ್ದರು. ಕ್ರಿ.ಶ. 1362ರ ಬನ್ನೇರುಗಟ್ಟದ ಶಾಸನವು ಮಹಾಮಾಂಡಲಿಕ ಮಲ್ಲಪ್ಪ ಒಡೆಯನನ್ನು "ದೇಶಕ್ರಾಂತಿ ಮಾಡುವ ರಾಹುತರಗಂಡ"ನೆಂದು ಕರೆದಿದೆ.[18] ಇದು ಕುದುರೆ ಸವಾರರಾದ ರಾಹುತರು ಕೊಡುತ್ತಿದ್ದ ಕಿರುಕುಳವನ್ನು ಹತ್ತಿಕ್ಕಿದ ಘಟನೆಯನ್ನು ನೆನಪಿಸುವುದು. 1379ರ ಶಾಸನವು ನಾಗಣ್ಣ ಒಡೆಯನು "ಕ್ರಾಂತಿಕ್ಕಾರ ರಾಯರಗಂಡ"ನೆಂಬ, ಪೋಚಯ ನಾಯಕನೆಂಬುವನು "ಚೋಳ ಕಟಕಚ್ಚಾರೆಕಾರ"[19]ನೆಂಬ ಬಿರುದುಗಳನ್ನು ಹೊಂದಿದ್ದರೆಂದು ತಿಳಿಸುತ್ತದೆ. ಪೋಚೆಯನಾಯಕನು ಚೋಳ ಮತ್ತು ಕಟಕ ಪ್ರದೇಶಗಳ ಮೇಲೆ ನಿಗಾ ಇಟ್ಟು ಆಡಳಿತ ನಡೆಸುವ ಗೂಢಾಚಾರನಾಗಿದ್ದನೆಂಬುದನ್ನು ಚೋಳ ಕಟಕಚ್ಚಾರೆಕಾರವು ದೃಢಪಡಿಸುತ್ತದೆ. ಇಮ್ಮಡಿ ಹರಿಹರನ ಮಂತ್ರಿ ಗುಂಡಪ ದಣಾಯಕನನ್ನು "ಮೂವರ ರಾಯರಗಂಡ"ನೆಂದೂ, ಎರಡನೆಯ ದೇವರಾಯನ ದಂಡನಾಯಕ ಲಕ್ಕಣ್ಣನನ್ನು ಸಿಂಹಳದ ವಿಜಯದ ಸಂಕೇತವಾಗಿ "ದಕ್ಷಿಣ ಸಮುದ್ರಾಧಿಪತಿ"ಯೆಂದೂ ಗೌರವಿಸಿರುವುದನ್ನು ಶಾಸನಗಳಲ್ಲಿ ಕಾಣಬಹುದು. ಅಲ್ಲಪ್ಪನಾಯಕ ದಂಡನಾಯಕನು ಹೊಂದಿದ್ದ ಬಿರುದುಗಳು ಮೈಪುಳಕಗೊಳಿಸುವಂತವು. ಅವನನ್ನು "ಮುಗಿಲ ಕೆಳಗೆ ತೋಳಬೀಸಿ ನಡೆವ ಮಾಂಡಲಿಕರ ಗಂಡ"ನೆಂದೂ, "ಕರಿಯ ಮಡಕೆಯ ಬಳಿಯ ಕೊಳನ ಉಂಬ ಮಾಂಡಲಿಕರ ಗಂಡ"[20]ನೆಂಬುದಾಗಿಯೂ ಶಾಸನವು ವರ್ಣಿಸಿದೆ. ಕೆಳದಿಯ ಅಮರನಾಯಕನಾಗಿದ್ದ ಸದಾಶಿವನಾಯಕನು ಕೃಷ್ಣದೇವರಾಯನೊಂದಿಗೆ ಗುಲ್ಬರ್ಗ ಕೋಟೆಯನ್ನು ವಶಪಡಿಸಿಕೊಳ್ಳುವಲ್ಲಿ ತೋರಿದ ಸಾಹಸದಿಂದ ರಾಯನು ಅವನನ್ನು "ಕೋಟೆ ಕೋಲಾಹಲ"ನೆಂಬ ಬಿರುದಿತ್ತು ಗೌರವಿಸಿದ್ದನು.[21] ಹೀಗೆ ಮಾಂಡಲಿಕರು, ದಂಡನಾಯಕರು ತಮಗೆ ವಹಿಸಿದ್ದ ಕಾರ್ಯಗಳಲ್ಲಿ ಯಶಸ್ಸನ್ನು ದೊರಕಿಸಿಕೊಟ್ಟಾಗ ರಾಜ ಅಥವಾ ಸಮಾಜವು ಅವರನ್ನು ಗೌರವಿಸುತ್ತಿದ್ದ ರೀತಿಯಿದು. ಹೀಗೆ ಬಿರುದಾವಳಿಗಳು ಆಯಾ ಕಾಲದ ಘಟನೆಗಳನ್ನು ಹೇಳುವ ಮೂಲಕ ಚರಿತ್ರೆಯ ನಿರ್ಮಾಣಕ್ಕೆ ಮಹತ್ವದ ಸಂಗತಿಗಳನ್ನು ಒದಗಿಸುವ ಮೂಲಕ ಚರಿತ್ರೆಯ ಪುನಾರಚನೆಯಲ್ಲಿ ಪ್ರಮುಖ ಪಾತ್ರವಹಿಸುವುದರಲ್ಲಿ ಸಂದೇಹವಿಲ್ಲ.

## ಟಿಪ್ಪಣಿಗಳು

1. Desai P.B., *et al.*, *History of Karnataka*, p. 335.
2. *ಅದೇ,* ಪು. 330.
3. *EC*, III, Malavalli 22.
4. Desai, *ಪೂರ್ವೋಕ್ತ,* ಪು. 335.
5. *ಅದೇ,* ಪು. 337.
6. *EC*, XI, Dg. 120, Hallihalu, Harihar (T).

7. *SII*, IX-ii, No. 410.

8. *SII*, XX, No. 231.

9. Gopal B.R. (Ed.), *Vijayanagar Inscriptions*, Vol. I, KN. 422.

10. *SII*, Vol. IX-ii, No. 433.

11. *Karnataka Inscriptions*, Vol. I, No. 48.

12. *Vijayanagara Inscriptions*, Vol. I, KN 422.

13. *SII*, IX-ii, No. 463, 466.

14. *SII*, IX-ii, No. 510.

15. *Nellore District Inscriptions*, No. 27, p. 536.

16. *SII*, IV, No. 254-255.

17. Desai, *ಪೂರ್ವೋಕ್ತ*, ಪು. 335.

18. *Vijayanagar Inscriptions*, Vol. I, KN. 4.

19. *ಅದೇ*, Vol. III, KN. 2272.

20. *ಅದೇ*, Vol. I, KN. 259.

21. *ಕೆಳದಿ ನೃಪವಿಜಯಂ*, ಪ್ರಥಮಾಶ್ವಾಸ, 21-49, ಪು. 33-38.

# 18. ವಿಜಯನಗರ ಕಾಲದಲ್ಲಿ ಭೂಮಾಪನ ಪದ್ಧತಿ

– ಜಗದೀಶ

ವಿಜಯನಗರ ಅರಸರು ಇತರ ಪೂರ್ವ ಅರಸು ಮನೆತನಗಳಂತೆ ಭೂ ಮಾಪನಕ್ಕೆ ಅಳತೆಯ ಕೋಲುಗಳನ್ನು ಬಳಸುತ್ತಿದ್ದರು. ಸರ್ ವಾಲ್ಟರ್ ಇಲಿಯಟ್‌ರು ತಮ್ಮ ಲೇಖನದಲ್ಲಿ ಕೃಷ್ಣದೇವರಾಯನ ಕಾಲದಲ್ಲಿ ಪೂರ್ಣ ಪ್ರಾಂತ್ಯವನ್ನು ಭೂಮಾಪನಕ್ಕೊಳಪಡಿಸಿ ಕಂದಾಯವನ್ನು ರಾಯರೇಖೆ ಅಥವಾ ಹುಲುಮಾರು ಅಳತೆಯಂತೆ ನಿಗದಿ ಪಡಿಸಲಾಯಿತೆಂದು, ಈ ರಾಯರೇಖೆ ಗ್ರಾಮದಿಂದ ಗ್ರಾಮಕ್ಕೆ ಬೇರೆ ಆಗಿದ್ದು ಗದಗಿನ ಕೋಟೆಯ ಬಾಗಿಲಿನಲ್ಲಿನ ಅಳತೆಯು 7 ಅಡಿ 9.5 ಇಂಚು, ನವಲಗುಂದದ ಬಸವಣ್ಣ ದೇವಾಲಯದಲ್ಲಿನ ಅಳತೆಯು 7 ಅಡಿ 6.6 ಇಂಚು, ಅಣ್ಣಿಗೇರಿ, ಅಮ್ಮಿನಬಾವಿ ಮತ್ತು ಹೆಬ್ಬಿಯಲ್ಲಿನ ಅಳತೆಗಳು ಕ್ರಮವಾಗಿ 10 ಅಡಿ 6.3 ಇಂಚು, 10 ಅಡಿ 11.8 ಇಂಚು ಹಾಗೂ 10 ಅಡಿ 6.9 ಇಂಚು ಇದ್ದವೆಂದು ಉಲ್ಲೇಖಿಸಿದ್ದಾರೆ. ಈ ಅಳತೆಗಳನ್ನು ಕಪ್ಪುಎರೆ ಭೂಮಿಯುಳ್ಳ ಪ್ರದೇಶದಲ್ಲಿ ಬಳಸುತ್ತಿದ್ದರೆಂದು, ಇದನ್ನು ವಿಟ್ಟಲಪಂತೀ ಮಾರು ಎಂದು ಕರೆಯುತ್ತಿದ್ದರೆಂದು ಹೇಳಲಾಗಿದೆ.[1] ವೆಂಕಟರಾಯನೆಂಬ ಅಧಿಕಾರಿಯು ಹೊಲದ ಅಳತೆಯಾದ 'ಮಾರು'ನ್ನು ಪ್ರಚಾರದಲ್ಲಿ ತಂದನು.[2]

ಕೆ.ಎನ್. ಚಿಟ್ನೀಸ್‌ರು ವಿಜಯನಗರ ಸಾಮ್ರಾಜ್ಯದಲ್ಲಿ ಒಂದೇ ಪ್ರಕಾರದ ಅಳತೆ ಬಳಕೆಯಲ್ಲಿ ಇದ್ದಿಲ್ಲವೆಂದೂ, ಇದು ಪ್ರದೇಶಗಳಿಗೆ ವಿಭಿನ್ನವಾಗಿತ್ತೆಂದೂ ಉಲ್ಲೇಖಿಸಿದ್ದಾರೆ.[3] ತಿರುಪ್ಪುಕುಳಿಯ ಕ್ರಿ.ಶ. 1438ರ ಲಕ್ಕಪನಾಯಕನ ಶಾಸನವು ಭೂಮಿಯನ್ನು ರಾಜವಿಭಟನ ಕೋಲಿನಿಂದ ಅಳೆದು ಕೊಟ್ಟುದಾಗಿ ತಿಳಿಸುತ್ತದೆ. ಇಲ್ಲಿನ ಇನ್ನೊಂದು ಶಾಸನವು ರಾಜವಿಭಾಡನ ಕೋಲು ಮತ್ತು ಗಂಡರಗಂಡನ ಕೋಲುಗಳನ್ನು ಉಲ್ಲೇಖಿಸುತ್ತಿದ್ದು, ಇವುಗಳನ್ನು ಅಲ್ಲಿ ಕಂಡರಿಸಲಾಗಿದೆ.[4] ಪೆನ್ನಾಡಂ ಕ್ರಿ.ಶ. 1438–1463ರ ಪೆರಿಯನಟ್ಟುವೇಲನ ಶಾಸನವು ಮುವಯರಾವನ ಕೋಲನ್ನು ಉಲ್ಲೇಖಿಸುತ್ತಿದ್ದು ಪ್ರಳಯಕಾಲೇಶ್ವರ ದೇವಾಲಯದ ಉತ್ತರ ಮಂಟಪದಲ್ಲಿ 15 ಅಡಿಗಳ ಅಂತರದಲ್ಲಿ ಗುರುತುಗಳನ್ನು ಕಂಡರಿಸಲಾಗಿದೆ. ಕುತೂಹಲಕಾರಿ ಅಂಶವೆಂದರೆ ಈ ಅಳತೆಯಲ್ಲಿ ಯಾರಾದರೂ ಮಾರ್ಪಾಡು ತಂದರೆ ಅದು ಮಹಾಪರಾಧವೆಂದೂ ಶಿವದ್ರೋಹಿಗಳಿಗೆ, ಗ್ರಾಮದ್ರೋಹಿಗಳಿಗೆ ನೀಡುವ ಶಿಕ್ಷೆಯನ್ನು ನೀಡಬೇಕೆಂದೂ ಇರುವ ಉಲ್ಲೇಖ.[5]

ಕರ್ನಾಟಕದಲ್ಲಿ ಅಬ್ಬಿಗೇರಿಯ ಶಾಸನ (ರೋಣ ತಾಲೂಕು, ಗದಗ ಜಿಲ್ಲೆ)ದಲ್ಲಿ ಮಾರು ಕೂರಿಗೆ ಭೂಮಿಯ ಉಲ್ಲೇಖವಿದ್ದು ಇದು ಪ್ರಥಮ ಉಲ್ಲೇಖವೆನ್ನಬಹುದು. 31 ಮೇ 1379ರ ಎರಡನೆಯ ಹರಿಹರನ ಈ ಶಾಸನವು ಈಗಾಗಲೇ ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಶನ್ಸ್[6] ಮತ್ತು ಕರ್ನಾಟಕ ಇನ್‌ಸ್ಕ್ರಿಪ್‌ಶನ್ಸ್[7] ಸಂಪುಟಗಳಲ್ಲಿ ಪ್ರಕಟವಾಗಿದೆ. ಶಾಸನವು ಕನ್ನಡ ಬಾಷೆಯಲ್ಲಿದ್ದು, ನಾಗರಿ ಅಕ್ಷರಗಳಲ್ಲಿ ಕಂಡರಿಸಲಾಗಿದೆ. ಎರಡನೆಯ ಹರಿಹರನು ಯರ್‍ರೀಗೇರಿಯ ಹೇಮಾದ್ರಿ ಆಚಾರ್ಯರಿಗೆ ಅಬ್ಬಿಗೇರಿಯಲ್ಲಿ ಭೂದಾನವನ್ನು ನೀಡಿದ್ದು, ಈ ದಾನವು ನಾಗವೂರು, ಸಂಗಾಪೂರ, ಹಿರೇಗುಲ ಮತ್ತು ಬಾಲ್ಲೂರಕೊಪ್ಪ ಗ್ರಾಮಗಳಲ್ಲಿದ್ದು, ಇದನ್ನು ಕಾಪಾಡಬೇಕೆಂದು, ಮುಂದೆ ಬರುವ ಪ್ರಭುಗಳು ನಡೆಸಬೇಕೆಂದು ತಿಳಿಸುತ್ತದೆ. ಕರ್ನಾಟಕ ಇನ್‌ಸ್ಕ್ರಿಪ್‌ಶನ್ಸ್ ಸಂಪುಟದಲ್ಲಿ ಹೇಮಾದ್ರಿ ಆಚಾರ್ಯರು ಮಹಾನ್ಯಗ್ರೋದ(?) ಎಂಬ ಶಾಸ್ತ್ರ ಮಾಡಿದ ನಂತರ ಎರಡನೆಯ ಹರಿಹರನಿಂದ ಭೂದಾನ ಪಡೆದಿದ್ದಾಗಿ ಮತ್ತು ಈ ಶಾಸನವು ತಾಮ್ರ ಶಾಸನಗಳಲ್ಲೂ ಇದೆಯೆಂದು ಪ್ರಕಟವಾಗಿದೆ.

ಈ ಶಾಸನದಲ್ಲಿ 'ಮಾರು ಕೂರಿಗೆ' ಹೊಲದ ಉಲ್ಲೇಖ ಮತ್ತು ಕೆಲವು ಅಪೂರ್ಣ ಪದಗಳು ನನ್ನ ಗಮನ ಸೆಳೆದವು. ಈ ಶಾಸನವನ್ನು ಮರು ಪರಿವೀಕ್ಷಣೆಗೆ ಒಳಪಡಿಸಿದರೆ ಹೆಚ್ಚಿನ ಮಾಹಿತಿ ದೊರೆಯಬಹುದೆನಿಸಿ, ಅಬ್ಬಿಗೇರಿಗೆ ಹೋಗಿ ಶಾಸನದ ಪಡಿಯಚ್ಚನ್ನು ಪಡೆದು, ಮೂಲಪಾಠದ ಬಗ್ಗೆ ಶ್ರೀನಿವಾಸ ರಿತ್ತಿಯವರೊಂದಿಗೆ ಚರ್ಚಿಸಿ ಅವರಿಂದ ಮೂಲಪಾಠವನ್ನು ಪಡೆದಾಗ ಈ ಶಾಸನವು ಅಳತೆಯ ಕೋಷ್ಟಕವನ್ನೇ ನೀಡುತ್ತಿರುವುದು ಕಂಡುಬಂದಿದೆ.[8]

ಮುಖ್ಯವಾಗಿ 5 ರಿಂದ 8 ಸಾಲುಗಳ ಮೂಲಪಾಠವನ್ನು ಹೀಗೆ ಅರ್ಥೈಸಲಾಗಿದೆ (ಓದಲಾಗಿದೆ).

ಚಾರ್ಯರಿಗೆ ಅಬ್ಬಿಗೇರಿಯಲ್ಲಿ ಮಹಾನ್ಯಗ್ರೋಧ ಮಾಣದಿ

ಟು ಮೂರು ಗೋಧಿ ೮ ಅಡ್ಡ ೧ ಮಧ್ಯಮಾಂಗುಲಿ ಇವು ೨೪ ಹಸ್ತ ೧ ಇವು ||

ಮು ಆದರೆ ಧನು ೧ ಇವು ೪೦ ಹ್ಯಜ್ಜಿ ೧೨ ಶೀಮೆ ಇವು ೩೬ ಮಾರು ಕೂರಿಗೆ ೧

ಈ ಪ್ರ ‖ ಭೂಮಿ ಅಷ್ಟ ತೇಜಸಾಮ್ಯ ಅಯತ್ಸಾಮ್ಯಸಹಿತ ಸರ್ವ್ವಮಾನ್ಯೈಕ

ಈ ಶಾಸನವು ಸ್ಪಷ್ಟವಾಗಿ ಅಳತೆಯ ಕೋಷ್ಠಕವನ್ನು ನೀಡುತ್ತಿದ್ದು ಕರ್ನಾಟಕ ಇನ್ಸ್‌ಕ್ರಿಪ್‌ಶನ್ಸ್ ಸಂಪುಟದಲ್ಲಿ ಉಲ್ಲೇಖಗೊಂಡಂತೆ ಮಹಾನ್ಯಗ್ರೋಧ (?) ಎಂಬ ಶಾಸ್ತ್ರ ಅಲ್ಲದೇ ಹಿಂದಿನ ಶಿಲ್ಪ ಶಾಸ್ತ್ರಗಳು, ಮಾನಸೋಲ್ಲಾಸ, ಶಿವತತ್ವ ರತ್ನಾಕರ ಇವುಗಳಲ್ಲಿನ ಉಲ್ಲೇಖದಂತೆ ಸಾಸಿವೆ ಕಾಳಿನ ಅಳತೆಯಿಂದ ಅಂಗುಲ ಅಳತೆಯನ್ನು ಪಡೆಯುವ ಬಗೆಯನ್ನು ವಿವರಿಸಿರುವಂತೆ,[10] ಮಹಾನ್ಯಗ್ರೊಧಮಾಣದಿ ಅಂದರೆ ಅತ್ತಿಯ ಹಣ್ಣಿನ ಬೀಜದಿಂದ ಅಂಗುಲ ಅಳತೆಯನ್ನು ಪಡೆದಿರುವುದನ್ನು ಶಾಸನ ತಿಳಿಸುತ್ತದೆ.[11]

**ಮಧ್ಯಮಾಂಗುಲ:** ಶಾಸ್ತ್ರಗಳಲ್ಲಿ ಮೂರು ಬಗೆಯ ಅಂಗುಲಗಳನ್ನು ಗೋಧಿಕಾಳುಗಳನ್ನು ಉಪಯೋಗಿಸಿ ಪಡೆಯಲಾಗಿದೆ. 8 ಗೋಧಿಕಾಳುಗಳನ್ನು ಅಡ್ಡವಾಗಿಟ್ಟು ಉತ್ತಮಮಾಂಗುವನ್ನು, 7 ಗೋಧಿಕಾಳುಗಳನ್ನು ಮಧ್ಯಮಾಂಗುಲಕ್ಕೆ ಮತ್ತು 6 ಗೋಧಿಕಾಳುಗಳನ್ನು ಕನಿಷ್ಠ ಅಂಗುಲಕ್ಕೆ ಬಳಸಿ ಪಡೆಯಬಹುದೆಂದು ತಿಳಿಸಲಾಗಿದೆ.

ಪ್ರಸ್ತುತ ಶಾಸನದಲ್ಲಿ 8 ಗೋಧಿಕಾಳುಗಳನ್ನು ಅಡ್ಡವಾಗಿಟ್ಟು ಮಧ್ಯಮಾಂಗುಲವನ್ನು ಪಡೆಯಲಾಗಿದೆಯೆಂದು ತಿಳಿಸಲಾಗಿದೆ.

**ಹಸ್ತ:** ಹೀಗೆ ಪಡೆದ ಮಧ್ಯಮಾಂಗುಲವು 24 ಪಟ್ಟು ಆದರೆ ಒಂದು ಹಸ್ತದ ಅಳತೆಯಾಗುತ್ತದೆ. ಶಿಲ್ಪಶಾಸ್ತ್ರಗಳಲ್ಲಿ ವಿವಿಧ ಬಗೆಯ ಹಸ್ತಗಳ ಉಲ್ಲೇಖವಿದೆ. ಅವು ಕಿಷ್ಕ ಹಸ್ತ, ಪ್ರಜಾಪತಿಯ ಹಸ್ತ, ಧನುರಗ್ರಹ, ಧನುರ್ಮುಷ್ಠಿ, ತಿಕ್ತ ಹಸ್ತ, ಧೇನು ಹಸ್ತ, ಗುಣ ಹಸ್ತ ಇತ್ಯಾದಿ.

**ಧನು (ಹಸ್ತ):** ಈ ಶಾಸನದಲ್ಲಿನ ಮು ಮೂವತ್ತರ ಸಂಕ್ಷಿಪ್ತ ರೂಪವೆಂದು ಪರಿಗಣಿಸಿದರೆ ಮೂವತ್ತು ಮಧ್ಯಮಾಂಗುಲಗಳು 1 ಧನು ಹಸ್ತದ ಅಳತೆಯಾಗುತ್ತದೆ.

ಶಿವತತ್ವ ರತ್ನಾಕರದಲ್ಲಿ ನಾಲ್ಕು ಹಸ್ತಗಳು ಒಂದು ಧನು ಅಳತೆಯಾಗುತ್ತದೆಂಬ ಉಲ್ಲೇಖವಿದೆ.[12] ಅದರಂತೆ 24 x 4 = 96 ಮಧ್ಯಮಾಂಗುಲಗಳು ಒಂದು ಧನು (ಧನಸ್ಸು) ಅಳತೆಯಾಗುತ್ತದೆ. ಶಾಸನದಲ್ಲಿರುವಂತೆ ಮು ಮೂರು ಸಂಖ್ಯೆಯ ಸಂಕ್ಷಿಪ್ತ ರೂಪವೆಂದಾದರೆ 3 ಹಸ್ತಗಳ ಅಳತೆ ಎಂದು ಪರಿಗಣಿಸಿದರೆ 24 x 3 = 72 ಮಧ್ಯಮಾಂಗುಲಗಳು ಒಂದು ಧನು (ಧನಸ್ಸು) ಅಳತೆಯಾಗುತ್ತದೆ.

**ಮಾರು ಕೂರಿಗೆ:** 40 ಹೈಜ್ಜ 12 ಶೀಮೆ ಇವು 36 ಭಾಗಗಳು ಒಂದು ಮಾರು ಕೂರಿಗೆ ಭೂಮಿಯಲ್ಲಿ ಇದ್ದವೆಂದು ಶಾಸನವು ತಿಳಿಸುತ್ತದೆ. ಕರ್ನಾಟಕ ಇನ್ಸ್‌ಕ್ರಿಪ್‌ಶನ್ಸ್ ಸಂಪುಟದಲ್ಲಿ ಮಾರು ಕೂರಿಗೆ 16 ಎಂದು ಪ್ರಕಟಿಸಲಾಗಿದೆ. ಇದು 16 ಅಲ್ಲ 1 ಮತ್ತು (ಸುರಳಿ – spiral) ಆಗಿದೆ. ಏಕೆಂದರೆ (ಸುರಳಿ) ಕೆತ್ತನೆಯಲ್ಲಿ ಆಕಸ್ಮಾತ್ತಾಗಿ ಕಲ್ಲಿನ ಚಕ್ಕೆ ಎದ್ದು ಹೋಗಿರುವುದರಿಂದ ಹಾಗೆ ಓದಲಾಗಿದೆಯೆಂದು ಭಾವಿಸುತ್ತೇನೆ. ಕೆ.ಎನ್. ಚಿಟ್ನೀಸ್ ನರಗುಂದದ ಶ್ರೀ ವೆಂಕಟೇಶ್ವರ ದೇವಾಲಯದಲ್ಲಿನ ಒಂದು ಕಾಗದದ ಪ್ರತಿಯಲ್ಲಿ 1 ಮಾರು 36 ಭಾಗಗಳನ್ನೊಳಗೊಂಡಿತ್ತೆಂಬ ಉಲ್ಲೇಖವಿದೆಯೆಂದು ತಿಳಿಸುತ್ತಾರೆ.[13] ಪ್ರಸ್ತುತ ಶಾಸನದಲ್ಲಿ ಇವು 36 ಮಾರು ಕೂರಿಗೆ 1 ಎಂದು ಅರ್ಥೈಸಿರುವುದನ್ನು ಇದು ಪುಷ್ಟೀಕರಿಸುತ್ತದೆ. ವಿಜಯನಗರ ಮತ್ತು ಬಿಜಾಪುರ ಸಾಮ್ರಾಜ್ಯಗಳ ಉತ್ತರ ಭಾರತದೊಂದಿಗಿನ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಂದಾಗಿ ಅಲ್ಲಿನ ಉರ್ದು ಮತ್ತು ಪರ್ಷಿಯನ್ ಪದಗಳನ್ನು ಇಲ್ಲಿನ ಪದಗಳೊಂದಿಗೆ ಸಮಾನಾರ್ಥವಾಗಿ ಬಳಸಲಾಗುತ್ತಿತ್ತು ಎಂದು ತಿಳಿಸಲಾಗಿದೆ.[14]

ಫ್ರಾನ್ಸಿಸ್ ಬುಖಾನನ್ ಹರಿಹರದಲ್ಲಿದ್ದಾಗ, ಮಾರು ಭೂಮಿಯ ಅಳತೆ ಉಪಯೋಗದಲ್ಲಿದ್ದುದನ್ನು ಮತ್ತು ಇದನ್ನು ಎರಡು ರೀತಿಯಾಗಿ ಪಡೆಯುತ್ತಿದ್ದರೆಂದು ತಿಳಿಸಿದ್ದಾನೆ. ಅವು ಹೀಗಿವೆ:–

**ಬೀಜ ಅಳತೆ:** 2½ ಗಿದ್ದನ ಬೀಜ ಜೋಳವನ್ನು ಬಿತ್ತಬಹುದಾದ ಭೂಮಿಯು ಒಂದು ಮಾರು ಅಳತೆಯದಾಗಿದ್ದು, ತಾವು 12 ಗಿದ್ದನ ಬೀಜ ಜೋಳದ ಭೂಮಿಯನ್ನು ಅಳತೆ ಮಾಡಿದ್ದು ಅದು 17,67,684 ಚದರ ಅಡಿಗಳಾಗಿದ್ದು, ಇದರಂತೆ ಒಂದು ಮಾರು ಭೂಮಿಯು ಇಂದಿನ 8.45 ಎಕರೆ (3,68,267.50 ಚದರ ಅಡಿಗಳು)ಗಳಿಗೆ ಸಮಾನವಾಗಿದೆ.

**ಅಕಡಿ ಸಾಲಿನ ಅಳತೆ:** ಮಾರು ಭೂಮಿಯ ಅಳತೆ ಜೋಳದ ಸಾಲುಗಳ ಮಧ್ಯದಲ್ಲಿ ಹಾಕುವ ಅಕಡಿ ಸಾಲಗಳ ಲೆಕ್ಕದಲ್ಲಿಯೂ ಪಡೆಯಲಾಗುತ್ತಿತ್ತೆಂದೂ, 120 ಚಚ್ಚೌಕದ ಅಕಡಿ ಸಾಲುಗಳು ಒಂದು ಮಾರು ಹೊಲದಲ್ಲಿ ಇರುತ್ತಿದ್ದವೆಂದು ತಿಳಿಸಿದ್ದಾರೆ. ಈ ಅಕಡಿಯ ಅಳತೆಯ 3 - 3½ ಹಸ್ತಗಳ ಅಳತೆಯದಾದರೆ ಸರಿಹೋಗುತ್ತದೆ ಎಂದೂ ಇದನ್ನು ಹರಿಹರದಲ್ಲಿ ನೋಡದಿದ್ದರೂ ಬೇರೆ ಪ್ರದೇಶದಲ್ಲಿ ಸರಿಸುಮಾರು ಇದೆ ಅಳತೆ ಇತ್ತೆಂದು ತಿಳಿಸಿದ್ದಾನೆ.[15]

ಬುಖಾನನ್ ವರದಿಯಲ್ಲಿಯಂತೆ ಒಂದು ಮಾರು ಹೊಲದಲ್ಲಿ 8.45 ಎಕರೆ ಇತ್ತೆಂಬುದನ್ನು ಗಣನೆಗೆ ತೆಗೆದುಕೊಂಡರೆ, ಪ್ರತಿ ಅಕಡಿಯ ಸಾಲಿನ ಅಂತರವು 5 ಅಡಿ ಆಗುತ್ತದೆ. ಈಗಿನ ಬಿತ್ತುವ ಕೂರಿಗೆಯಲ್ಲಿ 3 ಸಾಲುಗಳಿದ್ದು ಪ್ರತಿಸಾಲುಗಳ ಅಂತರವು 18 ಇಂಚು ಇರಬೇಕೆಂದು ವ್ಯವಸಾಯ ಇಲಾಖೆಯವರು ಪ್ರತಿಪಾದಿಸುತ್ತಾರೆ. 3 ಸಾಲುಗಳ ಕೂರಿಗೆಯಲ್ಲಿ ಮಧ್ಯದ ಸಾಲಿನ ಕೂರಿಗೆಯಲ್ಲಿ ಅಕಡಿಯ ಕಾಳನ್ನು (ಜೋಳವಲ್ಲದೆ ಬೇರೆ ಕಾಳು) ಬಿತ್ತುವುದರಿಂದ ಪ್ರತಿ ಅಕಡಿ ಸಾಲಿನ ಅಂತರವು 3 x 18 = 54 ಇಂಚು ಆಗುತ್ತದೆ (ಇದು 4.5 ಅಡಿ ಆಗುತ್ತದೆ). ಆದರೆ ಈಗ

ರೈತರು 18 ಇಂಚುಗಳ ಬದಲಾಗಿ 15 ಇಂಚುಗಳ ಅಂತರದಲ್ಲಿ ಸಾಲುಗಳನ್ನು ಇಡುತ್ತಾರೆ. ಇದರಿಂದ ಪ್ರತಿ ಅಕಡಿಯ ಅಂತರವು 45 ಇಂಚು ಆಗುತ್ತದೆ (ಇದು 4.25 ಅಡಿ ಆಗುತ್ತದೆ).

ಕ್ರಿ.ಶ. 1477ರ ದಾಸರಹಟ್ಟಿಯ (ಹೊನ್ನಾಳಿ ತಾಲೂಕು, ದಾವಣಗೆರೆ ಜಿಲ್ಲೆ) ತಾಮ್ರ ಶಾಸನದಲ್ಲಿ ಅಕಡಿಯ ಉಲ್ಲೇಖವಿದೆ.[16] ಸಂತೆಬೆನ್ನೂರು ಕೆಂಗಪ್ಪನಾಯಕನ ಮಕ್ಕಳ ಈ ಶಾಸನವು ವಿಜಯನಗರ ಅರಸರ ಕಾಲದಲ್ಲಿ ಅಕಡಿ ಅಳತೆಯು ಇತ್ತೆಂದು ತಿಳಿಸುತ್ತದೆ. ಬುಖಾನನ್ ವರದಿಯಂತೆ ಒಂದು ಮಾರು ಭೂಮಿಯಲ್ಲಿ 120 ಚದರ ಅಕಡಿ ಸಾಲುಗಳ ಚಚ್ಚೌಕ ಭೂಮಿಯನ್ನೊಳಗೊಂಡಿತ್ತು ಎಂಬ ಉಲ್ಲೇಖವು ಸರಿಯಿರಬಹುದೆಂದು ತೋರುತ್ತದೆ.

ಜನಸಾಮಾನ್ಯ ರೂಢಿಯಲ್ಲಿ ಒಂದು ಜೊತೆ ಎತ್ತಿನ ಬೇಸಾಯದಿಂದ ಒಂದು ದಿನದೊಳಗಾಗಿ ಬಿತ್ತಬಹುದಾದ ಭೂಮಿಯನ್ನು ಕೂರಿಗೆ ಭೂಮಿ ಎಂದು ಕರೆಯಲಾಗುತ್ತದೆ.

40 ಹೈಜ್ಜ 12 ಶೀಮೆ ಇವು 36 ಎಂದಿರುವುದು, ಒಂದು ಧನು ಅಳತೆಯ ಹೆಜ್ಜೆಗಳನ್ನು ನಡೆಯುವುದೆಂದು ತಿಳಿದುಕೊಂಡರೆ 12 ಶೀಮೆ ಎಂದರೆ 12 ದಿಕ್ಕುಗಳೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಚತುಸ್ಸೀಮೆಯೆಂದರೆ ನಾಲ್ಕು ದಿಕ್ಕುಗಳುಳ್ಳ ಭೂಮಿ ಎಂದಾದರೆ, 12 ದಿಕ್ಕುಗಳಲ್ಲಿ 12 ಮಗ್ಗುಲುಗಳ ಭೂಮಿ ಎಂದು ಪರಿಗಣಿಸಿದರೆ ಇದು ದ್ವಾದಶ ಮಗ್ಗುಲುಗಳ ಸಮಭುಜಾಕೃತಿಯಾಗುತ್ತದೆ (12 sided polygon). ಇದು 36 ಮಾರು ಕೂರಿಗೆ 1. ನಾಲ್ಕು ಗ್ರಾಮಗಳಲ್ಲಿ ಈ ಭೂಮಿ ಇತ್ತೆಂದು ಶಾಸನವು ಉಲ್ಲೇಖಿಸಿರುವುದರಿಂದ ದ್ವಾದಶ ಮಗ್ಗುಲುಗಳ ಭೂಮಿ ಅದಾಗಿರಲಾರದೆಂದು ತೋರುತ್ತದೆ. ಏಕೆಂದರೆ ಒಂದು ದ್ವಾದಶ ಭೂಮಿಯ ಸುತ್ತಲೂ ದ್ವಾದಶ ಭೂಮಿಗಳೇ ಇರಬೇಕು, ಹೀಗಿದ್ದ ಭೂಮಿಯ ಪಾಲನೆ ಮತ್ತು ವಿಭಜನೆ ಸುಲಭಸಾಧ್ಯವಲ್ಲ. ಆದ್ದರಿಂದ 12 ಶೀಮೆ ಎನ್ನುವುದು ಸಧ್ಯಕ್ಕೆ 12 ಗಡಿಕಲ್ಲುಗಳ ಚೌಕಾಕಾರದ ಭೂಮಿ ಎಂದು ಪರಿಗಣಿಸಿದರೆ ಬುಖಾನನ್ ವರದಿಯನ್ನು ಅನುಸರಿಸಿ ಹಿಂದಕ್ಕೆ ಲೆಕ್ಕ ಮಾಡಿ ಅಂಗುಲ ಅಳತೆ ಸರಿಯಿತ್ತೆ ಎಂದು ಹೀಗೆ ನೋಡಬಹುದು:–

ಮಾರು ಕೂರಿಗೆ = 8.45 ಎಕರೆ

ಮಾರು ಕೂರಿಗೆ 36 ಭಾಗ = 8.45 x 43560 ಚದರ ಅಡಿಗಳು

1 ಚಚ್ಚೌಕ ಭಾಗ $= \frac{8.45 \times 43560}{36} = 10224.50$ ಚದರ ಅಡಿಗಳು

= ಅಥವಾ 101.10 x 101.10 ಅಡಿಗಳು

1 ಚಚ್ಚೌಕ ಭಾಗ = 40 ಹೈಜ್ಜೆ ಚಚ್ಚೌಕ ಭಾಗ = 101.10 x 101.10 ಅಡಿಗಳು

ಪ್ರತಿ ಚಚ್ಚೌಕ ಹೈಜ್ಜ $= \frac{101.10 \times 101.10}{40 \times 40}$

= 2.52 x 2.52 ಅಡಿಗಳು

ಪ್ರತಿ ಹೈಜ್ಜ = 2.52 ಅಡಿ ಅಥವಾ 75.60 ಸೆಂ.ಮೀ.

ಪ್ರತಿ ಮಧ್ಯಮಾಂಗುಲ $= \frac{2.52 \times 12}{30}$

= 1.008 ಇಂಚು ಅಥವಾ 2.52 ಸೆಂ.ಮೀ.

ಕಲ್ಯಾಣ ಚಾಲುಕ್ಯರ ಭೂಮಿಯ ಅಳತೆಯಾದ ಮತ್ತರು ಬಳಕೆಯಲ್ಲಿ ಬರುಬರುತ್ತಾ ಅಕ್ಷರ ಲೋಪವಾಗಿ ಮಾರು ಎಂದು ಕರೆಯಲ್ಪಟ್ಟಿದೆಯೇ ಎಂದು ಸಂದೇಹ ಪಡಬಹುದಾಗಿದೆ.

ಪ್ರಾಯೋಗಿಕವಾಗಿ ಅಬ್ಬಿಗೇರಿಯಲ್ಲಿನ ಇಂದಿನ ಗೋಧಿಕಾಳುಗಳನ್ನು ತೆಗೆದುಕೊಂಡು 8 ಗೋಧಿಕಾಳುಗಳನ್ನು ಅಡ್ಡ ಇಟ್ಟು ಪಡೆದ ಮಧ್ಯಮಾಂಗುಲವು 2.00 ಸೆಂ.ಮೀ. ಇದ್ದು, ಇದರಂತೆ ಮಾರು ಕೂರಿಗೆ ಭೂಮಿಯು 5.28 ಎಕರೆ ಆಗುತ್ತದೆ. ಇಂದಿನ ಅಕಡಿಯ ಸಾಲುಗಳ ಅಳತೆಯಾದ 4.25 ಅಡಿ ಪರಿಗಣಿಸಿದರೆ 120 ಚಚ್ಚೌಕ ಅಕಡಿ ಸಾಲುಗಳು ಭೂಮಿ 5.97 ಎಕರೆ ಆಗುತ್ತದೆ. ಈ ಅಳತೆಯು ಎರೆ ಸೀಮೆಯಲ್ಲಿ

ಇಂದು ಒಂದು ಕೂರಿಗೆ ಭೂಮಿಗೆ 5.00 ಎಕರೆ ಎಂದು ಪರಿಗಣಿಸುತ್ತಿರುವುದಕ್ಕೆ ಹತ್ತಿರವಾಗಿದೆ. ಈ ಐದು ಶತಮಾನಗಳ ಅವಧಿಯಲ್ಲಿ ಭೂಮಿಯ ಫಲವತ್ತತೆ ಮತ್ತು ತನ್ಮೂಲಕ ಉತ್ಪನ್ನಗಳ ಗೋಧಿಕಾಳಿನ ಪ್ರಮಾಣದಲ್ಲಿ ಆದ ಬದಲಾವಣೆಯನ್ನು ಗಮನಕ್ಕೆ ತಂದುಕೊಂಡಿಲ್ಲ.

ಶಾಸನಾಧಾರಿತ ಅಳತೆಯ ಕೋಷ್ಟಕ ಹೀಗಿದೆ :

| | |
|---|---|
| 8 ಗೋಧಿ (ಅಷ್ಟ) | 1 ಮಧ್ಯಮಾಂಗುಲ |
| 24 ಮಧ್ಯಮಾಂಗುಲ | 1 ಹಸ್ತ |
| 30 ಮಧ್ಯಮಾಂಗುಲ | 1 ಧನು ಹಸ್ತ |
| 1 ಧನು 40 ಹೈಜ್ಜಿ 12 ಶೀಮೆ | 1 ಭಾಗ |
| 36 ಭಾಗ (ಭಿಘಾ) | 1 ಮಾರು ಕೂರಿಗೆ |

## ಟಿಪ್ಪಣಿಗಳು

1. ಇಲಿಯಟ್ ವಾಲ್ಟರ್, "ಎನ್ಸಿಯಂಟ್ ಲ್ಯಾಂಡ್ ಟೆನ್ಯೂರ್ ಇನ್ ದ ಮರಾಠಾ ಕಂಟ್ರಿ", *ಇಂಡಿಯನ್ ಆ್ಯಂಟಿಕ್ವರಿ – 15,* ಪುಟ 268-272.
2. ಚಿಟ್ನೀಸ್ ಕೆ.ಎನ್., "ಲಕ್ಷ್ಮೇಶ್ವರ ದೇಸಗತಿ", ಕಲಬುರ್ಗಿ ಎಂ.ಎಂ., 1994, *ಸಾರಂಗಶ್ರೀ,* ಪುಟ 269.
3. ಚಿಟ್ನೀಸ್ ಕೆ.ಎನ್., 1974, *ಗ್ಲಿಂಪ್‌ಸಸ್ ಆಫ್ ಮೆಡಿವಿಯಲ್ ಇಂಡಿಯನ್ ಐಡಿಯಾ ಅಂಡ್ ಇನ್ಸ್‌ಟಿಟ್ಯೂಷನ್ಸ್,* ಪೂನಾ, ಪುಟ 175.
4. *ARIE*, 1916, ನಂ. 193 ಮತ್ತು 212, 1928-29, ನು 357.
5. *ಅದೇ,* 1929, ನಂ. 249.
6. *SII - 15*, part 2, ನಂ. 244.
7. *KI - 6,* ನಂ. 60.
8. ಶಾಸನದ ಪಡಿಯಚ್ಚನ್ನು ತೆಗೆಯಲು ಸಹಕರಿಸಿದ ಶ್ರೀ ಗದಗಿನ್, ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಕೃತಜ್ಞತೆಗಳು. ಶಾಸನದ ಮೂಲಪಾಠ ನೀಡಿದ ಡಾ. ಶ್ರೀನಿವಾಸ ರಿತ್ತಿಯವರಿಗೆ ನನ್ನ ಕೃತಜ್ಞತೆಗಳು.
9. ಶಾಸನದ ಪಡಿಯಚ್ಚನ್ನು ಸ್ಕ್ಯಾನ್ ಮಾಡಿದ ರಘುವೀರರಾವ್ ಪಲ್ಲೇಪತಿ, ಭಾರತೀಯ ವಿಜ್ಞಾನ ಮಂದಿರ, ಬೆಂಗಳೂರು ಮತ್ತು ಪಡಿಯಚ್ಚಿನ ಪಾಸಿಟಿವ್ ಮಾಡಿಕೊಟ್ಟ ಡಾ. ರಾಘವೇಂದ್ರ ಹೆಚ್.ಬಿ. ಜೆಎನ್‌ಎನ್ ತಾಂತ್ರಿಕ ಮಹಾವಿದ್ಯಾಲಯ, ಶಿವಮೊಗ್ಗ ಇವರಿಗೆ ಕೃತಜ್ಞತೆಗಳು.
10. ಗೋಪಿನಾಥರಾವ್ ಟಿ.ಎಂ., *ಎಲಿಮೆಂಟ್ಸ್ ಆಫ್ ಐಕಾನೊಗ್ರಫಿ,* ಅಪೆಂಡಿಕ್ಸ್ ಬಿ. ಪುಟ 2.

| | |
|---|---|
| 24 ಅಂಗುಲ | 1 ಕಿಷ್ಕು |
| 25 ಅಂಗುಲ | 1 ಪ್ರಜಾಪತ್ಯ |
| 26 ಅಂಗುಲ | 1 ಧನುರಗ್ರಹ |
| 27 ಅಂಗುಲ | 1 ಧನುರ್ ಮುಷ್ಠಿ |

ಸನತ್‌ಕುಮಾರ ಸಂಹಿತೆ (ಅಪ್ರಕಟಿತ ತಾಳೆ ಗರಿ, ತಿಗಳಾರಿ ಲಿಪಿ, ಕೆಳದಿ ವಸ್ತು ಸಂಗ್ರಹಾಲಯ)

| | |
|---|---|
| 6 ಗೋಧಿ ಅಷ್ಟ | 1 ಅಂಗುಲ |
| 8 ಅಂಗುಲ | 1 ಹಾಗ |
| 2 ಹಾಗ | 1 ಅರೆ ಹಸ್ತ |
| 2 ಅರೆ ಹಸ್ತ | 1 ತಿಕ್ತ ಅಥವಾ 1 ವಿಸ್ತಿ |
| 34 ಅಂಗುಲ | 1 ಪ್ರಜಾಪತಿ ಹಸ್ತ |
| 36 ಅಂಗುಲ | 1 ಧನು ಹಸ್ತ ಅಥವಾ 1 ಗುಣ ಹಸ್ತ |

ಕೆಳದಿ ವಸ್ತು ಸಂಗ್ರಹಾಲಯದ ಡಾ. ಕೆ. ವೆಂಕಟೇಶ್ ಜೋಯಿಸ್ ಮತ್ತು ಡಾ. ಬಿ.ವಿ. ಕಲ್ಲಾಪುರ ಇವರಿಗೆ ನನ್ನ ಕೃತಜ್ಞತೆಗಳು.

11. ನೆಗ್ರೋಧಮಾಣದಿ ಅರ್ಥೈಸುವಲ್ಲಿ ಸಾಸಿವೆ ಕಾಳಿನ ಮತ್ತು ಅತ್ತಿ ಹಣ್ಣಿನ ಬೀಜದಲ್ಲಿನ ಸಾಮ್ಯವನ್ನು ತಿಳಿಸಿದ ಡಾ. ರಾಜರಾಮ ಹೆಗಡೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ಇವರಿಗೆ ಕೃತಜ್ಞತೆಗಳು.

12. ಶಿವತತ್ವರತ್ನಾಕರ, "ಸ್ಯಾಚ್ಚತುರ್ಹಸ್ತಂ ಭವೇದ್ದನು" 4 ಕಲ್ಲೋಲ 4 ತರಂಗ 12 ಶ್ಲೋಕ.


13. ಕೆ.ಎನ್. ಚಿಟ್ನೀಸ್, "ಕೆಳದಿ ಶಿವಪ್ಪನಾಯಕರ ಶಿಸ್ತು," *ಕೆಳದಿ ಸಮಗ್ರ ಇತಿಹಾಸ*, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ಪುಟ 190.

14. ಕೆ.ಎನ್. ಚಿಟ್ನೀಸ್, 1974, *ಪೂರ್ವೋಕ್ತ*.

15. ಬುಖಾನನ್ ಫ್ರಾನ್ಸಿಸ್, 1988, *ಎ ಜರ್ನಿ ಫ್ರಮ್ ಮದ್ರಾಸ್ ಥ್ರೂದ ಕಂಟ್ರಿಸ್ ಆಫ್ ಮೈಸೂರು ಕೆನರಾ ಮತ್ತು ಮಲಬಾರ್*, ಸಂಪುಟ 3, ಎಇಎಸ್, ನವದೆಹಲಿ, ಪುಟ 316.

16. *EC*., 7, ನಂ. 34, ಸಾಲು 73.

17. ಚಿಟ್ನೀಸ್ ಕೆ.ಎನ್, "ತೊರಗಲ ಸಂಸ್ಥಾನ ಭೂಕಂದಾಯ ಪದ್ಧತಿ", *ಇತಿಹಾಸ ದರ್ಶನ ಸಂಪುಟ 8*, ಪುಟ 166; "ದ ಕೈಫಿಯತ್ ಆಫ್ ಧಾರವಾಡ", *ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸಾಯಿಟ್*, ಜನವರಿ–ಜೂನ್ 1986, ಪುಟ 5-16.



ಅಪ್ಪುಗೇರಿ ಶಾಸನದ ಭಾಗ

# 19. ವಿಜಯನಗರ ಕಾಲದ ಚಿತ್ರದುರ್ಗ ಪ್ರದೇಶದ ಆಡಳಿತ ಘಟಕಗಳು

– ಎಚ್.ಈ. ಬಸವರಾಜಪ್ಪ

ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ರಾಜ್ಯದ ಸ್ಥಾಪನೆಯು ಒಂದು ಮೈಲಿಗಲ್ಲು. ಈ ರಾಜ್ಯವು ಒಂದು ಭಾಷಾಪ್ರದೇಶಕ್ಕೆ ಸೀಮಿತವಾಗಿ ಉಳಿಯದೆ ಬಹುಮಟ್ಟಿಗೆ ಈಗಿನ ದಕ್ಷಿಣ ಭಾರತವನ್ನು ವ್ಯಾಪಿಸಿತ್ತು. ಕ್ರಿ.ಶ. 1336ರಿಂದ 1565ರವರೆಗೆ ಸುಮಾರು 229 ವರ್ಷಗಳ ಬಹುದೀರ್ಘವಾದ ಅವಧಿಯವರೆಗೆ ಈ ವಿಶಾಲವಾದ ರಾಜ್ಯವು ಅಸ್ತಿತ್ವದಲ್ಲಿತ್ತು.

ವಿಜಯನಗರದ ಅರಸರು ಚಿತ್ರದುರ್ಗ ಪ್ರದೇಶವನ್ನು ತಮ್ಮ ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಡಳಿತ ನಡೆಸಿದರು. 1356ರ ಶಾಸನವು ವಿಜಯನಗರದ ಪ್ರತಿನಿಧಿಯಾಗಿ ಮಲ್ಲಿನಾಥ ಒಡೆಯನೆಂಬುವನು 'ಬೆಮ್ಮತ್ತಕಲ್ಲು' ನಾಡನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತ ನಡೆಸುತ್ತಿದ್ದನೆಂಬುದನ್ನು ತಿಳಿಸುತ್ತದೆ.[1] ವಿಜಯನಗರ ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಭಾಗಿಸಿದ್ದರು. ಅವುಗಳಲ್ಲಿ ಸೀಮೆ, ವೇಂಠೆ ಮತ್ತು ಚಾವಡಿ ಎಂಬ ವಿಭಾಗಗಳು ಪ್ರಮುಖವಾಗಿದ್ದವು. ಮೊದಲನೇ ಬುಕ್ಕನ ಕಾಲಾವಧಿಯಲ್ಲಿ ಹಲವು ಗ್ರಾಮಗಳನ್ನು ಒಳಗೊಂಡ ಪ್ರದೇಶವನ್ನು ಸೀಮೆ ಎಂದು ಕರೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಪ್ರದೇಶವು ವಿಜಯನಗರ ಅರಸರ ಆಡಳಿತಾವಧಿಯಲ್ಲಿ ಯಾವ ಯಾವ ರೀತಿಯ ಆಡಳಿತಾತ್ಮಕ ವಿಂಗಡಣೆಗಳನ್ನು ಹೊಂದಿದ್ದಿತೆಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಅವುಗಳು ಹೀಗಿವೆ:

**1. ಕೊಟ್ಟೂರು ಚಾವಡಿ:** ಇದಕ್ಕೆ ಚಿತ್ರದುರ್ಗ ಪ್ರದೇಶದ ದಾವಣಗೆರೆ ಮತ್ತು ಹರಿಹರ ತಾಲೂಕುಗಳು ಸೇರಿದ್ದವು.

**2. ಯಗಟಿ ಚಾವಡಿ:** ಚಿತ್ರದುರ್ಗ ಪ್ರದೇಶದ ಹೊಳಲ್ಕೆರೆ ತಾಲೂಕು ಸೇರಿತ್ತು.

**3. ರಾಯದುರ್ಗ ಸೀಮೆ:** ವಿಜಯನಗರ ಅರಸರ ಕಾಲಾವಧಿಯಲ್ಲಿ ರಾಯದುರ್ಗ ಸೀಮೆಯು ಕರ್ನಾಟಕ, ಆಂಧ್ರಪ್ರದೇಶಗಳನ್ನೊಳಗೊಂಡ ವಿಶಾಲ ಪ್ರದೇಶವಾಗಿತ್ತು. ಇದರಲ್ಲಿ ಚಿತ್ರದುರ್ಗ ಪ್ರದೇಶದ ಮೊಳಕಾಲ್ಮೂರು, ಹಿರಿಯೂರು ಮತ್ತು ಚಳ್ಳಕೆರೆ ತಾಲೂಕುಗಳು ಸೇರಿದ್ದವು. ಆಂದ್ರಪ್ರದೇಶದಲ್ಲಿ ವಿಶಾಲವಾದ ಆಡಳಿತ ವಿಭಾಗಗಳನ್ನು ಸೀಮೆ ಎಂದು ಕರೆಯುತ್ತಿದ್ದರು.

ವಿಜಯನಗರ ಅರಸರ ಕಾಲಾವಧಿಯಲ್ಲಿ ಚಿತ್ರದುರ್ಗ ಪ್ರದೇಶದಲ್ಲಿ 'ಅಗ್ರಹಾರ' ಮತ್ತು 'ಮಹಾನಾಡು' ಎಂಬ ಸ್ಥಳೀಯ ಸಂಸ್ಥೆಗಳು ಅಸ್ತಿತ್ವದಲ್ಲಿದ್ದವು. ವಿಜಯನಗರ ಕೇಂದ್ರೀಕೃತ ಆಡಳಿತ ವ್ಯವಸ್ಥೆಯಲ್ಲಿದ್ದರೂ ಗ್ರಾಮ ಹಂತದಿಂದ ಪ್ರಾಂತ್ಯಗಳವರೆಗೂ ಭೂಹಿಡುವಳಿಗಳ ಹಂಚಿಕೆಯಲ್ಲಿ ಪ್ರಾಂತ್ಯಾಧಿಕಾರಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದರು. ಇದು ವಿಕೇಂದ್ರೀಕರಣದ ಒಂದು ಪ್ರಾಯೋಗಿಕ ಉದಾಹರಣೆಯಾಗಿದೆ. ಈ ಹಿನ್ನೆಲೆಯಲ್ಲಿ ಬರ್ಟನ್ ಸ್ಟೀನ್‌ರವರು ವಿಜಯನಗರ ಸಾಮ್ರಾಜ್ಯವನ್ನು ತುಂಡು ರಾಜ್ಯಗಳ ಒಕ್ಕೂಟವೆಂದು ಹೇಳಿರುವುದನ್ನು ನಾವು ಗಮನಿಸಬೇಕು. ರಾಜಕೀಯ ಪರಮಾಧಿಕಾರವು ತುಂಡು, ತುಂಡಾಗಿ ಒಡೆದುಹೋಗಿರುವುದು ಕರ್ನಾಟಕದಲ್ಲಿ ಮಧ್ಯಯುಗದ ನಿಯಂತ್ರಣದ ಆಡಳಿತ ವ್ಯವಸ್ಥೆ ಉದಯಿಸಲು ದಾರಿಮಾಡಿಕೊಟ್ಟಿತು. ಇಂತಹ ಸ್ಥಳೀಯ ಆಡಳಿತ ಘಟಕಗಳು ಚಿತ್ರದುರ್ಗ ಪ್ರದೇಶದಲ್ಲಿಯೂ ಇದ್ದವು. ಆ ಬಗ್ಗೆ ಶಾಸನಗಳು ವಿವರವಾದ ಮಾಹಿತಿಯನ್ನು ನೀಡುತ್ತವೆ. 'ಸೀಮೆ' ಎಂಬುದು ಸಂಸ್ಕೃತದ 'ಸೀಮಾ' ಪದವೇ ಆಗಿದೆ. ಕೈಫಿಯತ್ತುಗಳಲ್ಲಿ ಬರುವಂತೆ ಸೀಮೆಯು ಒಂದು ನಿರ್ದಿಷ್ಟವಾದ ಆಡಳಿತ ಘಟಕವಾಗಿರುತ್ತಿತ್ತು. ವಿಜಯನಗರ ಕಾಲದಲ್ಲಿ ಸೀಮೆಯು ಒಂದು ಆಡಳಿತ ವಿಭಾಗ ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ. ಆದರೆ ಕ್ರಿ.ಶ. 1400ಕ್ಕಿಂತ ಹಿಂದಿನ ಕನ್ನಡ ಶಾಸನಗಳಲ್ಲಿ ಸೀಮೆ ಎಂಬುದು ಎಲ್ಲೆ ಎಂಬ ಅರ್ಥದಲ್ಲೇ ಪ್ರಯೋಗವಾಗಿರುವುದು ಗಮನಾರ್ಹವಾದ ಸಂಗತಿ. ಚಿತ್ರದುರ್ಗ ಪ್ರದೇಶದಲ್ಲಿದ್ದ ಹಲವು ಆಡಳಿತ ಘಟಕಕ್ಕೆ ಸೀಮೆ ಎಂದು ಕರೆಯಲಾಗಿತ್ತು. ಇವುಗಳೆಲ್ಲವೂ ಶಾಸನೋಕ್ತವಾಗಿವೆ. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಇತರ ಪ್ರದೇಶಗಳಂತೆ ಅವರ ಅಧೀನಕ್ಕೊಳಪಟ್ಟ ಈ ಪ್ರದೇಶದಲ್ಲೂ ಮೂಡಿಬಂದ ಆಡಳಿತ ವಿಭಾಗಗಳು ಸೀಮೆಗಳೇ ಆಗಿವೆ. ವಿಜಯನಗರ ಆಳ್ವಿಕೆಯ ಕಾಲದಲ್ಲಿದ್ದ ಚಿತ್ರದುರ್ಗ ಪ್ರದೇಶದ ಸೀಮೆಯ ವಿಂಗಡಣೆಗಳ ವಿವರಗಳನ್ನು ಈ ರೀತಿ ಮಾಡಬಹುದು.

### 1. ರಾಮಗಿರಿ ಸೀಮೆ:

ರಾಮಗಿರಿ ಈಗ ಹೊಳಲ್ಕೆರೆ ತಾಲೂಕಿನ ಹೋಬಳಿ ಕೇಂದ್ರವಾಗಿದೆ. ಈ ಪ್ರದೇಶ ಧಾರ್ಮಿಕವಾಗಿಯೂ ಪ್ರಸಿದ್ಧವಾಗಿದೆ. ರಾಮಲಿಂಗದೇವರು ಇಲ್ಲಿನ ಬೆಟ್ಟದಲ್ಲಿ ನೆಲೆಸಿರುವುದರಿಂದ ಈ ಊರಿಗೆ ರಾಮಗಿರಿ ಎಂದು ಕರೆದಿರುವುದು ಐತಿಹ್ಯ ಸಂಗತಿ. ಹೊನ್ನಗೊಂಡನಹಳ್ಳಿ, ಬಾಗೂರು ಗ್ರಾಮಗಳು ಈ ಸೀಮೆಯ ಭಾಗವಾಗಿದ್ದವೆಂದು ಶಾಸನದಿಂದ ತಿಳಿಯುತ್ತದೆ. ಕ್ರಿ.ಶ. 1552ರ ಶಾಸನವು ರಾಮಗಿರಿ ಸೀಮೆಯ ಆಪಳಿತವನ್ನು ಕರಣಿಕ ಪ್ರಭುಕಯ್ಯನ ಸೋದರ ಬಸಪ್ಪಯ್ಯ ನಡೆಸುತ್ತಿದ್ದನೆಂಬ ವಿವರ ನೀಡತ್ತದೆ.[2] ಕ್ರಿ.ಶ. 1744ರಲ್ಲಿ ಮಲೆನಾಡಿನ ನಾಯಕರು, ಹರಪನಹಳ್ಳಿಯ

ಸೋಮಶೇಖರ ನಾಯಕ, ಆನೆಗೊಂದಿಯ ಫೌಜುದಾರ, ರಾಯದುರ್ಗದ ದಂಡು ಮತ್ತು ಇನ್ನಿತರ ಪಾಳೆಯಗಾರರು ಸೇರಿ ರಾಮಗಿರಿ ಕೋಟೆಗೆ ಮುತ್ತಿಗೆ ಹಾಕಿದಾಗ ಚಿತ್ರದುರ್ಗದ ನಾಯಕ ಅರಸನಾದ ಹಿರೇಮದಕೆರಿ ನಾಯಕನು ಶತ್ರುಗಳನ್ನು ಹಿಮ್ಮೆಟ್ಟಿಸಿದನು. ಆ ಮೂಲಕ ಹಿರೇಮದಕೆರಿ ನಾಯಕನು ರಾಮಗಿರಿಯನ್ನು ಪುನಃ ಆಕ್ರಮಿಸಿಕೊಂಡನು. ಅನಂತರದಲ್ಲಿ ಈ ಪ್ರದೇಶವು ಚಿತ್ರದುರ್ಗ ನಾಯಕ ಅರಸರ ಆಡಳಿತದಲ್ಲಿಯೇ ಉಳಿಯಿತು.

**2. ಜಾಜೂರು ಸೀಮೆ:**

ಇದು ಹೊಳಲ್ಕೆರೆ ತಾಲೂಕಿನ ಮುಖ್ಯಸ್ಥಳವಾಗಿದೆ. ಈ ಸ್ಥಳವು ಶಾಸನಗಳಲ್ಲಿ ವಿಜಯನಗರ ಅರಸರ ಕಾಲದಿಂದ ಚಿತ್ರದುರ್ಗ ಪಾಳೆಯಗಾರರ ಕಾಲದವರೆಗೆ ಜಾಜೂರ ಸೀಮೆಯೆಂದು ಉಲ್ಲೇಖಿಸಲ್ಪಟ್ಟಿರುವ ಪ್ರಮುಖ ಆಡಳಿತ ಪ್ರದೇಶವಾಗಿತ್ತು. ಕ್ರಿ.ಶ. 1540ರ ಅಚ್ಯುತರಾಯನ ಕಾಲದ ಶಾಸನವು ಪೆನುಗೊಂಡೆಯ ವೀರಪ್ಪನಾಯಕನ ನಿರೂಪದ ಮೇರೆಗೆ ಜಾಜೂರು ಸೀಮೆಯನ್ನು ಹಿರಿಯ ಮಲ್ಲಪ್ಪಣ್ಣ ಅಯ್ಯನು ಆಳುತ್ತಿದ್ದನೆಂದು ತಿಳಿಸುತ್ತದೆ.[3] ಇವನು ಜಾಜೂರು ಸೀಮೆಯ ಮದುವೆಯ ಸುಂಕವನ್ನು ಸರ್ವಮಾನ್ಯ ಮಾಡಿದ ಉಲ್ಲೇಖವಿದೆ. ಕ್ರಿ.ಶ. 1664ರ ನಂತರ ಈ ಸೀಮೆಯ ವಿಸ್ತಾರ ಕಡಿಮೆಯಾಗಿ ಶಾಸನಗಳಲ್ಲಿ ಇದನ್ನು ಜಾಜೂರು ಸ್ಥಳವೆಂದು ಕರೆಯಲಾಗಿದೆ.

**3. ಚಿತ್ರಹಳ್ಳಿ ಸೀಮೆ:**

ಹೊಳಲ್ಕೆರೆ ತಾಲೂಕು, ತಾಳ್ಯ ಹೋಬಳಿಗೆ ಸೇರಿರುವ ಚಿತ್ರಹಳ್ಳಿಯು ಈಗ ಸುಮಾರು 200 ಮನೆಗಳಿರುವ ಗ್ರಾಮ. ಚಿತ್ರದುರ್ಗ ತಾಲೂಕಿನ ಕಡಲೆಗುದ್ದು ಗ್ರಾಮದ ಶಾಸನದಲ್ಲಿ 'ಚಿತ್ರಹಳ್ಳಿ ಸೀಮೆ'ಯ ಉಲ್ಲೇಖವಿದೆ. ಕಡಲೆಗುದ್ದು ಗ್ರಾಮವು ಆ ಸೀಮೆಗೆ ಸೇರಿದ ಹಿರೇಗುಂಟನೂರು ಮಾಗಣೆಗೆ ಸಲ್ಲುವ ಗ್ರಾಮವಾಗಿದ್ದಿತೆಂಬ ಅಂಶವು ತಿಳಿಯುತ್ತದೆ. ಕ್ರಿ.ಶ. 1653ರ ಶಾಸನವು ಕಾಮಗೇತಿ ಓಬಣ್ಣ ನಾಯಕನ ಮೊಮ್ಮಗ ಮದಕೆರಿ ನಾಯಕ ಶ್ರೀರಂಗರಾಯನಿಂದ ಹಗಲು ಕಗ್ಗೊಲೆ ಮಾನ್ಯ ಎಂಬ ಬಿರುದನ್ನು, ಹಾಗೆಯೇ ಚಿತ್ರಹಳ್ಳಿ ಸೀಮೆಯ ಹಿರೇಗುಂಟನೂರು ಗ್ರಾಮವನ್ನು ಅಮರ ಮಾಗಣೆಯಾಗಿ ಪಡೆದ ಬಗ್ಗೆ ವಿವರವಿದೆ.[4]

**4. ದುಮ್ಮಿಯ ಸೀಮೆ:**

ಈಗ ಹೊಳಲ್ಕೆರೆ ತಾಲೂಕಿಗೆ ಸೇರಿರುವ ಹೊಳಲ್ಕೆರೆಯಿಂದ ಚನ್ನಗಿರಿಗೆ ಹೋಗುವ ಮಾರ್ಗದಲ್ಲಿ ಸುಮಾರು ಸಾವಿರಕ್ಕೂ ಹೆಚ್ಚು ಮನೆಗಳಿರುವ ಒಂದು ದೊಡ್ಡ ಗ್ರಾಮ. ಕ್ರಿ.ಶ. 1533ರ ಶಾಸನದಲ್ಲಿ ದುಮ್ಮಿಯ ಸೀಮೆಯ ಉಲ್ಲೇಖವಿದೆ. ಅಚ್ಯುತರಾಯ ಮಹಾರಾಯರ ದಕ್ಷಿಣ ಭುಜದಂಡನಾದ ಕೃಷ್ಣಪ್ಪನಾಯಕರ ಕಾರ್ಯಕ್ಕೆಕರ್ತರಾದ ಮಲ್ಲರಸಯ್ಯನವರು ದುಮ್ಮಿಯ ಸೀಮೆಯನ್ನು ಆಳುತ್ತಿದ್ದನೆಂದು ಶಾಸನವು ತಿಳಿಸುತ್ತದೆ.[5] ಇದೇ ಗ್ರಾಮದ ಕ್ರಿ.ಶ. 1527ರ ಕೃಷ್ಣದೇವರಾಯನ ಕಾಲದ ಒಂದು ಶಾಸನವು ದುಮ್ಮಿಯ ಪಟ್ಟಣದ 18 ಗೌಡ ಪ್ರಜೆಗಳು ಸೇರಿ ಹಿಂದೆ ದುಮ್ಮಿಯನ್ನು ಬಿಟ್ಟು ಹೋದ ಹಲವು ಕೃಷಿ ಒಕ್ಕಲುಗಳನ್ನು ಬರಮಾಡಿಕೊಂಡು ಭೂ ಹಿಡುವಳಿಗಳನ್ನು ಪುನಃ ಅವರಿಗೆ ಹಂಚಿದ ಬಗೆಗೆ ವಿವರವಿದೆ.[6] ಈ ಶಾಸನದಿಂದ ಮುಖ್ಯವಾಗಿ ಗ್ರಹಿಸಬಹುದಾದ ವಿಚಾರವೆಂದರೆ ಅಂದಿನ ಸಮಾಜದಲ್ಲಿ ಗ್ರಾಮದ ಗೌಡರು ಭೂಹಿಡುವಳಿಗಳ ಹಂಚಿಕೆಯಲ್ಲಿ ಮತ್ತು ಕಂದಾಯ ವಸೂಲಿಯ ವಿಚಾರದಲ್ಲಿ ರಾಜರಿಗೆ ಮಧ್ಯವರ್ತಿಗಳಾಗಿದ್ದರು. ಇದರಿಂದ ಗ್ರಾಮಗಳು ಸ್ವಾಯತ್ತ ಆಡಳಿತದ ಘಟಕಗಳಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ.

**5. ಬಾಗೂರು ಸೀಮೆ:**

ಇಂದು ಬಾಗೂರು ಹೊಸದುರ್ಗ ತಾಲೂಕಿಗೆ ಸೇರಿದ ಹೋಬಳಿ ಕೇಂದ್ರವಾಗಿದೆ. ಬಾಗೂರಿನಲ್ಲಿ ಬೆಳೆಯುವ ಅಕ್ಕಿಯಿಂದ ಇದು ಸಣ್ಣಕ್ಕಿ ಬಾಗೂರು ಎಂದೇ ಪ್ರಸಿದ್ಧವಾಗಿತ್ತು. ಹೊಸದುರ್ಗ ಮತ್ತು ಹೊಳಲ್ಕೆರೆ ತಾಲೂಕಿನಲ್ಲಿ ಸಿಕ್ಕಿರುವ ಹಲವು ಶಾಸನಗಳಲ್ಲಿ ಈ ಗ್ರಾಮದ ಪ್ರಸ್ತಾಪವಿದೆ. ಇದು ಶಾಸನಗಳಲ್ಲಿ ಭಾಗ್ಯಪುರ, ಬಾಗೂರು ಎಂದು ಕರೆಯಲ್ಪಟ್ಟಿದೆ. ಕ್ರಿ.ಶ. 1554ರ ಸದಾಶಿವರಾಯನ ಕಾಲದ ಶಾಸನವು ವಿಜಯನಗರದ ಪ್ರತಿನಿಧಿಯಾದ ವೀರಣ್ಣನಾಯಕ ಬಾಗೂರು ಸೀಮೆಯ ಪಾರುಪತ್ಯದ ತನ್ನ ಆಡಳಿತಾವಧಿಯಲ್ಲಿ ಕೆಲವು ಸ್ವತಂತ್ರ್ಯ ನಿರ್ಣಯಗಳನ್ನು ತೆಗೆದುಕೊಂಡ ಬಗ್ಗೆ ತಿಳಿಸುತ್ತದೆ.[7] ಅವನ ಆಡಳಿತಾವಧಿಯಲ್ಲಿ ಸುಂಕದ ಅಧಿಕಾರಿಯಾಗಿದ್ದ ನರಸಿಂಹಯ್ಯನ ಭಿನ್ನವತ್ತಳೆಯ ಮೇರೆಗೆ ಅಲ್ಲಿನ ಗೌಡರಾದ ಲಿಂಗನಗೌಡ, ಶಾನುಭೋಗರಾದ ತಿಮ್ಮಪ್ಪ ಮತ್ತು ಇತರ ಪ್ರಜೆಗಳ ಸಮ್ಮುಖದಲ್ಲಿ ಪರ್ಯಾಲೋಚನೆಯನ್ನು ಮಾಡಿ, ಬಾಗೂರು ಸೀಮೆಯ ಹೊರಭಾಗದಲ್ಲಿ ಒಂದು ಪೇಟೆಯನ್ನು ಕಟ್ಟಿಸಿದನು. ಅದಕ್ಕೆ 'ಕೃಷ್ಣಾಪುರ' ಎಂಬ ಹೆಸರನ್ನು ಇಟ್ಟು ಅಲ್ಲಿಗೆ ಹಲವು ಒಕ್ಕಲುಗಳನ್ನು ಬರಮಾಡಿಕೊಂಡು ಅಲ್ಲಿನ ಭೂಹಿಡುವಳಿಗಳನ್ನು ಒಂದು ವರ್ಷದವರೆಗೆ ತೆರಿಗೆ ಇಲ್ಲದೆ ಒಪ್ಪಂದದ ಮೂಲಕ ಕೃಷಿಗೊಳಪಡಿಸಲು ಅವಕಾಶ ಕಲ್ಪಿಸಿರುವುದು ಶಾಸನದಿಂದ ತಿಳಿದುಬರುತ್ತದೆ. ಇದರಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ವಿಜಯನಗರ ಕಾಲದ ಅಧೀನ ಅಮರನಾಯಕರು ತಾವು ಆಡಳಿತ ನಡೆಸುವ ಸೀಮೆಗಳಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶವಿತ್ತು. ಹಾಗೆಯೆ ಸ್ಥಳೀಯ ಅಮರನಾಯಕರು ಯಾವುದೇ ತೀರ್ಮಾನವನ್ನು ಕೈಗೊಳ್ಳುವ ಪೂರ್ವದಲ್ಲಿ ಗ್ರಾಮದ ಗೌಡರುಗಳ ಒಪ್ಪಿಗೆ ಪಡೆಯಬೇಕಾಗಿರುವುದು ಶಾಸನದಿಂದ ತಿಳಿದುಬರುತ್ತದೆ.

### 6. ಬೂದಿಹಾಳು ಸೀಮೆ:

ಇಂದು ಶ್ರೀರಾಂಪುರವೆಂದು ಕರೆಯಲ್ಪಟ್ಟಿರುವ ಗ್ರಾಮವು ಹಿಂದಿನ ಬೂದಿಹಾಳ ಆಗಿತ್ತು. ಈ ಗ್ರಾಮ ಈಗ ಹೊಸದುರ್ಗ ತಾಲೂಕಿನ ಹೋಬಳಿ ಕೇಂದ್ರವಾಗಿದೆ. ಕ್ರಿ.ಶ. 1554ರ ಸದಾಶಿವರಾಯನ ಕಾಲದ ಶಾಸನದಲ್ಲಿ ಬೂದಿಹಾಳ ಸೀಮೆಯ ಮಹಾಮಂಡಲೇಶ್ವರ ರಾಮರಾಜಯ್ಯ ವಿಠಲೇಶ್ವರ ಶ್ರೀಪತಿ ಓಬಳೇಶ್ವರಯ್ಯ ಮಹಾಅರಸು ರಾಜನ ಪ್ರತಿನಿಧಿಯಾಗಿ ಬೂದಿಹಾಳ ಸೀಮೆಯ ಆಡಳಿತ ನಡೆಸುತ್ತಿರುವ ವೇಳೆಯಲ್ಲಿ ತಾನು ರಾಜನ ಪ್ರತಿನಿಧಿಯಾಗಿದ್ದಾನೆಂದು ಹೇಳಿಕೊಳ್ಳುತ್ತಾನೆ.[8] ಬೂದಿಹಾಳ ಸೀಮೆಯ ಕೆರೆಯ ಕೆಳಭಾಗದ ಭೂಮಿಯನ್ನು ಕ್ಷೌರಿಕರಿಗೆ ತೆರಿಗೆ ರಹಿತವಾಗಿ ಕೊಟ್ಟ ವಿವರವಿದೆ. ಇದರಿಂದ ಅಂದಿನ ಸಮಾಜದಲ್ಲಿ ತೀರ ಕೆಳಸ್ತರದಲ್ಲಿರುವ ಕ್ಷೌರಿಕರು ಸಹ ಭೂಒಡೆತನವನ್ನು ಹೊಂದಿರುವ ಬಗ್ಗೆ ವಿವರವಿದೆ.

### 7. ಮತ್ತನಡುವಿನ ಸೀಮೆ:

ಮತ್ತೋಡು ಹೊಸದುರ್ಗ ತಾಲೂಕಿನ ಒಂದು ಹೋಬಳಿ ಕೇಂದ್ರವಾಗಿದೆ. ಕ್ರಿ.ಶ. 1604ರಲ್ಲಿ ಮತ್ತೋಡು ವಂಶದ ಮೂಲಪುರುಷ ಚಿನ್ನದ ಗಿರಿಯಪ್ಪನಾಯಕನು ಆನೆಯನ್ನು ಪಳಗಿಸಿ ಪೆನುಗೊಂಡೆಯ ಅಧಿಪತಿ ವೆಂಕಟಪತಿರಾಯನಿಂದ ಲಕ್ಕನಹಳ್ಳಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನು ಬಳುವಳಿಯಾಗಿ ಪಡೆದಿದ್ದನು. ಅರೆಹಳ್ಳಿ ಗ್ರಾಮವು ಈ ಸೀಮೆಗೆ ಸೇರಿದ ಗ್ರಾಮವೆಂದು ಶಾಸನದಿಂದ ತಿಳಿಯುತ್ತದೆ. ಚಿತ್ರದುರ್ಗದ ರಾಜ ವೀರ ಮದಕರಿನಾಯಕನ ಭಾವಮೈದನಾದ ಮತ್ತೋಡು ಹಾಲಪ್ಪನಾಯಕನೆಂಬುವನು ಚಿತ್ರದುರ್ಗದ ದನಗಳು ತನ್ನ ಸೀಮೆಯ ಸರಹದ್ದಿನಲ್ಲಿ ಬಂದು ಮೇಯುತ್ತಿರುವ ವೇಳೆಯಲ್ಲಿ ಕಟ್ಟಿಹಾಕುವುದಕ್ಕೆ ಹೈದರಾಲಿಯ ಸಹಾಯವನ್ನು ಪಡೆದಿದ್ದನು. ಹಾಗೆಯೇ ಚಿತ್ರದುರ್ಗದ ನಾಯಕ ಅರಸರ ಸೋಲಿಗೆ ಇವನು ಕಾರಣನಾಗಿರುವ ಬಗ್ಗೆ ವಿವರವಿದೆ.

### 8. ಜಗಳೂರು ಸೀಮೆ:

ಇಂದು ಜಗಳೂರು ತಾಲೂಕು ದಾವಣಗೆರೆ ಜಿಲ್ಲಾ ಕೇಂದ್ರಕ್ಕೆ ಸೇರಿದೆ. 1997ಕ್ಕೆ ಮೊದಲು ಚಿತ್ರದುರ್ಗ ಜಿಲ್ಲೆಯ ಒಂಬತ್ತು ತಾಲೂಕು ಕೇಂದ್ರಗಳಲ್ಲಿ ಒಂದಾಗಿದ್ದಿತು. ಕ್ರಿ.ಶ. 1526ರ ಸಿಬಗೂರು ಶಾಸನದಲ್ಲಿ ಜಗಳೂರು ಸೀಮೆಯೆಂದು ಕರೆಯಲ್ಪಟ್ಟಿದೆ.[9] ಕೃಷ್ಣದೇವರಾಯನ ಕಾಲದ ಈ ಶಾಸನವು ತಿಳಿಸುವಂತೆ ಅಂದಿನ ಜಗಳೂರು ಸೀಮೆಯಲ್ಲಿ ವಿಶ್ವನಾಥರಾಉತನ ಮಗ ರಂಗನಾಥರಾಉತ ಆಡಳಿತ ನಡೆಸುತ್ತಿದ್ದನೆಂದು ತಿಳಿಸುತ್ತದೆ. ಇವರು ಆರ್ಯ ಕ್ಷತ್ರಿಯ ಸಮುದಾಯಕ್ಕೆ ಸೇರಿದವರೆಂದು ಹೇಳುತ್ತದೆ. ಕ್ರಿ.ಶ. 1680ರ ಒಂದು ಶಾಸನದಲ್ಲಿ ಜಗಳೂರು ನಾಡು ಎಂದು ಉಲ್ಲೇಖಿಸಲ್ಪಟ್ಟಿದೆ. ಕ್ರಿ.ಶ. 1683ರ ಕಸವನಹಳ್ಳಿ ಶಾಸನದಲ್ಲಿ ಆ ಗ್ರಾಮವು ಜಗಳೂರು ಸೀಮೆಗೆ ಸೇರಿದ ಗ್ರಾಮವೆಂಬುದಾಗಿ ವಿವರವಿದೆ. ಹೀಗಾಗಿ ವಿಜಯನಗರ ಕಾಲದ ನಂತರ ಚಿತ್ರದುರ್ಗದ ನಾಯಕ ಅರಸರ ಆಡಳಿತಕ್ಕೊಳಪಟ್ಟ ಪ್ರದೇಶವಾಗಿತ್ತು.[10]

### 9. ಬಿಳಿಚೋಡು ಸೀಮೆ:

ಈಗ ಜಗಳೂರು ತಾಲೂಕಿಗೆ ಸೇರಿರುವ ಹೋಬಳಿ ಕೇಂದ್ರವಾಗಿದೆ. ಕ್ರಿ.ಶ. 1556ರ ಶಾಸನದಲ್ಲಿ ಇದು ಕೊಟ್ಟೂರು ಚಾವಡಿಯ ಉಚ್ಚಂಗಿ ವೇಂಠೆಗೆ ಸೇರಿದ ಬಿಳಿಚೋಡು ಸೀಮೆಯಾಗಿತ್ತು. ಕ್ರಿ.ಶ. 1554ರ ಶಾಸನವು ಬಿಳಿಚೋಡು ಸೀಮೆಗೆ ದಮ್ಮಪ್ಪನಾಯಕನ ಪ್ರತಿನಿಧಿಯಾದ ಜೈಯಪ್ಪನಾಯಕನ ಮಗ ಕೃಷ್ಣಪ್ಪನಾಯಕನು ಅಮರನಾಯಕನಾಗಿದ್ದುದಾಗಿ ಹೇಳುತ್ತದೆ.[11] ಅವನು ತನಗೆ ಸೇರಿದ್ದ ಬಿಳಿಚೋಡು ಗ್ರಾಮದಲ್ಲಿ ಕುರುಬರು ಕೊಡಬೇಕಾಗಿದ್ದ ಕುರಿ ತೆರಿಗೆಯನ್ನು ತೆಗೆದು ಹಾಕಿದ ಬಗ್ಗೆ ವಿವರವಿದೆ. ಬಿಳಿಚೋಡಿನವನೇ ಆದ ಬಿಚ್ಚುಗತ್ತಿ ಭರಮಣ್ಣನಾಯಕನು ಕ್ರಿ.ಶ. 1689ರಲ್ಲಿ ಚಿತ್ರದುರ್ಗದ ನಾಯಕ ಅರಸನಾಗುತ್ತಾನೆ. ಈ ದೃಷ್ಟಿಯಿಂದ ಬಿಳಿಚೋಡು ಸೀಮೆಯು ವಿಜಯನಗರ ಕಾಲಾನಂತರವೂ ಒಂದು ಆಡಳಿತ ಕೇಂದ್ರವಾಗಿತ್ತು. ಹಾಗೆಯೆ ಈ ಪ್ರದೇಶವು ಕೃಷಿ ಆಧಾರಿತ ಸಮಾಜದ ಮೇಲೆ ನಿಯಂತ್ರಣವನ್ನು ಹೊಂದಿರುವ ಬಗ್ಗೆ ಶಾಸನಗಳು ಸ್ಪಷ್ಟಪಡಿಸುತ್ತವೆ.

### 10. ಹಿರಿಯೂರು ಸೀಮೆ:

ಇಂದು ಹಿರಿಯೂರು ಚಿತ್ರದುರ್ಗ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದೆ. ಕ್ರಿ.ಶ. 1511ರ ಶಾಸನದಲ್ಲಿ 'ಕುಂತಳ ದೇಶ ವಿಖ್ಯಾತೇ ಹಿರಿಯೂರಾಖ್ಯ ಸೀಮನಿ.....' ಎಂದಿದೆ.[12] ಕ್ರಿ.ಶ. 1589ರ ಮಸ್ಕಲ್ಲು ಗ್ರಾಮದ ತಾಮ್ರಶಾಸನದಲ್ಲಿ ಹಿರಿಯೂರು ಸ್ಥಳಾಂತರಗಳ ವಿವರವಿದೆ.[13] ಅದರ ಮೇರೆಗೆ ಈ ಸೀಮೆಯಲ್ಲಿ ಹಿರಿಯೂರು ಸ್ಥಳ, ಹೊಸೂರು ಸ್ಥಳ, ಗೌಡನಹಳ್ಳಿ ಸ್ಥಳ, ಕುರುಬರಹಳ್ಳಿ ಸ್ಥಳ, ಬಸವಾಪಟ್ಟಣದ ಸ್ಥಳ ಸಮಾವೇಶಗೊಂಡಿದ್ದವು. ಕ್ರಿ.ಶ. 1569ರ ಶಾಸನದಲ್ಲಿ ಹಿರಿಯೂರು ಸೀಮೆಯ ಹರತಿಯ ಓಬಣ್ಣ ನಾಯಕನ ಮಗ ಮಹಾನಾಯಕಾಚಾರ್ಯ ಕೆಂಚಯ್ಯ ನಾಯಕನು ನದಿಯ ಕೆಳಭಾಗದ ಗ್ರಾಮವನ್ನು ಅಮರ ಮಾಗಣಿಯಾಗಿ ಮಹಾಮಂಡಲೇಶ್ವರ ರಾಮರಾಜ ತಿರುಮಲರಾಯನಿಂದ ಪಡೆದಿದ್ದನೆಂದು ಹೇಳಿದೆ.[14]

ಒಟ್ಟಿನಲ್ಲಿ ಇವುಗಳಲ್ಲದೆ ಇನ್ನು ಹಲವು ಸೀಮೆಗಳಿದ್ದ ಬಗ್ಗೆ ಪಿ.ವಿ. ಕೃಷ್ಣಮೂರ್ತಿಯವರು ಶಾಸನಗಳ ಆಧಾರದಿಂದ ಗುರುತಿಸಿದ್ದಾರೆ. ಅವುಗಳಲ್ಲಿ ದಾವಣಗೆರೆ ತಾಲೂಕಿನಲ್ಲಿರುವ ಬೇತೂರು ಸೀಮೆ, ಬಸವಾಪಟ್ಟಣ ಸೀಮೆ, ಗುಂಟನೂರು ಸೀಮೆ, ಬನ್ನಿಕೋಡು ಸೀಮೆ, ನವಬಕುವಾಡ ಸೀಮೆ, ಹರಿಹರ ಸೀಮೆ, ಕೊಡಗನೂರು ಸೀಮೆ, ಹೊರಕೆರೆದೇವರಪುರ ಸೀಮೆ ಮುಂತಾದವುಗಳು ಶಾಸನೋಕ್ತವಾಗಿರುವ ಆಡಳಿತ ವಿಭಾಗಗಳಾಗಿದ್ದವು.

## ಟಿಪ್ಪಣಿಗಳು

1. *ಎಪಿಗ್ರಾಫಿಯ ಕರ್ನಾಟಿಕ,* ಸಂ. 11, ಚಿತ್ರದುರ್ಗ 3.
2. *ಅದೇ,* ಹೊಳಲ್ಕೆರೆ 120.
3. *ಅದೇ,* ಹೊಳಲ್ಕೆರೆ 62.
4. *ಅದೇ,* ಚಿತ್ರದುರ್ಗ 51.
5. *ಅದೇ,* ಹೊಳಲ್ಕೆರೆ 15.
6. *ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿ (ಎಂ.ಎ.ಆರ್),* 1939, ದುಮ್ಮಿ ಶಾಸನ ಸಂ. 16.
7. *ಎಪಿಗ್ರಾಫಿಯ ಕರ್ನಾಟಿಕ,* ಸಂ. 11, ಹೊಳಲ್ಕೆರೆ 112.
8. *ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿ (ಎಂ.ಎ.ಆರ್),* 1946, ಸಂ. 2.
9. *ಎಪಿಗ್ರಾಫಿಯ ಕರ್ನಾಟಿಕ,* ಸಂ. 11, ಜಗಳೂರು 41.
10. *ಅದೇ,* ಜಗಳೂರು 46.
11. *ಅದೇ,* ಜಗಳೂರು 2.
12. *ಅದೇ,* ಹೊಳಲ್ಕೆರೆ 94.
13. *ಅದೇ,* ಹಿರಿಯೂರು 88.
14. *ಅದೇ,* ಹಿರಿಯೂರು 78.

## ಆಧಾರ ಗ್ರಂಥಗಳು


1. ವೆಂಕಟರತ್ನಂ ಎ.ವಿ., 1974, *ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ,* ಮೈಸೂರು.
2. ಕೃಷ್ಣಮೂರ್ತಿ ಪಿ.ವಿ., 1999, "ಚಿತ್ರದುರ್ಗ ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು", ಕಲಬುರ್ಗಿ ಎಂ.ಎಂ. (ಸಂ.), *ಕರ್ನಾಟಕ ಆಡಳಿತ ವಿಭಾಗಗಳು,* ಭಾಗ 1, ಹಂಪಿ.
3. ಕೃಷ್ಣಮೂರ್ತಿ ಪಿ.ವಿ., 1994, *ಸುಗಟೂರು ವೀರಶೈವ ಅರಸು ಮನೆತನ,* ಧಾರವಾಡ.
4. ಕಲಬುರ್ಗಿ ಎಂ.ಎಂ. (ಸಂ.), 1994, *ಕರ್ನಾಟಕದ ಕೈಫಿಯತ್ತುಗಳು,* ಹಂಪಿ.
5. ಗಿರಿಜಾ ಟಿ., 1991, *ಚಿತ್ರದುರ್ಗ ಜಿಲ್ಲಾದರ್ಶಿನಿ,* ದಾವಣಗೆರೆ.
6. ತೆಲಗಾವಿ ಲಕ್ಷ್ಮಣ, "211 ವರ್ಷಗಳು ಚಿತ್ರದುರ್ಗವನ್ನಾಳಿದ ನಾಯಕ ಅರಸರು", *ವಾಲ್ಮೀಕಿ ವಾಣಿ,* ಮಾಸಿಕ ಪತ್ರಿಕೆ, ಚಿತ್ರದುರ್ಗ, ಜೂನ್ 1998.
7. ಗೋಪಾಲ ಬಿ.ಆರ್. (ಸಂ.), *ವಿಜಯನಗರ ಇನ್ಸ್‌ಕ್ರಿಪ್‌ಶನ್ಸ್,* ಸಂ. 2.
8. ಪುಟ್ಟಣ್ಣ ಎಂ.ಎಸ್., 1997, *ಚಿತ್ರದುರ್ಗ ಪಾಳೆಯಗಾರರು,* ಮೈಸೂರು.

# 20. ಮೂರು ಅಪರೂಪದ ಕೃತಿಗಳಲ್ಲಿ ಹಂಪೆಯ ಚಿತ್ರ: ಒಂದು ವಿಶ್ಲೇಷಣೆ

– ಮೃತ್ಯುಂಜಯ ರುಮಾಲೆ

ಕೃತಯುಗದಲ್ಲಿ ಕೇತಾರವೆಂಬ ಮೂಲಸ್ಥಾನ
ತ್ರೇತಾಯುಗದಲ್ಲಿ ವಾರಣಾಸಿಯೆಂಬ ಮೂಲಸ್ಥಾನ
ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ
ಕಲಿಯುಗದಲ್ಲಿ ಪರ್ವತವೆಂಬ ಮೂಲಸ್ಥಾನ
ಈ ನಾಲ್ಕು ಮೂಲಸ್ಥಾನ
ನಾನಾ ಸ್ಥಾನವ ಮುಟ್ಟದೆ ಜಂಗಮದೆ ಲಿಂಗವೆಂದು ನಂಬಿದೆ
ಕೂಡಲ ಸಂಗಮ ದೇವಾ

ಈ ವಚನದ ಪ್ರಕಾರ ಹಂಪೆ, 'ವಿರೂಪಾಕ್ಷ' ಎಂಬ ಅಭಿಧಾನದಿಂದಲೇ ಖ್ಯಾತವಾಗಿ ಭಕ್ತ ಸಂತಾನವನ್ನು ಆಕರ್ಷಿಸಿತ್ತು. ಕುಮಾರವ್ಯಾಸ ಭಾರತ'ದಲ್ಲಿಯೂ 'ವಿರೂಪಾಕ್ಷಸೀಮೆ'ಯೆಂದು ಹಂಪೆಯ ಪ್ರದೇಶವನ್ನು ಕರೆಯಲಾಗಿದೆ. ಹರಿಹರ ಹೇಳುವ 'ಪಂಪಾಪುರದರಸ', 'ಹೇಮಕೂಟದೊಡೆಯ' ವಿಶೇಷಣಗಳು 'ಪಂಪಾಪುರ' ಪ್ರದೇಶದ ನಿಜವಾದ ರಾಜ 'ವಿರೂಪಾಕ್ಷ ಸ್ವಾಮಿ'ಯೇ ಎಂಬ ಭಾವವನ್ನು ಮೂಡಿಸುತ್ತವೆ. ಇದು ಒಂದು ತಾತ್ತ್ವಿಕ ಮಟ್ಟದಲ್ಲಿ ವ್ಯವಹೃತಗೊಂಡಿತ್ತು ಎಂಬ ವಿಚಾರ ಮೇಲೆ ನೋಡಿದ ವಿಶೇಷಣ ಹಾಗೂ ಅಭಿಧಾನಗಳಿಂದ ತಿಳಿಯುತ್ತದೆ.

ಪ್ರಾರಂಭದಲ್ಲಿ ಪೌರಾಣಿಕ ಆನಂತರ ರಾಜಕೀಯವಾದ ಹಲವು ವೈಶಿಷ್ಟ್ಯಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡು 'ವಿರೂಪಾಕ್ಷನೇ ವಿಶ್ವೇಶ್ವರ'ನೆಂದೂ, 'ತುಂಗಭದ್ರೆಯೇ ಜಾಹ್ನವಿ'ಯೆಂದೂ, 'ಹಂಪೆಯೇ ಕಾಶಿ'ಯೆಂದೂ ಸಪ್ತರ್ಷಿಗಳಿಂದ ಹೊಗಳಿಸಿಕೊಂಡಿತ್ತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆಯೂ ತನ್ನ ಧಾರ್ಮಿಕ ಮನೋಭಾವದ ಗಟ್ಟಿತನವನ್ನು ಅದು ಬಿಟ್ಟುಕೊಡದೆ 'ವಿರೂಪಾಕ್ಷ'ನ ಹೆಸರಿನಿಂದ ಆಡಳಿತ ನಡೆಸಲ್ಪಟ್ಟಿತು.

ವಿಜಯನಗರ ಪೂರ್ವ, ವಿಜಯನಗರ ಮತ್ತು ವಿಜಯನಗರೋತ್ತರ ಕಾಲಗಳೆಂದು ಮುಖ್ಯ ವಿಭಜನೆಯ ಮೂಲಕ ಹಂಪೆಯನ್ನು ನಾನಾ ಕಾರಣ ಮತ್ತು ವಿದ್ಯಮಾನಗಳ ಮೂಲಕ ಚಾರಿತ್ರಿಕವಾಗಿ ಗಮನಿಸಲಾಗುತ್ತಿದೆ. ಈ ಮೂರು ಕಾಲಘಟ್ಟದಲ್ಲಿ ಹಂಪೆ ಅಧ್ಯಯನಕ್ಕೆ ಒಳಪಟ್ಟಂತೆ ಕನ್ನಡನಾಡಿನ ಇನ್ನುಳಿದ ಯಾವುದೇ ಸ್ಥಳವು ಈ ರೀತಿ ಅಧ್ಯಯನಕ್ಕೆ ಒಳಗಾಗಿಲ್ಲ. ಒಂದು ವಿಶಿಷ್ಟ ಸಾಮ್ರಾಜ್ಯದ ಸ್ಥಾಪನೆಗೆ ಈ ಸ್ಥಳ ಕಾರಣವಾಗಿದ್ದರೂ ತನ್ನ ಧಾರ್ಮಿಕ ಮನೋಭಾವನೆಯನ್ನು ಉಳಿಸಿಕೊಂಡು ಬಂದಿರುವುದು ಅದರ ಧರ್ಮ ನಿಷ್ಠತೆಯನ್ನು ಎತ್ತಿ ಹೇಳುತ್ತದೆ.

ಮೂರು ಸಾಹಿತ್ಯ ಕೃತಿಗಳು ಹಂಪೆಯ ಮೂರು ಕಾಲದ ಧಾರ್ಮಿಕತೆಯನ್ನು ದಾಖಲು ಮಾಡುತ್ತವೆ. ಈ ಮೂರು ಕೃತಿಗಳು ವಿಜಯನಗರ ಪೂರ್ವ, ವಿಜಯನಗರ, ವಿಜಯನಗರೋತ್ತರ ಕಾಲಗಳಲ್ಲಿ ರಚಿತವಾಗಿದ್ದು ಆ ಕಾಲವನ್ನು ಅವು ಪ್ರಾತಿನಿಧಿಕವಾಗಿ ಬಿಂಬಿಸುತ್ತವೆ.

1. ಹರಿಹರ ಕವಿಯ 'ಪಂಪಾಕ್ಷೇತ್ರ ರಗಳೆ' (ಕ್ರಿ.ಶ. ಸು. 1200-1250).
2. ಚಂದ್ರಶೇಖರ ಕವಿಯ 'ವಿರೂಪಾಕ್ಷಾಸ್ಥಾನಂ' ಅಥವಾ 'ಪಂಪಾಸ್ಥಾನ ವರ್ಣನಂ' (ಕ್ರಿ.ಶ. ಸು. 1430).
3. ಅಹೋಬಲ ಕವಿಯ 'ವಿರೂಪಾಕ್ಷ ವಸಂತೋತ್ಸವ ಚಂಪೂ' (ಕ್ರಿ.ಶ. ಸು. 1613 ರಿಂದೀಚೆ ?)[2]

ಈ ಕೃತಿಗಳು ಸಾಹಿತ್ಯ ಚರಿತ್ರೆಯಲ್ಲಿಯೇ ಅಪರೂಪದ ಸ್ಥಾನವನ್ನು ಪಡೆದಿವೆ, (ಮೂರನೇ ಕೃತಿ ಸಂಸ್ಕೃತದಲ್ಲಿದೆ) ! ಮೂರು ಕೃತಿಗಳ ಕಾವ್ಯವಸ್ತು ಹಂಪೆಯೇ. ಹಂಪೆಯನ್ನು ಮತ್ತು ವಿರೂಪಾಕ್ಷನನ್ನು ಭಕ್ತಿಯ ಭಾವುಕತೆಯಲ್ಲಿ ಕವಿ ತನ್ನ ಕಾಲದ ಯುಗಧರ್ಮದ ಪ್ರತಿನಿಧಿಯಾಗಿ ಕಾವ್ಯದ ವಸ್ತುವಾಗಿಸಿದ್ದಾನೆ.

ಹರಿಹರನ ಪಂಪಾಕ್ಷೇತ್ರರಗಳೆ[3] ರಚನೆಯಾದ ಕಾಲದಲ್ಲಿರುವ ಹಂಪೆಯ ಚಿತ್ರವನ್ನು ಇಂದು ಕಲ್ಪಿಸಿಕೊಳ್ಳುವುದು ಕಷ್ಟ. ದಕ್ಷಿಣ ಭಾರತದ ತುಂಬಾ ವ್ಯಾಪಿಸಿದ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಪೂರ್ವದಲ್ಲಿ ಈ ಕೃತಿ ರಚಿತವಾಗಿದೆ. ಕರ್ನಾಟಕದ ವಾಸ್ತುಶಿಲ್ಪಕ್ಕೆ ತನ್ನದೇ ಆದ ಮಾದರಿಯನ್ನು ನೀಡಿದ ವಿಜಯನಗರ ಶೈಲಿಯ ಯಾವುದೇ ದೇವಸ್ಥಾನ ಮತ್ತಿತರ ಕಟ್ಟಡಗಳನ್ನು ಆಗ ಇದ್ದಂತೆ ಕಲ್ಪಿಸಿಕೊಳ್ಳದೇ ಅಂದಿನ ಹಂಪೆಯ ಚಿತ್ರವನ್ನು ಊಹಿಸಿಕೊಳ್ಳಬೇಕಾಗಿದೆ. ಯಾವುದೇ ರಾಜಮನೆತನದ ನೇರ ಆಡಳಿತಕ್ಕೆ ಒಳಪಡದ ಈ ಕಾಲದ ಹಂಪೆ ಹರಿಹರನಿಗೆ 'ಪಂಪಾಕ್ಷೇತ್ರ' ಎಂದೆನಿಸಿರುವುದು ಸಹಜವೇ ಆಗಿದೆ. (ಹರಿಹರ ನೀಡುವ ಹಂಪೆಯ ಚಿತ್ರವನ್ನಿಲ್ಲಿ ಸಂಗ್ರಹರೂಪದಲ್ಲಿ ಗಮನಿಸಬಹುದು.)

ಪರಮ ಕ್ಷೇತ್ರಂ ಸುಕೃತಾ
ವರಣ ಕ್ಷೇತ್ರಂ ದಿವಾಕರ ಕ್ಷೇತ್ರಂ ಸ್ವ
ಸ್ಥಿರ ಸುಕ್ಷೇತ್ರಂ ಶಂಕರ
ಭರಿತಕ್ಷೇತ್ರಂ ವಿಶಾಲ ಪಂಪಾಕ್ಷೇತ್ರಂ (3)

ಆದಿಕ್ಷೇತ್ರಂ ಚಾತು
ರ್ವೇದಕ್ಷೇತ್ರಂ ಪರಾಪರೈಕ ಕ್ಷೇತ್ರಂ
ನಾದಕ್ಷೇತ್ರಂ ಶಿವನೊಳ
ಭೇದ ಕ್ಷೇತ್ರಂ ಪ್ರಸನ್ನ ಪಂಪಾಕ್ಷೇತ್ರಂ (4)

ಆ ಪುರದೊಳುಂ ನಾಲ್ಕು ಬಾಗಿಲುಗಳುಂ ನೋಡೆ
ಒಪ್ಪುತಿರೆ ಸುತ್ತ ಯೋಜನ ಪ್ರಮಾಣಂ ನೋಡೆ

ಅಲ್ಲಿ ಮೂಡಣ ಬಾಗಿಲೊಳಗಿಪ್ಪನುನ್ನತಂ
ಸಲ್ಲಲಿತ ಗುಣಕಿನ್ನರೇಶ್ವರಂ ಶಾಶ್ವತಂ

ಅಲ್ಲಿ ತೆಂಕಣ ಬಾಗಿಲೊಳಗಿಪ್ಪನಚಳಿತಂ
ಬಲ್ಲ ಶರಣರ ಜಂಬುಕೇಶ್ವರಂ ಶಾಶ್ವತಂ

ಪಶ್ಚಿಮ ದ್ವಾರದೊಳು ನೆಲಸಿರ್ಪನೊಪ್ಪದಿಂ
ನಿಶ್ಚಯದೆ ಸೋಮನಾಥಯ್ಯನತಿ ಪ್ರೇಮದಿಂ

ಉತ್ತರದ್ವಾರದೊಳು ನೆಲಸಿರ್ಪನೀಶ್ವರಂ
ಉತ್ತಮಗುಣ ಸ್ಥಾಣು ವಾಣಿ ಭದ್ರೇಶ್ವರಂ

ಇಂತೆನಿಸಿ ಮೆರೆವ ನಾಲ್ಕುಂ ಬಾಗಿಲುಗಳೊಳಗೆ
ತಿಂತಿಣಿಪ ಶಿವಲಿಂಗವಿಪ್ಪವಾಮರದೊಳಗೆ

ಪಂಪಾ ವಿರೂಪಾಕ್ಷನಲ್ಲಿಂದಂ ನಂತರಂ
ಸೊಂಪಿಂದೆ ಹನುಮದೀಶ್ವರನಿಪ್ಪನುರುತರಂ

ರಂಭೇಶ್ವರಂ ನಳೇಶ್ವರರಿಪ್ಪರಂತಲ್ಲಿ
ಶಂಭು ಮುಕ್ತೇಶ್ವರಂ ಮಲ್ಲಿಕಾರ್ಜುನರಲ್ಲಿ

ಮಂಗಳಾಸ್ಪದ ರಾಮಲಕ್ಷ್ಮಣೇಶ್ವರರಲ್ಲಿ
ಹಿಂಗದೆ ಮಹಾಕಾಳ ದೇವಾರೊಪ್ಪುವರಲ್ಲಿ

ವರದ ಮಾರ್ಕಡೇಶ್ವರಂ ನಿಂದನೊಲವಿಂದೆ
ಸುರರಾಜ ರಾಜನಪ್ಪಿಂದ್ರೇಶ್ವರಂ ಮುಂದೆ

ಗುರುಸೋಮನಾಥನಿಪ್ಪಂ ಪುರದೊಳೊಲವಿಂದೆ
ಹಿರಿಯ ಹಂಪಾದೇವಿ ಚಿಕ್ಕ ಹಂಪಾದೇವಿ (.......)

ನಲದಿಂದಲೊಪ್ಪುತಿರೆ ನಿಂದನಜ್ಞೇಶ್ವರಂ
ನೆಲಸಿಹಂ ಮುಂದೆ ಪರಮಜ್ಞಾನಿ ಶಂಕರಂ

ತಾನಘೋರೇಶ್ವರಂ ದಾನಿನಾಗೇಶ್ವರಂ
ಶ್ರೀನಿಧಿ ಉದಾರಕೇದಾರದೇವೇಶ್ವರಂ

ಕರಮೆಸೆವ ಲಿಂಗಛಾಯಾ ಮಲ್ಲಿಕಾರ್ಜುನಂ
ವರುಣೇಶ್ವರಂ ವಾಯುವೇಶ್ವರಂ ಪಾವನಂ

ತರದಿಂ ಕುಬೇರೇಶ್ವರಂ ರಂಜಿಸುವರಲ್ಲಿ
ಕರುಣಾಬ್ಧಿ ಯೀಶಾನ್ಯದೇವರೊಪ್ಪುವರಲ್ಲಿ

ಬ್ರಹ್ಮೇಶ್ವರಂ ದಯಾಪರನಗಸ್ತ್ಯೇಶ್ವರಂ
ಬ್ರಹ್ಮಂಗಭೇದ್ಯಕೋಣೆಯ ಶಂಕರೇಶ್ವರಂ

ಕ್ರಮದಿಂದೆ ಜಡೆಯ ಶಂಕರದೇವರೊಪ್ಪಿರಲು
ವಿಮಳ ಪಾತಾಳ ಗಂಗೆಯ ಸೋಮನೊಪ್ಪಿರಲು

ಲೋಕಪಾವನ ದೇವರುಂ ಕೋಟಿ ಶಂಕರಂ
ಲೋಕಕೆರಂಭಿಪೇಕಾಂತ ರಾಮೇಶ್ವರಂ

(ಇನ್ನು ನಾನರಿಯದವನೇಕ ಲಿಂಗ ಕೂಡೆ
ಸನ್ನಹಿತ ವಿಪ್ಪವಾಮರದಸುತ್ತಂ ನೋಡೆ)

ಎಣಿಸಲೆನ್ನಳವೆ ಪಂಪಾಪುರದ ಮಹಿಮೆಯಂ
ತ್ರಿಣಯನುಂ ಲಿಂಗಮಯವಾದ ನಿಸ್ಸೀಮೆಯಂ

ಇಂನಿರ್ದ ತೀರ್ಥ ಸಂತಾನಮಂ ಪೊಗಳ್ವೆಪೆಂ
ಸಂನುತದೆ ಶಿವನ ಕಾರುಣ್ಯದಿಂ ಪೊಗಳ್ವಪೆಂ

ಅರರೆ ಮನ್ಮಥತೀರ್ಥವಿಪ್ಪುದದು ರಾಗದಿಂ
ವರಸೋಮತೀರ್ಥದಿಂ ಮಹಾಕಾಳ ತೀರ್ಥದಿಂ

ಎಸೆವ ತಾರಾತೀರ್ಥದಿಂ ಸೂರ್ಯತೀರ್ಥದಿಂ
ಪೆಸರೆಸೆವ ವತ್ಸತೀರ್ಥದಿ ರೇಭ್ಯತೀರ್ಥದಿಂ

ನಾಗ ಮಾರ್ಕಂಡೆಯ ಗಜಾಶ್ವತೀರ್ಥಂಗಳಿಂ
ಮೇಗೆ ಕಾದಾಂಬರಿ ಬ್ರಹ್ಮತೀರ್ಥಂಗಳಿಂ

ಇಂತೆನಿಸಿ ಮೆರೆವ ಹನ್ನೊಂದು ತೀರ್ಥಂಗಳವು
ಕಂತು ಮದಹರನಶ್ವದಾನ ಮೆಂದೆನಿಪವವು

ಮತ್ತಂ ಮಹಾನದೀಶ್ವರೀ ತುಂಗಭದ್ರೆಯೊಳು
ಉತ್ತಮ ವಶಿಷ್ಟರಾಶ್ರಮ ವಿಪ್ಪುದೊಲುಮೆಯೊಳು

ಅಲ್ಲಿ ಪಾಪವಿನಾಶಿಯೆಂಬ ನಾಮದ ತೀರ್ಥ
ಅಲ್ಲಿಂ ದಶಾಶ್ವಮೇಧಾ ವಿಧಾನದ ತೀರ್ಥ

ಅದರೊಳಗೆ ಬದರಿಕಾಶ್ರಮವು ಕೋಟಿ ತೀರ್ಥ
ಅದರೊಳಗೆ ಶಭರಿಕಾಶ್ರಮವು ಕೋಟಿ ತೀರ್ಥ

ಮಿಗೆ ದೇವಘಾತ ಪಂಪಾಸರೋವರ ಮುಂದೆ
ಸೊಗಯಿಸುವ ಕಾಮದಹನದ ಭಸಿತವದು ಮುಂದೆ

ಅಲ್ಲಿಂದೆ ಮಾಲ್ಯವಂತಾಚಳವದೊಪ್ಪುವುದು
ಸಲ್ಲಲಿತ ರಿಣಮೋಚನದ ತೀರ್ಥಮೊಪ್ಪುವುದು

ಉರಿಯಕ್ಷತೀರ್ಥಂ ಗಧಾತೀರ್ಥ ಧನುತೀರ್ಥ
ವರಶಂಖಚಕ್ರತೀರ್ಥಂ ಪದ್ಮದಳ ತೀರ್ಥ

ಹೇಮಕೂಟದ ಮೇಲೆ ವತ್ಸನಾಭಿಯ ತೀರ್ಥ
ಆ ಮಹಾ ಉತ್ತರದೊಳಗ್ನಿ ತೀರ್ಥಂ ಸ್ವಾರ್ಥ

ರಾಮತೀರ್ಥಂ ಸಂದಪಿತೃತೀರ್ಥವಂತಲ್ಲಿ
ಏಮಾತೊ ಮಾಂಗಲ್ಯ ತೀರ್ಥಮೊಪ್ಪುವುದಲ್ಲಿ

ಶ್ರೀರುದ್ರಪಾದವಿಪ್ಪುದು ಧರಾರಾಜನದು
ನಾರಾಯಣಾದಿ ದೇವರ್ಕಳಿಗಭೇದ್ಯವದು

.........................................

ಇಂತಪ್ಪ ಲಿಂಗತೀರ್ಥಂಗಳಿಂದಂ ತೀವಿ
ಸಂತತಂ ಶಿವಭಕ್ತಕುಲವನೊಲವಿಂದೋವಿ

ಇಪ್ಪುದೀಧರೆಗೆ ತೊಡವೆನಿಸಿ ಪಂಪಾಪುರಂ
ಸರ್ಪಭೂಷಣಭಾವಭರಿತ ಪಂಪಾಪುರಂ

.................................................

ವಾರಣಾಸಿಗೆಯು ಮಿಗಿಲಾದ ಪಂಪಾಪುರಂ
ಮಾರಾರಿಗಂದು ಪುಗಲಾದ ಪಂಪಾಪುರಂ

ಇಷ್ಟೇ ಅಲ್ಲದೆ ಹರಿಹರ 'ಪುಷ್ಪರಗಳೆ'ಯಲ್ಲಿ ಹೆಸರಿಸುವ ನಾನಾ ಬಗೆಯ ಹೂವುಗಳ ಉದ್ಯಾನವನವೂ ಅಲ್ಲಿದ್ದಿರಬೇಕು. ಅಲ್ಲಿಂದ ಹೂವುಗಳನ್ನು ತಂದು ವಿರೂಪಾಕ್ಷನನ್ನು ಹರಿಹರ ಪೂಜಿಸುತ್ತಿದ್ದ. ಹರಿಹರನು ಪೂಜಿಸುತ್ತಿದ್ದ ವಿರೂಪಾಕ್ಷಲಿಂಗ ಬಹುಶಃ ಇಂದು ಹೇಮಕೂಟದಲ್ಲಿರುವ ಮೂಲ ವಿರೂಪಾಕ್ಷಲಿಂಗವೇ ಆಗಿರಬೇಕು. ಹರಿಹರನಿಗೆ ಹಂಪೆಯೆಂದರೆ ವಿರೂಪಾಕ್ಷನೇ ! ಮತ್ತು ವಿರೂಪಾಕ್ಷನೆಂದರೆ 'ಹೇಮಕೂಟದೊಡೆಯ'. ಆದ್ದರಿಂದ, ಆತನ ಈ ರಗಳೆ ಅಂದಿನ ಹಂಪೆಯ ಸಮರ್ಥ ಚಿತ್ರವನ್ನು ನೀಡುತ್ತದೆ. ವಿಜಯನಗರ ಪೂರ್ವದ ಮತ್ತು ಹರಿಹರನ ನಂತರದವುಗಳು ಎನ್ನಲಾಗುವ ರಥಬೀದಿಯ ಅಕ್ಕಪಕ್ಕದಲ್ಲಿರಬಹುದಾದ ನಿರ್ಮಾಣದ ಚಿತ್ರ ಅಸ್ಪಷ್ಟವಾಗೇ ಉಳಿಯುತ್ತದೆ. ಚಿಕ್ಕನಂಜೇಶನ 'ಹರಿಹರ ಮಹತ್ವ'ದ ಪ್ರಕಾರ ದೋರಸಮುದ್ರದಿಂದ ಬಂದ ಹರಿಹರನಿಗೆ ವಾಸಕ್ಕಾಗಿ ಹಂಪೆಯಲ್ಲಿದ್ದ ಅರ್ಚಕರು ನಾಗನಾಥ ದೇವಾಲಯದ ಮುಂದಿನ 'ವಾಹನಗೃಹ'ವನ್ನು ಖಾಲಿ ಮಾಡಿಸಿ ಕೊಡುತ್ತಾರೆ.[4] ನಾಗನಾಥ ದೇವಾಲಯದ ಹತ್ತಿರದಲ್ಲಿರುವ ಕ್ರಿ.ಶ. 1199ರ ಶಾಸನ ಈ ಹಿನ್ನೆಲೆಯಲ್ಲಿ ಒಂದು ಪ್ರಮುಖ ಮಾಹಿತಿಯನ್ನು ನೀಡುತ್ತದೆ.[5]

– 'ಮನ್ಮುಖತೀರ್ಥದಿಂ ಮೂಡ ಕೋಡಿಯ ಬೆನಕನಿಂ ಬಡಗ ನಾಯಕರ ದೇವದೋಟದಿಂ ತೆಂಕಣಡಕೆಯ ತೋಟದೊಳಗೆ ಹೆಗ್ಗಡೆ ರೇಚಯ್ಯಂ ಮಾಡಿಸಿದಿರ್ಮಡಿ ರಾಚಮಲ್ಲೇಶ್ವರದೇವರ್ಗೆ ಒಂದು ಭಾಗಮಂ ಕಳೆದುಳಿದ ತನ್ನೊಬ್ಭಾಗದೊಳಗೆ ಚೌಡಯ್ಯಂ ವಿರೂಪಾಕ್ಷದೇವರ್ಗೆ ಅಡಕೆ 4 ಎಲೆ 8 ಹಂಪಾದೇವಿಗೆ ಅಡಕೆ 4 ಎಲೆ 8 ಭೈರವದೇವರಿಗೆ ಅಡಕೆ 2 ಎಲೆ 4 ಮಂ ದೇವಾರ್ಚನೆಗೆ ಪುರ್ವ(ಷ್ಪ)ಮುಮಂ ಸಲಿಸಿ ...............'

– ಈ ಶಾಸನ ಹೆಚ್ಚು ಕಡಿಮೆ ಹರಿಹರನ ಕಾಲದ್ದು. ಇಲ್ಲಿ ಉಲ್ಲೇಖಗೊಂಡಿರುವ ಮನ್ಮುಖತೀರ್ಥ ಅಂದರೆ ಇಂದಿನ ಮನ್ಮಥತೀರ್ಥ.[6] ಈ ತೀರ್ಥದಿಂದ ಮಾತಂಗ ಪರ್ವತದ ಅಡಿಯವರೆಗೆ ಶಾಸನೋಕ್ತವಾದ ಅಡಿಕೆ ತೋಟ ಮತ್ತು ರಗಳೆ ತಿಳಿಸುವ ಹೂದೋಟಗಳಿದ್ದವು. ಪಕ್ಕದಲ್ಲಿ ಹರಿಯುವ ತುಂಗಭದ್ರ ನದಿಗೆ ಸಮಾನಾಂತರವಾಗಿ ರಥಬೀದಿಯ (ಬಹುಶಃ ಹರಿಹರನ ಕಾಲದಲ್ಲಿ ಇದು ರಥಬೀದಿಯಾಗಿದ್ದಿರಲಿಕ್ಕಿಲ್ಲ !) ಪಕ್ಕದಲ್ಲಿ ಅಡಿಕೆ ತೋಟ ಮತ್ತು ಹೂವಿನ ತೋಟವನ್ನು ಕಲ್ಪಿಸಿಕೊಳ್ಳಬಹುದು.

ಇದಲ್ಲದೆ ಹರಿಹರ ತನ್ನ ಪಂಪಾಕ್ಷೇತ್ರ ರಗಳೆಯಲ್ಲಿ ಹೇಳುವ 'ಅಸಂಖ್ಯಾತ' ('ಇನ್ನು ನಾನರಿಯದವನೇಕ ಲಿಂಗಂ ಕೂಡೆ ! ಸನ್ನಿಹಿತವಿಪ್ಪವಾಮರಸುತ್ತಂ ನೋಡೆ') ತೀರ್ಥಗಳೂ ದೈವಗಳೂ ವರ್ಣಿಸಲೂ ಮತ್ತು ಕಲ್ಪಿಸಲೂ ಬಾರವು. ಆದರೆ ಮುಖ್ಯ ಅಭೀಪ್ಸೆ ಎಂದರೆ ಪಂಪಾಪುರವು ನೇರವಾಗಿ ಯಾವ ರಾಜನ ಆಡಳಿತಕ್ಕೂ ಒಳಪಡದೇ ಇದ್ದು, ಈ ಪ್ರದೇಶಕ್ಕೆ ವಿರೂಪಾಕ್ಷನೇ ಒಡೆಯನಂತಿದ್ದ ಎಂಬ ಪೂರಕ ಮಾಹಿತಿಯನ್ನು ಈ ರಗಳೆ ತಿಳಿಸುತ್ತದೆ. 'ಪಂಪಾಪುರ'ದ ಪೂರ್ವಕ್ಕೆ ಕಿನ್ನರೇಶ್ವರ, ದಕ್ಷಿಣಕ್ಕೆ ಜಂಬುಕೇಶ್ವರ, ಪಶ್ಚಿಮಕ್ಕೆ ಸೋಮೇಶ್ವರ, ಉತ್ತರಕ್ಕೆ ವಾಣಿಭದ್ರೇಶ್ವರ ದೇವಸ್ಥಾನಗಳು ಗಡಿರೇಖೆಯನ್ನು ನಿರ್ದೇಶಿಸುತ್ತವೆ.[7]

" 'ಪಂಪಾಪುರ'ದ ಒಡೆಯನಾಗಿದ್ದ ವಿರೂಪಾಕ್ಷನ ಅಧಿಕಾರ ವ್ಯಾಪ್ತಿಯಿದ್ದ ಪ್ರದೇಶದ ಮೇಲೆ ಬೇರೆ ಯಾವ ರಾಜರಿಗೂ ಅಧಿಕಾರವಿರಲಿಲ್ಲವೆಂಬ 12-13ನೇ ಶತಮಾನಗಳ ಕಲ್ಪನೆಯು ಸಹಜವಾಗಿಯೇ ನಮಗೆ ಈಗಿನ ವ್ಯಾಟಿಕನ್ ನಗರವನ್ನು ನೆನಪಿಗೆ ತರುತ್ತದೆ......... ಇಟಲಿಯ ಒಳಗೇ ಇದ್ದರೂ ವ್ಯಾಟಿಕನ್ ಸ್ವತಂತ್ರವಾಗಿರುವಂತೆ, ಕುರುಗೋಡಿನ ನಾಯಕರ ನಾಡೊಳಗೆ (ಹೊಯ್ಸಳ ರಾಜ್ಯದೊಳಗೆ) ಇದ್ದರೂ ಹಂಪೆ ಒಂದು ರೀತಿ ಸ್ವತಂತ್ರವಾಗಿತ್ತು".[8] ಇಂಥ ಪಂಪಾಪುರ ಪೂರ್ವಪ್ರಮಾಣದ ಧಾರ್ಮಿಕ ಕ್ಷೇತ್ರವಾಗಿತ್ತು. ಈ ಕ್ಷೇತ್ರ 'ವಿರೂಪಾಕ್ಷ'ವೆಂದೂ, 'ಪಂಪಾಪುರ'ವೆಂದೂ, 'ವಿರೂಪಾಕ್ಷ ಸೀಮೆ'ಯೆಂದೂ ಹೆಸರು ಪಡೆದದ್ದು ಇಲ್ಲಿ ಸ್ಪಷ್ಟಗೊಳ್ಳುತ್ತದೆ. ಎಂಟು ದಿಕ್ಕಿಗೂ ಸೀಮೆಯ ದೇವಸ್ಥಾನಗಳನ್ನು ಹೊಂದಿದ್ದ 'ವಿರೂಪಾಕ್ಷಸೀಮೆ' ಹರಿಹರ ತಿಳಿಸುವ ನೂರಾರು ದೈವಗಳನ್ನು, ನೂರಾರು ತೀರ್ಥಗಳನ್ನು ಆಶ್ರಮಗಳನ್ನು, ವಿಶಾಲವಾದ ಅಡಕೆ ತೋಟವನ್ನು, ವೈವಿಧ್ಯಮಯ ಹೂಗಳ ಉದ್ಯಾನವನ್ನು, 'ಮಹಾನದೀಶ್ವರೀ' ತುಂಗಭದ್ರೆಯನ್ನು ಹೊಂದಿದ್ದು ನೈಸರ್ಗಿಕ ಸೊಬಗಿನಿಂದ ಕೂಡಿದ್ದಿರಬೇಕು.

ಎರಡನೇ ಕೃತಿ ಚಂದ್ರಶೇಖರ ಕವಿಯ 'ಪಂಪಾಸ್ಥಾನ ವರ್ಣನಂ'.[9] ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ಪ್ರಖ್ಯಾತ ದೊರೆ ಪ್ರೌಢದೇವರಾಯನ (1419-1449) ಆಸ್ಥಾನದಲ್ಲಿದ್ದ ಅಷ್ಟಭಾಷಾಕವಿ ಈತ. ಸ್ವತಃ ಆಸ್ಥಾನಕವಿಯಾಗಿರುವ ಈತನಿಗೆ ಶಾಶ್ವತವಾದ ರಾಜಾಸ್ಥಾನವೆಂಬುದು 'ಪಂಪಾಸ್ಥಾನ'ವೆಂಬುದೇ ಎಂದು ತಿಳಿದಿದೆ. ಈ ಆಸ್ಥಾನದ ಒಡೆಯ ವಿರೂಪಾಕ್ಷ. (ಈ ಕೃತಿಯ ಮತ್ತೊಂದು ಹೆಸರು 'ವಿರೂಪಾಕ್ಷಾಸ್ಥಾನಂ' ಎಂಬುದರಿಂದ ಇದು ವಿದಿತವಾಗುತ್ತದೆ.) ಹೊರನೋಟಕ್ಕೆ ಆಸ್ಥಾನದ ಪರಿಭಾಷೆಯನ್ನು ತನ್ನ ಕಾವ್ಯದಲ್ಲಿ ಬಳಸಿದ್ದರೆ ವಾಸ್ತವವಾಗಿ ಇದು ಧರ್ಮನಿಷ್ಠವಾಗಿ ಭಕ್ತಿಯ ಭಾವುಕತೆಯಲ್ಲಿ ರಚಿತವಾಗಿದೆ. ಇವನ ಪ್ರಕಾರ ನರಪತಿ ಆಳುವ ಈ ವಿಜಯನಗರ ಸಾಮ್ರಾಜ್ಯ ತಾತ್ಕಾಲಿಕವಾದುದು. ಆದರೆ 'ಪಣೆಗಣ್ಣುರಿ ಪಂಪೆಯಾಳ್ವನಾ' ಆಸ್ಥಾನ ಶಾಶ್ವತವಾದುದು.

ಪ್ರೌಢದೇವರಾಯನ ಆಸ್ಥಾನ ಧಾರ್ಮಿಕ ಮನೋಭಾವನೆಯಿಂದ ಅದರಲ್ಲೂ ವೀರಶೈವ ಧರ್ಮದಿಂದ ತುಂಬಿಕೊಂಡಿತ್ತು. ಆಚಾರ್ಯ ಜಕ್ಕಣಾರ್ಯ ಮಹಾಮಂತ್ರಿ, 'ಶಿವತತ್ವ ಚಿಂತಾಮಣಿ'ಯ ಲಕ್ಕಣದಂಡೇಶ ಮಹಾದಂಡನಾಯಕ, 'ಪ್ರಭುಲಿಂಗಲೀಲೆ'ಯ ಚಾಮರಸ, 'ಲಿಂಗಲೀಲಾವಿಲಾಸ ಚಾರಿತ್ರ'ದ ಕಲ್ಲುಮಠದ ಪ್ರಭುದೇವ, 'ಏಕೋತ್ತರ ಶತಸ್ಥಲ'ದ ಮಹಾಲಿಂಗದೇವ, ಸುಕವಿ ಕರಸ್ಥಲದ ನಾಗಿದೇವ, ವ್ಯಾಖ್ಯಾನ ಕರ್ತೃವಾದ ಶ್ರೀಗಿರೀಂದ್ರ, ಷಟ್ಸ್ಥಲೋಪದೇಶದ ಕುಮಾರ ಬಂಕನಾಥ, ಶತಕತ್ರಯಾದಿಗಳ ಮಗ್ಗೆಯ ಮಾಯಿದೇವ ಮೊದಲಾದವರು ಆಸ್ಥಾನದಲ್ಲಿ ವಿರಾಜಮಾನರಾಗಿದ್ದರು. ವಚನಗ್ರಂಥ ಕರ್ತೃವಾದ ವೀರಣ್ಣೊಡೆಯನಿಗೆ ಪ್ರೌಢದೇವರಾಯ ತನ್ನ ಮಗಳನ್ನು ಕೊಟ್ಟು ಮದುವೆ[10] ಮಾಡಿಸುವಷ್ಟರ ಮಟ್ಟಿಗೆ ವೀರಶೈವ ಧರ್ಮನಿಷ್ಠನಾಗಿದ್ದ. ಇಂಥ ರಾಜನ ಆಸ್ಥಾನದಲ್ಲಿದ್ದ ವೀರಶೈವಕವಿ ಚಂದ್ರಶೇಖರನಿಗೆ ರಾಜನ ಆಸ್ಥಾನವನ್ನು ಧಾರ್ಮಿಕ ಪರಿಭಾಷೆಗೆ ಅಳವಡಿಸಿದ್ದು ಆ ಕಾಲದ ಧರ್ಮ ಘನತೆಯನ್ನು ಪ್ರತಿಬಿಂಬಿಸುತ್ತದೆ.

ಸಂಗಮ ವಂಶರ ಕಾಲದಲ್ಲಿಯೇ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತವನ್ನು ಆವರಿಸುತ್ತಿರುವ ಸಂದರ್ಭದಲ್ಲಿ ಹಂಪೆಯನ್ನು 'ತುಂಗಭದ್ರಾ ತಟೀಧಾಮಮ ಪಾಲಿಸುತಿರ್ಕೆ ಪಂಪೆಯ ವಿರೂಪಾಕ್ಷಂ ಜಗಜ್ಜಾಲಮಂ' – ಎಂದು ವಿರೂಪಾಕ್ಷನಿಷ್ಠಗೊಳಿಸುತ್ತಾನೆ. ತನ್ನ ಆಸ್ಥಾನ ಕವಿತ್ವವನ್ನು 'ವಾಚಸ್ಸುಧಾ ಸಾಗರ ಚಂದ್ರಶೇಖರ ಕವೀಶ್ವರ ನೀಂ ನೆಗಳ್ದಷ್ಟ ಭಾಷೆಗಳ್ಗಾರಮಾದೆ ಕನ್ನಡದ ಬಿನ್ನಣಮಂ ನೆರೆ ತೋರವೇಳ್ಪುದಿಂಪಾಗಿರೆ ಹಂಪೆಯಾಳ್ದನೆಸೆ ವೋಲಗಮಂ ರಚಿಸಿ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾನೆ. ಅಷ್ಟೇ ಅಲ್ಲದೆ ಆಸ್ಥಾನ ಪರಿಭಾಷೆಯಲ್ಲಿ ಕಾವ್ಯ ರಚಿಸುತ್ತಿರುವುದನ್ನು '... ಹಂಪೆಯಾಳ್ದನೆಸೆವೋಲಗಮಂ ಪೊಸತಾಗಿ ಬಣ್ಣಿಪೆಂ' ಎಂದಿದ್ದಾನೆ. ಈ ಹಿನ್ನಲೆಯಲ್ಲಿ ಕಾವ್ಯದ ಕೆಲವು ಮುಖ್ಯ ಭಾಗಗಳನ್ನು ಗಮನಿಸಬಹುದು.

'..... ಕಡಲುಡಿಗೆಯೆನಿಸಿದ ಪೊಡವಿಯ ನಟ್ಟನಡುವಣ ಪೊಂಬೆಟ್ಟದ ತೆಂಕಗಡೆಯ ನಾನಾದೇಶಂಗಳೊಳಗೆ ದೇಸೆವಡೆದು ವಸುಮತೀ ವಿಲಾಸಿನಿಗೆ ಕುಂತಳವೆನಿಸಿ ನೆಗಳ್ತೆವೆತ್ತ ಕುಂತಳದೇಶದಲ್ಲಿ ಮೇರುಮಂದರ ಕೈಲಾಸ ಕಾಶಿ ಕೇದಾರ ಪ್ರಯಾಗ ಸೌರಾಷ್ಟ್ರ ಮಹಾಕಾಳ ಶ್ರೀಶೈಲ ಕಾಳಹಸ್ತಿ ಕಾಂಚೀಪುರಾರುಣ ರಾಮೇಶ್ವರ ಗೋಕರ್ಣ ಪ್ರಮುಖ ಪ್ರಶಸ್ತ ಸಮಸ್ತ ಶೈವಕ್ಷೇತ್ರಂಗಳ ಮೈಮೆಯಂ ಮೂವಡಿಯಾಗಿ ಪೋಲ್ತ ಪರಮಪವಿತ್ರ ಪಂಪಾಕ್ಷೇತ್ರಮೊಪ್ಪುತಿರ್ಪುದು.........'[11]

'.......ಸಾರ್ಧಯೋಜನ ವಿಸ್ತಾರದಿಂ ಸಾರ್ಧಯೋಜನಾಯಾಮದಿಂ ಪವಣ್ಬಡೆದು ಪೂರ್ವದಕ್ಷಿಣ ಪಶ್ಚಿಮೋತ್ತರ ದ್ವಾರಂಗಳಲ್ಲಿ ಕಿನ್ನರೇಶ್ವರ ಜಂಬುಕೇಶ್ವರ ಸೋಮೇಶ್ವರ ವಾಣಿಭದ್ರೇಶ್ವರರೆಂಬವರೇ ಪರಿವಿಡಿಯಿಂ ದ್ವಾರಪಾಲಕರಾಗಿ ನೆಲಸಿರೆ ತನಗಧಿದೇವತೆಯಾಗಿ ಪಂಪಾಭವಾನಿ ಪಾಲಿಸುತಿರ್ಪುದರಿಂ, ಪಂಪಾಕ್ಷೇತ್ರಮೆಂಬ ಪೆಸರಂ ಪಡೆದು ಆವೆಡೆಯಲ್ಲಿ ನೋೞ್ಪೊಡಂ ಅನೇಕ ಸಿದ್ಧಲಿಂಗಗಳಿಂ ಅನಂತ ತೀರ್ಥಗಳಿಂ ಅಗಣ್ಯಪುಣ್ಯಾಶ್ರಮಂಗಳಿಂ ಆಗಾಧ ಕುಂಡಂಗಳಿಂ ಅಮಲ ಕಮಲಾಕರಗಳಿಂ ಅನುಪಮ ತಪೋವನಂಗಳಿಂದತ್ಯಂತ ಪಾವನಮಾಗಿರ್ಪುದು..............'[12]

'.......... ಆ ನದಿಯ (ತುಂಗಭದ್ರೆಯ) ಇತ್ತಡಿವಿಡಿದ ವಸಿಷ್ಠ ವಾಮನ ಕಪಿಲ ಗೌರಮುಖ ಭಾರದ್ವಾಜ ಸಾಕಲ್ಯಮುಖ್ಯ ಮುನಿಜನರಗಣ್ಯ ಪುಣ್ಯಾಶ್ರಮಂಗಳಿಂ ತಾರಾತೀರ್ಥ ಕೋಟಿತೀರ್ಥ ನಾಗ ವೈನಾಯಕ ಕಪಿಲ ಶೈವ ಯಾಮ್ಯ ವಾರುಣಾಚಕ್ರ ಪಿತೃಬ್ರಹ್ಮರುದ್ರದೇವಖಾತ ಪ್ರಮುಖಾನೇಕ ಪವಿತ್ರತೀರ್ಥಗಳಿಂದೆತ್ತಂ ಬೀಳ್ವಡರಲ್ಪಾಸೆಂಬಂತೆಡೆವಿಡದೆ ಸಕಲ ಸುಕೃತಕ್ಕಾಗರಮಾದ ತನ್ನ ಶರಣಾಗತರ ದುರಿತದುರ್ಗಮಂ ನುರ್ಗೊತ್ತುವುದಕ್ಕಿದೆ ದೃಷ್ಟಾಂತಮೆಂಬಂತೆ ಕಿಷ್ಕಿಂಧಗಿರಿ.......'[13]

ಕಂ|| ಎಸೆವ ಮತಂಗಾಶ್ರಮ ವಿ-
ಷ್ಣುಸರೋವರ ಮುಖ್ಯ ವಿವಿಧ ಪಾವನತೀರ್ಥ
ಪ್ರಸರಂ ಮತಂಗದೊಳ್ ಶೋ
ಭಿಸುಗುಂ ಬಲವಂದವರ್ಗೆ ಶಿವನೊಸೆದಿರ್ಪಂ (27)

ಕಂ|| ಋಣಮೋಚನ ಯಕ್ಷ ಮುಖಾ
ಗಣಿತ ಮಹಾತೀರ್ಥದಿಂ ಮತಂಗಾದ್ರಿ ಪಡು
ವಣ ಮಾಲ್ಯವನ್ಮಹೀಧರ
ವೆಣಿಸು ವಡರಿದೆಂಬ ಮಹಿಮೆಯಂ ತಳೆದಿರ್ಕುಂ.

'ಆ ಪರ್ವತದ ಪಡುವಗಡೆಯಲ್ಲಿ ಪರಮಕಾರುಣ್ಯಕಾಸಾರವೆನಿಪ ಮಾದೇವನ ಮುಖಾರವಿಂದದಿಂದೆ ಸಂಜನಿಸಿ ಸನ್ನಿಧಮಾಗಿ ನೆಲೆಗೊಂಡ ಸಕಲತೀರ್ಥ ಕರಂಡಮಾದ ಮನ್ಮಥಕುಂಡದಿಂ ಚತುರ್ಮುಖಂ ಬ್ರಹ್ಮಪದಮಂ ಪಡೆವಲ್ಲಿ ತಪಂಗೆಯ್ದು ತಾಣಮೆನಿಸಿದ ಬ್ರಹ್ಮೇಶ್ವರನ ಶಂಖದ ಬ್ರಹ್ಮಶಿಲೆಯ ಸಮೀಪದ ಬ್ರಹ್ಮಕುಂಡದಿಂ ದಾನ ಯಜ್ಞ ತಪಃ ಪ್ರಮುಖ ಸತ್ಕರ್ಮಮಂ ಬಿತ್ತರಿಸಿದೊಡೆ ಕೋಟಿಗುಣಮಾಗಿ ಫಲಮನೀವ ಸೋಮಸೂರ್ಯ ತೀರ್ಥದಿಂ ಸಕಲದುರಿತ ಸಂತಾಪಮಂ ತನ್ನೊಂದು ಸಿರ್ಪನಿಯಿಂದೆ ಪೊಯ್ವು ಯಮಕುಂಡದಿಂ ನಿಖಿಲ ಮುನಿನಿಕರ ಸೇವಿತಮಪ್ಪ ಕಾದಂಬರಿಯೆಂಬ ಬೆಟ್ಟವೊನಲಿಂ ಮಜ್ಜನಂಗೆಯ್ವೊಡೆ ನಿರ್ಜರಪದವನೀವ ಲೋಕಪಾಲಕ ತೀರ್ಥದಿಂದಚ್ಚರಿಯ ಮಹಿಮೆಗಾಗರಮಾದ ಅಗಸ್ತ್ಯಾಶ್ರಮಂ ಮೊದಲಾದನೇಕಾಶ್ರಮಂಗಳಿಂದ ಪರಿಮಿತ ಪಾರ್ವ ತಪೋವನಂಗಳಿಂದಮೃತಾಯಮಾನವಾರಿ ಪೂರಿತ ಸರೋವರಂಗಳಿಂದನವರತ ಫಲಪುಷ್ಪಪಲ್ಲವೋಲ್ಲಸಿತ ಪುಣ್ಯಭೂರುಹಂಗಳ ಸೀಮೆಗಳಿಂದಂ ಮಹಿಮೆಯನಾಳ್ದ ಹೇಮಕೂಟಮೊಪ್ಪುತಿರ್ಪುದು......'[14]

'........ ಅನಂತಶೋಭೆಯಂ ತಳೆದ ವನಪಂಕ್ತಿ ತನಗೆ ನೀಲಶೈಲಮಂ ನಿರ್ಮಿಚಿಸಿದ ಹೊರಕೋಂಟೆಯಂತೆ ಮೆರೆವುತ್ತಿರೆ ಕನಕದ ಕೋಂಟೆಗಳ ಬಜ್ಜರದ ಬಾಗಿಲ್ವಾಡಗಳ ಪುಷ್ಯರಾಗದ ವಿದ್ರುಮದ ವೇದಿಕೆಗಳ ಮುತ್ತಿನ ಮತ್ತವಾರಣಂಗಳ ಶಶಿಕಾಂತದ ಸೋಪಾನಂಗಳ ಮಾಣಿಕ್ಯದ ಮಾಡಂಗಳ ನೀಲದ ಸಾಲಭಂಜಿಕೆಗಳ ವೈಢೂರ್ಯದ ವಾತಾಯನಂಗಳ ಮರಕತದ ಮಕರತೋರಣಂಗಳ ಹೊಳೆವ ಹೂಂಗಳಸಂಗಳ ಚಲಿಸುವ ಚೀನಪತಾಕೆಗಳ ಕುಳಿರ್ವ ಕೇಳೀವನಂಗಳ ಕ್ರೀಡಾಕಾಸಾರಂಗಳ ಗೊಂದಣದಿನಂ ಬಡೆದ ಸೋಮಸೂರ್ಯವೀಥಿಗಳ ಕೇರಿಕೇರಿಗಳೊಳೋರಣದಿ ನಿರ್ಪ-ಪೆರ್ಮನೆಗಳಿಂದೊಪ್ಪುವ ತನ್ನ ಚೆಲ್ವಿಂ ನಾಗೇಂದ್ರಪುರಿಗೆ ನಾಲ್ವಡಿ ಅಳಕಾಪುರಿಗೈವಡಿ ಅಮರೇಂದ್ರಪುರಿಗಾರುವಡಿಯೆನಿಸಿ ಸೊಂಪು ಪೊಂಪುಳಿಯಾದ ಪಂಪಾಪುರಿಯೊಪ್ಪುತಿರ್ಪುದು......'[15]

'..... ರಮ್ಯಹರ್ಮ್ಯಂಗಳಿಂ ಪ್ರಶಸ್ತ ಪ್ರಾಸಾದಂಗಳಿಂ ವಿವಿಧ ಸೌಧಂಗಳಿಂ ಮಹನೀಯ ಮಾಟಕೂಟಗಳಿಂ ಮನೋಹರ ಮಂಟಪಂಗಳಿಂ ಸಾಲ್ಗೊಂಡೆಸೆವ ಸಾಲೆಗಳಿಂ ಶೋಭೆವಡೆದ ಷೋಡಶ ಗೃಹಂಗಳಿಂ ಗೊಂದಣಿಸಿದ ಗೋಪುರಂಗಳಿಂ ಚಂದಮಾದ ಚೌಬಾರಂಗಳಿಂದತಿರಮಣೀಯಮಾಗಿ ನೇಸರ ತೇಜಕ್ಕೆ ನೂರ್ಮಡಿ ತಿಂಗಳ ಬೆಳಗಿಂಗೆ ಸಾಸಿರ್ಮಡಿ ಪಾವಕನ ಪ್ರಸಾದಕ್ಕೆ ಸಾಸಿರ್ಮಡಿಯಾಗಿ ತೊಳಗಿ ಬೆಳಗುತಿರ್ಪ ವಿಶ್ವನಿವಾಸವೆನಿಪ ವಿರೂಪಾಕ್ಷನ ಮಣಿಮಯ ಮಂದಿರಮೊಪ್ಪುತಿರ್ಪುದು...'[16]

– ಹೀಗೆ ವರ್ಣಿಸುತ್ತ ಪ್ರತಿ ಪದ್ಯಾಂತದಲ್ಲಿಯೂ ಪ್ರತಿ ವಚನಾಂತ್ಯದಲ್ಲಿಯೂ ವಿರೂಪಾಕ್ಷನ ಓಲಗದಲ್ಲಿ, ಆಸ್ಥಾನದಲ್ಲಿ ಈ ಎಲ್ಲಾ ವಿಶೇಷಣಗಳು ರಾರಾಜಿಸುತ್ತವೆ ಎನ್ನುತ್ತಾನೆ. ಶಿವನ ಆಸ್ಥಾನದಲ್ಲಿ ಬಹುರೂಪಿ ವಸುಂಧರೆ ರಾರಾಜಿಸುತ್ತಿದ್ದಾಳೆ ಎಂಬುದೇ ಆತನ ಭಾವ.

ಹರಿಹರ ಪಂಪಾಕ್ಷೇತ್ರ ರಗಳೆಯಲ್ಲಿ ಹೇಳುವ ಕೆಲವು ತೀರ್ಥಗಳನ್ನು, ದೈವಗಳನ್ನು ಚಂದ್ರಶೇಖರನೂ ಹೇಳುತ್ತಾನೆ. ಈತ ತನ್ನ ಕಾಲದ ಪ್ರಭಾವದ ಮೂಲಕ ಈ ಎಲ್ಲಾ ಸ್ಥಳಗಳನ್ನು ಗಮನಿಸಿದ್ದೇ ಇಲ್ಲಿಯ ವಿಶೇಷ.

ಮೂರನೇ ಕೃತಿ, ಅಹೋಬಲ ಕವಿ ವಿರಚಿತ ಸಂಸ್ಕೃತದ 'ವಿರೂಪಾಕ್ಷ ವಸಂತೋತ್ಸವ ಚಂಪೂ'.[17] ವಿಜಯನಗರ ಸಾಮ್ರಾಜ್ಯ ಪತನಾನಂತರದ ವಿರೂಪಾಕ್ಷನ ರಥೋತ್ಸವವನ್ನು ವರ್ಣಿಸುತ್ತದೆ. ಇಡೀ ಕಾವ್ಯ ರಥೋತ್ಸವದ ವರದಿಯಂತಿದೆ. ಸ್ವತಃ ಕವಿ ಅಹೋಬಲನೇ ಭಾಗವಹಿಸಿ ಉತ್ಸವದಲ್ಲಿ ಭಾಗವಹಿಸಿದ ಹಲವಾರು ಗಣ್ಯರನ್ನು ಉಲ್ಲೇಖಿಸುತ್ತಾನೆ. ಐತಿಹಾಸಿಕ ಮಹತ್ವವಿರುವ ಈ ಕೃತಿ ಆ ಕಾಲವನ್ನು ನೇರವಾಗಿ ಪರಿಚಯಿಸುತ್ತದೆ.

ಈ ವಸಂತೋತ್ಸವದಲ್ಲಿ ಶಿವ ಮತ್ತು ಪಾರ್ವತಿಯರ (ವಿರೂಪಾಕ್ಷ ಮತ್ತು ಪಂಪಾಂಬಿಕೆ) ಉತ್ಸವ ಮೂರ್ತಿಗಳನ್ನು ರಥದಲ್ಲಿರಿಸಿ ಮೆರವಣಿಗೆ ಮೂಲಕ ಕರೆದೊಯ್ದು ಕೊನೆಗೆ ಪ್ರಸಾದ ವಿತರಣೆಯಾದಂತೆಯೂ ರಥದ ಜೊತೆಗೆ ವಿದ್ಯಾರಣ್ಯರನ್ನು ಪಲ್ಲಕ್ಕಿಯಲ್ಲಿರಿಸಿ ಅವರ ಶಿಷ್ಯರೂ ಭಕ್ತರೂ ಮೆರವಣಿಗೆಯಲ್ಲಿ ಮೆರೆಸಿದಂತೆಯೂ ಹೇಳಿದೆ.

ಪ್ರಾರಂಭದಲ್ಲಿ ಪುರೋಹಿತರು ಮೂರ್ತಿಗಳನ್ನು ಪೂಜಿಸಿ, ರಥವನ್ನು ಎಷ್ಟು ಎಳೆದರೂ ರಥ ಮುಂದೆ ಸಾಗಲಿಲ್ಲವಂತೆ, ಅಂದಿನ ಹಂಪೆಯ ರಾಜ ಪ್ರಾರ್ಥಿಸಿ ತನ್ನ ಎರಡು ಕೈಗಳಿಂದ ರಥವನ್ನಿಡಿದು ಎಳೆದಾಗ ರಥ ಮುಂದೆ ಸಾಗಿತಂತೆ. ರಥ ಮತ್ತು ಪಲ್ಲಕ್ಕಿಯ ಜೊತೆಗೆ ವರ್ತಕರು ಮತ್ತು ಶೂದ್ರರು ನಿರ್ಮಿಸಿದ ಮತ್ತೊಂದು ರಥವನ್ನೂ ಎಳೆಯಲಾಯಿತು. ಈ ಎರಡೂ ರಥಗಳನ್ನು ಸಂಧ್ಯಾಸಮಯದಲ್ಲಿ ಎಳೆದು ಭಕ್ತ ಸಮೂಹ ಈ ಉತ್ಸವದಲ್ಲಿ ಭಾಗವಹಿಸಿ ಪುನೀತರಾದಂತೆ ಹೇಳಿದೆ.

ವಿರೂಪಾಕ್ಷ ವಸಂತೋತ್ಸವವು ಮೃಗಯಾಮಹೋತ್ಸವ, ಮಂತ್ರಿರಾಸಿದೇವನ ವಿಶೇಷ ಪೂಜೆ, ಬಿಲ್ವ ವೃಕ್ಷ ಪೂಜೆ, ಹನುಮಂತನ (rivulet) ಮತ್ತು ವಾಲಿಭಂಡಾರ ಬೆಟ್ಟದತ್ತ ಪಯಣ, ಅವಭೃತ, ಧ್ವಜಾರೋಹಣ, ಮೊದಲಾದ ಮುಖ್ಯ ಆಚರಣೆಗಳನ್ನು ಒಳಗೊಂಡಿತ್ತು. ಇವೆಲ್ಲವುಗಳನ್ನು ವಿವರವಾಗಿ ಚಂಪೂ ಚಿತ್ರಿಸುತ್ತದೆ.

ಶಾಸನಗಳು ಮತ್ತು ಇತರೆ ಯಾವುದೇ ಸಾಹಿತ್ಯಕೃತಿಗಳು ನೀಡದ ಅಪರೂಪದ ಚಿತ್ರವನ್ನು ಈ ಕೃತಿ ನೀಡುತ್ತದೆ.

ಈ ಉತ್ಸವದಲ್ಲಿ ಭಾಗವಹಿಸಿದ ರಾಜರನ್ನು, ಗಣ್ಯರನ್ನು ಕೃತಿ ಹೆಸರಿಸುತ್ತದೆ. ಆಗ ಹಂಪೆಯಲ್ಲಿದ್ದ ರಾಜನ ಹೆಸರು 'ದೇವನೃಪ' ಎಂದಷ್ಟೇ ಹೇಳಿ ವಿದ್ಯಾರಣ್ಯ ಯತಿಗಳ ಆಶೀರ್ವಾದದ ಕಕ್ಷೆಯಲ್ಲಿದ್ದನು ಎನ್ನುತ್ತದೆ. ಈ ಯತಿಗಳು ವಿದ್ಯಾರಣ್ಯ ಪೀಠ ಪರಂಪರೆಯಲ್ಲಿ ಬರುವ ಯತಿಗಳಿರಬೇಕೆನಿಸುತ್ತದೆ. ಅಶ್ವಪತಿ ಎಂದು ಕರೆಯಲ್ಪಡುತ್ತಿದ್ದ ಕಾಶ್ಮೀರದೇಶದ ರಾಜ, ಲಿಂಗಧಾರಿಯಾಗಿದ್ದ ಸಿರ್ಸಿಯ ರಾಜ (ಬಹುಶಃ ಸೋಂದೆಯ ಸದಾಶಿವರಾಯ), ಮೋಕ್ಷಪುರದ ರಾಜ ದೇವರಥ, ಬಳ್ಳಾರಿಯ ರಾಜ, ವಿಜಯನಗರದ ಸೇನಾಪತಿಯಾಗಿದ್ದ ರಾಯದುರ್ಗದ ಗಣ್ಯ, ಚಿತ್ರಶಿಲಾನಗರದ (=ಚಿತ್ರದುರ್ಗದ) ಬೇಡಜಾತಿಯ ಗಣ್ಯ, ಹರಪುರದ (=ಹರಪನಹಳ್ಳಿಯ) ಗಣ್ಯ, ಭುಜಂಗನಗರದ ಗಣ್ಯ, ಲಕ್ಷ್ಮಣೇಶ್ವರ ಪುರಿಯ (=ಲಕ್ಷ್ಮೇಶ್ವರ) ಗಣ್ಯ, ಡಂಬಳಪುರ ದೇಶದ ಗಣ್ಯ, ಮುಂತಾದ ಗಣ್ಯರು, ಪಾಳೆಯಗಾರರು ಈ ಉತ್ಸವದಲ್ಲಿ ಭಾಗವಹಿಸಿದ್ದರೆಂದು ಕವಿ ತಿಳಿಸುತ್ತಾನೆ. ವಿಶೇಷವೆಂದರೆ ಶಿವಪಾರ್ವತಿಯರ ಮೂರ್ತಿಗಳಿದ್ದ ಈ ಉತ್ಸವದಲ್ಲಿ ಭಾಗವಹಿಸಿದ್ದ ಗಣ್ಯಮಾನ್ಯರು ಶೈವರು ಆದರೆ ಪಲ್ಲಕ್ಕಿ ವಿದ್ಯಾರಣ್ಯರದು.

ಸುಮಾರು ಹದಿನೇಳನೇ ಶತಮಾನದಾಗಿರಬಹುದಾದ ಈ ಕೃತಿ ಆ ಕಾಲದ ಧಾರ್ಮಿಕ ವಿದ್ಯಮಾನವೊಂದನ್ನು ಚಿತ್ರಿಸುತ್ತದೆ.

ಈ ಮೂರು ಕೃತಿಗಳ ಅವಲೋಕನದಲ್ಲಿ ಚಿತ್ರಿತವಾಗಿರುವ ಹಂಪೆ, ಹದಿಮೂರನೇ ಶತಮಾನದಿಂದ ಹದಿನೇಳನೇ ಶತಮಾನದವರೆಗೆ ಸಾಗಿಬಂದಿದ್ದು ಮಧ್ಯದಲ್ಲಿ ವಿಜಯನಗರ ಸಾಮ್ರಾಜ್ಯದಂಥ ವೈಭವಯುಕ್ತ ರಾಜಮನೆತನ ಸ್ಥಾಪಿತವಾಗಿ ಅಷ್ಟೇ ಹೀನಾಯವಾಗಿ ಪತನಗೊಂಡಿದ್ದರೂ ಮೂರೂ ಕಾಲದ ಹಂಪೆಯ ಚಿತ್ರವನ್ನು ನೀಡುತ್ತಲಿರುವುದು ಧರ್ಮನಿಷ್ಠೆಯನ್ನು, ಸ್ಥಳಮಹಿಮೆಯನ್ನು ಎತ್ತಿ ಹೇಳುತ್ತವೆ. ವಿಜಯನಗರ ಪೂರ್ವದ ಈ ಭಾಗದ ಪ್ರಮುಖ ಸಾಹಿತ್ಯ ಚಟುವಟಿಕೆಯೆಂದರೆ ಹರಿಹರ ಮತ್ತು ರಾಘವಾಂಕರದೇ. ವಿಜಯನಗರ ಕಾಲಾವಧಿಯಲ್ಲಿ (ಕ್ರಿ.ಶ. 1336ರಿಂದ ಕ್ರಿ.ಶ. 1565) ನೂರಾರು ಧರ್ಮಗ್ರಂಥಗಳು, ಸಾಹಿತ್ಯ, ಶಾಸ್ತ್ರ ಮೊದಲಾದ ಕೃತಿಗಳು ರಚಿತವಾಗಿದ್ದರೂ 'ವಿರೂಪಾಕ್ಷಸ್ಥಾನ ವರ್ಣನಂ' ಕೃತಿಯೂ ಈ 'ವಿರೂಪಾಕ್ಷ ಸೀಮೆ' ಪ್ರದೇಶವನ್ನು ಆಸ್ಥಾನ ಪರಿಭಾಷೆಯಲ್ಲಿ ಅಳವಡಿಸಿರುವುದು ಈ ಪ್ರದೇಶದ ನೇರ ಚಿತ್ರಣ ನೀಡುವ ಏಕೈಕ ಕೃತಿಯಾಗಿದೆ. ಅಂತೆಯೇ ವಿಜಯನಗರೋತ್ತರ ಕಾಲಾವಧಿಯ ಧಾರ್ಮಿಕ ಚಟುವಟಿಕೆಯನ್ನು 'ವಿರೂಪಾಕ್ಷ ವಸಂತೋತ್ಸವ ಚಂಪೂ' ಪ್ರತಿಬಿಂಬಿಸುತ್ತದೆ. ವಿಜಯನಗರ ಪೂರ್ವದಲ್ಲಿ ಈ ಪ್ರದೇಶ 'ಪಂಪಾಕ್ಷೇತ್ರ'ವೆಂದೂ, ವಿಜಯನಗರ ಕಾಲದಲ್ಲಿ 'ವಿರೂಪಾಕ್ಷಸ್ಥಾನ ವರ್ಣನಂ' ಎಂದೂ, ವಿಜಯನಗರೋತ್ತರ ಕಾಲದಲ್ಲಿ ಪ್ರಮುಖ ವಿದ್ಯಮಾನವಾದ 'ವಿರೂಪಾಕ್ಷ ವಸಂತೋತ್ಸವ'ವೆಂದೂ ಕರೆಯಲ್ಪಟ್ಟಿರುವ ಆ ಕಾಲದ ಯುಗಧರ್ಮದ ಚಿತ್ರಣವೇ ಆಗಿದೆ. ಈ ಮೂರು ಕೃತಿಗಳಲ್ಲಿ ಕಾಣುವ ಹಂಪೆಯ ಚಿತ್ರಣದಲ್ಲಿ ಧಾರ್ಮಿಕತೆ ಸ್ಫುಟಗೊಂಡಿರುವುದು ಈ ಸ್ಥಳದ ಮತ್ತು ಇಲ್ಲಿಯ ದೈವದ ಮಹಿಮೆಯನ್ನು ಚಿತ್ರಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

## ಟಿಪ್ಪಣಿಗಳು

1. *ಕುಮಾರವ್ಯಾಸ ಭಾರತ,* ಸಭಾಪರ್ವ, 5ನೇ ಸಂಧಿ, 6ನೇ ಪದ್ಯ.

2. ಈ ಕೃತಿಯ ಕಾಲವನ್ನು ಸಂಪಾದಕ ಆರ್.ಎಸ್.ಪಂಚಮುಖಿಯವರು 14ನೇ ಶತಮಾನ ಎಂದಿದ್ದಾರೆ. ಇದು ವಿಜಯನಗರ ಪತನಾನಂತರ (1565)ವೆಂದು ಅದರೊಳಗಿನ ಅಂತಃ ಸಾಕ್ಷ್ಯಗಳ ಮೂಲಕ ಖಚಿತಪಡಿಸಲಾಗಿದೆ. ವಿವರಗಳಿಗೆ ನೋಡಿ, ಮೃತ್ಯುಂಜಯ ರುಮಾಲೆ, "ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಕಾಲ ವಿಚಾರ – ಮತ್ತೊಂದು ಆಧಾರ," *ಇತಿಹಾಸ ದರ್ಶನ,* ಸಂ. 13, ಪು. 225-227.

3. ಸುಂಕಾಪುರ ಎಂ.ಎಸ್. (ಸಂ.), 1976, *ಶಿವಭಕ್ತಿ ಮಹಿಮಾರಗಳೆಗಳು,* ಧಾರವಾಡ.

4. ಚಿಕ್ಕ ನಂಜೇಶ ತನ್ನ 'ರಾಘವಾಂಕ ಚಾರಿತ್ರ'ದಲ್ಲಿ ಈ ಕೃತಿಯ ಸಾರಾಂಶವನ್ನು ನೀಡುತ್ತಾನೆ. ಈ ಕೃತಿ ಅಲಭ್ಯ.

5. *SII,* IV, No. 260.

6. ಮನ್ಮಥತೀರ್ಥವನ್ನೇ ಪ್ರಾರಂಭದಲ್ಲಿ ಮನ್ಮುಖತೀರ್ಥವೆನ್ನುತ್ತಿದ್ದರು ಎಂದು ಎಂ. ಚಿದಾನಂದ ಮೂರ್ತಿಯವರು ಸಾಧಾರವಾಗಿ ತೋರಿಸಿದ್ದಾರೆ. ನೋಡಿ, ಚಿದಾನಂದ ಮೂರ್ತಿ ಎಂ., 1993, *ಹೊಸತು ಹೊಸತು,* ಹಂಪಿ, ಪು. 311-318.

7. ಶ್ರೀ ಪಂಪಾಮಹಾತ್ಮೆಯಲ್ಲಿ ಮೇಲಿನ ನಾಲ್ಕು ದ್ವಾರಗಳನ್ನಲ್ಲದೆ ಇನ್ನೂ ನಾಲ್ಕು ಉಪದ್ವಾರಗಳನ್ನು ಹೇಳಿದೆ. ಆಗ್ನೇಯದಲ್ಲಿ ಸಿದ್ಧೇಶ್ವರ, ನೈರುತ್ಯದಲ್ಲಿ ಶಂಕರೇಶ್ವರ, ವಾಯವ್ಯದಲ್ಲಿ ಮಹಾಕಾಲೇಶ್ವರ, ಈಶಾನ್ಯದಲ್ಲಿ ಸೋಮನಾಥ ಉಪದ್ವಾರಗಳಲ್ಲಿದ್ದ ದೈವಗಳು. ಈ ಎಂಟೂ ದೈವಗಳೂ ವಿರೂಪಾಕ್ಷನ ಬೇರೆ ಬೇರೆ ರೂಪಗಳೇ ಆಗಿವೆ. ಉದ್ಧೃತ, ಚಿದಾನಂದ ಮೂರ್ತಿ ಎಂ., *ಹೊಸತು ಹೊಸತು*, ಪು. 477 ಅಡಿಟಿಪ್ಪಣಿಯಲ್ಲಿ.

8. ಚಿದಾನಂದ ಮೂರ್ತಿ ಎಂ., *ಪೂರ್ವೋಕ್ತ*, ಪು. 475-476.

9. ಶಿವಮೂರ್ತಿ ಶಾಸ್ತ್ರಿ ಬಿ. (ಸಂ.), 1955, *ವಿರೂಪಾಕ್ಷಸ್ಥಾನ ವರ್ಣನಂ*, ಬೆಂಗಳೂರು.

10. *ಚೆನ್ನಬಸವ ಪುರಾಣ*, ಸಂಧಿ 60, ಪದ್ಯ 21.

11. *ವಿರೂಪಾಕ್ಷಸ್ಥಾನ ವರ್ಣನಂ*, ಪು. 4.

12. *ಅದೇ*, ಪು. 4-5.

13. *ಅದೇ*, ಪು. 6.

14. *ಅದೇ*, ಪು. 8.

15. *ಅದೇ*, ಪು. 12.

16. *ಅದೇ*, ಪು. 13.

17. ಪಂಚಮುಖಿ ಆರ್.ಎಸ್. (ಸಂ.), 1953, *ವಿರೂಪಾಕ್ಷ ವಸಂತೋತ್ಸವ ಚಂಪೂ*, ಧಾರವಾಡ.

# 21. ಶಿವತತ್ವ ಚಿಂತಾಮಣಿ ಮತ್ತು ಹಂಪೆ

– ದೇವರಕೊಂಡಾರೆಡ್ಡಿ

ಶಿವತತ್ವ ಚಿಂತಾಮಣಿ ಎಂಬ ವಾರ್ಧಕ ಷಟ್ಪದಿ ಗ್ರಂಥವನ್ನು ಬರೆದವನು ಲಕ್ಕಣ್ಣ ದಂಡೇಶ ಎಂಬುವವನು. ಇವನು ವಿಜಯನಗರವನ್ನಾಳಿದ ಸಂಗಮ ವಂಶದ ದೊರೆ ಪ್ರೌಢದೇವರಾಯನ (ಕ್ರಿ.ಶ. 1424-1446) ಅಮಾತ್ಯನೂ ಆಗಿದ್ದ. ಇವನನ್ನು ಉಲ್ಲೇಖಿಸುವ ಅನೇಕ ಶಾಸನಗಳು ಕರ್ನಾಟಕ ಮತ್ತು ತಮಿಳು ನಾಡಿನಲ್ಲಿ ದೊರೆತಿವೆ. ಹೀಗೆ ಪ್ರಮುಖ ಅಧಿಕಾರಿಯಾಗಿ, ಸೇನಾನಿಯಾಗಿ, ಪ್ರಧಾನಿಯಾಗಿ, ಕವಿಯಾಗಿ ತನ್ನ ವಿಭಿನ್ನ ಮುಖಗಳನ್ನು ಬಿಂಬಿಸಿದ್ದಾನೆ. ದಕ್ಷಿಣದಲ್ಲಿ ಸಿಂಹಳದವರೆಗೂ ದಂಡೆತ್ತಿ ಹೋಗಿದ್ದ.

ಇಂತಹ ಲಕ್ಕಣ್ಣ ದಂಡೇಶ 'ಶಿವತತ್ವ ಚಿಂತಾಮಣಿ' ಎಂಬ ಶಿವಪರ ಕಥೆಗಳನ್ನುಳ್ಳ ಬೃಹತ್ ಕೃತಿಯನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿದ್ದಾನೆ. ಕೃತಿಯಲ್ಲಿ ತನ್ನ ವ್ಯಕ್ತಿಗತ ವಿವರಗಳನ್ನು ಹೆಚ್ಚಿಗೆ ನೀಡದೆ ದೇವರಾಯನ ಮಂತ್ರಿ ಎಂದಷ್ಟೇ ಹೇಳಿಕೊಂಡಿದ್ದಾನೆ. ಆದರೆ ಶಾಸನಗಳು ಇವನ ವ್ಯಕ್ತಿಗತವಾದ ವಿವರಗಳನ್ನು ನೀಡುತ್ತವೆ. ಈತ ಒಂದನೆಯ ದೇವರಾಯನ ಕಾಲದಲ್ಲಿಯೇ ಅಧಿಕಾರದಲ್ಲಿದ್ದ. ಹೊಳಲ್ಕೆರೆ ತಾಲೂಕಿನ 75ನೆಯ ಶಾಸನವು ಹೆಸರಿಸುವ ಲಖಿಣವೊಡೆಯ ಇವನೇ ಆಗಿದ್ದಲ್ಲಿ ಕ್ರಿ.ಶ. 1410ಕ್ಕೆ ವಿಜಯನಗರದ ಸೇವೆಯಲ್ಲಿದ್ದ. ಇವನ ತಂದೆ ಹೆಗಡೆದೇವ ಮತ್ತು ತಾಯಿ ವೊಮ್ಮಾಯಮ್ಮ. ಇವನು ವಿಷ್ಣುವರ್ಧನ ಗೋತ್ರಕ್ಕೆ ಸೇರಿದವನು. ಇವನ ತಮ್ಮ ಮಾದಂಣ. ಶಾಸನವೊಂದರಲ್ಲಿ ಇವನನ್ನು ಮಾದಣ ದಣಾಯಕ ಎಂದೂ ಕರೆದಿದೆ (ಮುಳಬಾಗಿಲು - 7).

ಈ ಮೇಲಿನ ವಿವರಗಳಿಂದ ಲಕ್ಕಣ್ಣನು ಮೂಲತಃ ಬ್ರಾಹ್ಮಣನಾಗಿದ್ದು ಮುಂದೆ ವೀರಶೈವ ಧರ್ಮವನ್ನು ಸ್ವೀಕರಿಸಿರಬೇಕು. ತಂದೆಯೂ ಸಹ ಹೆಗಡೆಯಾಗಿದ್ದುದರಿಂದ ವಿಜಯನಗರದ ಅಧಿಕಾರದಲ್ಲಿದ್ದಿರಬೇಕು. ಈ ಕಾರಣದಿಂದಲೇ ಕಾವ್ಯದಲ್ಲಿ ಕ್ರಿಯಾಶಕ್ತಿ ಗುರುವನ್ನು ಸ್ಮರಿಸಿರುವುದು. ಕ್ರಿ.ಶ. 1410ರ ಶಾಸನವು ಇವನನ್ನು ಹೊಸಪಟ್ಟಣದ ಲಖಿಣವೊಡೆಯ ಅಂದರೆ ವಿಜಯನಗರದವನೆಂದು ಗುರುತಿಸಿದೆ.

ಬಹುಶಃ ಲಕ್ಕಣ್ಣ ದಂಡನಾಯಕನು ಚಿಕ್ಕ ವಯಸ್ಸಿನಲ್ಲಿಯೇ ವೀರಶೈವ ಧರ್ಮದಿಂದ ಪ್ರಭಾವಿತನಾಗಿರಬಹುದು. ಮುಂದೆ ವಿಜಯನಗರ–ಹಂಪೆಯಲ್ಲಿ ಪ್ರೌಢದೇವರಾಯನ ಕಾಲದಲ್ಲಿ ನೆಲೆಸಿದ್ದ ಅನೇಕ ವಿರಕ್ತರ ಪ್ರಭಾವ ಇವನ ಮೇಲೆ ಆಗಿರಬೇಕು. ಪ್ರೌಢದೇವರಾಯನ ಕಾಲದಲ್ಲೇ ಅಲ್ಲದೆ ಮುಂದೆ ಮಲ್ಲಿಕಾರ್ಜುನನ ಕಾಲದಲ್ಲಿಯೂ ಈತ ವಿಜಯನಗರದ ಸೇವೆಯಲ್ಲಿದ್ದ. ಸು. ಕ್ರಿ.ಶ. 1463ರ ಶಾಸನವು ಈತನು ಬಾರಕೂರಿನ ರಾಜ್ಯದ ಅಧಿಪತಿಯಾಗಿದ್ದಂತೆ ತಿಳಿಸುತ್ತದೆ. ಈ ಆಧಾರಗಳಿಂದ ಈತ ದೀರ್ಘಕಾಲ ಅಂದರೆ ಸುಮಾರು 75 ವರ್ಷಗಳಾದರೂ ಜೀವಿಸಿದ್ದಿರಬೇಕು. ಮೇರುಕೃತಿಯಾದ ಈ 'ಶಿವತತ್ವ ಚಿಂತಾಮಣಿ'ಯು ಪ್ರೌಢದೇವರಾಯನ ಜೀವಿತದ ಅವಧಿಯಲ್ಲಿಯೇ ರಚಿತವಾಗಿದ್ದಿರಬೇಕು. ಈ ಕೃತಿಯು ಕ್ರಿ.ಶ. 1440 ರಿಂದ 1445ರ ಅವಧಿಯಲ್ಲಿ ರಚಿತವಾಗಿರಬೇಕು. ಈ ಕೃತಿಯನ್ನು ಸಂಪಾದಿಸಿದ ಪಂಡಿತ ಬಸಪ್ಪನವರು ಇದರ ಕಾಲವನ್ನು ಸು. ಕ್ರಿ.ಶ. 1450 ಎಂದಿರುತ್ತಾರೆ. ಆದರೆ ಪ್ರೌಢದೇವರಾಯನು ಬದುಕಿರುವಾಗಲೇ ಈ ಕೃತಿ ರಚಿತವಾಗಿರಬೇಕು.

ಇವನು ಅಥವಾ ಇವನ ತಂದೆ ತಾಯಿಗಳು ಕೋಲಾರ ಜಿಲ್ಲೆಯ ಮುಳಬಾಗಿಲ ಬಳಿಯ ವಿರೂಪಾಕ್ಷಿ ಗ್ರಾಮದವರೇ ಆಗಿದ್ದಿರಬೇಕು. ಈ ಕಾರಣದಿಂದ ಹಂಪೆಯ ಅಧಿಶೈವವಾದ ವಿರೂಪಾಕ್ಷನ ದೇವಾಲಯವನ್ನಲ್ಲದೆ ಅದೇ ರೀತಿಯ ಮನ್ಮಥ ಕುಂಡವನ್ನೂ ಮಾಡಿಸುತ್ತಾನೆ. ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ರಥೋತ್ಸವಗಳನ್ನು ನಡೆಸಲು ದತ್ತಿ ನೀಡುತ್ತಾನೆ. ಒಂದೆರಡು ಶಾಸನಗಳಲ್ಲಿ ಇವನನ್ನು 'ದಕ್ಷಿಣ ಸಮುದ್ರಾಧಿಪತಿ' ಎಂದು ಕರೆಯಲಾಗಿದೆ.

ಶಿವತತ್ವ ಚಿಂತಾಮಣಿಯು ಮುಖ್ಯವಾಗಿ ಶಿವನ ಪಂಚವಿಂಶತಿ ಲೀಲೆಗಳನ್ನು ತಿಳಿಸುವ ಕೃತಿ. ಇದಲ್ಲದೆ ಬಸವಪುರಾಣ, ಅವನಪವಾಡಗಳು, ತನಗಿಂತ ಮೊದಲಿದ್ದ, ಪ್ರಮಥಾದಿಗಳ ಕಥೆ, 63 ಪುರಾತನರು, ಇವಲ್ಲದೆ ಅಸಂಖ್ಯಾತರು, ನೂತನ ಗಣಗಳು, ಪಂಚಾಕ್ಷರಿ, ರುದ್ರಾಕ್ಷಿ, ವಿಭೂತಿ ಮುಂತಾದವುಗಳ ಮಹಿಮೆಯನ್ನು ಹೇಳಲಾಗಿದೆ. ಇವುಗಳಲ್ಲಿ ಮುಖ್ಯವಾದದ್ದು ನೂತನ ಗಣಂಗಳ ಕಥೆ. ತನ್ನ ಕಾಲದಲ್ಲಿ ಅಥವಾ ತನಗಿಂತ ಹಿಂದೆ ಇದ್ದಿರಬಹುದಾದ ಭಕ್ತ, ಅವನ ಸ್ಥಳ, ಅವನ ಕಾಯಕ, ಅವನು ಮೆರೆದ ಪವಾಡವನ್ನು ವಿವರಿಸಿರುತ್ತಾನೆ. ಈ ಭಾಗವು ಬಹು ಪ್ರಮುಖ ಕೋಶವಾಗಿದೆ. ಗ್ರಾಮಗಳನ್ನು ಕೊಡುವಾಗ ಒಂದು ಕ್ರಮವಿದೆ. ಅನೇಕ ಐತಿಹಾಸಿಕ ವ್ಯಕ್ತಿಗಳು ಈ ಪಟ್ಟಿಯಲ್ಲಿ ಬರುತ್ತಾರೆ. ಒರಿಸ್ಸಾದಿಂದ ತಮಿಳುನಾಡಿನವರೆಗೆ ಇದ್ದಿರಬಹುದಾದ ಶಿವಭಕ್ತರ ಪಟ್ಟಿಯನ್ನೇ ಇದು ಒಳಗೊಂಡಿದೆ. ಜಾತಿ ಭೇದವಿಲ್ಲದೆ ವ್ಯಕ್ತಿಯ ಹೆಚ್ಚುಗಾರಿಕೆಯನ್ನು ಈತ ಹೇಳಿರುತ್ತಾನೆ.

ಇಂತಹ ವಿವರ ಹೇಳುವಾಗ ಹಂಪೆಯ ವಿವರ ಬರುತ್ತದೆ. ಉಳಿದಂತೆ ಗ್ರಂಥದಲ್ಲಿ ಎಲ್ಲಿಯೂ ತನ್ನ ವಿಷಯವಾಗಿ ಏನೂ ಹೇಳಿಕೊಂಡಿಲ್ಲ. ಪ್ರಾರ್ಥನಾ ಶ್ಲೋಕದಲ್ಲಿ ವಿರೂಪಾಕ್ಷ, ಪಾಪಾಂಬಿಕೆ, ದೇವರಾಯನನ್ನು ಹೆಸರಿಸುತ್ತಾನೆ. ಹೆಚ್ಚಿನ ವಿವರ ನೀಡಿಲ್ಲ.

ವಿಜಯನಗರವನ್ನು ಈತನು ವಿಜಯಕಲ್ಯಾಣ ಪುರವೆಂದೂ (ಸಂಧಿ 38, ಪದ್ಯ 211, 213-15), ವಿಜಯ ಕಲ್ಯಾಣವೆಂದೂ (ಅದೇ ಸಂಧಿ ಪದ್ಯ 212, 217-19), ವಿಜಯ ಕಲ್ಯಾಣ ಪಟ್ಟಣವೆಂದೂ (ಅದೇ ಪದ್ಯ 216), ವಿಜಯನಗರ (ಅದೇ ಪದ್ಯ 207, 210) ಎಂದೂ ಕರೆದಿದ್ದಾನೆ. ವಿಜಯ ಎಂಬುದು ವಿರೂಪಾಕ್ಷ ದೇವರಿಗಿದ್ದ ವಿಶೇಷಣವಾಗಿದ್ದು ತನ್ನ ಮೆಚ್ಚಿನ ರಾಜನಾಳುವ ಪಟ್ಟಣಕ್ಕೆ ವಿಜಯ ಎಂಬ ವಿಶೇಷಣವನ್ನು ಈತ ಸೇರಿಸಿದ್ದಾನೆ. ಬಲ್ಲಾಳನ ಮಗನ ಹೆಸರು ವಿಜಯ ವಿರೂಪಾಕ್ಷ ಬಲ್ಲಾಳ, ಪ್ರೌಢದೇವರಾಯನ ಮಗನ ಹೆಸರು ವಿಜಯ ವಿರೂಪಾಕ್ಷ. ಕವಿಗೆ ವಿಜಯನಗರ ಬರೀ ರಾಜಧಾನಿಯಲ್ಲ ಅದು ಬಸವಣ್ಣ ಬಾಳಿ ಬೆಳಗಿದ ಕಲ್ಯಾಣವೇ ಆಗಿದೆ. ಇಲ್ಲಿನ ಭಕ್ತರು

ನೆಲನಮಱೆಯೊಳು ಗೋಪ್ಯವಾದ ನವನಿಧಿಯಂತೆ
ಜಲಧಿಯೊಳು ತೊಳಪ ನವರತ್ನ ರಾಶಿಗಳಂತೆ
ಕುಲವಕುಲವೆನ್ನದೆಲ್ಲರೊಳು ಪೊರಕಿಪೊಡಲ್ಲಿಗಲ್ಲಿಗೆ ಶಿವಾನಂದದಿಂ
ಮಲಮಾಯೆ ಮೊದಲಾದ ಪಾಶವಿರಹಿತರಾಗಿ
ವಿಲಸಿತ ತ್ರಿವಿಧಲಿಂಗದ ಸೇವೆಯಲ್ಲಿ ನಿ
ಶ್ಚಲರಾದ ವಿಜಯನಗರಿಯ ಭಕ್ತ ಗಣತತಿಯ . . . . 38/206

ಹಂಪೆಯು ಕವಿಯ ದೃಷ್ಟಿಯಲ್ಲಿ

ಪರಹಿತದ ಬೀಡು ಸತ್ಯದ ನುಡಿಯ ನಡುನಾಡು
ಕರುಣಾಬ್ಧಿಯಿಕ್ಕೆ ಕಾಮಿತ ಸುಖದ ತೆಕ್ಕೆ ಶಶಿ
ಧರನ ಸಾಮರ್ಥ್ಯದಾಗರ ಸದಾಚಾರ ಸದ್ಭಕ್ತಿಗಳ ಜನ್ಮಭೂಮಿ
ಪರತರ ಶಿವಾನುಭವಿಗಳಪರಿಮಿತ ಗೃಹಂ
ಪರಿಕಿಪರಿಗಿದು ವಿಜಯಕಲ್ಯಾಣವಾದುದೀ
ಧರೆಯಜೀಯೆ ದೇವರಾಜೇಂದ್ರಪುರವೆಂಬುವವರ . . . . 38/205

ಇಲ್ಲಿನ ಚರಮೂರ್ತಿಗಳು ಹೀಗಿದ್ದರು

ಮಿಸುಪ ಸರ್ವಾಂಗ ಭಸಿತದ ವಿಮಲ ರುದ್ರಾಕ್ಷಿ
ಯೆಸೆವ ತೋಡಿಗೆಯ ಭಾರಿಜಡೆಯ ಕಾಷಾಂಬರದ
ಮಸುಳಿಸದ ಸುಳಿಪಲ್ಲ ಪಂಚಾಕ್ಷರಿಯ ಮಂತ್ರದೆಸಕದ ಮುಖಾಂಭೋಜದ
ಲಸಿತ ಜಪಮಾಲೆಗಳ ಭಸ್ಮ ಘುಂಟಿಕೆಯ ಸಂ
ತಸದ ನೆಲೆವನೆಯೆನಿಪ ವಿಜಯ ಕಲ್ಯಾಣಪುರ
ದಸಮ ಸಿಂಹಾಸನದ ಚರಲಿಂಗ ಮೂರ್ತಿಗಳ ಚರಣಾಂಬುಜಕ್ಕೆ ಶರಣು . . . . 38/216

ಬಿಟ್ಟ ಜಡೆಗಳ ದಿಗಂಬರದ ಶಿವಲಿಂಗದೊಳು
ನಟ್ಟ ದೃಷ್ಟಿಯ ಕರಣತತಿಯ ನಿಶ್ಚಲತೆಗಳ
ಗಟ್ಟಿಗೊಂಡ ವಿರಳ ಸಮಾಧಿಕರು ಪರಾನಂದರಸ ವೊಸರುವಶ್ರುಜಲದ
ದಟ್ಟಯಿಸಿ ನೆಗೆವ ಪುಳಕದ ಭಸಿತ ಲೇಪನದ
ಪುಟ್ಟುವ ಸ್ವೇರದೊಱಕೆಯ ವಿಜಯ ಕಲ್ಯಾಣ
ಪಟ್ಟಣದೊಳೊಲಿದಿರ್ಪ ಚರಲಿಂಗ ಮೂರ್ತಿಗಳ ಚರಣಾಂಬುಜಕ್ಕೆ ಶರಣು . . . . 38/216

ಈ ಭಕ್ತರು ಸಿದ್ಧ ಶಿಖರಿಯಾರ ಹೇಮಕೂಟ, ಮಾಲ್ಯವಂತ, ಅಂಜನಾದ್ರಿ, ಮತಂಗಾಚಲದ ಗುಹೆಗಳಲ್ಲಿ ಪಂಪಾಪತಿಯ ರಥಬೀದಿಗಳಲ್ಲಿ ನೆಲೆಸಿದ್ದರು.

ಪಂಪಾಕ್ಷೇತರವು ಕವಿಗೆ

..... ಪರಿಕಿಪರಿಗಣಿಮಾದಿ ಸಿದ್ಧಿಗಳ ನೆಲೆವೀಡು ಸಕುಳ ತೀರ್ಥದ ಸಂಕುಳ
ವರಋಷಿಗಳಿಕ್ಕೆ ಮನುಮುನಿಗಳಾಶ್ರಯ ಮಹಾ

ಪುರುಷರಾಡುಂಬೊಲಂ ತಾನೆನಿಸಿ ಸಂತತಂ
ಪರನ ಶರಣರ ತವರದೆಂಬ ಶಿವಭಾವಕರ ಚರಣಾಂಬುಜಕ್ಕೆ ಶರಣು .... 38/226

ಪುರದ ನಾಲ್ಕು ದ್ವಾರಮೊಂದೊಂದು ಯೋಜನಾಂ
ತರ ಪರಿಮಿತಂ ಪೂರ್ವ ಮುಖ ಕಿನ್ನರೇಶ್ವರಂ
ಪರಿವಿಡಿಯ ದಕ್ಷಿಣ ಮುಖಂ ಜಂಬುಕೇಶ್ವರಂ ಪಶ್ಚಿಮ ಸೋಮೇಶ್ವರಂ

ಪರಿಯಾಯದುತ್ತರಂ ವಾಣಿಭದ್ರೇಶ್ವರಂ
ಪರಮ ತೇಜೋರಾಶಿಯಾಗಿ ಮಧ್ಯದೊಳಿರ್ಪ
ವರದಾಭಯ ವಿರೂಪಾಕ್ಷನೆಂದರ್ಚಿಪರ ಚರಣಾಂಬುಜಕ್ಕೆ ಶರಣು .... 38/229

ಅತಿಶಯ ಮಹಿಮೆಯನ್ನು ಹೊಂದಿರುವ ಈ ಸ್ಥಳದ ಮಹಿಮೆಯನ್ನು ಹೊಗಳಲು ಆದಿಶೇಷನಿಗೇ ಸಾಧ್ಯವಿಲ್ಲವಂತೆ.

ಇಲ್ಲಿ ರಂಬೆಯಿಂದ ಪೂಜೆಗೊಂಡ ರಂಬೇಶ್ವರ, ನಳನರ್ಚಿಸಿದ ನಳೇಶ್ವರ, ಮುಕ್ತಿಯನ್ನೀಯುವ ಶಂಭು ಮುಕ್ತೀಶ್ವರ, ಮಲ್ಲಿಕಾರ್ಜುನ, ರಾಮಲಕ್ಷ್ಮಣೇಶ್ವರ, ಮಹಾಕಾಳ, ಮಾರ್ಕಂಡೇಶ್ವರ, ಇಂದ್ರೇಶ್ವರ, ಸೋಮೇಶ್ವರ, ಹಿರಿಯ ಪಂಪಾದೇವಿ, ಚಿಕ್ಕ ಪಂಪಾದೇವಿ, ನಗ್ನೇಶ್ವರ, ಶಂಕರೇಶ್ವರ, ಅಘೋರೇಶ್ವರ, ನಾಗೇಶ್ವರ, ಕೇತಾರದೇವರು, ಛಾಯಾಮಲ್ಲಿಕಾರ್ಜುನ, ವರುಣೇಶ್ವರ, ವಾಯವೇಶ್ವರ, ಕುಬೇರೇಶ್ವರ, ಜಡೆಯ ಶಂಕರದೇವರು, ಪಾತಾಳಗಂಗೆಯ ಸೋಮಶೇಖರದೇವರು, ಲೋಕಪಾವನದೇವರು, ಕೋಟಿ ಶಂಕರದೇವ, ಏಕಾಂತರಾಮೇಶ್ವರ ಮೊದಲಾದ ದೇವಾಲಯಗಳಿದ್ದವು. ತೀರ್ಥಗಳಲ್ಲಿ ಮನ್ಮಥತೀರ್ಥ, ಸೋಮತೀರ್ಥ, ಮಹಾಕಾಳತೀರ್ಥ, ತಾರಾತೀರ್ಥ, ಸೂರ್ಯತೀರ್ಥ, ವತ್ಸತೀರ್ಥ, ತಾಪ್ಯತೀರ್ಥ, ಮಾರ್ಕಂಡೇಯ ತೀರ್ಥ, ಗಜಾಶ್ವಸುಖತರತೀರ್ಥ, ಕಾದಂಬರಿತೀರ್ಥ, ಬ್ರಹ್ಮಾಭಿದಾನತೀರ್ಥ ಮುಂತಾದ ತೀರ್ಥಗಳನ್ನು ಉಲ್ಲೇಖಿಸಿದ್ದಾನೆ. ಇವಲ್ಲದೆ ತುಂಗಭದ್ರೆಯಲ್ಲಿ ಪಾಪವಿನಾಶಿತೀರ್ಥ, ದಶಾಶ್ವಮೇಧತೀರ್ಥ, ಕೋಟಿವರತೀರ್ಥಗಳಿದ್ದವು. ಮಾಲ್ಯವಂತಾಚಲದಲ್ಲಿ ಋಣವಿಮೋಚನ, ಯಕ್ಷತೀರ್ಥ, ಗದಾತೀರ್ಥ, ದನುತೀರ್ಥ, ಶಂಖಚಂಕ್ರತೀರ್ಥ, ಪದ್ಮದಳತೀರ್ಥಗಳೂ, ಮಾತಂಗಗಿರಿಯಲ್ಲಿ ವತ್ಸನಾಭಿಯತೀರ್ಥ, ಅಗ್ನಿತೀರ್ಥ, ರಾಮತೀರ್ಥ, ಪಿತೃತೀರ್ಥ, ನಿತ್ಯಮಾಂಗಲ್ಯಕರತೀರ್ಥ, ಶ್ರೀರುದ್ರಪಾದತೀರ್ಥಗಳಿದ್ದುದಾಗಿ ತಿಳಿಸಿದ್ದಾನೆ. ಇವುಗಳಲ್ಲಿ ಅನೇಕ ತೀರ್ಥಗಳನ್ನು ಪಂಪಾಮಹಾತ್ಮೆಯೂ ಉಲ್ಲೇಖಿಸುತ್ತದೆ.

ಪಂಪಾಪುರದ ಈಗಿನ ರಥ ಬೀದಿ ಹಿಂದೆ ಚಿಕ್ಕದಾಗಿರಬೇಕು. ಅಥವಾ ರಥಬೀದಿ ಇಲ್ಲದಿರಬಹುದು. ಹೀಗಾಗಿ ಈ ದೇವಾಲಯದ ಮುಂದೆ ರಥಬೀದಿಯನ್ನು ಪ್ರೌಢದೇವರಾಯನು ಮಾಡಿಸುತ್ತಾನೆ. ಈ ಮಹಾಪಥದಲ್ಲಿ ಎರಡೂ ಕಡೆ ಸುಫಲಗಳನ್ನು ನೀಡುವ ಕಲ್ಪವೃಕ್ಷಗಳನ್ನು ನೆಡೆಸಿದ. ಗೋಪುರದ ಎರಡೂ ಕಡೆ ಅನೇಕ ಆರಾಮ (ವಿಶ್ರಾಂತಿ ಮಂಟಪ)ಗಳನ್ನು ಕಟ್ಟಿಸಿದ. ಹೀಗೆ ಅನೇಕ ಕಟ್ಟಡಗಳನ್ನು ದೇವರಾಯ ಕಟ್ಟಿಸುತ್ತಾನೆ (38/253). ಈ ರಥ ಬೀದಿಯು ಅನೇಕ ಗೋಪುರಗಳಿಂದ ಕಂಗೊಳಿಸುತ್ತಿತ್ತು. ಈ ಕ್ಷೇತ್ರವು ಕಾಶಿಯಿಂದ ಯಿಮ್ಮಡಿ, ಗಯೆಗೆ ನಾಲ್ಮಡಿ, ವಿಶಿಷ್ಟ ಕೇದಾರಕ್ಕೆ ಎಂಟು ಮಡಿಯಾಗಿತ್ತು ಎಂದಿದ್ದಾನೆ. ವಿರೂಪಾಕ್ಷ ದೇವಾಲಯದ ನಾಲ್ಕು ದಿಕ್ಕಿನ ಗೋಪುರಗಳನ್ನು ಈತನೇ ಮಾಡಿಸುತ್ತಾನೆ (38/251).

ಮತಂಗ ಪರ್ವತದ ಮೇಲೆ ಇರುವ ವೀರೇಶ್ವರ (ವೀರಭದ್ರ)ನ ಮೂರ್ತಿಯೂ ಪ್ರೌಢದೇವರಾಯನ ಕಾಲಕ್ಕೆ ಇತ್ತು. ವಿರೂಪಾಕ್ಷನಲ್ಲಿ ಬೇಕಾದ ವರಪಡೆಯ ಬೇಕಾದರೆ ಮತಂಗ ಪರ್ವತದ ವೀರೇಶ್ವರನನ್ನು ದರ್ಶಿಸಿ ಎಂದು ಒಂದು ಪದ್ಯದಲ್ಲಿ ಹೇಳಿದ್ದಾನೆ (38/239).

ಲಕ್ಕಣ್ಣ ದಂಡೇಶನು ಸ್ತುತಿಸಿರುವ ವ್ಯಕ್ತಿಗಳಲ್ಲಿ ಕ್ರಿಯಾಶಕ್ತಿ ಯತಿಯೂ ಒಬ್ಬ. ಇವನನ್ನು ಕುರಿತು

ಶಕ್ತಿ ಜಗದುದಯ ಕಾರಣಮೆನಿಕುಮತಿ ವಿಮಲ
ಭಕ್ತಿಯೇ ಊರ್ಧ್ವಮುಖಿಯೆಂದಱಿದ ಸುಜ್ಞಾನ
ಭಕ್ತಿಯೇ ಬಹಿಷ್ಕರಿಸಿ ಸತ್ಕ್ರಿಯಾಶಕ್ತಿ ನಾಮಂ ಬಡೆದು ವರ್ತಿಸುತ್ತ
ಭುಕ್ತಿ ಮುಕ್ತಿಗಳ ನೀವುತ ಸಂಸ್ಕೃತಿಯೊಳತಿ ವಿ
ರಕ್ತಿ ಭಾವದೊಳಾಚರಿಪ ಸುಮಾರ್ಗ ಕ್ರಿಯಾ
ಶಕ್ತಿಮತಿರಾಯನೆ ವಿರೂಪಾಕ್ಷನೆಂದವನ ಚರಣಾಂಬುಜಕ್ಕೆ 38/246

ಈ ಕ್ರೀಯಾಶಕ್ತಿಗೆ ಸಂಬಂಧಿಸಿದ ಕ್ರಿ.ಶ. 1390 ಶಾಸನ ಹಂಪೆಯಲ್ಲಿ ದೊರೆತಿದೆ. ಇದೇ ಕ್ರಿಯಾಶಕ್ತಿಗೆ ಸಂಬಂಧಿಸಿದ ಕ್ರಿ.ಶ. 1397ರ ಶಾಸನ ಕುಕನೂರಲ್ಲಿ ದೊರೆತಿದೆ. ಹೀಗಾಗಿ ಈ ಕ್ರಿಯಾಶಕ್ತಿಯನ್ನೇ ಈ ಪದ್ಯದಲ್ಲಿ ಲಕ್ಕಣ ಸ್ತುತಿಸಿರುವುದು. ಈ ಕ್ರಿಯಾಶಕ್ತಿಯು ಇಮ್ಮಡಿ ಹರಿಹರನ ಕಾಲದಿಂದ ಪ್ರೌಢದೇವರಾಯನ ಕಾಲದವರೆಗೂ ಜೀವಿಸಿರಬೇಕು. ಈ ಕ್ರಿಯಾಶಕ್ತಿಯನ್ನು ಈ ಲಕ್ಕಣನು ವಿರೂಪಾಕ್ಷನಿಗೆ ಸಮೀಕರಿಸಿದ್ದಾನೆ.

ಈ ಕೃತಿಯಲ್ಲಿ ಲಕ್ಕಣ ತನ್ನ ಒಡೆಯನಾದ ಪ್ರೌಢದೇವರಾಯನ ಬಗ್ಗೆ ಹೇಳಿರುವ ಪದ್ಯಗಳು ಗಮನಾರ್ಹ. ಕವಿಯ ಪ್ರಕಾರ ವೀರದೇವರಾಜೇಂದ್ರನು ದೇವಲೋಕದ ಇಂದ್ರನೇ.

ನಿಜಭುಜ ಪರಾಕ್ರಮದಿ ಮೂಱುರಾಯರೆನಿಪ್ಪ
ಗಜಘಟೆಗಳಂ ವಿದಾರಿಸಿ ಪಂಚಮುಖನಾಗಿ
ಸುಜನರಂ ಪರಿರಕ್ಷಿಸುತ ಶಿವಾರ್ಚಕರಿಗನಿಶಂ ಸಮಾದಾನವಿತ್ತು ॥
ವೃಜಿನಹರ ಪಂಪಾವಿರೂಪಾಕ್ಷ ಚರಣಮಂ
ಭಜಿಸುತಂ ವಿಜಯಕಲ್ಯಾಣಪುರದೊಳು ಮೆಱೆವ
ವಿಜಯನೆನೆ ದೇವರಾಜೇಂದ್ರ ನಿರವಱಿವವರ . . . . 38/249

ಪೂಜಕನು ತಾನೆಯಾದಪನೆನುತ ಮನವೊಲಿದು
ರಾಜಶೇಖರ ವಿರೂಪಾಕ್ಷಂ ಸ್ವಲೀಲೆಯಿಂ
ರಾಜಾಧಿರಾಜ ಪರಮೇಶ್ವರಂ ಶ್ರೀ ವೀರದೇವರಾಜೇಂದ್ರನಾಗಿ
ರಾಜಿಸುತ ಸಕಲದೇಶದ ಮಕುಟವರ್ಧನ ವಿ
ರಾಜಿತ ಮಹಾರತ್ನ ಸಿಂಹಾಸನದೊಳಧಿಕ
ತೇಜದಿಂ ಪ್ರತ್ಯಕ್ಷನಾದನೆಂದಱಿವವರ ಚರಣಾಂಬುಜಕ್ಕೆ ಶರಣು . . . . 38/250

ಇಲ್ಲಿ ರಾಜಶೇಖರನಾದ ವಿರೂಪಾಕ್ಷದೇವರು ವೀರದೇವರಾಜೇಂದ್ರನಾಗಿ ಪ್ರತ್ಯಕ್ಷನಾಗಿರುವನೆಂದು ಕವಿ ತಿಳಿಸುತ್ತಾನೆ.

ಒಂದು ಪದ್ಯದಲ್ಲಿ

'ಧರೆಗಧಿಕ ಮೂಱುರಾಯರ ಗಂಡನಪ್ರತಿಮ
ಬಿರುದಂಕ ಗಜವೇಂಟೆಕಾಱ ದೇವೇಂದ್ರ ಭೂ
ವರ'
ಮಹದೈಶ್ವರ್ಯ ಶರದಿ ಚಂದ್ರೋದಯ
ಉದಾರಕರುಣಾಧಾರ
ನಿರುಪಮಿತ ಸಪ್ತಾಂಗ ರಾಜ್ಯವರ್ಧನ ಎಂದು ಕರೆದಿದ್ದಾನೆ.

ಒಂದೆಡೆ ಈ ದೇವರಾಯನ ಕೆಳೆಯ ಲಕ್ಕಣ್ಣನೆಂಬಂತೆ ಕರೆದುಕೊಂಡಿದ್ದಾನೆ (38/129). ಈ ಪ್ರೌಢದೇವರಾಯ ಹಂಪೆಯ ವಿರೂಪಾಕ್ಷ ಮತ್ತು ಪಂಪಾಂಬಿಕೆ ಹಾಗೂ ಗಣೇಶನ ರಥಗಳನ್ನು ಪಂಪಾಪುರದ ಬೀದಿಯಲ್ಲಿ ಎಳೆಸುವ ಏರ್ಪಾಟನ್ನು ಮಾಡುತ್ತಾನೆ. ಅಂದರೆ ವಿದ್ಯಾರಣ್ಯರ ರಥ ಆಗ ಇರಲೇ ಇಲ್ಲ. ಕರಸ್ಥಲ ನಾಗಲಿಂಗನ ಚರಿತೆಯಲ್ಲಿಯೂ ಪ್ರೌಢದೇವರಾಯನ ಕಾಲದಲ್ಲಿ ಗಣಪತಿಯ ಉತ್ಸವ ನಡೆಯುತ್ತಿದ್ದಂತೆಯೂ ಗಣಪತಿಯ ವಿಗ್ರಹವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ನೀರಿನಲ್ಲಿ ಬಿಡುತ್ತಿದ್ದ ಉಲ್ಲೇಖವಿದೆ.

ಶಿವತತ್ವ ಚಿಂತಾಮಣಿ ಗ್ರಂಥವು ವೀರಶೈವ ಧರ್ಮದ ಗ್ರಂಥವಾದುದರಿಂದ ಇಲ್ಲಿ ವೀರಶೈವ ಧರ್ಮಕ್ಕೆ ಸಂಬಂಧಿಸಿದ ವಿವರ ಬಿಟ್ಟು ಇತರ ಧರ್ಮಗಳ ವಿವರಗಳಿಗೆ ಅವಕಾಶವಿಲ್ಲ. ಹೀಗಾಗಿ ಪಂಪಾಪುರದಲ್ಲಿದ್ದ ಅಥವಾ ವಿಜಯನಗರದಲ್ಲಿದ್ದ ಅನ್ಯಧರ್ಮೀಯರ ಪ್ರತಿಕ್ರಿಯೆಗಳೇನೆಂಬುದು ತಿಳಿಯುವುದಿಲ್ಲ. ಸ್ವತಃ ಲಕ್ಕಣ್ಣನೂ ವಿಷ್ಣುವರ್ಧನ ಗೋತ್ರದವನೆಂದು ಹೇಳಿಕೊಂಡಿದ್ದಾನೆ. ಹೀಗಾಗಿ ಈತನೂ ಒಂದು ಹಂತದಲ್ಲಿ ವೀರಶೈವ ದೀಕ್ಷೆ ಪಡೆದವನೆಂದು ಹೇಳಬಹುದು.

ಒಟ್ಟಿನಲ್ಲಿ ಶಿವತತ್ವ ಚಿಂತಾಮಣಿ ಪ್ರೌಢದೇವರಾಯನ ಸಾಂಸ್ಕೃತಿಕ ಬದುಕಿನ ಮೇಲೆ ಸ್ವಲ್ಪ ಬೆಳಕು ಚೆಲ್ಲುವ ಗ್ರಂಥವೆಂಬುದರಲ್ಲಿ ಸಂಶಯವಿಲ್ಲ.

[ಈ ಲೇಖನ ಬರೆಯಲು ಪಂಡಿತ ಎಸ್. ಬಸಪ್ಪನವರು ಸಂಪಾದಿಸಿದ ಹಾಗೂ ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ಇವರು ಪ್ರಕಟಿಸಿದ ಶಿವತತ್ವ ಚಿಂತಾಮಣಿ (1960) ಕೃತಿಯನ್ನು ಬಳಸಿಕೊಳ್ಳಲಾಗಿದೆ.]

# 22. ಹಂಪೆಯ ವೀರಶೈವ ಮಠಗಳು ಮತ್ತು ಕನ್ನಡ ಸಾಹಿತ್ಯ

– ಕೆ. ರವೀಂದ್ರನಾಥ

ನಾಡಿನ ಸಂಸ್ಕೃತಿಯನ್ನು ಪ್ರತಿನಿಧಿಸಬಲ್ಲ ಆಕರಗಳಲ್ಲಿ ಸಾಹಿತ್ಯವೂ ಒಂದು. ಇದು ಮಾನವನ ಕಲಾತ್ಮಕ ಅಭಿವ್ಯಕ್ತಿಗೆ ಮಾಧ್ಯಮವಾಯಿತು. ಎಲ್ಲ ಕಲೆಗಳಂತೆ ಸಾಹಿತ್ಯವು ವಿವಿಧ ಪರಿಸರ ಹಾಗೂ ಪ್ರೇರಣೆಗಳಿಂದ ಬೆಳೆದು ಬಂದಿತು. ಅವುಗಳಲ್ಲಿ ರಾಜಾಶ್ರಯ (ಅರಮನೆ) ಮತ್ತು ಮಠಾಶ್ರಯ (ಗುರುಮನೆ)ಗಳು ಪ್ರಮುಖ ನೆಲೆಗಳು. ಒಂದು ಕಾಲಕ್ಕೆ ಅನೇಕ ಸಹೃದಯ ದೊರೆಗಳು ನಮ್ಮ ನಾಡನಾಳಿದ್ದು ಅವರಲ್ಲಿ ಕೆಲವರು ಸ್ವತಃ ಕವಿಗಳು ಇನ್ನೂ ಕೆಲವರು ಕವಿಗಳಾಶ್ರಿತರಾಗಿ ಸಾಹಿತ್ಯ ಸೃಷ್ಟಿಗೆ ಕಾರಣರಾಗಿದ್ದಾರೆ. ಅದೇ ರೀತಿ ನಾಡಿನ ಮಠ–ಮಾನ್ಯಗಳು ಸಾಹಿತ್ಯ ರಚನೆಗೆ ಉತ್ತಮ ಪರಿಸರವನ್ನು ಒದಗಿಸಿಕೊಟ್ಟ ಅನೇಕ ನಿದರ್ಶನಗಳು ನಮ್ಮಲ್ಲಿವೆ. ಹಾಗೆ ನೋಡಿದರೆ ಬಹುಪಾಲು ಕನ್ನಡ ಸಾಹಿತ್ಯ ಒಂದಲ್ಲ ಒಂದು ರೀತಿಯಲ್ಲಿ ಮಠ–ಮಾನ್ಯಗಳ ಪರಿಸರದಲ್ಲಿಯೆ ಬೆಳೆದು ಬಂದಿದೆ. ಮಠಾಧಿಪತಿಗಳು ಸ್ವತಃ ಸಾಹಿತ್ಯ ಸೃಷ್ಟ್ಯಾರ್ಹರು ಹಾಗೂ ಪೋಷಕರು ಆಗಿ ಕನ್ನಡ ಸಾಹಿತ್ಯಕ್ಕೆ ಉಜ್ವಲ ಬದುಕನ್ನು ನೀಡಿದ್ದಾರೆ. ಇದರ ಪರಿಣಾಮ ಕನ್ನಡ ಸಾಹಿತ್ಯದ ಮಡಿಲಿಗೆ ಉತ್ತಮ ಕಾವ್ಯಗಳು ಸೇರಿಕೊಂಡವು. ಪ್ರಾಚೀನ ಭಾರತದ ತಕ್ಷಶಿಲಾ, ನಲಂದಾ ವಿಶ್ವವಿದ್ಯಾಲಯಗಳು, ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳು ಉತ್ತಮ ರೀತಿಯಲ್ಲಿ ಸಾಹಿತ್ಯ ಸೇವೆ ಮಾಡಿವೆ. ಇಲ್ಲಿ ನಡೆಯುತ್ತಿತ್ತೆನ್ನಲಾದ ದರ್ಶನ, ಅಧ್ಯಯನ, ಅಧ್ಯಾಪನಗಳು ಮುಂದೆ ವಿಕಾಸಗೊಂಡು ಧರ್ಮದ ಜೊತೆಗೆ ಸಾಹಿತ್ಯ ಸೃಷ್ಟಿ, ಸಂಪಾದನೆ, ಪರಿಚಲನೆ, ಪ್ರಸಾರಗಳಿಗೆ ಅವಕಾಶ ಕಲ್ಪಿಸಿಕೊಟ್ಟವು. ಕನ್ನಡ ಸಾಹಿತ್ಯವನ್ನು ಜೈನ ಸಾಹಿತ್ಯ, ವೀರಶೈವ ಸಾಹಿತ್ಯ, ವೈದಿಕ ಸಾಹಿತ್ಯ ಮತ್ತು ಕ್ರೈಸ್ತ ಸಾಹಿತ್ಯವೆಂದು ಧಾರ್ಮಿಕ ದೃಷ್ಟಿಕೋನದಿಂದ ವರ್ಗೀಕರಿಸುವುದಕ್ಕೆ ಆ ಸಾಹಿತ್ಯ ವಿಷಯದಿಂದ ಮತಾವಲಂಬಿ (ಧರ್ಮಾವಲಂಬಿ) ಮತ್ತು ಪರಿಸರದಿಂದ ಮಠಾಶ್ರಯ ಹೊಂದಿರುವುದೇ ಆಗಿದೆ.

ಪ್ರಸ್ತುತ ಪ್ರಬಂಧ ಹಂಪೆಯ ಪರಿಸರದಲ್ಲಿ ಬೆಳೆದುಬಂದ ಮಠಾಶ್ರಿತ ಕನ್ನಡ ಸಾಹಿತ್ಯವನ್ನು ಕುರಿತು ಸ್ಥೂಲವಾಗಿ ಪರಿಚಯಿಸುವುದಾಗಿದೆ. ಹಂಪೆ ಮೊದಲಿನಿಂದಲೂ ಅನೇಕ ಧರ್ಮಗಳಿಗೆ ಆಶ್ರಿತ ಕೇಂದ್ರ. ವಿಶೇಷವಾಗಿ, ವೀರಶೈವ ಧರ್ಮದ ದಾರ್ಶನಿಕರ, ಆಚಾರ್ಯರ, ಅನುಭಾವಿಗಳ ನಿರಂತರ ಪರಿಶ್ರಮದಿಂದ ವೀರಶೈವ ಸಾಹಿತ್ಯ ಸಮೃದ್ಧವಾಗಿ ಬೆಳೆಯಿತು. "ಮುಖ್ಯವಾಗಿ ಸಂಗಮವಂಶದ ಎರಡನೇ ದೇವರಾಯನ ಆಳ್ವಿಕೆಯ ಕಾಲದಲ್ಲಿ ದೊರೆತ ರಾಜ ಪ್ರೋತ್ಸಾಹದಿಂದಾಗಿ ವೀರಶೈವ ಧರ್ಮದ ಅನುಯಾಯಿಗಳು ಅಧಿಕ, ವ್ಯಾಪಕ, ತೀವ್ರತರವಾದ ಮತ್ತು ಅಭಿಮಾನದಿಂದ ಕೂಡಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ಆ ಧರ್ಮದ ಚರಿತ್ರೆಯಲ್ಲಿಯೆ ಒಂದು ಬಹು ಮುಖ್ಯವಾದ ಅಧ್ಯಾಯವನ್ನೇ ನಿರ್ಮಿಸಿದರು. ಇವುಗಳಿಗೆಲ್ಲ ಪೂರಕವಾಗಿ ತಮ್ಮ ಧರ್ಮ, ತತ್ತ್ವಶಾಸ್ತ್ರ, ಪುರಾಣಗಳು, ವಚನಗಳು, ಶರಣರ ಚರಿತೆಗಳು ಮುಂತಾದ ವಿಷಯಗಳನ್ನು ಕುರಿತು ಗ್ರಂಥಗಳನ್ನು ಕನ್ನಡ ಭಾಷೆಯಲ್ಲಿ ವಿಪುಲವಾಗಿ ರಚಿಸಿ ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಗಣನೀಯವಾಗಿ ಹೆಚ್ಚಿಸಿದರು.[1]

ಲಕ್ಕಣ್ಣ ದಣ್ಣಾಯಕರು ಮುನ್ನ ಭಂಡಾರಿ
ಜಕ್ಕಪ್ಪ ಕಲ್ಲೆಹದ ಕೇತಿಶೆಟ್ಟಿಯರಿವರು
ಲಕ್ಕಸಂಖ್ಯೆಯ ವಿತ್ತಮಂ ವೆಚ್ಚಿಸುತ್ತ ಮಾಡಿದರೆಂಬುದೇನು ಮಿಗಿಲು (ಕಾಂಡ ೮, ಸಂಧಿ ೨೨, ಪದ್ಯ ೫೨)

ಎಂಬ ಗುಬ್ಬಿಮಲ್ಲಣಾರ್ಯನ ವೀರಶೈವಾಮೃತ ಪುರಾಣದ ಈ ಮಾತು ಕನ್ನಡ ಸಾಹಿತ್ಯಕ್ಕೆ ಈ ರಾಜ ಪರಿವಾರದವರ ಅಭಯ ಹಸ್ತ ತಪ್ಪಿದಾಗ ಮಠ–ಮಾನ್ಯಗಳು ಸಹಾಯಕ್ಕೆ ಬಂದಿರುವುದು ಗಮನಾರ್ಹ ಸಂಗತಿ. ಹಂಪೆಯಲ್ಲಿ "ವೀರಶೈವಾಚಾರ್ಯರ ಮಠಗಳೂ ಇದ್ದವು. ಅವುಗಳೆಲ್ಲವೂ ಹಂಪೆಯ ತೇರು ಬೀದಿಯಲ್ಲಿಯೇ ಅಸ್ತಿತ್ವದಲ್ಲಿ ಇದ್ದಿರಬೇಕು . . . . ವೀರಶೈವ ಮಠಗಳಲ್ಲಿ ಅನುಚಾನವಾಗಿ ದಾಸೋಹ ಮತ್ತು ಜ್ಞಾನದಾಸೋಹ (ಶಿಕ್ಷಣ) ಕಾರ್ಯಗಳು ನಿರಂತರವಾಗಿ ಜರುಗುತ್ತಿದ್ದವು. ಆ ಮಠಗಳ ಕಟ್ಟಡಗಳೆಲ್ಲವೂ ವಿಶಾಲವಾಗಿದ್ದು ....... ಹಂಪೆಯ ವಿರೂಪಾಕ್ಷಸ್ವಾಮಿ ದೇವಮಂದಿರದ ಮುಂದೆ ಕಾಣಬರುವ ರಥಬೀದಿಯಲ್ಲಿ ವೀರಶೈವಾಚಾರ್ಯರಿಗೆ ಸೇರಿದವುಗಳೆಂದು ಹೇಳಲಾಗುತ್ತಿರುವ ಸುಮಾರು ಹತ್ತಕ್ಕೂ ಹೆಚ್ಚು ಮಠಗಳನ್ನು (ಕಟ್ಟಡಗಳನ್ನು) ಗುರುತಿಸಬಹುದು. ಅವುಗಳಲ್ಲಿ 1. ಶ್ರೀಕಾಶೀ ಕರಿಸಿದ್ಧೇಶ್ವರ ಮಠ, 2. ಮಾವಿನ ತೋಪಿನ ಸಾವಿರ ದೇವರ ಮಠ, 3. ಕೊಟ್ಟೂರು ಸ್ವಾಮಿ ಮಠ (ಈಗ ಇದು ರಥ ಬೀದಿಯಿಂದ ಸ್ವಲ್ಪ ಹಿಂದಕ್ಕೆ ಕಾಣಬರುತ್ತದೆ), 4. ಭೂಸನೂರ ಮಠ, 5. ಕಲ್ಲುಮಠ, 6. ಹಾನುವಾಳ ಮಠ, 7. ನೀಲಮ್ಮನ ಮಠ, 8. ಹುಲಿ ಮಠ".[2] ಹಂಪೆಯ ಒಂದು ಮಠದಲ್ಲಿ ಪುರಾಣವ್ಯಾಖ್ಯಾನ ಮಾಡುತ್ತಿದ್ದ ಉಪಾಧ್ಯಾಯರಿಗೆ ಬಿಟ್ಟುಕೊಟ್ಟ ಕೆಲವು ದಾನಗಳ ಉಲ್ಲೇಖ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. 1199ರ ಶಿಲಾಶಾಸನದಿಂದ "ಮಾದೇಗೌಡನೆಂಬ ಒಬ್ಬ ಮಾಂಡಲಿಕನು ಈ ವಿರುಪಾಕ್ಷ ಕ್ಷೇತ್ರ(ಹಂಪೆ)ದಲ್ಲಿ ನಿವಾಸಿಸಿದ್ದ 700 ಬ್ರಾಹ್ಮಣರ ನಿತ್ಯ ಅನ್ನ ಸಂತರ್ಪಣೆಗಾಗಿ ಕೆಲವು ಭೂಮಿಗಳನ್ನು ದಾನಮಾಡಿರುವುದಾಗಿ ತಿಳಿಸುತ್ತದೆ."[3] ಪ್ರಾಯಶಃ ಅನ್ನ ದಾಸೋಹದೊಂದಿಗೆ ವಿದ್ಯಾದಾನವು ನಡೆಯುತ್ತಿದ್ದವೆಂಬುದಕ್ಕೆ ನಾಡಿನ ಸಾವಿರಾರು ಇಂತಹ ಶಾಸನಗಳು ನಿದರ್ಶನವಾಗಿವೆ.

12ನೆಯ ಶತಮಾನದ ಕಲ್ಯಾಣದಲ್ಲಿ ವಚನ ಸಾಹಿತ್ಯದ ಸಾಮೂಹಿಕ ಸೃಷ್ಟಿ ಆದಂತೆ 14ನೆಯ ಶತಮಾನದ ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರಿಂದ ವಚನಸಾಹಿತ್ಯ ಸಂಕಲನ ಸಾಮೂಹಿಕ ನೆಲೆಯಲ್ಲಿ ಜರುಗಿತು. ಮುಂದೆ ಎಡೆಯೂರಿನ ಪರಿಸರದಲ್ಲಿ ತೋಂಟದ ಸಿದ್ಧಲಿಂಗರ ಶಿಷ್ಯ–ಪ್ರಶಿಷ್ಯರಿಂದ ಸಂಪಾದನಕಾರ್ಯ ಸಾಮೂಹಿಕವಾಗಿ ನಡೆದು ಸಂಪಾದನ ಸಮಯವೆಂಬ ಹೆಗ್ಗಳಿಕೆಗೆ ಕಾರಣವಾಯಿತು. ಜನವದಂತಿ ಪ್ರಕಾರ ಹಂಪೆಯಲ್ಲಿ ನೂರೊಂದು ವಿರಕ್ತರಿಗೆ ನೂರೊಂದು ಮಠ (ಗವಿ)ಗಳು ಇದ್ದವೆಂಬ ಪ್ರತೀತಿಯಿದೆ. ಇದಕ್ಕೆ ನಿದರ್ಶನವೆಂಬಂತೆ ಪ್ರೌಢರಾಯನಿಗೂ ಮತ್ತು ವಿರಕ್ತರಿಗೂ ಇದ್ದ ಸಂಬಂಧವನ್ನು ಚೋರ ಬಸವನ ಚರಿತ್ರೆ ಹೀಗೆ ತಿಳಿಸುತ್ತದೆ.

ವೀರಶೈವ ಸುದೀಕ್ಷೆ ಚಾಮರಸನಿಂ ಪಡೆದು ಲಿಂಗಾಂಗ ಸಮರಸ ಸುಖಾ
ಸಾರಾಯ ಶರಧಿಯೊಳು ಮುಳುಗಿ ಮೂಡುತ ಸದಾ
ಚಾರ ಸಾಮ್ರಾಜ್ಯಾಳ್ವ ಗುರುಲಿಂಗ ಜಂಗಮಕೆ
ಜೀರಂತೆ ತನುಮನ ಧನಂಗಳನು ವೊಲಿದಿತ್ತು ಕುರುಕುಲಕೆ ಮಠಕ್ಷೇತ್ರವ

ಹೀಗೆ ಮಠ–ಮಾನ್ಯಗಳ ಭವ್ಯ ಪರಿಸರ–ಪರಂಪರೆ ಇರುವ ಹಂಪೆಯಲ್ಲಿದ್ದ ಕೆಲವು ಪ್ರಮುಖ ಮಠಗಳ ಉಲ್ಲೇಖ ಕಾವ್ಯ ಶಾಸನಾಧರಗಳಿಂದ ತಿಳಿದು ಬರುತ್ತದೆ. ಅವುಗಳ ಸ್ಥೂಲ ಪರಿಚಯದೊಂದಿಗೆ ಅವು ಸಾಹಿತ್ಯ ಚಟುವಟಿಕೆಗಳಲ್ಲಿ ನಿರ್ವಹಿಸಿದ ಪಾತ್ರವನ್ನು ಗುರುತಿಸಬಹುದಾಗಿದೆ.

**1. ಕಲ್ಲುಮಠ:**

15ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಕಲ್ಲುಮಠ ಹಂಪೆಯ ರಥ ಬೀದಿಯ ಎಡಪಕ್ಕದಲ್ಲಿದೆಯೆಂದು ಸಿ.ಟಿ.ಎಂ. ಕೊಟ್ರಯ್ಯನವರು ತಿಳಿಸುತ್ತಾರೆ.[4] ಎಂ. ಚಿದಾನಂದಮೂರ್ತಿಯವರು ವಿರೂಪಾಕ್ಷ ದೇವಸ್ಥಾನದ ಹಿಂದೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿರುವ ಅರಸನ ಗವಿಯನ್ನೇ ಕಲ್ಲುಮಠವೆಂದು ಅಭಿಪ್ರಾಯಪಡುತ್ತಾರೆ.[5] ಕಲ್ಲುಮಠದ ಪ್ರಭುದೇವರ "ವಾಸ ಬಹುಶಃ ಕಾಮಲಾಪುರದಲ್ಲಿರಬೇಕೆಂದೆನಿಸುತ್ತದೆ. ಸುಮಾರು 5-6 ವರ್ಷಗಳ ಹಿಂದೆ ಕಾಮಲಾಪುರದಲ್ಲಿ ಕಲ್ಲುಮಠವೆಂದೇ ಕರೆಸಿಕೊಳ್ಳುತ್ತಿದ್ದ ಹಾಳು ಮಂಟಪವಿತ್ತು (ಈಗ ಅದು ಸಾರ್ವಜನಿಕರ ಸ್ವತ್ತಾಗಿ ಅಲ್ಲಿ ಮನೆ ನಿರ್ಮಾಣವಾಗಿದೆ). ಬಹುಶಃ ಆ ಜಾಗವೇ ಕಲ್ಲುಮಠದ ಪ್ರಭುದೇವರ ಕಲ್ಲುಮಠವಿರಬೇಕು"[6] ಎಂದು ಮೃತ್ಯುಂಜಯ ರುಮಾಲೆ ಸಂದೇಹ ವ್ಯಕ್ತಪಡಿಸುತ್ತಾರೆ. ಅದೇನೇ ಇದ್ದರೂ ಕಲ್ಲುಮಠಾಧ್ಯಕ್ಷನಾದ ಪ್ರಭುದೇವರು ಲಿಂಗಲೀಲಾವಿಲಾಸ ಚಾರಿತ್ರವೆಂಬ ವಚನ ಸಂಕಲನ ಕೃತಿಯನ್ನು ಮತ್ತು ಮಂತ್ರಗೋಪ್ಯಕ್ಕೆ ಟೀಕುವನ್ನು ರಚಿಸಿದ್ದಾನೆ. ಹೀಗಾಗಿ ಈತನೊಬ್ಬ ಸತ್ವಶಾಲಿ ಗ್ರಂಥಕರ್ತೃ. ಸಂಕಲನ ಕಲೆ, ನಿರೂಪಣಾ ಪ್ರತಿಭೆ ಹಾಗೂ ಅಗಾಧ ಪಾಂಡಿತ್ಯದಿಂದಾಗಿ ಒಬ್ಬ ಶಾಸ್ತ್ರಜ್ಞನಾಗಿದ್ದನು. ಪ್ರಭುದೇವರು ಟೀಕಾಚಾರ್ಯರಾಗಿದ್ದಂತೆ, ಕಲ್ಲುಮಠ ಟೀಕಿನ ಮಠವಾಗಿರಬೇಕು.

**2. ಹಿರೇಮಠ:**

ಹಂಪೆಯ ಹಿರೇಮಠಕ್ಕೆ ಐತಿಹಾಸಿಕ ಮಹತ್ವವಿದೆ. "ವಿಜಯನಗರ ಮಹಾಪಟ್ಟಣದ ಒಂದು ಭಾಗವಾಗಿದ್ದು ಕೃಷ್ಣಪುರವೆಂದು ಕರೆಯಲ್ಪಡುತ್ತಿದ್ದ ಉಪನಗರದಲ್ಲಿ ಈಗಲೂ ಕಾಣಬಹುದು. ಪಾಳುಬಿದ್ದಿರುವ ಸ್ಥಿತಿಯಲ್ಲಿದ್ದರೂ ಸುಮಾರು 600ಕ್ಕಿಂತಲೂ ಹೆಚ್ಚಾಗಿ ಸ್ತಂಭಗಳಿಂದಲೂ ಮತ್ತು ಕೆಳಭಾಗ ಮೇಲ್ಛಾವಣಿಯಿಂದ ಕೂಡಿರುವ ಈ ಮಠದ ಅವಶೇಷಗಳನ್ನು ಈಗಲೂ ನೋಡಬಹುದು. ಈ ಹಿರೇಮಠವು ಈಗಲೂ ಪೂಜೆಗೊಳ್ಳುತ್ತಿರುವ ಉದ್ದಾನ ವೀರಭದ್ರಸ್ವಾಮಿಯ ಮಂದಿರವು ಆ ಹಿರೇಮಠದ ಒಂದು ಭಾಗವಾಗಿದ್ದಿರಬೇಕು ಎಂದು ಸಿ.ಟಿ.ಎಂ. ಕೊಟ್ರಯ್ಯನವರು ಅಭಿಪ್ರಾಯ ಪಡುತ್ತಾ, "ಈ ಭಾಗದಲ್ಲಿ ಕಾಣಬರುವ ಎರಡು ಶಿಲಾಶಾಸನಗಳ ಪ್ರಕಾರ ಕೆಲವೇ ಗಜಗಳ ದೂರದಲ್ಲಿ ಹರಿಯುವ ನದಿಕಾಲುವೆಗೆ ಹಿರಿಯ ಕಾಲುವೆಯೆಂದು ತಿಳಿಸಲಾಗಿದೆ. ಮತ್ತು ಈ ದೇವಸ್ಥಾನಕ್ಕೆ ಹೊಂದಿಕೊಂಡಿದ್ದು ಹಾಗೂ ಮೇಲೆ ವಿವರಿಸಿರುವ ಅವಶೇಷಗಳಿಂದ ಕೂಡಿದ್ದ ಮಠಕ್ಕೆ ಹಿರಿಯ ಛತ್ರವೆಂದು ಹೇಳಲಾಗಿದೆ. ಹಿರಿಯ ಮಠವನ್ನೇ ಹಿರಿಯ ಛತ್ರವೆಂದು ಮೇಲಿನ ಶಾಸನಗಳಲ್ಲಿ ಹೇಳಿರಲು ಸಾಕು".[7] ಚನ್ನಬಸವ ಪುರಾಣ ಹಾಗೂ ಸಜ್ಜೆಯ ಸಿದ್ಧಲಿಂಗನ ಮಳೆಯರಾಜ ಚಾರಿತ್ರ್ಯವನ್ನನುಲಕ್ಷಿಸಿ ಹಿರೇಮಠದ ಶಿಷ್ಯಪರಂಪರೆಯನ್ನು ಹೀಗೆ ಗುರುತಿಸಬಹುದಾಗಿದೆ.

ಪರಮ ಶಾಂತಿಯ ಮನೆ, ಸದಯವೆ ಪರಿಕರ ಮೊಗ
ಲಿರದೆ ಶಿವಲಿಂಗ ಚಿಂತನೆಯೆ ಮನೆವಾರ್ತೆ ಮ
ತ್ತಿರದೆ ಸತಿಯೇ ಮೋಕ್ಷಲಕ್ಷ್ಮೀ ಮಕ್ಕಳೆ ಶಿಷ್ಯರಾಗಿ ಸಂಸಾರಿಯಂತೆ ॥
ಧರೆಯೊಳೆಗೆಸೆವ ವಿದ್ಯಾನಗರಿಯೊಳ ಮೆರೆವ
ಹಿರಿಯ ಮಠದೊಳು ಮಹಾಚರಲಿಂಗ ಸಹಿತ ಸ
ದ್ಗುರು ವರಂ ಸಿದ್ಧವೀರೇಶ ನೊಪ್ಪಿರ್ದನಾ ಯತಿಯದೇಂ ಸಾಮಾನ್ಯನೇ ॥
(ಚನ್ನಬಸವಪುರಾಣ, ಸಂಧಿ ೧, ಪದ್ಯ ೨೧)

ಪರಮಶಾಂತಿಯ ನೆಲೆ ಮನೆ, ದಯೆ ಈತನ ಪೂಜಾ ಸಾಮಾಗ್ರಿ, ಶಿವಲಿಂಗ ಧ್ಯಾನ ಮನೆಕೆಲಸ, ಮೋಕ್ಷಲಕ್ಷ್ಮಿ ಹೆಂಡತಿ, ಮಠದ ಶಿಷ್ಯರು ಮಕ್ಕಳು – ಇದು ಸಿದ್ಧವೀರೇಶಯತಿಯ ಸಂಸಾರ. ವಿರೂಪಾಕ್ಷ ಪಂಡಿತ ಈತನ ಶಿಷ್ಯ. ಸಿದ್ಧವೀರೇಶನ ಇನ್ನೊಬ್ಬ ಶಿಷ್ಯ ಮಳೆಯರಾಜ ಚಾರಿತ್ರ್ಯ ಬರೆದ ಸಜ್ಜೆಯ ಸಿದ್ಧಲಿಂಗ.

ಸ್ಥಿರಲಿಂಗ ಕೊಲ್ಲಿಪಾಕಿಯ ಸೋಮನೋಡಲಿಂದೆ
ಚರಲಿಂಗವಾಗಿ ಪೊರವಂಟ – ರೇವಣಸಿದ್ಧ
ಗುರುಕುಲಾನ್ವಯರಾದ ಮಳೆಯ ಮಲ್ಲೇಶ್ವರನ ಕರಜಾತ ಸಂತತಿಯೋಳ್ ॥

ಕರಮೆಸೆವ ಕರ್ನಾಟಕ ದೇಶಸ್ಥ ವಿದ್ಯಾನ
ಗರ ಹಿರಿಯ ಮಠದ ಸಿದ್ಧವೀರೇಶ್ವರನ
ವರ ಶಿಷ್ಯ ಸಿದ್ಧನಂಜೇಶನೆನ್ನ ಹಸ್ತ ಸರಸಿಜವೆ ಪೆತ್ತನೊಲವಿಂ ॥

(ಮಳೆಯರಾಜ ಚಾರಿತ್ರ, ಸಂಧಿ ೧, ಪದ್ಯ ೩೦)

ಹಿರೇಮಠದ ಸಿದ್ಧವೀರೇಶನ ಶಿಷ್ಯ ರಾಘವಾಂಕ ಚಾರಿತ್ರ್ಯ ಹಾಗೂ ಗುರುರಾಜ ಚಾರಿತ್ರ್ಯ ಬರೆದ ಸಿದ್ಧನಂಜೇಶ ಹಾಗೂ ಸಜ್ಜೆಯ ಸಿದ್ಧಲಿಂಗ ಹೀಗೆ ಹಿರೇಮಠದ ಪರಂಪರೆಯಲ್ಲಿ ಇವರಿಂದ ಚನ್ನಬಸವ ಪುರಾಣ, ರಾಘವಾಂಕ ಚಾರಿತ್ರ್ಯ, ಗುರುರಾಜ ಚಾರಿತ್ರ್ಯ, ಮಳೆಯರಾಜ ಚಾರಿತ್ರ್ಯಗಳಂಥ ಐತಿಹಾಸಿಕ ಕಾವ್ಯಗಳು ಸೃಷ್ಟಿಯಾದವು.

**3. ಎಮ್ಮೆಬಸವನ ಮಠ:**

ಎಮ್ಮೆಬಸವನ ಮಠ ಹಂಪೆಯಲ್ಲಿದ್ದ ಬಗ್ಗೆ ಈತನ ಕಾಲಜ್ಞಾನ ವಚನಗಳಿಂದ ತಿಳಿದುಬರುತ್ತದೆ. ಈ ಮಠಾಶ್ರಯದಲ್ಲಿದ್ದುಕೊಂಡು ಕಾಲಜ್ಞಾನ ಸಾಹಿತ್ಯ ಬೆಳವಣಿಗೆಯ ಕೇಂದ್ರವನ್ನಾಗಿ ಹಂಪೆಯನ್ನು ಚರಿತ್ರೆಯಲ್ಲಿ ಗುರುತಿಸುವಂತೆ ಮಾಡಿದ ಕೀರ್ತಿ ಎಮ್ಮೆಬಸವನಂಥ ಮಠಾಧ್ಯಕ್ಷರಿಗೆ ಸಲ್ಲುತ್ತದೆ.

**4. ಹೇಮಕೂಟ ಮಠ:**

ಕ್ರಿ.ಶ. 1800ರಲ್ಲಿದ್ದ ಮುದ್ದು ಸಂಗಮುನಿಯೆಂಬುವವರು ಹಂಪೆಯ ಹೇಮಕೂಟ ಮಠಾಧ್ಯಕ್ಷರಾಗಿದ್ದರು. ಈತನು 'ದೇವಾಂಗ ಪ್ರಕಾಶಿಕೆ' ಎಂಬ ಕೃತಿಯನ್ನು ಬರೆದಿದ್ದಾನೆ. ಈ ಕೃತಿಗೆ ಕಾಡು ಸಿದ್ಧಪ್ಪ ಬರೆದ ಟೀಕುಯಿದೆ.

**5. ಕಾಶೀಮಠ (ಕರಿಸಿದ್ದೇಶ್ವರ ಮಠ):**

ಈ ಮಠವು ಹಂಪೆಯ ತೇರು ಬೀದಿಯ ಬಲಗಡೆಯ ಭಾಗದಲ್ಲಿ ಕಾಣುವ ಸಾಲು ಕಟ್ಟಡಗಳಲ್ಲಿ ಒಂದೆಂದು ಸಿ.ಟಿ.ಎಂ. ಕೊಟ್ರಯ್ಯನವರು ತಿಳಿಸುತ್ತಾರೆ. ಅಲ್ಲದೆ ಹಂಪೆಯಲ್ಲಿ "ವೀರಶೈವ ಸಿಂಹಾಸನ ಪೀಠ" ಎಂಬ ಪ್ರಮುಖ ಮಠವೊಂದಿತ್ತು, ಅದು ಐದು ಶಾಖಾ ಮಠಗಳನ್ನು ಹೊಂದಿತ್ತು. ಆ ಶಾಖಾ ಮಠಗಳಲ್ಲಿ ಒಂದು ಬುಕ್ಕಸಾಗರ ಎಂಬ ಗ್ರಾಮದಲ್ಲಿ ಸ್ಥಾಪಿತವಾದುದಾಗಿತ್ತು. ಆ ವಿಷಯ ಕುರಿತ ಶಾಸನವೊಂದು "………. ಮಹಾ ಮಹತ್ತಿನೊಳಗಾದ ಹಂಪೆಯ ಸಿಂಹಾಸನದ ಪಂಚಮಠ ಪಂಚಗೃಹದೊಳಗಾದ ಬುಕ್ಕಸಾಗರ ಮಠದ ಕರಿಸಿದ್ಧದೇವರು….."[8] ಎಂದು ತಿಳಿದು ಬರುವುದರಿಂದ ವೀರಶೈವ ಧರ್ಮ ಪ್ರಬುದ್ಧಮಾನವಾಗಿದ್ದ ಕಾಲದಲ್ಲಿ ಹಂಪೆಯಲ್ಲಿ ಸ್ಥಾಪಿತವಾಗಿದ್ದ ಕಾಶೀಮಠ ಜ್ಞಾನ ಸಿಂಹಾಸನವಾದ ಕಾಶೀಪೀಠದ ಒಂದು ಶಾಖೆಯಾಗಿರಬೇಕು. ಇಲ್ಲವೆ ವೀರಶೈವ ಧರ್ಮದ ಇಳಿಮುಖ ಸಮಯದಲ್ಲಿ ಹಂಪೆಯಿಂದ ಕಾಶೀಕ್ಷೇತ್ರಕ್ಕೆ ಸ್ಥಳಾಂತರವಾಗಿರಬೇಕೆಂದು ಊಹೆಮಾಡಲವಕಾಶವಿದೆ. ಶಾಸನೋಕ್ತ ಈ ಶ್ರೀಮಠ ಸಾಹಿತ್ಯ ಸೇವೆ, ಜನಹಿತ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡಿತ್ತು.

**6. ಶ್ರೀಕೊಟ್ಟೂರು ಸ್ವಾಮಿ ಮಠ:**

ತೋಂಟದ ಸಿದ್ಧಲಿಂಗೇಶ್ವರರು ಕೆಲವು ದಿನ ತುಂಗಾಭದ್ರೆಯ ಪ್ರದೇಶದಲ್ಲಿ ಶಿವಯೋಗ ಸಾಧಕರಾಗಿದ್ದರು. ಇವರನ್ನು ಪ್ರೌಢದೇವರಾಯ ದರ್ಶನ ಪಡೆದು ವಿರೂಪಾಕ್ಷನ ರಥೋತ್ಸವದ ಕಾಲದಲ್ಲಿ ಶ್ರೀ ತೋಂಟದ ಸಿದ್ಧಲಿಂಗ ಯತಿಗಳ ಪರಂಪರೆಯ ಗುರುಗಳನ್ನು ಸನ್ಮಾನಿಸಿ ಅವರನ್ನು ಪ್ರತ್ಯೇಕ ರಥದಲ್ಲಿ ಮೆರೆಸಿದ ಪ್ರಸಂಗ ವಿರೂಪಾಕ್ಷ ವಸಂತೋತ್ಸವ ಚಂಪೂ ಕೃತಿಯಿಂದ ತಿಳಿದುಬರುತ್ತದೆಂದು ಮೃತ್ಯುಂಜಯ ರುಮಾಲೆ ತಿಳಿಸಿದ್ದಾರೆ.[9] ಇದರಿಂದ ಊಹಿಸಬಹುದಾದ ಅಂಶವೆಂದರೆ ತೋಂಟದ ಸಿದ್ಧಲಿಂಗ ಪರಂಪರೆಯಲ್ಲಿ ಬಂದ ಶ್ರೀಕೊಟ್ಟೂರಸ್ವಾಮಿ ಮಠದ ಮೊದಲ ಪೀಠಾಧಿಪತಿ

ಶ್ರೀ ಕಪ್ಪಿನ ಚನ್ನಬಸವ ಸ್ವಾಮಿಗಳನ್ನೇ ರಥದಲ್ಲಿ ಮೆರೆಸಿರಬಹುದೆಂದು ತೋರುತ್ತದೆ. ಅಲ್ಲದೆ ವಿಜಯನಗರದ ಅನೇಗುಂದಿ ಮಹಾರಾಜ ವೆಂಕಟಪತಿರಾಯರು ಕೊಟ್ಟೂರುಸ್ವಾಮಿ ಮಠದ ಮರಿಮಹಾಂತ ಸ್ವಾಮಿಗಳಿಗೆ ಗ್ರಾಮ, ಭೂಮಿ ಇತರ ರುಸುಮುಗಳನ್ನು ದಾನವಾಗಿ ಕೊಟ್ಟ ಉಲ್ಲೇಖ ಶ್ರೀಮಠದ ಪರಂಪರೆಯ ಗ್ರಂಥದಿಂದ ತಿಳಿದುಬರುತ್ತದೆ (ಗ್ರಂಥಕರ್ತೃ ಗೌ.ಮ. ಉಮಾಪತಿ ಶಾಸ್ತ್ರಿಗಳು). ಈಗಿನ ಶ್ರೀಗಳಾದ ಶ್ರೀಸಂಗನ ಬಸವ ಸ್ವಾಮಿಗಳು "ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ"ವನ್ನು ಪ್ರಾರಂಭಿಸಿ ಆ ಮೂಲಕ ಪ್ರಾಚೀನ ಸಾಹಿತ್ಯ, ವೀರಶೈವ ಪುಣ್ಯ ಪುರುಷರ ಸಾಧನೆ, ಐತಿಹಾಸಿಕ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಹಂಪೆಯಲ್ಲಿ ಶ್ರೀಮಠವು ತುಂಗಭದ್ರ ನದಿದಂಡೆಯ ಮೇಲೆ ಉತ್ತರಾಭಿಮುಖವಾಗಿದೆ.

**7. ಹಾನುವಾಳ ಮಠ:**

ಇದು ಹಂಪೆಯ ಪ್ರಭಾವಿ ಮಠಗಳಲ್ಲೊಂದು. ಪ್ರೌಢದೇವರಾಯನ ಕಾಲದಲ್ಲಿ ಶ್ರೀಮಠಕ್ಕೆ ಅಧ್ಯಕ್ಷರಾಗಿ ಶರಣ ಪಂಪಯ್ಯ ಎಂಬುವವರಿದ್ದರು. ಇವರನ್ನು ಒಂದೆತ್ತಿನಯ್ಯರೆಂದು ಕರೆಯಲಾಗುತ್ತಿತ್ತು. ಅಂದರೆ ಒಂದು ಎತ್ತಿನ ಮೇಲೆ ಓಡಾಡುತ್ತ ಇತರೆ ಶಾಖಾಮಠಗಳ ದಾಸೋಹ–ಧರ್ಮ–ಸಾಹಿತ್ಯ–ಚಟುವಟಿಕೆಗಳನ್ನು ಪರಿಶೀಲಿಸುತ್ತಿದ್ದರಿಂದ ಆ ಹೆಸರಿನಿಂದ ಇವರನ್ನು ಕರೆಯಲಾಗುತ್ತಿತ್ತೆಂದು ಪ್ರತೀತಿಯಿದೆ. ಲಕ್ಕಣ ದಂಡೇಶನ ಶಿವತತ್ತ್ವ ಚಿಂತಾಮಣಿಯಲ್ಲಿ "ಪಂಪಾಪತಿಯ ರಥ ಬೀದಿಯಲ್ಲಿ .... ಮಂದಿರವ ರಚಿಸಿ, ಸೋಹಂ ಭಾವವಳಿದು ದಾಸೋಹವೆನುತಾ ಸಂದಳಿಪ ಚರಲಿಂಗದಲ್ಲಿ ತೆರಪಿಲ್ಲದಾನಂದದಿಂದಮೃತಾನ್ನ ಪಾನ ವಸ್ತ್ರಮನಿತ್ತು ವಂದಿಸುವ ಗುರುಮೂರ್ತಿ ಒಂದೆತ್ತಿನಯ್ಯಗಳ ಚರಣಾಂಬುಜಕ್ಕೆ ಶರಣೂ"[10] ಎಂದು ಸ್ತುತಿಸಲ್ಪಟ್ಟಿರುವುದರಿಂದ ಇವರೊಬ್ಬ ಪ್ರಭಾವಿ ಮಠಾಧಿಪತಿಗಳಾಗಿದ್ದು ವೀರಶೈವ ಸಾಹಿತ್ಯ–ಸಂಸ್ಕೃತಿಯ ಸಂವರ್ಧಕರಾಗಿದ್ದರು. ಶ್ರೀಮಠವು ಗಂಗಾವತಿ ಗ್ರಾಮಕ್ಕೆ ಸ್ಥಳಾಂತರವಾಗಿದ್ದು ಇಂದಿಗೂ ಹಂಪೆಯ ರಥೋತ್ಸವದಲ್ಲಿ ದಾಸೋಹವನ್ನು ಏರ್ಪಡಿಸುತ್ತದೆ.

**8. ಚಾಮರಸನ ಗವಿ (ಮಠ):**

ಪ್ರಭುಲಿಂಗಲೀಲೆ ಕರ್ತೃ ಚಾಮರಸನ ಗವಿಯೆಂದು ಗುರುತಿಸುವ ಪ್ರಯತ್ನಗಳು ನಡೆದಿರುವುದಲ್ಲದೆ ಅದಕ್ಕೆ ಶಾಸನಗಳನ್ನು ಪೂರಕವಾಗಿ ಬಳಸಿಕೊಳ್ಳಲಾಗಿದೆ. 15ನೇ ಶತಮಾನದ ಶಾಸನವೊಂದು ಹೀಗಿದೆ.

> ಶ್ರೀಗುರು ಗುಹೇಶ್ವರಾಶ್ರಮವೀ ಗುರು ಗಿರಿ ಯಿದರೊಳಗಿಪ್ಪದೈವ ಧ್ಯಾನೋ ।
> ದ್ಯೋಗದೊಳಿರ್ಪ್ಪರ್ಗ್ಗೆಯ್ದುವುವಾಗಳ್ ಧರ್ಮಾರ್ಥಕಾಮಮೋಕ್ಷ ಫಲಂಗಳ್ ॥[11]

ಶಾಸನೋಕ್ತ ಉಲ್ಲೇಖಿತ ಅಂಕಿತವನ್ನು ಮುಂದು ಮಾಡಿಕೊಂಡು ಕವಿ ಚಾಮರಸನ ಮಠ ಇಲ್ಲವೇ ಗವಿ ಇಲ್ಲಿಯೇ ಇರಬೇಕೆಂದು ನಿರ್ಧರಿಸುತ್ತಾರೆ ಎಂ. ಚಿದಾನಂದ ಮೂರ್ತಿಯವರು. ಈ ಮಠವು (ಆಶ್ರಮ, ಗವಿ) ಉದ್ದಾನ ವೀರಭದ್ರಸ್ವಾಮಿಯ ಪರಿಸರದಲ್ಲಿ 'ಹಂಪಾದೇವಿ ದಿಡ್ಡಿ' ಎಂಬ ಹೆಸರಿನ ಕೋಟೆಯ ಪ್ರವೇಶದ್ವಾರದ ಹತ್ತಿರವಿದೆ. ಅಲ್ಲಿ ಈಗಲೂ ವೀರಶೈವ ಪ್ರಾಚೀನ ಅವಶೇಷಗಳಾದ ಶಿವಲಿಂಗ, ನಂದಿ, ವೀರಭದ್ರ ಮುಂತಾದವುಗಳಿವೆ.

ಹೀಗೆ ಹಂಪೆಯ ಪರಿಸರದಲ್ಲಿ ಇವಿಷ್ಟೆ ಮಠಗಳಲ್ಲದೆ ಅಂಜನಾದ್ರಿ, ಮತಂಗಾದ್ರಿ, ಹೇಮಕೂಟಾದ್ರಿ, ಮಾಲ್ಯವಂತಾದ್ರಿಗಳಲ್ಲಿ ಜಂಗಮರು ವಾಸವಾಗಿದ್ದರೆಂಬುದನ್ನು ಪ್ರಾಚೀನ ಕೃತಿಗಳಾದ ಶಿವತತ್ತ್ವ ಚಿಂತಾಮಣಿ, ರಾಘವಾಂಕ ಚಾರಿತ್ರ, ಪ್ರೌಢದೇವರಾಯನ ಕಾವ್ಯಗಳು ಬಣ್ಣಿಸುವುದನ್ನು ಅನುಲಕ್ಷಿಸಬೇಕು. ಹಾಗೆಯೇ ಸಿದ್ಧಯ್ಯನ ಮಠ, ಕುರುಗೋಡು ನೀಲಮ್ಮನ ಮಠ, ಕಂಪಲಿಸ್ವಾಮಿಮಠ, ಗವಿಸಿದ್ಧಸ್ವಾಮಿಮಠ, ಗಾಯತ್ರಿಪೀಠ ಮುಂತಾದವುಗಳನ್ನು ಹೆಸರಿಸುತ್ತಾ ಹೋಗಬಹುದು. ಇವೆಲ್ಲ ಧಾರ್ಮಿಕ ಕೇಂದ್ರಗಳಾಗಿ ಜೊತೆಗೆ ಕನ್ನಡ ಸಾಹಿತ್ಯಕ್ಕೆ ಪೌರಾಣಿಕ, ಐತಿಹಾಸಿಕ, ಧಾರ್ಮಿಕ ಕೃತಿಗಳನ್ನು ನೀಡಿದವು. ವಚನ ಸಾಹಿತ್ಯದ ಸಂಕಲನ ಯುಗವನ್ನು ನಿರ್ಮಿಸಿದ ಹಂಪೆಯ ಪರಿಸರದಲ್ಲಿ ಕಾವ್ಯ, ಚೌಪದಿ, ಟೀಕು, ತ್ರಿವಿಧಿ, ಶತಕ, ಹಾಡು, ಅಷ್ಟಕ ಸಾಹಿತ್ಯ ಪ್ರಕಾರಗಳು ಪ್ರಸಿದ್ಧಿಪಡೆದುಕೊಂಡವು. ವಿಜಯಕಲ್ಯಾಣವೆಂಬ ಅಭಿನಾಮದಿಂದ ಹೆಸರಾಗಿದ್ದ ಹಂಪೆ ಕಲ್ಯಾಣ ಶರಣರ ಪರಂಪರೆಯನ್ನು ಇನ್ನೊಂದು ರೀತಿಯಲ್ಲಿ ದುಡಿಸಿಕೊಂಡು ಹೋದುದನ್ನು ಮರೆಯಲಾಗದು. ಇಲ್ಲಿಯ ಮಠ–ಮಾನ್ಯಗಳು ಆ ಕೆಲಸವನ್ನು ಸಮರದೋಪಾದಿಯಲ್ಲಿ ಕೈಗೊಂಡಿದ್ದವೆಂಬುದನ್ನು ಹೆಮ್ಮೆಯಿಂದ ಹೇಳಬೇಕೆನಿಸುತ್ತದೆ.

## ಟಿಪ್ಪಣಿಗಳು

1. ಬಸವರಾಜ ಮಲಶೆಟ್ಟಿ (ಸಂ.), *ಎನಗಿಂತ ಕಿರಯರಿಲ್ಲ (ಅಗಡಿ ಸಂಗಣ್ಣನವರ ಅಭಿನಂದನ ಗ್ರಂಥ)*, ಪುಟ 287.
2. *ಅದೇ,* ಪುಟ 289.
3. ಸಿ.ಟಿ.ಎಂ. ಕೊಟ್ರಯ್ಯ, *ಹಂಪೆ,* ಪುಟ 15.

4. ಬಸವರಾಜ ಮಲಶೆಟ್ಟಿ, *ಪೂರ್ವೋಕ್ತ,* ಪುಟ 294.

5. ಮೃತ್ಯುಂಜಯ ಹೊರಕೇರಿ (ಸಂ.), *ಪ್ರಭುಪ್ರಕಾಶ,* ಪುಟ 66.

6. *ಅದೇ,* ಪುಟ 66.

7. ಸಿ.ಟಿ.ಎಂ. ಕೊಟ್ರಯ್ಯ, *ಪೂರ್ವೋಕ್ತ,* ಪುಟ 21-22.

8. ಬಸವರಾಜ ಮಲಶೆಟ್ಟಿ, *ಪೂರ್ವೋಕ್ತ,* ಪುಟ 265-66.

9. ಮೃತ್ಯುಂಜಯ ಹೊರಕೇರಿ, *ಪೂರ್ವೋಕ್ತ,* ಪುಟ 66.

10. ಎಸ್. ಬಸಪ್ಪ (ಸಂ.), *ಲಕ್ಕಣ್ಣದಂಡೇಶನ ಶಿವತತ್ತ್ವ ಚಿಂತಾಮಣಿ,* ಪುಟ 434, ಪದ್ಯ 224.

11. ಎಂ. ಚಿದಾನಂದ ಮೂರ್ತಿ, *ಹೊಸತು ಹೊಸತು,* ಪುಟ 309.

# 23. ಕಾಲಜ್ಞಾನ ಸಾಹಿತ್ಯದಲ್ಲಿ ವಿಜಯನಗರದ ಪ್ರಸ್ತಾಪ


– ಎಫ್.ಟಿ. ಹಳ್ಳಿಕೇರಿ

ಹನ್ನೆರಡನೆಯ ಶತಮಾನದಲ್ಲಿ ಜರುಗಿದ ಶಿವಶರಣರ ಸಮಾಜೋ–ಧಾರ್ಮಿಕ (Socio-Religious) ಕ್ರಾಂತಿಯ ತರುವಾಯ ಧರ್ಮ, ತತ್ವ, ಸಾಹಿತ್ಯ, ಸಂಸ್ಕೃತಿಗಳನ್ನು ಪೋಷಿಸಿಕೊಂಡು ಬಂದು ಅವುಗಳಿಗೆ ಪುನಃಶ್ಚೇತನ ನೀಡಿ, ಮುನ್ನಡೆಸುವ ಕಾರ್ಯ ವಿಜಯನಗರ ಅರಸರ ಕಾಲದಲ್ಲಿ ತುಂಬ ವ್ಯಾಪಕವಾಗಿ ನಡೆಯಿತು. ಆ ಸಮಯದಲ್ಲಿದ್ದ ನೂರೊಂದು ವಿರಕ್ತರು ತಮ್ಮ ಪ್ರಾಚೀನ ಸಾಹಿತ್ಯ ಸಂಪತ್ತನ್ನು ಸಂಗ್ರಹ, ಸಂಕಲನ, ಸಂಪಾದನೆ ಎಂಬ ಮೂರು ಬಗೆಗಳಲ್ಲಿ ಸಂರಕ್ಷಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ಇದಕ್ಕೆ ಪೂರಕವಾಗಿ ಹಲವಾರು ಕವಿಗಳು, ಅನುಭಾವಿಗಳು ಅಷ್ಟಕ, ತ್ರಿಪದಿ, ತಾರಾವಳಿ, ಕಾಲಜ್ಞಾನ, ದಂಡಕ, ಶತಕ ಮುಂತಾದ ವಿವಿಧ ಲಘು ಸಾಹಿತ್ಯ ಪ್ರಕಾರಗಳಲ್ಲಿ ಸೃಜನಶೀಲ ಕೃತಿಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಇವುಗಳಲ್ಲಿ ಕಾಲಜ್ಞಾನ ಸಾಹಿತ್ಯವು ಹೆಚ್ಚು ಜನಪ್ರಿಯವಾದುದಾಗಿದೆ.

**ಕಾಲಜ್ಞಾನ ಸಾಹಿತ್ಯ:**

ಸಾಮಾನ್ಯವಾಗಿ ಕಾಲಜ್ಞಾನವೆಂದರೆ ಭವಿಷ್ಯತ್ತಿನಲ್ಲಿ ಜರುಗಬಹುದಾದ ಘಟನೆಗಳನ್ನು ತಿಳಿಸುವ ಸಾಹಿತ್ಯವೆಂದು ಹೇಳಲಾಗುತ್ತದೆ. "ಮನುಷ್ಯನಿಗೆ ಹಿಂದಿನ ಜೀವಿತದ ಘಟನೆಗಳನ್ನು ಸ್ಮೃತಿಗೆ ತಂದುಕೊಟ್ಟು, ಮುಂದಿನ ಜೀವನದ ಅಸ್ತಿತ್ವಕ್ಕೆ ಭರವಸೆ ಹುಟ್ಟಿಸುವಲ್ಲಿ ನೆರವಾಗುವ ಜ್ಞಾನವೇ ಕಾಲಜ್ಞಾನ ಸಾಹಿತ್ಯ"ವೆಂದು ವಿ. ಶಿವಾನಂದ ಅವರು ಅಭಿಪ್ರಾಯಪಟ್ಟಿದ್ದಾರೆ.[1] ಕಾಲಜ್ಞಾನ ಕವಿಗಳು ಜನಸಮುದಾಯದ ಮಧ್ಯದಲ್ಲಿದ್ದುಕೊಂಡು ಸಾಹಿತ್ಯ ರಚನೆ ಮಾಡಿದವರು. ಹೀಗಾಗಿ ಕಾಲಜ್ಞಾನ ಪದಗಳು ಜನಪದ ಧಾಟಿಯಲ್ಲಿದ್ದು, ಆಡುಮಾತಿನ ಶೈಲಿಯಲ್ಲಿವೆ. ಧರ್ಮೋದ್ಧಾರ, ಸಮಾಜದ ಅಭ್ಯುದಯ ಮತ್ತು ಮಾನವ ಕಲ್ಯಾಣ – ಈ ಸಾಹಿತ್ಯದ ಮೂಲ ಗುರಿ. ಹೀಗಿದ್ದೂ ಈ ಸಾಹಿತ್ಯದಲ್ಲಿ ಸಮಕಾಲೀನ ಚಾರಿತ್ರಿಕ ಸಂಗತಿಗಳನ್ನು ಸಹ ಉಲ್ಲೇಖಿಸಲಾಗಿದೆ.

ಬಸವ, ಚೆನ್ನಬಸವ, ಘಟ್ಟಿವಾಳಯ್ಯ ಮೊದಲಾದ ಶಿವಶರಣರ ಕಾಲದಲ್ಲಿ ಈ ಸಾಹಿತ್ಯ ಹುಟ್ಟಿರುವ ಸೂಚನೆಗಳಿವೆಯಾದರೂ, ವ್ಯಾಪಕವಾಗಿ ಮತ್ತು ಸಮೃದ್ಧವಾಗಿ ಬೆಳೆದು ಬಂದದ್ದು 15, 16 ಮತ್ತು 17ನೆಯ ಶತಮಾನಗಳಲ್ಲಿ ಎಂದೇ ಹೇಳಬೇಕು. ಹಂಪೆ, ಕೊಡೇಕಲ್ಲು ಮತ್ತು ತಿಂಥಿಣಿಗಳು ಕಾಲಜ್ಞಾನ ಸಾಹಿತ್ಯದ ಪ್ರಮುಖ ಪ್ರಸಾರ ಕೇಂದ್ರಗಳಾಗಿವೆ. ಎಮ್ಮೆ ಬಸವ, ಕೊಡೇಕಲ್ಲು ಬಸವ, ತಿಂಥಿಣೆ ಮೋನಪ್ಪಯ್ಯ ಕ್ರಮವಾಗಿ ಈ ಕೇಂದ್ರಗಳ ಪ್ರಧಾನ ನಾಯಕರಾಗಿದ್ದರು. ಹೀಗೆ 12ನೆಯ ಶತಮಾನದಿಂದ 17ನೆಯ ಶತಮಾನದವರೆಗೂ ಈ ಸಾಹಿತ್ಯ ಸೃಷ್ಟಿಯಾಗಿರುವುದರಿಂದ, ಇವುಗಳ ರಚನಾ ಕಾಲದ ಹರಹುವನ್ನು ಹೀಗೆ ಗುರುತಿಸಬಹುದು.




ಬಸವಯುಗದಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಘಟ್ಟಿವಾಳಯ್ಯ, ಅಕ್ಕನಾಗಮ್ಮ, ಮಡಿವಳ ಮಾಚಿದೇವ, ಕೂಗಿನ ಮಾರಯ್ಯ ಮುಂತಾದ ಪ್ರಮುಖ ಕಾಲಜ್ಞಾನ ಕವಿಗಳಿದ್ದರೆಂದು ಹೇಳಬಹುದು. ಬಸವೋತ್ತರ ಯುಗದ ವಿಜಯನಗರ ಸಾಮ್ರಾಜ್ಯೋದಯ ಕಾಲದಲ್ಲಿ ಕರಸ್ಥಲ ನಾಗಿದೇವ, ಎಮ್ಮೆ ಬಸವ, ನೀಲಾಂಬಿಕೆ, ಕೊಡೇಕಲ್ಲು ಬಸವ, ವಿರೂಪಾಕ್ಷ ಪಂಡಿತ, ವಿಜಯನಗರ ವಿನಾಶೋತ್ತರ ಕಾಲದಲ್ಲಿ ಸರ್ವಜ್ಞ, ತಿಂಥಿಣಿ ಮೋನಪ್ಪಯ್ಯ, ಚೆನ್ನಪ್ಪ, ಸಾರವಾಡ ಚಿಕ್ಕ ಮೊದಲಾದವರು ಪ್ರಮುಖರೆನಿಸಿದ್ದಾರೆ.

**ವಿಜಯನಗರ ಮತ್ತು ಕಾಲಜ್ಞಾನ:**

ವಿಜಯನಗರ ಅರಸು ಮನೆತನಕ್ಕೂ ಕಾಲಜ್ಞಾನ ಸಾಹಿತ್ಯಕ್ಕೂ ವಿಶೇಷವಾದ ಸಂಬಂಧವಿದೆ. ಏಕೆಂದರೆ ಈ ಸಾಹಿತ್ಯ ಹೆಚ್ಚು ಜನಪ್ರಿಯಗೊಂಡದ್ದು ವಿಜಯನಗರ ಕಾಲದಲ್ಲಿ. ಹೀಗಾಗಿ ಕಾಲಜ್ಞಾನ ಸಾಹಿತ್ಯ ವ್ಯಾಪಕಗೊಂಡದ್ದು ಹಂಪೆ (ವಿಜಯನಗರ) ಮುಖಾಂತರವೆಂದು ಹೇಳಿದರೆ ತಪ್ಪಾಗಲಾರದು. ಬಸವೋತ್ತರ ಯುಗದ ಕಾಲಜ್ಞಾನ ಕವಿಗಳು ಸಾಮಾನ್ಯವಾಗಿ ಈ ಸಾಮ್ರಾಜ್ಯದ ಚಾರಿತ್ರಿಕ ಘಟನೆಗಳನ್ನು, ಸಾಮಾಜಿಕ ಪರಿಸರವನ್ನು ತಮ್ಮ ಸಾಹಿತ್ಯದ ಮೂಲಕ ವ್ಯಕ್ತಪಡಿಸಿದ್ದಾರೆ.

ಮೂಲತಃ ಹಂಪೆಯವನಾದ ಎಮ್ಮೆ ಬಸವ (1543)ನು ತನ್ನ ಕಾಲಜ್ಞಾನಗಳಲ್ಲಿ ವಿಜಯನಗರ ಅವಸಾನಗೊಳ್ಳುತ್ತಿರುವ ಬಗೆಗೆ ತುಂಬ ಮಾರ್ಮಿಕವಾಗಿ ಹೇಳಿದ್ದಾನೆ. ಹುಯ್ಯಲೊ ಡಂಗುರವ ಎಂದು ಪ್ರಾರಂಭವಾಗುವ ಕಾಲಜ್ಞಾನ ಪದಗಳಲ್ಲಿ ಮುಸ್ಲಿಮ ಅರಸರು ಅಚ್ಯುತ ಕೃಷ್ಣನ ಅರಮನೆ ಸುಟ್ಟ ಬಗೆಗೆ ಹೇಳುತ್ತಾ –

"ಅಚ್ಯುತನ ವಂಶವು ಮೊದಲೆದ್ದು ಹೋಯಿತು
ಬೈಚಿಟ್ಟ ಭಾಗ್ಯವು ಬಯಲೆದ್ದು ಹೋಯಿತು"
"ಮುಸುಲ್ಮಾನರು ಅಚ್ಯುತರಾಯ ಕೃಷ್ಣರಾಯರ
ಅರಮನೆಗಳನ್ನು ಸುಟ್ಟಾರು"
"ನರಸಿಂಗರಾಯನ ಹಿರಿಯ ಕುಮಾರನು ಹುಯ್ಯಲೊ ಡಂಗುರವ
ಅರಸುತನಕೆ ಇನ್ನು ಕಡೆಗಾಲವಾದೀತು"
"ವಿಜಯನಗರದಲ್ಲಿ ಗಜಬಜವಾದಾವು"
"ನೆಚ್ಚಿನ ಮಂತ್ರಿಗಳು ಹುಚ್ಚೆದ್ದು ಹೋದಾರು
ಎಚ್ಚರ ತಪ್ಪ್ಯಾರು ಮುಂದಿನ್ನು ಬಂದೀತು"[2]

ಎಂದು ವಿಜಯನಗರ ಸಾಮ್ರಾಜ್ಯದಲ್ಲಿದ್ದ ರಾಜಕೀಯ ಅಸ್ಥಿರತೆಯನ್ನು ಎಮ್ಮೆ ಬಸವನು ಚಿತ್ರಿಸಿದ್ದಾನೆ. ನರಸಿಂಗರಾಯನ ಹಿರಿಯ ಕುಮಾರನು ಅಂದರೆ ವೀರನರಸಿಂಹ (1506-1509), ಕೃಷ್ಣದೇವರಾಯ (1509-1530), ಅಚ್ಯುತರಾಯ (1530-1542) ಮುಂತಾದ ಅರಸರನ್ನು ಕಾಲಜ್ಞಾನದಲ್ಲಿ ಉಲ್ಲೇಖಿಸಲಾಗಿದೆ.

ಕೂ ಕೂ ಕೂ ಎಂದು ಆರಂಭವಾಗುವ ಕಾಲಜ್ಞಾನಗಳಲ್ಲಿ ದೆಹಲಿ ಸುಲ್ತಾನನ ದಾಳಿಯಿಂದ ಕರ್ನಾಟದಲ್ಲಿ ಉಂಟಾದ ಪರಿಣಾಮಗಳನ್ನು ವಿವರಿಸಿ, ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ವಿವರಗಳನ್ನು ಸಂಗ್ರಹವಾಗಿ ಹೇಳಲಾಗಿದೆ.

"ಬಡಗಲ ದೇಶದಿ ಗಿಡುಗನು ಎದ್ದಾನು
ಮಡದಿ ಮಕ್ಕಳ ಸಹವಾಗಿ ಬಂದಾನು
ಮುನ್ನೂರ ಗಾವುದ ಹೊನ್ನು ತಾ ಹೇರ್‍ಯಾನು
ಕನ್ನಡ ದೇಶಕ್ಕೆ ಕಡೆಮೊದಲಿಲ್ಲ
ಅನ್ಯಾಯ ಹೆಚ್ಚಿತು ಆತನ ದೆಸೆಯಿಂದ
ಹನ್ನೆರಡು ವರುಷಕ್ಕೆ ಕಡೆಗಾಲ ಅವನಿಗೆ"[3]

ಇಲ್ಲಿರುವ, 'ಬಡಗಲ ದೇಶದಿ ಗಿಡುಗನು ಎದ್ದಾನು' ಎಂದರೆ ಉತ್ತರ ಭಾರತದ ಮಹಮ್ಮದ ಬಿನ್ ತುಘಲಕ್ ಎಂದು ಹುಲ್ಲೂರು ಶ್ರೀನಿವಾಸ ಜೋಯಿಸರು ಅಭಿಪ್ರಾಯಪಟ್ಟಿದ್ದಾರೆ.[4]

"ರಾಮರಾಜನ ದಂಡು ಸೀಮೆಯ ಹಿಡಿವಾರು
ಕಾಮಲಾಪುರದ ಬಯಲಲ್ಲಿ ಬಿಟ್ಟರು ಮುಂದಿನ್ನು
ಹೇಮಕೂಟಕ್ಕೆ ಪ್ರೇಮದಿಂ ಬರುವಾರು
ಕಾಮಿತ ಫಲಗಳ ಬೇಡಿಕೊಳುವಾರು

ಹುಗ್ಗಿಯ ಹೋಯಿಸ್ಯಾರು ವಿಜಯನಗರಕೆಲ್ಲ
ನೆಗ್ಗಿಲ ಸವರಿ ಮನೆಗಳ ಮಾಡ್ಯಾರು
ಸ್ವರ್ಗಲೋಕವ ಮೆಚ್ಚಿ ರಾಜ್ಯವನಾಳ್ಯಾನು
ಭರ್ಗನ ಕೃಪೆಯಿಂದ ಎಂಟು ವರ್ಷವಾಳ್ಯಾನು"[5]

ಇಲ್ಲಿ ರಾಮರಾಜ ಎಂದರೆ ಕುಮಾರರಾಮ. ಆತ ಪುನಃ ಹರಿಹರರಾಯ (1336-1356)ನ ಜೊತೆ ಸೇರಿ ಹಿಂದಿನ ಸೀಮೆಯನ್ನೆಲ್ಲಾ ಮುಸ್ಲಿಮರಿಂದ ಮತ್ತೆ ವಶಪಡಿಸಿಕೊಂಡು ಹಂಪೆಯ ಸಮೀಪವಿರುವ ಕಾಮಲಾಪುರದ ಬಯಲಲ್ಲಿ ಬೀಡು ಬಿಟ್ಟಿದ್ದನು ಎಂದು ಹೇಳಬಹುದು.*

ಹರಿಹರರಾಯನು ಆಳ್ವಿಕೆ ನಡೆಸಿದ ಎಂಟನೆಯ ವರ್ಷಕ್ಕೆ ಸುಂಟರಗಾಳಿ ಬಡಿದವನಂತೆ ಹುಚ್ಚನಂತಾಗಿ ಅರಮನೆ, ಸೈನ್ಯ, ಭಾಂಡಾರವನ್ನೆಲ್ಲ ಬಿಟ್ಟು ಉತ್ತರ ಭಾಗಕ್ಕೆ ಹೋದ ಬಗೆಗೆ ಕಾಲಜ್ಞಾನದಲ್ಲಿ ಹೇಳಲಾಗಿದೆ.

"ಕಂಟಕ ಅವನಿಗೆ ಎಂಟನೆಯ ವರ್ಷಕ್ಕೆ
ಸುಂಟರಗಾಳಿಯು ಸೋಕಿತು ಅವನಿಗೆ
ಸತ್ಯವನೆ ಬಿಟ್ಟು ತಾ ಹುಚ್ಚೆದ್ದು ತಿರುಗ್ಯಾನು
ಮತ್ಸರ ರೊಚ್ಚೆದ್ದು ಮುಸುಕೀತು ಮುಂದಿನ್ನು
ಪಾಂಡುರಂಗಗೆ ಹೋಗಿ ವಿಠಲನೆ ತೆಗೆದಾರು
ಕೊಂಡು ಬಂದರು ವಿಜಯನಗರಕೆ"[6]

ಹೀಗೆ ಹರಿಹರರಾಯನು ಉತ್ತರ ಭಾಗಕ್ಕೆ ಹೋಗಿ, ಪಂಢರಾಪುರದಿಂದ ವಿಠಲನ ವಿಗ್ರಹವನ್ನು ತೆಗೆದುಕೊಂಡು ವಿಜಯನಗರಕ್ಕೆ ಬಂದ ಸನ್ನಿವೇಶವನ್ನು ಚಿತ್ರಿಸಲಾಗಿದೆ.

ಎಮ್ಮೆ ಬಸವನು ವಿಜಯನಗರದ ವಿನಾಶವನ್ನು ಜನರಿಗೆ ಸಾರುತ್ತ ಬರುತ್ತಿರಲು ಕೃಷ್ಣದೇವರಾಯನು ಪಟ್ಟದಾನೆಯನ್ನು ಹಿಡಿತರಿಸಿ ಈತನನ್ನು ಅದರ ಕಾಲಿಗೆ ನೂಕಿಸುತ್ತಾನೆ. ಅದಕ್ಕೆ ಆನೆಯು ಆತನಿಗೆ ಶರಣೆಂದು, ಮಸ್ತಕದ ಮೇಲೆ ಕೂಡ್ರಿಸಿಕೊಂಡು ರಾಜಬೀದಿಯಲ್ಲಿ ಹೊರಡುತ್ತದೆ. ಈ ಸನ್ನಿವೇಶವನ್ನು ನೋಡಿ ಕೃಷ್ಣದೇವರಾಯನು ಎಮ್ಮೆ ಬಸವನ್ನು ಸತ್ಕರಿಸುತ್ತಾನೆ.

ಎಮ್ಮೆ ಬಸವನ ಪತ್ನಿಯಾದ ನೀಲಮ್ಮನು ತನ್ನ ಕಾಲಜ್ಞಾನ ವಚನಗಳಲ್ಲಿ ವಿಜಯನಗರ ಕಾಲದ ಸಾಮಾಜಿಕ ಪರಿಸರ, ರಾಜಕೀಯ ಪರಿಸರವನ್ನು ಚಿತ್ರಿಸಿದ್ದಾಳೆ.

"ಗುಡಿಗೋಪುರಗಳ ಹೊಡೆವಾರು ತುರುಕರು"
"ಲಿಂಗ ವಿರೂಪಾಕ್ಷನ ರಂಗ ಮಂಟಪದ ಮುಂದೆ
ಲಿಂಗದ ಕಣಜವ ಹೊಡೆವಾರು ಸುವ್ವಿ"[7]

ಅಲ್ಲದೇ, ಹಂಪೆಯ ಗೋಪುರವೆಲ್ಲ ಲಯವಾಯಿತು, ರಾಜಬೀದಿಯಲ್ಲಿ ಹೆಂಗಳೆಯರ ಬಳೆಗಳನ್ನು ಒಡೆದಾರು, ಮುಂತಾದ ಹಾಡುಗಳಲ್ಲಿ ವಿಜಯನಗರದಲ್ಲಿ ನಡೆಯುತ್ತಿದ್ದ ಅನೀತಿ, ಅತ್ಯಾಚಾರಗಳನ್ನು ಸೂಚ್ಯವಾಗಿ ಹೇಳಲಾಗಿದೆ.

ಹೀಗೆ ಕಾಲಜ್ಞಾನ ಸಾಹಿತ್ಯದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರಸ್ತಾಪ ಬರುತ್ತದೆ. ಅದರಲ್ಲಿಯೂ ವಿಶೇಷವಾಗಿ ಹಂಪೆಯವನಾದ ಎಮ್ಮೆ ಬಸವನಂತೂ ವಿಜಯನಗರ ಅರಸರ ಬಗೆಗೆ, ಅಂದಿನ ಸಮಕಾಲೀನ ಸಮಾಜದ ಬಗೆಗೆ ಸುದೀರ್ಘವಾಗಿಯೇ ಹೇಳಿದ್ದಾನೆ. ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯದ ಅಧ್ಯಯನಕ್ಕೆ ಕಾಲಜ್ಞಾನ ಸಾಹಿತ್ಯವನ್ನು ಆಕರವನ್ನಾಗಿ ನಾವು ಪರಿಗಣಿಸಬಹುದು.

---

* ವಿಜಯನಗರ ಸ್ಥಾಪನೆಯಾದಾಗ ಕುಮಾರರಾಮ ಜೀವಿಸಿರಲಿಲ್ಲ (ಸಂಪಾದಕರು).

## ಟಿಪ್ಪಣಿಗಳು

1. *ಸಾಧನೆ,* ಸಂ. 7, ಸಂ. 2, ಪುಟ 422.
2. ಎಫ್.ಟಿ. ಹಳ್ಳಿಕೇರಿ (ಸಂ.), ಎಮ್ಮೆ *ಬಸವನ ಕಾಲಜ್ಞಾನ ಸಾಹಿತ್ಯ,* ಪುಟ 7.
3. *ಅದೇ,* ಪುಟ 12.
4. ಲಕ್ಷ್ಮಣ ತೆಲಗಾವಿ, ಎಂ.ವಿ. ಶ್ರೀನಿವಾಸ್, *ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು,* ಪುಟ 78.
5. ಹಳ್ಳಿಕೇರಿ ಎಫ್.ಟಿ., *ಪೂರ್ವೋಕ್ತ,* ಪುಟ 12.
6. *ಅದೇ,* ಪುಟ 13.
7. *ಅದೇ,* ಪುಟ 27.

# 24. ಕೆಳದಿ ಬಸವರಾಜಕೃತ ಶಿವತತ್ವ ರತ್ನಾಕರದಲ್ಲಿ ವಿಜಯನಗರ ಚರಿತ್ರಾಂಶಗಳು

– ಕೆಳದಿ ವೆಂಕಟೇಶ ಜೋಯಿಸ್

ಭಾರತೀಯ ಪೂರ್ವೇತಿಹಾಸವನ್ನು ತಿಳಿಯುವಲ್ಲಿ ಅಂದು ಪ್ರವರ್ಧಮಾನದಲ್ಲಿದ್ದ ಸಣ್ಣಪುಟ್ಟ ಸಾಮ್ರಾಜ್ಯಗಳ ಚರಿತ್ರೆಯನ್ನು ಕಡೆಗಣಿಸುವ ಹಾಗಿಲ್ಲ. ದೊಡ್ಡ ಸಾಮ್ರಾಜ್ಯವೊಂದರ ಜೊತೆಗೆ ಸಣ್ಣ ಪಾಳೆಯ ಪಟ್ಟುಗಳು ಸಮ್ಮಿಳಿತವಾಗಿರುತ್ತವೆ. ಇದಕ್ಕೆ ಉದಾಹರಣೆ ಎನ್ನುವಂತೆ ವಿಜಯನಗರ –ಕೆಳದಿ, ವಿಜಯನಗರ–ಮೈಸೂರು, ವಿಜಯನಗರ ಮತ್ತು ಆ ಕಾಲದ ಇತರ ಸಣ್ಣಪುಟ್ಟ ಸಾಮ್ರಾಜ್ಯಗಳನ್ನು ಹೆಸರಿಸಬಹುದು. ವಿಜಯನಗರದಿಂದ ಕೆಳದಿಗೆ ದೊರೆತ ಗೌರವಾದರಗಳು, ವಿಜಯನಗರದ ಕೊನೆಯ ಹಂತದಲ್ಲಿ ವಿಜಯನಗರ ಪುನರುಜ್ಜೀವನಕ್ಕೆ ಮಾಡಿದ ಪ್ರಯತ್ನ ಇತಿಹಾಸದಲ್ಲಿ ಮರೆಮಾಚುವಂತಿಲ್ಲ.

**ಮೂಲ ಆಕರಗಳು:**

ಕೆಳದಿ ವಿಜಯನಗರ ಸಂಬಂಧ ಕುರಿತಂತೆ ನಮಗೆ ಸಾಕಷ್ಟು ಮೂಲ ಆಕರಗಳು ದೊರೆಯುತ್ತವೆ. ಶಾಸನಗಳು ಅಂದಿನ ಆಡಳಿತ ವ್ಯವಸ್ಥೆಯನ್ನು ಪರಿಚಯಿಸಿದರೆ ಸಾಹಿತ್ಯ ಕೃತಿಗಳಾದ ಲಿಂಗಣ್ಣ ಕವಿಯ ಕೆಳದಿ ನೃಪವಿಜಯಂ (1763-1804) ಮತ್ತು ಕೆಳದಿಯ ಹದಿನಾಲ್ಕನೆಯ ದೊರೆ ಹಿರಿಯ ಬಸವಪ್ಪನಾಯಕನು ರಚಿಸಿದ ಶಿವತತ್ವ ರತ್ನಾಕರ ಸಾಂಸ್ಕೃತಿಕ, ಧಾರ್ಮಿಕ ಮಹತ್ವವನ್ನು ತಿಳಿಸುವಲ್ಲಿ ಪ್ರಮುಖವಾದವು. ಇದಲ್ಲದೆ ನರಸಭೂಪತಿಯಮು, ರಾಯವಾಚಕಮು, ಕೃಷ್ಣರಾಯ ವಿಜಯಮು ಮೊದಲಾದ ಸಾಹಿತ್ಯ ಕೃತಿಗಳು ನಮಗೆ ಈ ಕುರಿತಂತೆ ಆಕರವನ್ನು ಒದಗಿಸುತ್ತವೆ. ಈ ಪ್ರಬಂಧವನ್ನು ಬಸಪ್ಪನಾಯಕನ ಶಿವತತ್ವ ರತ್ನಾಕರ ಕೃತಿಯನ್ನಾಧರಿಸಿ ತಯಾರಿಸಲಾಗಿದ್ದರೂ ಸಮಕಾಲೀನ ಕೃತಿಗಳನ್ನು ಇಲ್ಲಿ ಗಮನಿಸಲಾಗಿದೆ.

ಶಕ 1620 ರಿಂದ 1637ರ ವರೆಗೆ ಆಡಳಿತ ನಡೆಸಿದ ಹಿರಿಯ ಬಸಪ್ಪನಾಯಕನು ಕ್ರಿ.ಶ. 1709ರಲ್ಲಿ ಶಿವತತ್ವ ರತ್ನಾಕರವೆಂಬ ಸಂಸ್ಕೃತ ನಾನಾಶಾಸ್ತ್ರಾರ್ಥ ಕೋಶವನ್ನು ರಚಿಸಿದ್ದಾನೆ. ಇದರ ನಾಲ್ಕನೇ ಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ ವಿಜಯನಗರದ ರಾಜ್ಯವ್ಯವಸ್ಥೆಯಾದ ಸಂದರ್ಭ, ಅಲ್ಲಿಂದ ಮುಂದೆ ಆಡಳಿತ ನಡೆಸಿದ ರಾಜರ ಪರಂಪರೆ, ಕಾಲ, ಮುಂತಾದವುಗಳು ಹೇಳಲ್ಪಟ್ಟಿವೆ. ಐದರಿಂದ ಎಂಟು ಕಲ್ಲೋಲಗಳವರೆಗೂ ಅಲ್ಲಲ್ಲಿ ಸುಮಾರು ಇಪ್ಪತ್ತು ತರಂಗಗಳಲ್ಲಿ ಕೆಳದಿ ಅರಸರ ಇತಿಹಾಸ ಬರುತ್ತದೆ.[1] ಆದರೆ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿರುವ ಶಿವತತ್ವ ರತ್ನಾಕರದ ಕೃತಿಯಲ್ಲಿ ಕೆಳದಿ ಅರಸರ ಸಂಬಂಧದ ಭಾಗ ಬಿಟ್ಟು ಹೋಗಿರುವುದು ಕಂಡುಬರುತ್ತದೆ, ಅದೇಕೋ ತಿಳಿಯದಾಗಿದೆ. ಕೆಳದಿ ವಸ್ತು ಸಂಗ್ರಹಾಲಯದಲ್ಲಿ ಶಿವತತ್ವ ರತ್ನಾಕರದ ಏಳು ಗರಿಗಳು ದೊರೆತಿವೆ.

ಶಿವತತ್ವ ರತ್ನಾಕರದ ನಾಲ್ಕನೇ ಕಲ್ಲೋಲದ 12ನೇ ತರಂಗದಲ್ಲಿ ನರಪತಿ ಸಿಂಹಸನ ವೃತ್ತಾಂತದ ಬಗ್ಗೆ ವಿವರಿಸುವಾಗ 'ಹಬುಹೋವಿಬುದೇರಾವಿದೇವಿಮಾರಾವಿಸಂಜ್ಞಾತಾಃ । ತ್ರಯೋದಶ ಮಹೀಪಾಲಾಃ ರತ್ನಸಿಂಹಾಸನಾಧಿಪಾಃ' (ಈ ಗ್ರಂಥವನ್ನು ಭಾರತಿ ಕೃಷ್ಣಯತಿಯು ಮಾಡಿದರೆಂದು ಹೇಳಲಾಗದೆ. ಕೃಷ್ಣಯತಿ ಯಾರೆಂದು ತಿಳಿಯುವುದಿಲ್ಲ. ಭೋಗನಾಥನೆಂಬ ಒಬ್ಬ ಸಹೋದರನು ವಿದ್ಯಾರಣ್ಯರಿಗಿದ್ದನೆಂದೂ ಆತನಿಗೆ ಆಶ್ರಯ ದೊರೆತ ಮೇಲೆ ಭಾರತಿಕೃಷ್ಣ ಎಂಬ ಹೆಸರು ಬಂದಿತೆಂದೂ ಒಂದು ವಾದವಿದೆ.) ಈ ಒಂದು ಶ್ಲೋಕವು ಮಧ್ಯದಲ್ಲಿ ಬರುತ್ತದೆ. ಈ ಕಲ್ಲೋಲಕ್ಕೆ ವಿದ್ಯಾರಣ್ಯಕೃತಿ (ವಿದ್ಯಾರಣ್ಯರ ಕಾಲಜ್ಞಾನ) ಪಿತಾಮಹ ಸಂಹಿತೆ ಇವುಗಳು ಮೂಲವೆಂದು ತಿಳಿಯಲ್ಪಡುತ್ತದೆ. ಈ ಕೃತಿಗಳಲ್ಲಿ ವಿಜಯನಗರ ಇತಿಹಾಸ ಸಂಬಂಧದ ಕೆಲವು ಶ್ಲೋಕಗಳಿವೆ.

ಉದಾ: ಪುರಾಣ ಸ್ಮೃತಿ ಸಿದ್ಧಾಂತಾ ನಿತಿಹಾಸಮಿಶ್ರಿತಾ್ ।
ವಿದ್ಯಾರಣ್ಯ ಕೃತಿಂ ಚೈವ ಪಿತಾಮಹ ಸುರಸಂಹಿತಾಂ ॥
ವಿಲೋಕ್ಯಾಯಂ ವಿರಚಿತಃ ಕಲ್ಲೋಲೋಭೂಚ್ಚತುರ್ಥಕಃ ॥

ಇಲ್ಲಿಯ ಕೆಲವು ಶ್ಲೋಕಗಳಿಂದ ತಿಳಿಯಬಹುದಾದುದೆಂದರೆ, ಹಕ್ಕ ಬುಕ್ಕರು ಮೊದಲು ಓರಂಗಲ್ಲಿನ ರಾಜನಾದ ವೀರಭದ್ರನಲ್ಲಿ ಕೋಶಾಧಿಕಾರಿಗಳಾಗಿದ್ದರು. ಯವನರು (1323ರಲ್ಲಿ) ಓರಂಗಲ್ಲಿಗೆ ಮುತ್ತಿಗೆ ಹಾಕಲು ಅಲ್ಲಿಂದ ಹೊರಟು ಶಿಲಾಪುರಿಗೆ ಬಂದು ಅದರ ರಾಜನಾದ ರಾಮನಾಥನಲ್ಲಿ ಕೋಶಾಧಿಕಾರಿಗಳಾಗಿ ನಿಂತರು. ಇಲ್ಲಿ ಮೊಹಮ್ಮದ್‌ಬಿನ್ ತುಗಲಕ್ಕನ ಕೈಗೆ ಸೆರೆಸಿಕ್ಕು ಆತನ ಆಜ್ಞೆಯಂತೆ ಕೃಷ್ಣವೇಣಿ ನದಿಯನ್ನು ದಾಟಿ ಬಲ್ಲಾಳರಾಯನೊಡನೆ ಯುದ್ಧಮಾಡಿ ಸೋತುಹೋದರು. ಆ ನಂತರದಲ್ಲಿ ವಿದ್ಯಾರಣ್ಯರನ್ನು ಕಂಡು ಅವರನುಗ್ರಹದಿಂದ ಚದುರಿಹೋದ ಸೈನ್ಯವನ್ನು ಕೂಡಿಸಿಕೊಂಡು ಪುನಃ ದಂಡೆತ್ತಿ ಹೋಗಿ ಬಲ್ಲಾಳರಾಜನನ್ನು ಸೋಲಿಸಿ ರಾಜ್ಯವನ್ನು ಸಂಪಾದಿಸಿ ಹಸ್ತಿಕೋಣ (ಆನೆಗುಂದಿ)ದಲ್ಲಿ ಆಳುತ್ತಿದ್ದರು. ಫಿರಿಷ್ತನು Stronghold among the mountains ಎಂದು ಇದನ್ನು ಕರೆದಿರಬಹುದು.[2]

ಒಂದು ದಿನ ಇವರು ತುಂಗಾನದಿಯನ್ನು ದಾಟಿ ಆಚೆಯ ದಡದಲ್ಲಿ ಬೇಟೆ ಆಡುತ್ತಿದ್ದಾಗ ಅವರು ಅಟ್ಟಿಸಿಕೊಂಡು ಹೋಗುತ್ತಿದ್ದ ಮೊಲವು ಬೇಟೆ ನಾಯಿಗಳನ್ನು ಕಚ್ಚಿ ಅದೃಶ್ಯವಾಯಿತು. ಆದ್ದರಿಂದ ಈ ಸ್ಥಳವು ರಾಜಧಾನಿಯನ್ನಾಗಿ ಮಾಡಲು ಅನುಕೂಲಕರವಾದ ಸ್ಥಳವೆಂದು ತಿಳಿದು ವಿದ್ಯಾರಣ್ಯರು ಅಲ್ಲಿ ವಿಜಯನಗರವನ್ನು ಕಟ್ಟಿ ಹಕ್ಕನಿಗೆ ಪಟ್ಟಾಭಿಷೇಕ ಮಾಡಿದರು. ಅದು ಶಾಲಿವಾಹನ ಶಕ ವರ್ಷ 1258ರಲ್ಲಿ ಎಂದರೆ ಕ್ರಿ.ಶ. 1336ರಲ್ಲಿ ನಡೆಯಿತು. ಇಲ್ಲಿ 'ಹಬುಹೋವಿಬುದೇವಿರಾವಿದೇವಿಮಾರಾವಿ' ಎಂಬ ಹದಿಮೂರು ಜನ ರಾಜರು ಆಳಿದರು. ಕಾಲಜ್ಞಾನ ಗ್ರಂಥವಾಗಿರುವುದರಿಂದ ಇಲ್ಲಿ ಭವಿಷ್ಯದ್ರೂಪವು ಉಪಯೋಗಿಸಲ್ಪಟ್ಟಿದೆ. ಇವರಲ್ಲಿ ಒಂಭತ್ತನೆಯವನು ಆಡಳಿತ ನಡೆಸಿದ ನಂತರ ರಾಜ್ಯ ಕ್ಷೋಭೆಗೆ ಒಳಗಾಯಿತು. ಕೊನೆಯವನು ದೇಶಭ್ರಷ್ಟನಾಗಿ ಶತ್ರುದೇಶದಲ್ಲಿ ಮೃತಿಯನ್ನು ಹೊಂದಿದನು. 150 ವರ್ಷಗಳಲ್ಲಿ ಈ ವಂಶವು ಕೊನೆಯಾಯಿತು ಇತ್ಯಾದಿ ವಿಷಯಗಳು ಬರುತ್ತವೆ.

ನ್ಯೂನಿಸ್ ಎಂಬ ಪೋರ್ಚುಗೀಸ್ ಚರಿತ್ರೆಗಾರನು ವಿಜಯನಗರ ರಾಜ್ಯ ಸ್ಥಾಪನೆಯ ಸಂದರ್ಭವನ್ನು ಹೆಚ್ಚು ಕಡಿಮೆ ಇದೇ ರೀತಿ ಹೇಳುತ್ತಾನೆ. ಚರಿತ್ರೆಗಾರರೂ ಇದನ್ನು ಒಪ್ಪುತ್ತಾರೆ. ಸಿವೆಲ್ ಇದರಲ್ಲಿ ಕೆಲವು ಭಾಗ ನಿಜವೆಂದು ಅಭಿಪ್ರಾಯಿಸುತ್ತಾರೆ. ಕ್ರಿ.ಶ. 1336ರಲ್ಲಿ ರಾಜ್ಯ ಸ್ಥಾಪನೆಯಾಯಿತೆಂದು ಚರಿತ್ರೆಕಾರರೂ ಒಪ್ಪಿದ್ದಾರೆ. ಕ್ರಿ.ಶ. 1485ರಲ್ಲಿ ಎರಡನೆ ವಂಶವು ಸಾಳ್ವ ನರಸಿಂಗನಿಂದ ಆರಂಭವಾಗುತ್ತದೆ.

ಆದರೆ 'ಹಬುಹೋವಿಬುದೇ' ಎಂಬ ಶ್ಲೋಕವು ಹೇಳಿರುವ ರಾಜ ಪರಂಪರೆ, ಆಳ್ವಿಕೆಯ ಕಾಲವು ಚರ್ಚಾಸ್ಪದವಾಗಿದೆ. ಅಚ್ಯುತರಾಯನ ನಂತರ ಕೃಷ್ಣರಾಯನು 40 ವರ್ಷ, ವೀರನರಸಿಂಹನಾಳಿದ ಮೇಲೆ ಸಾಳ್ವ ನರಸಿಂಹನಾಳಿದ ಎಂಬ ವಿಷಯವನ್ನು ಯಾವ ಚರಿತ್ರೆಕಾರರೂ ಹೇಳುವುದಿಲ್ಲ. ಆದರೂ ನರಸರಾಜನು ತನ್ನ ಅವಸಾನದ ಕಾಲದಲ್ಲಿ ತನ್ನ ಪಟ್ಟದ ರಾಣಿಯ ಮಗನಾದ ಅಚ್ಚುತರಾಯನಿಗೆ ಪಟ್ಟವನ್ನು ಕಟ್ಟಿ ಭಂಗಾರದವಳ ಮಗನಾದ ಕೃಷ್ಣರಾಯನು ಯುವರಾಜನಾಗಿದ್ದುಕೊಂಡು ರಾಜ್ಯವಾಳಬೇಕೆಂದು ನೇಮಿಸಿದುದಾಗಿ ಒಂದು ಕಥೆ ಪ್ರಚಲಿತವಿದೆ. ನೀತಿ ಚಿಂತಾಮಣಿ ಮೊದಲನೇ ಹರಿಹರರಾಯನಿಂದ ಸಾಳ್ವ ನರಸಿಂಗನವರೆಗೆ 13 ಜನ ರಾಜರು ಆಳಿದಂತೆ ಯಾರೂ ಹೇಳುವುದಿಲ್ಲ. ಸಾಮಾನ್ಯವಾಗಿ 7 ಜನ ರಾಜರು ಪಟ್ಟಕ್ಕೆ ಬಂದುದಾಗಿ ಹೇಳುತ್ತಾರೆ. ಶ್ಲೋಕದಲ್ಲಿ ಹೇಳಿರುವ ಪ್ರಕಾರ 13 ಜನ ರಾಜರೇ ಆಳಿದ್ದಲ್ಲಿ ಕೆಲವರು ಬಹಳ ಕಡಿಮೆ ಕಾಲ ಆಳಿರಬಹುದಾಗಿದೆ. (1404ರಲ್ಲಿ ಸ್ವಲ್ಪ ಕಾಲ ವಿರೂಪಾಕ್ಷನು ಆಳಿದಂತೆ ಕಂಡುಬರುತ್ತದೆ.) ಕೆಲವು ರಾಜರ ಕಾಲದಲ್ಲಿ ಶಾಸನಗಳೇ ಇಲ್ಲದಿರಬಹುದು ಅಥವಾ ಒಬ್ಬ ರಾಜ್ಯವನ್ನಾಳುತ್ತಿದ್ದ ಕಾಲದಲ್ಲಿ ಆತನ ತಮ್ಮ ಅಥವಾ ಮಗನ ಹೆಸರಲ್ಲಿಯೂ ಶಾಸನಗಳು ಹುಟ್ಟಿರಲು ಸಾಕು. ಕೆಳದಿ ನೃಪವಿಜಯದ ಪುಟ 59-60ರಲ್ಲಿ ಈ ಪದ್ಧತಿಗೆ ಉದಾಹರಣೆ ಇದೆ.[3] ಇದೇ ಕಾರಣದಿಂದಾಗಿ ವಿಜಯನಗರವನ್ನಾಳಿದ ಅರಸರ ಪರಂಪರೆಯು ಇದುವರೆಗೆ ವ್ಯವಸ್ಥಿತವಾಗಿಲ್ಲ ಎನ್ನಬಹುದು. ಅದೇನೇ ಇರಲಿ ಮೇಲಿನ ಶ್ಲೋಕದಲ್ಲಿ ಬರತಕ್ಕ 13 ಅಕ್ಷರಗಳಿಗೂ

1. ಹರಿಹರ I
2. ಬುಕ್ಕ I
3. ಹರಿಹರ II
4. ವಿರೂಪಣ್ಣ (ವಿರೂಪಣ್ಣನಾದರೆ 2ನೇ ಹರಿಹರನ ತಮ್ಮನಾಗಬಹುದು. ವಿರೂಪಾಕ್ಷನಾದರೆ ಅವನ ಜೇಷ್ಠ ಪುತ್ರನಾಗಬಹುದು. ಎರಡನೆಯವನಲ್ಲ.)
5. ಬುಕ್ಕ II
6. ದೇವರಾಯ I
7. ರಾಮಚಂದ್ರ
8. ವಿಜಯ
9. ದೇವರಾಯ II
10. ವಿರೂಪಾಕ್ಷ (ಈತನು 2ನೇ ದೇವರಾಯನ ಹಿರಿಯ ಮಗನಾಗಿರಬಹುದೇ? ಈತನು ಸ್ವಲ್ಪ ಕಾಲ ಆಳಿರಬಹುದು).
11. ಮಲ್ಲಿಕಾರ್ಜುನ
12. ರಾಜಶೇಖರ (There are inscriptions which indicate unmistakably that Mallikarjuna's son Raja Sekhara succeeded followed probably by Virupaksha II[4]).
13. ವಿರೂಪಾಕ್ಷ ಎಂದು ಅರ್ಥಮಾಡಿದರೆ ಸರಿಹೋಗುವುದೆಂದು ತೋರುತ್ತದೆ.

ದೇವ್ಯಥಾಜ್ಞಾಪಯಾಮಾಸ ವಿದ್ಯಾರಣ್ಯಯತೀಶ್ವರಮ್ ॥47॥

ತ್ವಯಾ ಶ್ರೀ ಚಕ್ರರೂಪೇಣ ನಗರೇ ನಿರ್ಮಿತೇ ಸತಿ । ತತ್ಪುರಾಭ್ಯಂತರ್ರೇದ್ಯಷ್ಟ
ಹೇಮವೃಷ್ಟಿರ್ಭವಿಷ್ಯತಿ ॥48॥

ಸತ್ರಿಪಾದ ತ್ರಿಘಟಿಕಾಪರ್ಯಂತಮಿತಿ ಸೋಪ್ಯಥ । ಅಕಲ್ಪಯತ್ ಪುರಂ
ರಮ್ಯಂ ಯಥಾ ದೇವ್ಯಾ ಸಮೀರಿತಮ್ ॥49॥

ತತೋ ಹರಿಹರಸ್ಯಾದೌ ಪಟ್ಟಬಂಧಮಕಾರಯತ್ । ಅಶಿಷತ್ ಸೋಽಪಿ
ವಸುಧಾಮ್ ಅನಾಕಲಿತ ಶಾತ್ರವಾಮ್ ॥50॥

ಶಿಷ್ಟಾನಾಂ ಪಾಲನೇ ಪೂರ್ವಂ ದುಷ್ಟಾನಾಂ ನಿಗ್ರಹೇ ಪರಮ್ ।
ಭಾಗಂ ಸ್ವನಾಮಧೇಯಾಸ್ಯ ಸಾರ್ಥಕಂ ಸವಿನಿರ್ಮಯೇ ॥51॥

ಹೀಗೆ ಹರಿಹರರಿಗೆ ಪಟ್ಟವಾದ ಬಗ್ಗೆ[5]

ವಿದ್ಯಾರಣ್ಯಸ್ಯ ಬಿರುದಾನ್ಯಾತ್ಮೀಯಾನಿ ಚ ದತ್ತವಾನ್ । ಸಂಪದಂ । ಚ
ತದುತ್ಪನ್ನಾಂ ತಸ್ಮೈ ಪಾದ್ಯಮಿದಾಬ್ಧಯೇ ॥52॥

ಪಮಾರಭ್ಯ ಮಹೀಪಾಲಾ ಮೇಷ ಪಾಲೋಪನಾಮಕಾಃ । ತ್ರಯೋದಶ
ಮಹೀಮೇನಾಮ್ ಆರಕ್ಷನ್ ನೀತಿ ಸಂಯುತಮ್ ॥53॥

ಹರಿಹರ ಬುಕ್ಕಾದಿ ತ್ರಯೋದಶಃ ಮಹೀಪಾಲಾಃ ।
ಆದೌ ಹರಿಹರೋ ಬುಕ್ಕಃ ತತೋ ಹರಿಹರ ಸ್ತಥಾ । ವಿರೂಪಾಕ್ಷಸ್ತತೋ
ಬುಕ್ಕಃ ತತೋದೇವಸ್ತತಃ ಪರಮ್ ॥54॥

ರಾಮರಾಜ ಸ್ತತಃ ಪಶ್ಚಾತ್ ವಿರೂಪಾಕ್ಷಸ್ತತಃ ಪರಮ್ । ದೇವಸ್ತತೋ
ವಿರೂಪಾಕ್ಷಃ ತತೋ ಮಾರಪನಾಮಕಃ ॥55॥

ತತೋರಾಮೋ ವಿರೂಪಾಕ್ಷಃ ತತೋ ಭೂಪಾಸ್ತ್ರಯೋದಶ ।
ದ್ವಾತ್ರಿಂಶದುತ್ತರಾನೇತೀ ದ್ವಿಶತಾಬ್ದಾನ್ ಕ್ಷಿತಾಸ್ಥಿತಾ ॥56॥

ತ್ರಯೋದಶ ನೃಪಾಲೇಭ್ಯಃ ಪಶ್ಚಾತ್ ಸಪ್ತನೃಪಾ ಇಮೇ ।

ಹೀಗೆ ಶಿವತತ್ವ ರತ್ನಾಕರದ 6ನೇ ಕಲ್ಲೋಲದ 12ನೇ ತರಂಗದಲ್ಲಿ ವಿದ್ಯಾರಣ್ಯರು ಹರಿಹರನ ರಾಜಗುರುಗಳಾಗಿ ಚಕ್ರನಗರ ನಿರ್ಮಾಣ, ವಿದ್ಯಾರಣ್ಯರ ವೃತ್ತಾಂತ, ವಿದ್ಯಾರಣ್ಯರ ಪೂರ್ವಾಶ್ರಮ ವೃತ್ತಾಂತ, ಪಂಪಾಕ್ಷೇತ್ರ ಮಹಾತ್ಮೆ, ವಿರೂಪಾಕ್ಷನ ಧ್ಯಾನ, ವಿದ್ಯಾರಣ್ಯರಿಗೆ ಚಕ್ರಾಕಾರ ನಗರ ನಿರ್ಮಾಣದ ಆಜ್ಞೆ, ನಗರ ನಿರ್ಮಾಣದ ನಂತರ ಹರಿಹರನ ಪಟ್ಟಾಭಿಷೇಕ, ಅವನ ರಾಜ್ಯಾಡಳಿತ, ವಿದ್ಯಾರಣ್ಯ ಗುರುಗಳಿಗೆ ಬಿರುದಾವಳಿ ಪ್ರದಾನ, ಹರಿಹರನ ನಂತರ 13 ಜನ ರಾಜರು ಆಳಿದ ವಿವರ, ಅವರ ನಂತರ ಪ್ರೌಢದೇವರಾಯರಾದಿಯಾಗಿ 7 ರಾಜರುಗಳ ವಿವರ ದೊರೆಯುತ್ತದೆ. ಹರಿಹರ, ಬುಕ್ಕ, ಹರಿಹರ, ವಿರೂಪಾಕ್ಷ, ಬುಕ್ಕ, ದೇವರಾಯ, ರಾಮರಾಜ, ವಿರೂಪಾಕ್ಷ, ದೇವರಾಯ, ವಿರೂಪಾಕ್ಷ, ಮಾದಪ್ಪನಾಯಕ, ರಾಮರಾಯ, ವಿರೂಪಾಕ್ಷ ಹೀಗೆ 232 ವರ್ಷ ಆಡಳಿತ ನಡೆಸಿದ ವಿವರವಿದೆ.

ಪ್ರೌಢೋದ್ವಾದಶ ವರ್ಷಾಣಿ ದಶ ವೀರ ನೃಸಿಂಹರಾಟ್ ॥57॥

ತತಃ ಸಾಲ್ವನೃಸಿಂಹಾಖ್ಯೋ ದ್ವಾದಶತ್ರೀನಾಥಾಚ್ಯುತಃ ॥ ಚತ್ವಾರಿಂಶತ್ತತಃ

ಕೃಷ್ಣಃ ತತೋದ್ವೇ ತು ಸದಾಶಿವ ॥58॥

ಚತುರ್ವಿಂಶತಿ ವರ್ಷಾಣಿ ರಾಮರಾಜೋ ಮಹೀಪತಿಃ ॥ ಏವಂ

ಸಪ್ತ ಮಹೀಪಾಲಾಃ ತತಃ ಕ್ಷಿತಿಮಪಾಲಯನ್ ॥59॥

| | |
|---|---|
| ಪ್ರೌಢದೇವರಾಯ (ಪ್ರೌಢ) | 12 ವರ್ಷ |
| ವೀರನರಸಿಂಹರಾಯ | 10 ವರ್ಷ |
| ಸಾಲ್ವನರಸಿಂಹರಾಯ | 12 ವರ್ಷ |
| ಅಚ್ಚುತರಾಯ | 13 ವರ್ಷ |
| ಕೃಷ್ಣ (ಕೃಷ್ಣದೇವರಾಯ) | 40 ವರ್ಷ |
| ಸದಾಶಿವರಾಯ | 2 ವರ್ಷ |
| ರಾಮರಾಯ | 24 ವರ್ಷ |

ಹೀಗೆ 7 ಮಹೀಪಾಲರು ಆಡಳಿತ ನಡೆಸಿದರು.

ಶಿವತತ್ವ ರತ್ನಾಕರದ ಐದನೇ ಕಲ್ಲೋಲದಿಂದ ಪ್ರಾರಂಭವಾಗುವ ಮಲ್ಲದೇಶ (ಕೆಳದಿ)ದ ವರ್ಣನೆಯ ಸಂದರ್ಭದಲ್ಲಿ ಉದ್ದಕ್ಕೂ ವಿಜಯನಗರ ಇತಿಹಾಸ ಹಾಸುಹೊಕ್ಕಾಗಿ ಚರ್ಚಿಸಲ್ಪಟ್ಟಿದೆ.

ವಿಜಯನಗರ–ಕೆಳದಿ ರಾಜಕೀಯ ಸಂಬಂಧದ ಕುರಿತಂತೆ ವಿವರವಾಗಿ ಚರ್ಚೆ ನಡೆದಿಲ್ಲ. ಈ ಕುರಿತು ದೀರ್ಘ ಚರ್ಚೆ ನಡೆಯುವ ಆಗತ್ಯವಿದೆ. ಕೆಳದಿ ನೃಪವಿಜಯ, ಶಿವತತ್ವ ರತ್ನಾಕರ ಇವುಗಳ ಜೊತೆ ಜೊತೆಗೆ ಆ ಕಾಲದ ಇತರ ಸಾಹಿತ್ಯಕ ಕೃತಿಗಳಲ್ಲಿಯೂ ನಮಗೆ ವಿವರಗಳು ದೊರೆಯುತ್ತವೆ. ವಿವಿಧ ಆಕರಗಳ ಆಧಾರದಿಂದ ವಿವರವಾಗಿ ಅಭ್ಯಾಸ ನಡೆದಲ್ಲಿ ಅದು ಮಧ್ಯಕಾಲೀನ ಭಾರತದ ಇತಿಹಾಸಕ್ಕೆ ಉತ್ತಮ ತಳಹದಿ ಹಾಕುವುದರಲ್ಲಿ ಅನುಮಾನವಿಲ್ಲ.

## ಟಿಪ್ಪಣಿಗಳು

1. S. Krishnaswamy Aingar, *Sources of Vijayanagar History*, pp. 194, 202, 337, 364.
2. Robert Sewell, *A Forgetten Empire*, p. 17.
3. ಆರ್. ಶ್ಯಾಮಶಾಸ್ತ್ರಿ, 1921, *ಕೆಳದಿ ನೃಪವಿಜಯ.*
4. S. Krishnaswamy Iyengar, *A Little known chapter of Vijayanagar History*, p. 21.
5. *ಶಿವತತ್ವ ರತ್ನಾಕರ,* ಕನ್ನಡ ವಿಶ್ವವಿದ್ಯಾಲಯ ಹಂಪಿ, 1999, ಪು. 228.